ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಯೋಗಾನಂದ ಎಸ್.ಕೆ.

ಮಾರ್ಗದರ್ಶಕರು

ಡಾ. ಅಮರೇಶ ಯತಗಲ್

ಸಹ ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಯೋಗಾನಂದ ಎಸ್.ಕೆ. ಇವರು **ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ **ಶಾಸನಶಾಸ್ತ್ರ** ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 04-08-2018

ಡಾ. ಅಮರೇಶ ಯತಗಲ್
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸಂಶೋಧಕರ ದೃಢೀಕರಣ ಪತ್ರ

ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಅಮರೇಶ ಯತಗಲ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ **ಶಾಸನಶಾಸ್ತ್ರ** ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೪:೦೮:೨೦೧೮

ಯೋಗಾನಂದ ಎಸ್.ಕೆ.
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಪೂರ್ವಾಧ್ಯಾಯನಗಳ ಸಮೀಕ್ಷೆ

ಭಾರತವು ತನ್ನದೇ ಆದಂತಹ ವಿಶಿಷ್ಟ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅವಲೋಕಿಸಿದಾಗ ಆಚಾರ-ವಿಚಾರ, ಸಂಸ್ಕೃತಿಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಈ ಸಾಂಸ್ಕೃತಿಕ ತಿಳಿಯಲು ಇತಿಹಾಸವನ್ನು ವಿವಿಧ ಕಾಲಘಟ್ಟದಲ್ಲಿನ ಇತಿಹಾಸವನ್ನು ಅರಿಯಬೇಕಾಗುತ್ತದೆ. ಹಾಗಾದಾಗ ಮಾತ್ರ ಭಾರತದ ವಸ್ತುನಿಷ್ಟತೆಯ ಐತಿಹಾಸಿಕ ಸಂಸ್ಕೃತಿಯು ಗೋಚರಿಸುತ್ತದೆ. ಭಾರತವು ವನ್ನು ಅನಾದಿ ಕಾಲದಿಂದಲೂ ವಿದೇಶಿ ದಾಳಿಗಳಿಗೆ ತುತ್ತಾಗುತ್ತಲೇ ಬಂದಿದೆ. ಭಾರತದ ಸಂಗತ್ತಿಗಾಗಿ ದಾಳಿ ಮಾಡಿದ ಅವರು ಆಳ್ವಿಕೆ ಮಾಡುತ್ತಲೇ ಇಲ್ಲಿಯವರಾಗಿ ಭಾರತದ ಮಣ್ಣಿನ ಕಣಕಣದಲ್ಲಿ ಬೆರೆತು ಭಾರತದ ಸಾಂಸ್ಕೃತಿಕ ಇತಿಹಾಸದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಭಾರತದ ಐತಿಹಾಸಿಕ ಪರಂಪರೆಗೆ ಗಣನೀಯವಾದ ಕೊಡುಗೆ ನೀಡಿದ ಕರ್ನಾಟಕ ರಾಜ್ಯವನ್ನು ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿರುವುದರ ಜೊತೆಗೆ ವಿಶೇಷವಾದ ಐತಿಹಾಸಿಕ ಕುರುವುಗಳನ್ನು ಕನ್ನಡನಾಡಿಗೋಸ್ಕರ ಬಿಟ್ಟು ಹೋಗಿವೆ. ಅಂತಹ ಗುರುತಿನ ಹೆಜ್ಜೆಗಳೆಂದರೆ ಶಾಸನಗಳು, ಶಾಸನಶಿಲ್ಪಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆ-ಕೊತ್ತಲಗಳು, ಅರಮನೆ ಅವಶೇಷಗಳು, ಹಸ್ತಪ್ರತಿಗಳು, ನಾಣ್ಯಗಳು, ಕೆರೆಗಳು, ಬಾವಿಗಳು, ಹೊಂಡಗಳು, ಮಠಗಳು, ಅಗ್ರಹಾರಗಳು, ಬಸದಿಗಳು, ವಿಹಾರಗಳು, ಸ್ತೂಪಗಳು, ಸಂಘರಾಮಗಳು, ಚೈತ್ಯಾಲಯಗಳು, ಮಸೀದಿಗಳು, ಘೋರಿಗಳು ಮೊದಲಾದ ಸ್ಮಾರಕಗಳಿಂದ ಕರ್ನಾಟಕದ ಇತಿಹಾಸ ಪರಂಪರೆಯನ್ನು ಗ್ರಹಿಸಲು ಸಹಾಯಕವಾಗಿದೆ.

ಕರ್ನಾಟಕವು ತನ್ನದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿದ್ದರೂ ಜನಸಾಮಾನ್ಯರ ಆಡು ಭಾಷೆಯಲ್ಲಿ ಕರ್ನಾಟಕವನ್ನು ಉತ್ತರ, ದಕ್ಷಿಣ ಮಧ್ಯ ಕರ್ನಾಟಕವೆಂದು ಕರೆಯುವುದು ಸ್ವಾಭಾವಿಕವಾಗಿ ರೂಢಿಯಲ್ಲಿದೆ. ಮಧ್ಯ ಕರ್ನಾಟಕವು ಹೆಚ್ಚಾಗಿ ಬಯಲುಸೀಮೆ ಮತ್ತು ಗುಡ್ಡಗಾಡು ಕುರುಚಲು ಅರಣ್ಯ ಪ್ರದೇಶವನ್ನು ಹೊಂದಿದ್ದು, ಕರ್ನಾಟಕದ ಇತಿಹಾಸ ಪರಂಪರೆಗೆ ಸಮೃದ್ಧ ಕೊಡುಗೆಯನ್ನು ನೀಡಿದೆ. ಮಧ್ಯಕರ್ನಾಟಕದಲ್ಲಿ ಬರುವ ದಾವಣಗೆರೆ ಜಿಲ್ಲೆಯು ಜಗಳೂರು, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ, ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳಲ್ಲಿ ಚನ್ನಗಿರಿ ತಾಲ್ಲೂಕು ವಿಶಿಷ್ಟವಾಗಿದ್ದು, ಸಂಶೋಧಕನ ಗಮನ ಸೆಳೆಯುತ್ತದೆ. ಶಿಲಾಯುಗದ ಕುರುಹುಗಳಾಗಲಿ, ಮೌರ್ಯರಿಂದ ರಾಷ್ಟ್ರಕೂಟರವರೆಗೆ ಯಾವುದೇ ಶಾಸನಗಳಾಗಲಿ, ಸ್ಮಾರಕಗಳಾಗಲಿ ಲಭ್ಯವಾಗದಿದ್ದರೂ ಕ್ರಿ.ಶ. ೧೦ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ಹೇರಳವಾಗಿ ಐತಿಹಾಸಿಕ ಕುರುವುಗಳು ದೊರೆಯುತ್ತವೆ.

ಪ್ರಸ್ತುತ ಚನ್ನಗಿರಿ ತಾಲ್ಲೂಕನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ ಅವಶ್ಯಕತೆ ಇದೆ. ಹಾಗಾಗಿ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗುವಂತಹ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳ ಜೊತೆಗೆ ಕ್ಷೇತ್ರಕಾರ್ಯವನ್ನು ಮಾಡಿ ತಾಲ್ಲೂಕಿನ ಇತಿಹಾಸವನ್ನು ಒಂದೆಡೆ ಸೆರೆ ಹಿಡಿಯಲು ಪ್ರಯತ್ನ ಮಾಡುವ ಅಗತ್ಯತೆ ಇರುವುದರಿಂದ "ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು" ಎಂಬ ವಿಷಯದ ಮೂಲಕ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಚನ್ನಗಿರಿ ತಾಲ್ಲೂಕು ಬಯಲುಸೀಮೆ ಮತ್ತು ಮಲೆನಾಡು ನಡುವಿನ ಅರೆ ಮಲೆನಾಡು ಪ್ರದೇಶ. ಅಡಿಕೆ ನಾಡು ಎಂದು ಪ್ರಸಿದ್ಧಿ ಪಡೆದಿರುವ ಈ ಪ್ರದೇಶದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಬಯಲು ಸೀಮೆ ಮಲೆನಾಡು ರಾಜಮನೆತನಗಳೆರಡರ ನಡುವೆ ಸಂಬಂಧವನ್ನಿಟ್ಟುಕೊಂಡು ತನ್ನದೇ ಆದಂತಹ ಸ್ವತಂತ್ರ ರಾಜಮನೆತನಗಳನ್ನು ಒಳಗೊಂಡು ಪಾರಂಪರಿಕ ಇತಿಹಾಸವನ್ನು ಹೊಂದಿದೆ. ಇದಕ್ಕೆ ನಿದರ್ಶನವೆಂದರೆ ಚನ್ನಗಿರಿ ತಾಲ್ಲೂಕಿನ ಗ್ರಾಮಗಳಲ್ಲಿ ಪುಷ್ಕರಣಿಗಳು ಹಿರೇಕೋಗಿಲೂರಿನ ಶಾಸನಗಳು, ಬೊಮ್ಮೆನಹಳ್ಳಿಯ ಮಾಸ್ತಿಗಲ್ಲುಗಳು, ಸುಂದರವಾದ ಕಲ್ಕೆರೆಯ ಬೆಳೆಶ್ವರ, ಅಲಕನಾಳಿನ ಜಲ್ಲೇಶ್ವರ, ನಲ್ಕುದರೆಯ ತ್ರೈಪುರುಷ ದೇವಾಲಯಗಳು, ಸಂತೆಬೆನ್ನೂರಿನ ಪುಷ್ಕರಣಿ, ಐತಿಹಾಸಿಕ ಬಾವಿಗಳು, ಚನ್ನಮಾಜಿ ಕಟ್ಟಿಸಿದ ಚನ್ನಗಿರಿ ಕೋಟೆ, ಹಿರೇಮಳಲಿಯಲ್ಲಿನ ಹೊಯ್ಸಳರ ಲಾಂಛನದ ಶಿಲ್ಪ, ಕಬ್ಬಿಣದ ಭರ್ಚಿ, ಬಸವಪಟ್ಟಣದ ರಾಣಿಯರ ಸ್ನಾನದ ಕಲ್ಲು, ಅಷ್ಟೇ ಅಲ್ಲದೆ ಮಹಾರಾಷ್ಟ್ರದಲ್ಲಿ ಮರಾಠ ಸಾಮ್ರಾಜ್ಯವನ್ನು ನಿರ್ಮಿಸಿ ಹೈಂದವಿ ಸಾಮ್ರಾಜ್ಯವನ್ನು ಸ್ಥಾಪಿಸಿದ ಛತ್ರಪತಿ ಶಿವಾಜಿಯ ತಂದೆ ಷಾಹಜಿ ಬೋನ್‌ಸ್ಲೆಯ ಸಮಾಧಿಯು ಕರ್ನಾಟಕದ ಚನ್ನಗಿರಿಯ ಹೊದಿಗೆರೆಯಲ್ಲಿದೆ. ಸಾಂಸ್ಕೃತಿಕವಾಗಿ ಕನ್ನಡಿಗರು ಮತ್ತು ಮರಾಠರ ಸಂಬಂಧವನ್ನು ಬೆಸೆಯುವ ಬಲಯುತವಾದ ಏಕೈಕ ಸ್ಮಾರಕವಿದಾಗಿದ್ದು, ಇದು ಚನ್ನಗಿರಿ ತಾಲ್ಲೂಕಿನಲ್ಲಿರುವುದರಿಂದ ಭಾರತದ ಇತಿಹಾಸದಲ್ಲಿ ಇದು ಮಹತ್ವದ ಸ್ಥಾನ ಪಡೆದಿದೆ.

ಪ್ರಸ್ತುತ ಚನ್ನಗಿರಿ ತಾಲ್ಲೂಕು 245 ಗ್ರಾಮಗಳನ್ನು ಹೊಂದಿದ್ದು, ಹೆಚ್ಚಿನ ಹಳ್ಳಿಗಳಲ್ಲಿ ಐತಿಹಾಸಿಕ ಶಾಸನ ಮತ್ತು ಸ್ಮಾರಕಗಳಿವೆ. ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ನೊಳಂಬ, ಪಲ್ಲವ, ಹೊಯ್ಸಳ, ಉಚ್ಚಂಗಿ ಪಾಂಡ್ಯ, ಅಸಂದಿಗಂಗರು, ದೇವಗಿರಿಯ ಸೇವುಣ, ವಿಜಯನಗರ ಸಾಮ್ರಾಜ್ಯ, ಸಂತೇಬೆನ್ನೂರು ನಾಯಕರು, ಚಿತ್ರದುರ್ಗದ ಪಾಳೇಗಾರರು, ಮೈಸೂರಿನ ಅರಸರವರೆಗೆ ಈ ಪ್ರದೇಶವನ್ನು ಆಳ್ವಿಕೆ ಮಾಡಿದ್ದಾರೆ. ಚನ್ನಗಿರಿ ತಾಲ್ಲೂಕಿನ ಇತಿಹಾಸ ರಚನೆ ಮಾಡಲು ಸಹಾಯಕವಾಗಿರುವ ಆಧಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ,

೧) ಪುರಾತತ್ವ ಆಧಾರಗಳು

೨) ಸಾಹಿತ್ಯಕ ಆಧಾರಗಳು

ಪುರಾತತ್ವ ಆಧಾರಗಳೆಂದರೆ, ಪ್ರಾಚೀನ ಮಾನವನ ಜೀವನ ಚಟುವಟಿಕೆಗಳ ಅವಶೇಷಗಳಾಗಿದ್ದು, ಇವು ಲಿಖಿತ ಮತ್ತು ಅಲಿಖಿತ ದಾಖಲೆಗಳಾಗಿವೆ. ಅವುಗಳೆಂದರೆ, ಶಾಸನಗಳು, ಸ್ಮಾರಕಗಳು, ನಾಣ್ಯಗಳು, ಉತ್ಖನನ, ಹಸ್ತಪ್ರತಿ, ವರ್ಣಚಿತ್ರಗಳು. ಚನ್ನಗಿರಿ ತಾಲ್ಲೂಕಿನಲ್ಲಿ ೧೦೧ ಶಾಸನಗಳು ಲಭ್ಯವಾಗಿವೆ. ಹಿರೇಕೋಗಿಲೂರು, ಚಿಕ್ಕಕೋಗಿಲೂರು, ಮೆದಕೆರೆ, ನಲ್ಲುದರೆ, ಸಂತೇಬೆನ್ನೂರು, ಚನ್ನಗಿರಿ ಮೊದಲಾದ ಗ್ರಾಮಗಳಲ್ಲಿ ಶಾಸನಗಳು ಲಭ್ಯವಾಗಿವೆ. ಜೊತೆಗೆ ೩೫ ವೀರಗಲ್ಲುಗಳು ಮತ್ತು ಮಹಾಸತಿಗಲ್ಲುಗಳು ಬೊಮ್ಮೇನಹಳ್ಳಿ, ಹಿರೇಕೋಗಲೂರು, ಮಲಹಾಳು, ಹೆಬ್ಬಳಗೆರೆ, ನೀತಿಗೆರೆ ಮೊದಲಾದ ಗ್ರಾಮಗಳಲ್ಲಿ ಲಭ್ಯವಾಗಿವೆ.

ದೇವಾಲಯಗಳಿಗೆ ಸಂಬಂಧಿಸಿದಂತೆ, ಚನ್ನಗಿರಿ ತಾಲ್ಲೂಕಿನಲ್ಲಿ ೩೬ ದೇವಾಲಯಗಳು ಲಭ್ಯವಾಗಿವೆ. ಅವುಗಳು ಕಲ್ಕೆರೆ, ನಲ್ಲುದರೆ, ಹಿರೇಕೋಗಿಲೂರು, ಬಸವಪಟ್ಟಣ, ಹಿರೇಮಳಲಿ, ಕತ್ತಲಗೆರೆ, ಚನ್ನಗಿರಿ, ದೇವರಹಳ್ಳಿ, ಸೂಳೆಕೆರೆ ಮೊದಲಾದ ಗ್ರಾಮಗಳಲ್ಲಿನ ದೇವಾಲಯಗಳು, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರದ ವಾಸ್ತುಶೈಲಿಯಲ್ಲಿವೆ. ಇವುಗಳಲ್ಲದೆ ಶೈವ, ವೈಷ್ಣವ, ಶಾಕ್ತ ದೇವಾಲಯಗಳು ಇಲ್ಲಿ ದೊರೆತಿವೆ.

ಮೂರ್ತಿ ಶಿಲ್ಪಕ್ಕೆ ಸಂಬಂಧಿಸಿದಂತೆ, ೨೭ ಶಿವಲಿಂಗಗಳು, ೨೯ ನಂದಿ ಮೂರ್ತಿಶಿಲ್ಪಗಳು, ೪೪ ಮೂರ್ತಿಶಿಲ್ಪಗಳು, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯದ ಕಾಲಕ್ಕೆ ಸಂಬಂಧಿಸಿವೆ. ಅವುಗಳಲ್ಲಿ ಶಿವಲಿಂಗಗಳು, ನಂದಿ, ಗಣಪತಿ, ವೀರಭದ್ರ, ಭೈರವ ಮೊದಲಾದ ಮೂರ್ತಿಶಿಲ್ಪಗಳು ಶೈವಧರ್ಮಕ್ಕೆ ಸೇರಿವೆ. ಕೇಶವ, ಜನಾರ್ಧನ, ವೈಷ್ಣವ, ವಿಷ್ಣು, ನಾರಾಯಣ, ಲಕ್ಷ್ಮೀನಾರಾಯಣ, ಸೂರ್ಯ, ವೈಷ್ಣವ ಧರ್ಮಕ್ಕೆ ಸೇರಿವೆ.

ಇತರೆ ಸ್ಮಾರಕಗಳಾದ ಕೋಟೆ ಕೊತ್ತಲಗಳು, ಪುಷ್ಕರಣಿ, ಕೆರೆಗಳು, ಬಾವಿಗಳು, ಹೊದಿಗೆರೆಯ ಷಾಹಜಿ ಸಮಾಧಿ, ಹಿರೇಮಳಲಿಯಲ್ಲಿನ ಹೊಯ್ಸಳರ ಕಲ್ಲಿನ ಲಾಂಛನ, ಮಲೇಹಾಳುವಿನಲ್ಲಿ ವಿಜಯನಗರೋತ್ತರ ಕಾಲದ ಒಂದು ಕಬ್ಬಿಣದ ಭರ್ಚಿ(ಈಟಿ), ಬಸವಪಟ್ಟಣದ ರಾಣಿಯರ ಸ್ನಾನದ ಕಲ್ಲು ಇವೆಲ್ಲವು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದಂತಹ ಪುರಾತತ್ವ ಆಧಾರಗಳಾಗಿವೆ.

ಸಾಹಿತ್ಯಕ ಆಧಾರಗಳು : ಲಿಖಿತ ದಾಖಲೆಗಳನ್ನು ಸಾಹಿತ್ಯ ಆಧಾರಗಳೆಂದು ಕರೆಯುತ್ತಾರೆ. ಸಾಹಿತ್ಯಾಧಾರಗಳನ್ನು ದೇಶಿ ಸಾಹಿತ್ಯ ಆಧಾರಗಳು ಮತ್ತು ವಿದೇಶಿ ಸಾಹಿತ್ಯ ಆಧಾರಗಳೆಂದು ವರ್ಗೀಕರಿಸಬಹುದಾಗಿದೆ.

ದೇಶಿ ಸಾಹಿತ್ಯಾಧಾರಗಳು : ಪ್ರಾಚೀನ ಕಾಲದಲ್ಲಿ ಸ್ಥಳೀಯರು ಬರೆದ ಸಾಹಿತ್ಯ ಕೃತಿಗಳನ್ನು ದೇಶಿ ಸಾಹಿತ್ಯವೆಂದು ಕರೆಯುತ್ತಾರೆ. ರಾಮಾಯಣ, ಮಹಾಭಾರತ, ಪುರಾಣಗಳಂತಹ ಮೊದಲಾದ ಕೃತಿಗಳು ದೇಶಿ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದ ಸಾಹಿತ್ಯ ಕೃತಿಯೆಂದರೆ ಲಿಂಗಣ್ಣ ಕವಿಯು ಬರೆದ 'ಕೆಳದಿಯ ನೃಪ ವಿಜಯ' ಕೃತಿಯು ಚನ್ನಗಿರಿಯ ಸ್ಥಳನಾಮವನ್ನು ಉಲ್ಲೇಖಿಸುತ್ತದೆ.

ವಿದೇಶಿ ಸಾಹಿತ್ಯ ಆಧಾರಗಳು :

London : Cadell W. Pavies/ Black, Parry and kings bury in 3 ಸಂಪುಟಗಳು A Journey from madras through the countries of Mysore, Canara and Mabar – London. ಇವು ವಿದೇಶಿ ಸಾಹಿತ್ಯಕ ಆಕರಗಳಾಗಿವೆ.

ಅಧ್ಯಯನದ ಉದ್ದೇಶ :

ಮಲೆನಾಡು ಮತ್ತು ಬಯಲು ಸೀಮೆಯ ನಡುವೆ ಕಂಡುಬರುವ ಚನ್ನಗಿರಿ ತಾಲ್ಲೂಕಿಗೆ ಐತಿಹಾಸಿಕ ಮಹತ್ವವಿದೆ. ಗಂಗವಾಡಿ ತೊಂಬತ್ತು ಸಾವಿರ, ನೊಳಂಬವಾಡಿ ಮೂವತ್ತೆರಡು ಸಾವಿರದ ಆಡಳಿತ ಭಾಗವಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಒಟ್ಟು ೧೦೧ ಶಾಸನಗಳು ದೊರೆತಿವೆ. ವೀರಗಲ್ಲುಗಳು, ಮಹಾಸತಿಗಲ್ಲುಗಳು ಒಟ್ಟು ೩೭ ದೊರೆತಿದ್ದು, ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ವೈವಿಧ್ಯತೆಯನ್ನು ಹೊಂದಿವೆ. ಕಲ್ಯಾಣ ಚಾಲುಕ್ಯರಿಂದ ವಿಜಯನಗರೋತ್ತರದವರೆಗೆ ೩೬ ದೇವಾಲಯಗಳನ್ನು ಗುರುತಿಸಬಹುದಾಗಿದೆ. ಒಟ್ಟು ೪೪ ಮೂರ್ತಿಶಿಲ್ಪಗಳು ದೊರೆತಿದ್ದು, ಶೈವ, ವೈಷ್ಣವ, ಶಾಕ್ತ, ಜೈನ ಧರ್ಮಗಳಿಗೆ ಸಂಬಂಧಿಸಿವೆ. ಕೋಟೆ ಕೊತ್ತಲಗಳು, ಬುರುಜುಗಳು, ಪುಷ್ಕರಣಿಗಳು, ಬಾವಿಗಳು, ಕೆರೆಗಳು, ಹೊದಿಕೆರೆಯ ಷಾಹಜಿ ಬೋನ್ಸ್ಲೆ ಸಮಾಧಿ ಮೊದಲಾದ ಸ್ಮಾರಕಗಳನ್ನು ಒಂದೆಡೆ ಸೆರೆಹಿಡಿದು ಒಟ್ಟಾರೆ ಚನ್ನಗಿರಿ ತಾಲ್ಲೂಕಿನ ಇತಿಹಾಸವನ್ನು ಸೂಕ್ಷ್ಮ ಅಧ್ಯಯನಕ್ಕೆ(ಮೈಕ್ರೋ ಸ್ಪಡೀಸ್) ಒಳಪಡಿಸುವ ಉದ್ದೇಶ ಈ ಅಧ್ಯಯನಕ್ಕಿದೆ.

ಅಧ್ಯಯನ ವ್ಯಾಪ್ತಿ :

ಚನ್ನಗಿರಿ ತಾಲ್ಲೂಕಿನ ಶಾಸನಗಳ ಮತ್ತು ಸ್ಮಾರಕಗಳ ಕುರಿತು ಪ್ರಾಥಮಿಕ, ದ್ವಿತೀಯ (ಅನುಷಂಗಿಕ) ಆಕರಗಳನ್ನು ಸಂಗ್ರಹಿಸಲಾಗಿದೆ. ಎಲ್ಲಾ ಗ್ರಾಮಾವಾರು ಪ್ರಾದೇಶಿಕ ಅನ್ವೇಷಣೆ ಕೈಗೊಂಡಾಗ ಯಾವುದೇ ಪ್ರಾಗೈತಿಹಾಸಿಕ ನೆಲೆಗಳು, ಕುರುಹುಗಳು ಈವರೆಗೆ ದೊರೆತಿಲ್ಲ. ಇತಿಹಾಸದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರವರೆಗಿನ ಶಾಸನಗಳು ಲಭ್ಯವಾಗಿಲ್ಲ. ಆದರೆ ರಾಷ್ಟ್ರಕೂಟರ ಸಾಮಂತರಾದ ಕಲ್ಯಾಣದಚಾಲುಕ್ಯರ ಕಾಲದ ಶಾಸನಗಳು ಲಭ್ಯವಾಗಿವೆ. ಅವರ ನಂತರ ಬಂದ ನೊಳಂಬಪಲ್ಲವರು, ಹೊಯ್ಸಳರು, ಉಚ್ಚಂಗಿಪಾಂಡ್ಯರು, ಆಸಂದಿಗಂಗರು, ದೇವಗಿರಿಯ ಸೇವುಣರು, ವಿಜಯನಗರದ ಅರಸರು, ಸಂತೆಬೆನ್ನೂರಿನ ನಾಯಕರು, ಚಿತ್ರದುರ್ಗದ ಪಾಳೇಗಾರರು, ಬಿಜಾಪುರದ ಆದಿಲ್‌ಷಾಹಿಗಳು, ಮರಾಠರು, ಕೆಳದಿ ಅರಸರವರೆಗೂ ಹೇರಳವಾಗಿ ಶಾಸನಗಳು, ಸ್ಮಾರಕಗಳು ಲಭ್ಯವಾಗಿವೆ. ಆದ್ದರಿಂದ, 'ಈ ಮಹಾಪ್ರಬಂಧದ ವ್ಯಾಪ್ತಿಯು ಕ್ರಿ.ಶ. ೧೦ನೆಯ ಶತಮಾನದಿಂದ ವಿಜಯನಗರೋತ್ತರದವರೆಗೆ ಅಂದರೆ ಕೆಳದಿಯ ಅರಸರ ಚನ್ನಮ್ಮಾಜಿಯ ಕಾಲದವರೆಗೆ ಅಂದರೆ ಸುಮಾರು ಕ್ರಿ.ಶ. ೧೮ನೆಯ ಶತಮಾನಕ್ಕೆ ಸೀಮಿತವಾಗಿದೆ. ಹೀಗಾಗಿ ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳಿಗೆ ಸೀಮಿತ

ಮಾಡಿಕೊಂಡು ಕ್ರಿ.ಶ. ೧೦ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ಮಾಡಿದ ಅಧ್ಯಯನ ಇದಾಗಿದೆ.

ಅಧ್ಯಯನ ವಿಧಾನ :

'ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು' ಈ ಮಹಾಪ್ರಬಂಧದ ರಚನೆಯಲ್ಲಿ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿ ಚನ್ನಗಿರಿ ತಾಲ್ಲೂಕಿನ ಗ್ರಾಮಗಳಲ್ಲಿ ಅನ್ವೇಷಣೆ ಕೈಗೊಂಡು, ಅಲ್ಲಿ ಕಂಡುಬಂದ ಶಾಸನಗಳ, ಸ್ಮಾರಕಗಳ ಛಾಯಾಚಿತ್ರಗಳನ್ನು ತೆಗೆದು, ಪ್ರಾಥಮಿಕ, ಅನುಷಂಗಿಕ ಆಕರಗಳ ಮಾಹಿತಿಯನ್ನು ಕ್ರೋಢಿಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇತಿಹಾಸದ ತಜ್ಞರೊಂದಿಗೆ ಚರ್ಚಿಸಿ, ಈ ಎಲ್ಲಾ ಮಾಹಿತಿಯನ್ನು ವಿಶ್ಲೇಷಿಸಿ ಅಂತರ್ಜಾಲದಲ್ಲಿ ದೊರೆತ ಮಾಹಿತಿಯನ್ನು ಒಂದೆಡೆ ಸೇರಿಹಿಡಿಯಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದ ಶಾಸನಗಳು, ಶಾಸನಶಿಲ್ಪಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆ-ಕೊತ್ತಲಗಳು, ಬುರುಜುಗಳು, ಪುಷ್ಕರಣಿಗಳು, ಕೆರೆಗಳು, ಬಾವಿಗಳು, ಹೊದಿಗೆರೆ ಷಾಹಾಜೀ ಸಮಾಧಿ ಮೊದಲಾದವುಗಳನ್ನು ಕ್ರೋಢಿಕರಿಸಿಕೊಂಡು ಅಧ್ಯಯನ ಮಾಡಿದ ಪ್ರಬಂಧ ಇದಾಗಿದೆ.

ಅಧ್ಯಯನದ ಸ್ವರೂಪ :

'ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳು' ಶೀರ್ಷಿಕೆಯು ಈ ಮಹಾಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲ ಅಧ್ಯಾಯದಲ್ಲಿ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಪೂರ್ವಾಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಪೂರ್ವಾಧ್ಯಯನಗಳಲ್ಲಿ ಇದುವರೆಗೆ ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು ಇತರೆ ಸ್ಮಾರಕಗಳಾದ ಪುಷ್ಕರಣಿ, ಕೆರೆಗಳು, ಕೋಟೆ-ಕೊತ್ತಲಗಳ ಬಗ್ಗೆ ಉಲ್ಲೇಖಿಸಿದ ಕೃತಿಗಳು, ಎಂ.ಫಿಲ್., ಪಿಎಚ್.ಡಿ. ಪ್ರಬಂಧಗಳು ಮತ್ತು ಲೇಖನಗಳನ್ನು ಅವಲೋಕಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆಯೊಂದಿಗೆ ಚನ್ನಗಿರಿ ತಾಲ್ಲೂಕಿನ ಸ್ಥಳನಾಮಗಳನ್ನು ವಿವರಿಸಲಾಗಿದೆ. ಶಾಸನದಲ್ಲಿ ಉಲ್ಲೇಖಿತ ಆಡಳಿತ ವಿಭಾಗಗಳು, ಶಾಸನಗಳಲ್ಲಿ ಉಲ್ಲೇಖಿತ ವೃತ್ತಿ ಮತ್ತು ಜನ ಸಮುದಾಯಗಳು, ಆರ್ಥಿಕ ಚಟುವಟಿಕೆಗಳು, ಕಂದಾಯ ಪದ್ಧತಿ, ಗುಡಿ ಕೈಗಾರಿಕೆ, ಕೆರೆಗಳು, ಅಗ್ರಹಾರಗಳು, ದೇವಾಲಯಗಳು, ಮಠಗಳು, ಶಾಸನಕವಿ, ರೂವಾರಿ ಮತ್ತು ಶಾಸನಶಿಲ್ಪಿ, ಶಾಪಾಶಯಗಳು, ವಂಶಾವಳಿಗಳನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಆ ಕಾಲಘಟ್ಟದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸ್ಥಿತಿಗತಿಗಳನ್ನು ವಿಶ್ಲೇಷಿಸಿ ಐತಿಹಾಸಿಕವಾಗಿ ಬೆಳಕು ಚೆಲ್ಲಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಶಾಸನಗಳ ವೈವಿಧ್ಯತೆಗೆ ಸಂಬಂಧಿಸಿದೆ. ಶಾಸನದ ಅರ್ಥ, ಸ್ವರೂಪ ತಿಳಿಸುವುದರ ಜೊತೆಗೆ ದಾನಶಾಸನಗಳನ್ನು ವರ್ಗೀಕರಿಸಿ, ಆಡಳಿತ ದಾನಶಾಸನಗಳು, ಸಾಮಾಜಿಕ ದಾನಶಾಸನಗಳು, ಧಾರ್ಮಿಕ ದಾನಶಾಸನಗಳು, ವೀರಗಲ್ಲು ಶಾಸನ, ಶಾಸನೋಕ್ತವೀರಗಲ್ಲು ಶಾಸನಗಳು, ತುರುಗೋಳ್‌ಶಾಸನಗಳು, ಇತರೆ ಶಾಸನಗಳೆಂದು ವಿಂಗಡಿಸಿ ಶಾಸನ ಶಿಲ್ಪಗಳ ಅಧ್ಯಯನ ಮಾಡಲಾಗಿದೆ. ಶಾಸನಶಿಲ್ಪ ಆಧರಿಸಿ ಶಾಸನ ಸಹಿತ ಶೈವ ವೀರಗಲ್ಲುಗಳು, ಶಾಸನೋಕ್ತ ತುರುಗೋಳ್ ಶಾಸನ ಶಿಲ್ಪಗಳು ಸ್ಮಾರಕ ಶಿಲ್ಪಗಳಾದ ವೀರಗಲ್ಲು ಶಾಸನಶಿಲ್ಪಗಳು, ಮಹಾಸತಿಗಲ್ಲುಗಳು, ಸಹಗಮನ ಮಹಾಸತಿಶಿಲ್ಪಗಳು ಮತ್ತು ಅನುಗಮನ ಮಹಾಸತಿ ಶಿಲ್ಪಗಳೆಂದು ವರ್ಗೀಕರಿಸಿ, ಸಾಂಸ್ಕೃತಿಕ ಮಹತ್ವದ ಜೊತೆಗೆ ಲಿಂಗಮುದ್ರೆ ಕಲ್ಲುಗಳು ಮತ್ತು ವಾಮನಕಲ್ಲುಗಳನ್ನು ವಿವರಣೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ 'ಸ್ಮಾರಕಗಳು' ಇದರಲ್ಲಿ ದೇವಾಲಯಗಳ ಉಗಮ, ವಿಕಾಸ, ಚನ್ನಗಿರಿಯಲ್ಲಿ ಲಭ್ಯವಾದ ದೇವಾಲಯಗಳ ಭಾಗಗಳನ್ನು ತಿರ್ಯಙ್ಮುಖ ಮತ್ತು ಊರ್ಧ್ವಮುಖವಾಗಿ ವಾಸ್ತು ಪ್ರಕಾರ ವಿಶ್ಲೇಷಿಸಿ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳೆಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಈ ಎಲ್ಲಾ ದೇವಾಲಯಗಳ ವಾಸ್ತುವನ್ನು ತೌಲನಿಕವಾಗಿ ಅಧ್ಯಯನಕ್ಕೊಳಪಡಿಸಿದೆ. ಇತರೆ ಸ್ಮಾರಕಗಳಾದ ಶಾಸನೋಕ್ತ ಕೆರೆಗಳು, ಹೊಂಡಗಳು, ಪುಷ್ಕರಣಿ, ರಕ್ಷಣಾ ಸ್ಮಾರಕಗಳಂತಹ ಕೋಟೆ–ಕೊತ್ತಲಗಳು, ಬುರುಜುಗಳು, ರಾಣಿಯ ಸ್ನಾನದ ಕಲ್ಲು, ಹೊಯ್ಸಳರ ಕಲ್ಲಿನಲಾಂಛನ, ಹೊದಿಕೆರೆಯ ಷಾಹಜಿ ಸಮಾಧಿ, ಮಲಹಾಳುವಿನಲ್ಲಿ ದೊರೆತ ಕಬ್ಬಿಣದ ಭರ್ಜಿ ಇವುಗಳ ಬಗ್ಗೆ ಮಾಹಿತಿಯನ್ನು ಉದಾಹರಣೆ ಮೂಲಕ ಅಧ್ಯಯನ ಮಾಡಲಾಗಿದೆ.

'ಮೂರ್ತಿಶಿಲ್ಪಗಳು' ಎಂಬ ಐದನೆಯ ಅಧ್ಯಾಯದಲ್ಲಿ ಶೈವ, ವೈಷ್ಣವ, ಶಾಕ್ತ ಮತ್ತು ಜೈನ ಎಂದು ಲಭ್ಯವಾದ ಮೂರ್ತಿಶಿಲ್ಪಗಳನ್ನು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಶೈವ ಮೂರ್ತಿಶಿಲ್ಪಗಳಾದ ಶಿವಲಿಂಗಗಳು, ನಂದಿ, ವೀರಭದ್ರ, ಭೈರವ, ಗಣಪತಿ, ಸುಬ್ರಹ್ಮಣ್ಯ, ಗುಂಡಬ್ರಹ್ಮಯ್ಯ, ಮೂರ್ತಿಶಿಲ್ಪಗಳನ್ನು, ವೈಷ್ಣವ ಮೂರ್ತಿಶಿಲ್ಪಗಳಾದ ಕೇಶವ, ಪುರುಷೋತ್ತಮ, ಸೂರ್ಯನಾರಾಯಣ, ಬೇಟೆ ರಂಗನಾಥ, ಲಕ್ಷ್ಮೀನಾರಾಯಣ, ಗರುಡ ಶಿಲ್ಪಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಶಾಕ್ತ ಮೂರ್ತಿಶಿಲ್ಪಗಳಾದ ಅಂಬಿಕಾ, ಕಾಳಿ, ಕುಕ್ಕವಾಡೇಶ್ವರಿ, (ರೇಣುಕಯಲ್ಲಮ್ಮ) ಮಹಿಷಾಸುರ ಮರ್ಧಿನಿ, ಸಪ್ತ ಮಾತೃಕೆಯರು ಮತ್ತು ಜೈನಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು, ಒಟ್ಟು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಕೊಡಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಪೂರಕವಾದ ಚನ್ನಗಿರಿ ತಾಲ್ಲೂಕಿನ ನಕ್ಷೆ, ಪರಾಮರ್ಶನ ಗ್ರಂಥಗಳು, ಅಪ್ರಕಟಿತ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, ಸ್ಮಾರಕಗಳು, ದೇವಾಲಯಗಳ ತಲವಿನ್ಯಾಸಗಳು ಹಾಗೂ ಛಾಯಾ ಚಿತ್ರಗಳನ್ನು ನೀಡಲಾಗಿದೆ.

ಪೂರ್ವಾಧ್ಯಯನಗಳ ಸಮೀಕ್ಷೆ

ಒಂದು ಪ್ರದೇಶದ ಇತಿಹಾಸ, ಸಂಸ್ಕೃತಿಯನ್ನು ತಿಳಿಯಬೇಕಾದರೆ ಪೂರ್ವ ಅಧ್ಯಯನಗಳ ಸಮೀಕ್ಷೆ ನಡೆಸುವುದು ಅವಶ್ಯಕ. ಸಂಬಂಧಿತ ಸಾಹಿತ್ಯದ ಪುನರ್‌ಅವಲೋಕನ ಚನ್ನಗಿರಿ ತಾಲ್ಲೂಕಿಗೆ ಸೀಮತವಾಗಿರುವಂತೆ, ಈಗಾಗಲೇ ಪ್ರಕಟಿತವಾಗಿರುವ ಸಂಶೋಧನಾ ಕೃತಿಗಳು, ಸಂಪ್ರಬಂಧಗಳು ಮತ್ತು ಸಂಶೋಧನಾ ಲೇಖನಗಳನ್ನು ಸಂಗ್ರಹಿಸಿ ಅವಲೋಕಿಸಲಾಗಿದೆ.

ಕೃತಿಗಳು :

ಶಿವಮೊಗ್ಗ ಜಿಲ್ಲಾ ಗ್ಯಾಜಿಟಿಯರ್‌ನಲ್ಲಿ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಕೆಲವು ಐತಿಹಾಸಿಕ ಗ್ರಾಮಗಳ ಸಂಕ್ಷಿಪ್ತ ವಿವರಣೆ ಇದೆ.[೧]

ಟಿ.ಗಿರಿಜಾ ಅವರ 'ದಾವಣಗೆರೆ ಇದು ನಮ್ಮ ಜಿಲ್ಲೆ' ಜಿಲ್ಲಾ ದರ್ಶನದಲ್ಲಿ[೨] ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳಲ್ಲೊಂದಾದ ಚನ್ನಗಿರಿ ತಾಲ್ಲೂಕಿನ ಭೌಗೋಳಿಕತೆ, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಯನ್ನು ಒಳಗೊಂಡಿದೆ. ಸಂತೆಬೆನ್ನೂರು ಸುಮತೀಂದ್ರ ನಾಡಿಗ್ ಅವರ 'ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು' ಈ ಕೃತಿಯಲ್ಲಿ[೩] ಚನ್ನಗಿರಿ ತಾಲ್ಲೂಕಿನ ಶಾಸನಗಳು, ಹಿರೇಕೋಗಲೂರಿನ ಶಾಸನಗಳು, ಚನ್ನಗಿರಿ ತಾಲ್ಲೂಕಿನ ಜೈನ ವಿಗ್ರಹಗಳು, ಸಂತೆಬೆನ್ನೂರು ನಾಯಕರು, ಕೆಳದಿ ಚೆನ್ನಮ್ಮ ಕಟ್ಟಿದ ಚನ್ನಗಿರಿ, ಕೋಗಿಲೆಗಳು ಉಲಿದ ಊರು ಕೋಗಲೂರು, ಬಯಲು ಪ್ರಾಚ್ಯ ವಸ್ತುಸಂಗ್ರಹಾಲಯ, ನಲ್ಕುದರೆ ಪಾಳುಬಿದ್ದಿರುವ ಕಲ್ಲುಕೆರೆಯ ಹೊಯ್ಸಳರ ದೇವಾಲಯ, ಪುರಾತನ ತೀರ್ಥಂಕರ ವಿಗ್ರಹಗಳ ಪತ್ತೆ, ಉಡುಗಿರಿಕ್ಷೇತ್ರ ದೇವರಹಳ್ಳಿ, ಸಂತೇಬೆನ್ನೂರಿನ ಸುಂದರ ಪುಷ್ಕರಣಿ ಮಂಟಪಗಳು ಉಪನಾಯಕನಹಳ್ಳಿಯ ಅಪೂರ್ವ ಮಾಸ್ತಿಶಿಲ್ಪಗಳು, ಕಲ್ಯಾಣದಚಾಲುಕ್ಯರ ಮೆದಿಕೆರೆಯ ಅಪೂರ್ವ ಸೂರ್ಯನಾರಾಯಣ, ಸೂಳೆಕೆರೆ, ಕತ್ತಲಗೆರೆ, ಐತಿಹಾಸಿಕ ಪ್ರೇಕ್ಷಣೀಯ ಸ್ಥಳ ಹಾಗೂ ಧಾರ್ಮಿಕ ಕ್ಷೇತ್ರ, ಸಂತೆಬೆನ್ನೂರಿನ ನಾಯಕರು ಮತ್ತು ಪುಷ್ಕರಣಿ, ಸಂತೆಯೊಳಗೊಂದು ಸುತ್ತು ಬದಲಾವಣೆಗೆ ಬಾಗಿದ ಸಂತೆಬೆನ್ನೂರು ಸಂತೆ, ಚನ್ನಗಿರಿ ತಾಲ್ಲೂಕಿನಲ್ಲಿ ಈಚೆಗೆ ದೊರೆತ ಹೊಯ್ಸಳರ ಒಂದು ಶಾಸನ, ಹೊಯ್ಸಳ ವೀರಬಲ್ಲಾಳನ ಕಾಲದ ಅಪ್ರಕಟಿತ ಶಾಸನದ ಪ್ರತಿ. ಬ್ರಿಟಿಷರನ್ನೇ ನಡುಗಿಸಿದ ದೊಂಡಿಯವಾಘ, ಹೊಯ್ಸಳ ರಾಣಿ ಉಮಾದೇವಿ ಚನ್ನಗಿರಿ ತಾಲ್ಲೂಕು ಉಬ್ರಾಣಿಯವಳೇ? ಛತ್ರಪತಿ ಶಿವಾಜಿ ತಂದೆ ಷಾಹಜೀ ಸಮಾಧಿ ಇರುವ ಹೊದಿಗೆರೆ, ಚನ್ನಗಿರಿ ತಾಲ್ಲೂಕಿನ ಹೆಮ್ಮೆಯ ಬರಹಗಾರರು. ಶತಮಾನೋತ್ಸವ ನೆನಪು, ಶ್ರೀ. ಎಸ್.ವಿ.ಕೆ. ಕನ್ನಡದ ಶಕ್ತಿ ಎಂ. ಚಿದಾನಂದಮೂರ್ತಿ ಒಟ್ಟು ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದ ಲೇಖನಗಳನ್ನು ಒಂದೆಡೆ ಸಂಗ್ರಹಿಸಿದ್ದಾರೆ. ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನಕ್ಕೆ ಇದೊಂದು ಆಕರ ಗ್ರಂಥ.

ಸಂತೆಬೆನ್ನೂರು ಸುಮತೀಂದ್ರ ನಾಡಿಗ್ ಅವರ 'ಸಂತೆಬೆನ್ನೂರು ನಾಯಕರು' ಕೃತಿಯಲ್ಲಿ[೪] ಸಂತೆಬೆನ್ನೂರು ನಾಯಕರ ಇತಿಹಾಸ, ಅವರ ಕಾಲದ ಶಾಸನಗಳು, ಮತ್ತು ಕೈಪಿಯತ್ತುಗಳ ಕುರಿತು ಬರೆದಿದ್ದಾರೆ. ಈ ಕೃತಿಯಲ್ಲಿ ಬಸವಪಟ್ಟಣದ ಪಾಳೇಗಾರರು ಬಸವಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಮಾಡಿ, ಅನಂತರ ಸಂತೆಬೆನ್ನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಂತೆಬೆನ್ನೂರು ನಾಯಕರೆಂದು ಕರೆಯಲ್ಪಟ್ಟರೆಂದು, ಸಂತೆಬೆನ್ನೂರು ದೊರೆ ತರೀಕೆರೆಗೆ ಹೋಗಿ ತರೀಕೆರೆಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಆಳ್ವಿಕೆ ಮಾಡಿದ್ದರಿಂದ ತರೀಕೆರೆ ಪಾಳೆಗಾರರೆಂದು, ಬಸವಪಟ್ಟಣ, ಸಂತೆಬೆನ್ನೂರು, ತರೀಕೆರೆಯಲ್ಲಿ ಆಳ್ವಿಕೆ ಮಾಡಿದ ಪಾಳೇಗಾರರು ಒಂದೇ ವಂಶಕ್ಕೆ ಸೇರಿದವರೆಂದು ಕೃತಿಯಲ್ಲಿ ತಿಳಿಸಿದ್ದಾರೆ.

ಸುರೇಶ್. ಬಿ. ಅವರು 'ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು' ಎಂಬ ಕೃತಿಯಲ್ಲಿ[೫] ಚನ್ನಗಿರಿಯ ಕೇಶವದೇವಾಲಯ, ಕಲ್ಲುಮಠ ದೇವಾಲಯ, ಸೂಳೆಕೆರೆ ಸಿದ್ದೇಶ್ವರ ದೇವಾಲಯ, ಹಿರೇಕೋಗಿಲೂರು ಕಲ್ಲೇಶ್ವರ ದೇವಾಲಯ, ಸಂತೆಬೆನ್ನೂರಿನ ಪುಷ್ಕರಣಿಗಳ ವಾಸ್ತುವನ್ನು ಮತ್ತು ಕೆಲವು ಮೂರ್ತಿಶಿಲ್ಪಗಳ ಪ್ರತಿಮಾಲಕ್ಷಣಗಳನ್ನು ತಿಳಿಸಿದ್ದಾರೆ.

ಸುಮತೀಂದ್ರನಾಡಿಗ್ ಅವರು ಸೂಳೆಕೆರೆ ಸಾಂಗತ್ಯ (ಶ್ರೀ ಸಿದ್ದೇಶ್ವರ ಚರಿತ್ರೆ) ಕೃತಿಯಲ್ಲಿ[೬] ಸೂಳೆಕೆರೆಯ ಇತಿಹಾಸ, ಸೂಳೆಕೆರೆಸೀಮೆ ಕೈಫಿಯತ್ತು, ತ್ಯಾವಣಿಗೆ ಬೆಟ್ಟಪ್ಪನವರ ಬಳಿಯಿದ್ದ ಹಸ್ತಪ್ರತಿಯಲ್ಲಿನ ಮಾಹಿತಿ ಇದೆ. ಎಂ.ಎಂ. ಕಲಬುರ್ಗಿ ಅವರ ಕರ್ನಾಟಕ ಕೈಫಿಯತ್ತುಗಳಲ್ಲಿ ಸಂತೆಬೆನ್ನೂರು ನಾಯಕರ ಕೈಫಿಯತ್ತು, ಉತ್ಸಂಗಿವೆಂಟಿಕೆ ಸಲ್ಲುವ ಸಂತೇಬೆನ್ನೂರು ಸೀಮೆ ಕೈಪಿಯತ್ತು, ಹೊದಿಗೆರೆ ಸೀಮೆ ಕೈಫಿಯತ್ತು ಮತ್ತು ಮಲ್ಲೂರು, ಸಾಸುವೆಹಳ್ಳಿ ಸೀಮೆ ಕೈಫಿಯತ್ತುಗಳ ಬಗ್ಗೆ ಉಲ್ಲೇಖಿಸಲಾಗಿದೆ. ಇವು ಆ ಕಾಲಘಟ್ಟದ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಾಯಕವಾಗಿದೆ. ಬೆನಕನಹಳ್ಳಿ ಜಿ. ನಾಯಕ್ ರವರು 'ಚನ್ನಗಿರಿ ತಾಲೂಕು ದರ್ಶನ' ಕೃತಿಯಲ್ಲಿ[೭] ಚನ್ನಗಿರಿ ತಾಲ್ಲೂಕಿನ ಐತಿಹಾಸಿಕ ಗ್ರಾಮಗಳ ಇತಿಹಾಸವನ್ನು ಉಲ್ಲೇಖಿಸುವ ಜೊತೆಗೆ ಇತರ ಗ್ರಾಮಗಳ ಇತಿಹಾಸವನ್ನು ವಿವರಿಸಲಾಗಿದೆ. ಮಂಜುನಾಯ್ಕ್ ಆರ್. ಅವರ 'ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು' ಎಂಬ ಎಂ.ಫಿಲ್. ಪ್ರಬಂಧ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದ ಶಾಸನಗಳು, ಶಾಸನಶಿಲ್ಪಗಳು, ದೇವಾಲಯಗಳು, ಮೂರ್ತಿಶಿಲ್ಪಗಳು ಮತ್ತು ಇತರೆ ಸ್ಮಾರಕಗಳ ಕುರಿತಾಗಿದೆ. ಬಿ.ಎಲ್. ರೈಸ್ ಅವರ ಎಫಿಗ್ರಾಫಿಯ ಕರ್ನಾಟಕ ಸಂಪುಟ–೭ರ ಭಾಗ–೨ ರಲ್ಲಿ ಶಿವಮೊಗ್ಗ ಶಾಸನಗಳಿಗೆ ಸಂಬಂಧಿಸಿದೆ. ಇದರಲ್ಲಿ ಚನ್ನಗಿರಿಗೆ ಸೇರಿದ ೮೩ ಶಾಸನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಚನ್ನಗಿರಿ ಆಳ್ವಿಕೆ ಮಾಡಿದ ರಾಜಮನೆತನಗಳ ಇತಿಹಾಸದ ಮೇಲೆ ಬೆಳಕು ಚೆಲ್ಲಿದ್ದಾರೆ.[೮] ಎಂ.ಎ.ಆರ್. ಮೈಸೂರು ಪುರಾತತ್ವ(೧೮೯೫–೧೯೫೭) ವರದಿಯನ್ನು ಮೈಸೂರು ಪುರಾತತ್ವ ಇಲಾಖೆಯು ಪ್ರಕಟಿಸಿದ್ದು, ಇದರಲ್ಲಿ ಚನ್ನಗಿರಿ ತಾಲೂಕಿಗೆ ಸಂಬಂಧಿಸಿದಂತೆ ೧೩ ಶಾಸನಗಳು ಮತ್ತು ಕೆಲವು ಸ್ಮಾರಕಗಳನ್ನು ವರದಿಯಲ್ಲಿ

ದಾಖಲಿಸಲಾಗಿದೆ. ಎಂ.ಎ.ಆರ್.೧೯೩೫ರ ವರದಿಯಲ್ಲಿ ೧೦ ಶಾಸನಗಳು ಪ್ರಕಟಗೊಂಡಿವೆ. ಅದರಲ್ಲಿ ಒಂದು ತಾಮ್ರ ಶಾಸನವಿದೆ.[೧೦]

೧೯೩೭ (ಎಂ.ಎ.ಆರ್.) ವರದಿಯಲ್ಲಿ ಸ್ಮಾರಕಗಳಾದ ಚನ್ನಗಿರಿ ಕೋಟೆ, ಸಿದ್ದೇಶ್ವರ ದೇವಾಲಯ, ಕೇತೇಶ್ವರ ದೇವಾಲಯ, ಬೆಟ್ಟದ ರಂಗನಾಥಸ್ವಾಮಿ ದೇವಾಲಯ, ಮುಸಾಫಿರ್‌ಖಾನ, ಸಂತೆಬೆನ್ನೂರು ಪುಷ್ಕರಣಿ, ಕೆರೆಬಿಳಚಿಯಲ್ಲಿ ಲಭ್ಯವಾದ ನಾಣ್ಯಗಳ ಕುರಿತ ವಿವರಗಳಿವೆ.[೧೧] ಎಂ.ಎ.ಆರ್. ೧೯೭೩ರ ವರದಿಗಳಲ್ಲಿ ಚನ್ನಗಿರಿ ತಾಲ್ಲೂಕಿನ ಕೇತೇಶ್ವರ (ಕಲ್ಲೇಶ್ವರ) ದೇವಾಲಯದ ನವೀಕರಣ ಮತ್ತು ಚನ್ನಮಬ್ಬೆ ಕಟ್ಟಿಸಿದ ಚನ್ನಗಿರಿ ಕೋಟೆಯ ನವೀಕರಣವನ್ನು ದಾಖಲಿಸಿದೆ.[೧೨]

ಮೇಲಿನ ಎಲ್ಲಾ ಕೃತಿಗಳು ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳನ್ನು ಅಧ್ಯಯನ ಮಾಡಲು ಪ್ರಮುಖ ಅನುಷಂಗಿಕ ಆಕರಗಳಾಗಿದ್ದು ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳ ಒಂದೆಡೆ ಸೆರೆಹಿಡಿಯಲಾಗಿದೆ.

ಸಂಶೋಧನಾ ಪ್ರಬಂಧಗಳು :

ಎಂ.ಫಿಲ್. ಪ್ರಬಂಧಗಳು

ಓಬಳೇಶಪ್ಪ ಎಂ.ಆರ್. ಅವರು 'ಚನ್ನಗಿರಿ ತಾಲ್ಲೂಕಿನ ದೇವಾಲಯಗಳು' (ಕ್ರಿ.ಶ. ೧೦–೧೨ನೆಯ ಶತಮಾನದವರೆಗೆ) ಸಂಪ್ರಬಂಧದಲ್ಲಿ ಚನ್ನಗಿರಿ ತಾಲ್ಲೂಕಿನ ಭೌಗೋಳಿಕತೆ, ದೇವಾಲಯಗಳ ಆಶ್ರಯದಾತರು ಹಾಗೂ ದಾನದತ್ತಿಗಳನ್ನೊಳಗೊಂಡ ಶಾಸನಗಳು, ದೇವಾಲಯಗಳು, ಕಲೆ ಮತ್ತು ವಾಸ್ತುಶಿಲ್ಪಗಳ ಅಧ್ಯಯನ, ದೇವಾಲಯಗಳ ಪ್ರಾಂಗಣವ್ಯವಸ್ಥೆ, ದೇವಾಲಯಗಳನ್ನಾಧರಿಸಿ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.[೧೩]

ಪಿಎಚ್.ಡಿ. ಮಹಾಪ್ರಬಂಧಗಳು :

ಸುರೇಶ್.ಬಿ. ಅವರ 'ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ' ಎಂಬ ಮಹಾಪ್ರಬಂಧದಲ್ಲಿ ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ಪುರಾತತ್ವ ಅವಶೇಷಗಳಲ್ಲಿ ಚನ್ನಗಿರಿ ತಾಲ್ಲೂಕಿನ ಕೆಲವು ದೇವಾಲಯಗಳ ಮತ್ತು ಮೂರ್ತಿ ಶಿಲ್ಪಗಳನ್ನು ದಾಖಲಿಸಿದ್ದಾರೆ. ಕಲಾ ದೃಷ್ಟಿಕೋನದ ವಿಶ್ಲೇಷಣೆಯನ್ನು ಅನುಕರಿಸಿ ಮಹಾಪ್ರಬಂಧದಲ್ಲಿ ಕೆಲವು ದೇವಾಲಯಗಳ ಬಗ್ಗೆ ಚರ್ಚಿಸಿದ್ದಾರೆ.[೧೪]

ಹೆಚ್. ತಿಪ್ಪೇಸ್ವಾಮಿ ಅವರ, 'ದಾವಣಗೆರೆ ಜಿಲ್ಲೆಯ ದೇವಾಲಯಗಳು' ಮಹಾಪ್ರಬಂಧದಲ್ಲಿ ದಾವಣಗೆರೆ ಜಿಲ್ಲೆಯ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳೊಂದಿಗೆ ಚನ್ನಗಿರಿಗೆ ಸಂಬಂಧಿಸಿದಂತೆ ಕೆಲವು ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳನ್ನು ದಾಖಲಿಸಲಾಗಿದೆ.[೧೫]

ಸಂಶೋಧನ ಲೇಖನಗಳು :

ಸುಮತೀಂದ್ರ ನಾಡಿಗ್‌ಅವರು ಬರೆದ 'ಸಂತೆಬೆನ್ನೂರು ಪಾಳೇಗಾರರು' ಎಂಬ ಲೇಖನದಲ್ಲಿ ಸಂತೇಬೆನ್ನೂರಿನ ನಾಯಕರ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೧೬] ಇದೇ ಕೃತಿಕಾರರು 'ಸಂತೆಬೆನ್ನೂರು ನಾಯಕರ ಶಾಸನಗಳು' ಲೇಖನದಲ್ಲಿ ಅವರ ಕಾಲಕ್ಕೆ ಸೇರಿದ ೩೬ಕ್ಕಿಂತ ಹೆಚ್ಚಿನ ಶಾಸನಗಳ ಬಗ್ಗೆ ಚರ್ಚಿಸಿದ್ದಾರೆ ಹಾಗೂ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದ ಹತ್ತು ಶಾಸನಗಳು ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿವೆ. ಅವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇದೆ.[೧೭]

ಸುಮತೀಂದ್ರನಾಡಿಗ್‌ಅವರು ಉಚ್ಚಂಗಿಪಾಂಡ್ಯರ ಕಾಲದ ಎರಡು ಅಪ್ರಕಟಿತ ಶಾಸನಗಳನ್ನು ಪ್ರಕಟಿಸಿದ್ದಾರೆ.[೧೮] ಒಂದನೆಯ ಶಾಸನವು, ಕ್ರಿ.ಶ.೧೧೨೨ರ ದೊಡ್ಡಅಬ್ಬಿಗೆರೆಯ ಕಲ್ಲೇಶ್ವರ ದೇವಾಲಯದ ದಕ್ಷಿಣ ಭಾಗಕ್ಕೆ ನಿಲ್ಲಿಸಲ್ಪಟ್ಟಿರುವ ಶಾಸನವು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಸಾಮಂತನಾದ ಉಚ್ಚಂಗಿ ಪಾಂಡ್ಯ ದೊರೆ ತ್ರಿಭುವನಮಲ್ಲನ ಕಾಲಕ್ಕೆ ಸೇರಿದೆ. ಎರಡನೆಯ ಶಾಸನವು ಕ್ರಿ.ಶ.೧೨೨೧ರ ಮೆದಕೆರೆಯ ಶ್ರೀ ಮಧುಕೇಶ್ವರ ದೇವಾಲಯದ ಪಶ್ಚಿಮದ ಆಲೂರಿನಗೌಡ ಹಾಲಪ್ಪನವರ ತೋಟದಲ್ಲಿ ದೊರೆತಿರುವ ಶಾಸನವು ಉಚ್ಚಂಗಿಪಾಂಡ್ಯರ ಸಾಮಂತನಾದ ಮಾಚನಾಗವುಂಡನಿಗೆ ಸೇರಿರುವ ಶಾಸನವಾಗಿದೆ. ಸಂತೆಬೆನ್ನೂರು ಸುಮತೀಂದ್ರನಾಡಿಗ್‌ರವರ 'ಚನ್ನಗಿರಿ ತಾಲ್ಲೂಕಿನಲ್ಲಿ ಈಚೆಗೆ ದೊರೆತ ಹೊಯ್ಸಳರ ಒಂದು ಶಾಸನ'ದಲ್ಲಿ ಉಬ್ರಾಣಿ ಹೋಬಳಿ ಬಸಾಪುರದ ಬಳಿ ಇರುವ ಏಕತಲೆಗುಡ್ಡದಲ್ಲಿರುವ ವೀರಭದ್ರ ದೇವಾಲಯದ ಎದುರಿಗೆ ನಿಲ್ಲಿಸಲ್ಪಟ್ಟಿರುವ ಕ್ರಿ.ಶ. ೧೧೯೮ ರ ಹೊಯ್ಸಳರ ವೀರಬಲ್ಲಾಳನ ಕಾಲಕ್ಕೆ ಸೇರಿದ ಶಾಸನದ ಬಗ್ಗೆ ಉಲ್ಲೇಖಿಸಲಾಗಿದೆ.[೧೯]

'ಉಪ್ಪನಾಯಕನಹಳ್ಳಿಯ ಅಪೂರ್ವ ಮಾಸ್ತಿ ಶಿಲ್ಪಗಳು' ಲೇಖನದಲ್ಲಿ ಸಂತೆಬೆನ್ನೂರಿನ ಸಾಮಂತರ ಕಾಲಕ್ಕೆ ಸೇರಿದ ಮಹಾಸತಿಶಿಲ್ಪಗಳ ಬಗ್ಗೆ ಇದೆ.[೨೦]

'ಹೊಯ್ಸಳ ವೀರಬಲ್ಲಾಳನ ಕಾಲದ ಅಪ್ರಕಟಿತ ಶಾಸನ' ಎಂಬ ಮತ್ತೊಂದು ಲೇಖನದಲ್ಲಿ ೧೦೦ ರಿಂದ ೧೫೦ ವರ್ಷಗಳ ಹಿಂದಿನ ಪ್ರಾಚೀನ ಕಾಲದ ಹಸ್ತಪ್ರತಿಯಲ್ಲಿ ಕ್ರಿ.ಶ. ೧೧೯೦ರ ಸೂಳೆಕೆರೆಯ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಲಭ್ಯವಾದ ಶಾಸನವು, ಹೊಯ್ಸಳರ ವೀರಬಲ್ಲಾಳನ ಕಾಲಕ್ಕೆ ಸೇರಿದ ಶಾಸನದ ಕುರಿತು ವಿಶ್ಲೇಷಿಸಿದ್ದಾರೆ.[೨೧] ಇದೇ ಕೃತಿಕಾರರ 'ಚನ್ನಗಿರಿ ತಾಲ್ಲೂಕಿನ ಜೈನ ವಿಗ್ರಹಗಳು' ಲೇಖನದಲ್ಲಿ ಬಸವಪಟ್ಟಣದಲ್ಲಿ ಕುಳಿತಿರುವ ಜೈನ ತೀರ್ಥಂಕರರಾದ ಚಂದ್ರನಾಥ, ನೇಮಿನಾಥ, ಪಾರ್ಶ್ವನಾಥ, ಸಿದ್ಧಮಠದ ಪಾರ್ಶ್ವನಾಥ ಮೂರ್ತಿಶಿಲ್ಪಗಳ ಬಗ್ಗೆ ಮಾಹಿತಿ ಇದೆ.[೨೨] ಬಿ. ರಾಜಶೇಖರಪ್ಪನವರ 'ಹಿರೇ ಕೋಗಲೂರಿನ ಅಪ್ರಕಟಿತ ಶಾಸನಗಳು' ಲೇಖನದಲ್ಲಿ ಕ್ರಿ.ಶ.೧೦೪೭ರ ಹಿರೇಕೋಗಲೂರು ಕೋಟೆಚನ್ನಬಸಪ್ಪ

ಎಂಬುವವರ ಮನೆಯ ಹಿತ್ತಲಲ್ಲಿ ಸಿಕ್ಕ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ತ್ರೈಲೋಕ್ಯಮಲ್ಲನು ಚಕ್ರವರ್ತಿಯಾಗಿ ಆಳುತ್ತಿರುವಾಗ ಅವನ ಸಾಮಂತರಾದ ನೊಳಂಬ ಪಲ್ಲವರ 'ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರಮಾನಡಿಯ' ಕಾಲಕ್ಕೆ ಸೇರಿದ ದ್ವಿಮುಖ ಶಾಸನದ ಬಗ್ಗೆ ಚರ್ಚಿಸಿದ್ದಾರೆ.[೨೩] ಯೋಗಾನಂದ. ಎಸ್.ಕೆ. ಅವರ 'ನಲ್ಕುದರೆಯ ಶಾಸನಗಳು ಮತ್ತು ದೇವಾಲಯಗಳು' ಎಂಬ ಲೇಖನದಲ್ಲಿ ತ್ರೈಪುರುಷ ದೇವಾಲಯ ಮತ್ತು ಬ್ರಹ್ಮೇಶ್ವರ ದೇವಾಲಯಗಳ ವಾಸ್ತು ಮತ್ತು ಹೊಯ್ಸಳರ ಕಾಲಕ್ಕೆ ಸೇರಿದ ಒಂದು ಶಾಸನ, ದೇವಗಿರಿಯ ಸೇವುಣರ ಕಾಲಕ್ಕೆ ಸೇರಿದ ಮೂರು ಶಾಸನೋಕ್ತ ವೀರಗಲ್ಲುಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ.[೨೪] ಅವರ ಮತ್ತೊಂದು 'ವಿಜಯನಗರದ ಕಾಲದ ನೀತಿಗೆರೆಯ ಶಾಸನೋಕ್ತ ವೀರಭದ್ರ ದೇವಾಲಯ ಎಂಬ ಲೇಖನದಲ್ಲಿ ಸಾಮಂತರಾದ ದುಮ್ಮಿ ಪಾಳೇಗಾರರು, ನೀತಿಗೆರೆಯ ವೀರಭದ್ರ ದೇವಾಲಯಕ್ಕೆ ದಾನವನ್ನು ನೀಡಿದ್ದರ ಬಗ್ಗೆ, ವೀರಭದ್ರ ದೇವಾಲಯದ ಮತ್ತು ಅದರ ಮುಂದೆ ನಿಲ್ಲಿಸಲ್ಪಟ್ಟಿರುವ ದ್ವೀಪಸ್ತಂಭದ ವಾಸ್ತು, ವೀರಭದ್ರ ಮತ್ತು ಅದರ ಮುಂದೆ ನವರಂಗದಲ್ಲಿ ಕುಳಿತಿರುವ ನಂದಿ ಮೂರ್ತಿಶಿಲ್ಪಗಳ ಬಗ್ಗೆ ವಿಶ್ಲೇಷಿಸಿದ್ದಾರೆ.[೨೫] ಬಸವರಾಜಪ್ಪ ಕಂದಗಲ್‌ರವರು 'ಚನ್ನಗಿರಿ ತಾಲ್ಲೂಕಿನ ವಿಶಿಷ್ಟ ಸೂಳೆಕೆರೆ(ಶಾಂತಿ ಸಾಗರ)' ಲೇಖನದಲ್ಲಿ ಸೂಳೆಕೆರೆಯ ಭೌಗೋಳಿಕತೆ ಮತ್ತು ಇತಿಹಾಸದ ಬಗ್ಗೆ ವಿವರಿಸಿದ್ದಾರೆ.[೨೬] ಮಂಜುನಾಯ್ಕರವರು ಚನ್ನಗಿರಿ ತಾಲೂಕಿನ ದೇವಾಲಯಗಳ ಅಧ್ಯಯನ ಎಂಬ ಲೇಖನದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ದೇವಾಲಯಗಳನ್ನು ಚರ್ಚಿಸಿದ್ದಾರೆ. [೨೭]

ಪತ್ರಿಕೆಗಳಲ್ಲಿ ಲೇಖನಗಳ ಪ್ರಕಟಣೆ

ಸಂತೆಬೆನ್ನೂರು ಸುಮತೀಂದ್ರನಾಡಿಗ್‌ರವರು 'ಪಾಳುಬಿದ್ದಿರುವ ಕಲ್ಲುಕೆರೆಯ ಹೊಯ್ಸಳರ ದೇವಸ್ಥಾನ' ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೨೮] ಇದರಲ್ಲಿ ಶಾಸನೋಕ್ತ ಬೆಳೆಶ್ವರ ಅಥವಾ ಜಲ್ಲೇಶ್ವರ ದೇವಾಲಯದ ಸ್ಥಾಪನೆ, ದೇವಾಲಯದ ವಾಸ್ತುವನ್ನು ವಿವರಿಸಿದ್ದಾರೆ. ಸಮೀಪದಲ್ಲಿರುವ ಶಾಸನೋಕ್ತ ಆಂಜನೇಯ ದೇವಾಲಯದ ವಾಸ್ತು ಮತ್ತು ಶಾಸನವನ್ನು ವಿಶ್ಲೇಷಿಸಿದ್ದಾರೆ.

ಇದೇ ಲೇಖಕರ ಪುರಾತನ ತೀರ್ಥಂಕರ ವಿಗ್ರಹಗಳ ಪತ್ತೆ ಲೇಖನದಲ್ಲಿ[೨೯] ಬಸವಪಟ್ಟಣದ ಜೈನವಿಗ್ರಹಗಳು, ವೆಂಕಟರಮಣ ಸ್ವಾಮಿ ದೇವಾಲಯದ ಎದುರಿಗೆ ಇರುವ ದೀಪಮಾಲೆ ಕಂಬದ ಮೇಲಿನ ಶಾಸನ, ಮರಾಠರ ಪರಶುರಾಮ ಭಾವಾಜಿ ಬಸವಪಟ್ಟಣ ವಶಪಡಿಸಿಕೊಂಡಿದ್ದರ ಬಗ್ಗೆ ವಿವರಿಸಿದ್ದಾರೆ. ಹಾಗೆಯೇ 'ಭಾವಾಜಿ' ಎಂಬ ಮರಾಠಿ ಸಂತನ ಸಮಾಧಿ ಗದ್ದುಗೆ, ಮಹಿಷ ಮರ್ದಿನಿ ವಿಗ್ರಹ, ರಾಜಸ್ವ ನಿರೀಕ್ಷಕರ ಕಛೇರಿಯಲ್ಲಿರುವ ೨ ೧/೨ ಅಡಿ ಎತ್ತರದ ನಿಂತ ನಿಲುವಿನ ಜಿನ ವಿಗ್ರಹದ ಕುರಿತು ಬೆಳಕು ಚೆಲ್ಲಿದ್ದಾರೆ.

ಅವರ ಮತ್ತೊಂದು 'ಉಡುಗಿರಿ ಕ್ಷೇತ್ರ ದೇವರಳ್ಳಿ' ಲೇಖನದಲ್ಲಿ[೩೦] ದೇವರಳ್ಳಿ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ದೇವಾಲಯದ ಸ್ಥಾಪನೆ, ವಾಸ್ತು, ನವೀಕರಣ ಮತ್ತು ದೇವಾಲಯದ ಐತಿಹ್ಯದ

ಬಗ್ಗೆ ಜನರಲ್ ಮೆಕೆಂಝಿ ಕೈ ಫಿಯತ್ ಆಕರದಿಂದ ಮಾಹಿತಿಯನ್ನು ಒದಗಿಸಿದ್ದಾರೆ. ಇದೇ ಲೇಖಕರ 'ಸಂತೆಬೆನ್ನೂರಿನ ಸುಂದರ ಪುಷ್ಕರಣಿ ಮಂಟಪಗಳು' ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೩೧] ಇದರಲ್ಲಿ ಸಂತೆಬೆನ್ನೂರಿನಲ್ಲಿ ಮುಸಾಫಿರ್ ಖಾನೆಯ ಮುಂಭಾಗದಲ್ಲಿರುವ ಪುಷ್ಕರಣಿ ವಾಸ್ತುವನ್ನು ವಿವರಿಸಿದ್ದಾರೆ. ಇದೇ ಲೇಖಕರು 'ಐತಿಹಾಸಿಕ ಪ್ರೇಕ್ಷಣೀಯ ಸ್ಥಳ ಹಾಗೂ ಧಾರ್ಮಿಕ ಕ್ಷೇತ್ರ ಸಂತೇಬೆನ್ನೂರು' ಲೇಖನವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೩೨] ಇದರಲ್ಲಿ ಪುಷ್ಕರಣಿಯ ಸ್ಥಾಪನೆ, ಶ್ರೀರಾಮದೇವಾಲಯ, ಮುಸಾಫಿರ್‌ಖಾನೆ ಬಗ್ಗೆ ವಿವರಿಸುವುದರ ಜೊತೆಗೆ ಸಂತೆಬೆನ್ನೂರು ಒಂದು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದೆ ಎಂದು ದಾಖಲಿಸಲಾಗಿದೆ.

ಅವರ "ಸಂತೆಬೆನ್ನೂರಿನ ಐತಿಹಾಸಿಕ ಪುಷ್ಕರಣಿ"ಯಲ್ಲಿ[೩೩] ಸಂತೆಬೆನ್ನೂರಿನ ಪುಷ್ಕರಣಿಯ ಐತಿಹಾಸಿಕ ಹಿನ್ನೆಲೆ ಮತ್ತು ವಾಸ್ತುವನ್ನು ವಿವರಿಸಿದ್ದಾರೆ. 'ಸಂತೆಬೆನ್ನೂರು ನಾಯಕರು ಮತ್ತು ಪುಷ್ಕರಣಿ' ಎಂಬ ಲೇಖನದಲ್ಲಿ[೩೪] ಬಸವಪಟ್ಟಣದ ಪಾಳೇಗಾರರು, ಸಂತೆಬೆನ್ನೂರಿನ ನಾಯಕರು ಮತ್ತು ತರೀಕೆರೆ ಪಾಳೆಯಗಾರರು ಒಂದೇ ವಂಶಕ್ಕೆ ಸೇರಿದವರು. ಇವರು ಬಸವ ಪಟ್ಟಣದಲ್ಲಿ ನೆಲೆಸಿ ನಂತರ ಸಂತೆಬೆನ್ನೂರಿಗೆ ಬಂದು ಅನಂತರ ತರೀಕೆರೆಯಲ್ಲಿ ನೆಲೆಸಿದ್ದಾರೆನ್ನಲಾಗಿದೆ. ಹಾಗೆಯೇ ಇಲ್ಲಿ ಸಂತೆಬೆನ್ನೂರು ಪುಷ್ಕರಣಿಯ ಐತಿಹಾಸಿಕ ಹಿನ್ನೆಲೆ ಮತ್ತು ವಾಸ್ತುವನ್ನು ವಿವರಿಸಿದ್ದಾರೆ.

'ಸಂತೆಯೊಳಗೊಂದು ಸುತ್ತು ಬದಲಾವಣೆಗೆ ಬಾಗಿದ ಸಂತೆಬೆನ್ನೂರು ಸಂತೆ' ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನದಲ್ಲಿ[೩೫] ಸಂತೆಬೆನ್ನೂರಿನಲ್ಲಿ ಸಂತೆಯ ಐತಿಹಾಸಿಕ ಹಿನ್ನೆಲೆ ಮತ್ತು ಪ್ರಸ್ತುತ ಸಂತೆಯ ಬಗ್ಗೆ ಚರ್ಚಿಸಿದ್ದಾರೆ. ಅದರಂತೆಯೇ ಹೊಯ್ಸಳ ರಾಣಿ ಉಮಾದೇವಿ 'ಚನ್ನಗಿರಿ ತಾಲ್ಲೂಕು ಉಬ್ರಾಣಿಯವಳೇ?' ಪತ್ರಿಕೆ ಪ್ರಕಟವಾದ[೩೬] ಲೇಖನದಲ್ಲಿ ಹೊಯ್ಸಳರ ಇಮ್ಮಡಿ ಬಲ್ಲಾಳನಿಗೆ ಪದ್ಮಲಾದೇವಿ, ಉಮಾದೇವಿ ಎಂಬ ಇಬ್ಬರು ಹೆಂಡತಿಯರಿದ್ದರು. ಎರಡನೇ ಹೆಂಡತಿ ಉಮಾದೇವಿ ಇಂದ ಈ ಗ್ರಾಮಕ್ಕೆ ಉಬ್ರಾಣಿ ಎಂದು ಬಂದಿದೆ ಎಂದು ಚರ್ಚಿಸಲಾಗಿದೆ. ಅವರ 'ಛತ್ರಪತಿ ಶಿವಾಜಿ ತಂದೆ ಷಾಹಜಿ ಸಮಾಧಿ ಇರುವ ಹೊದಿಗೆರೆ' ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ.[೩೭] ಈ ಲೇಖನದಲ್ಲಿ ಶಿವಾಜಿಯ ತಂದೆ ಷಾಹಜಿ ಬೋನ್ಸ್ಲೆಯು ಈ ಪ್ರದೇಶವನ್ನು ಗೆದ್ದು ಹೊದಿಗೆರೆಯ ಬಳಿ ಕುದುರೆಯ ಮೇಲಿಂದ ಬಿದ್ದು ಸಾವನ್ನಪ್ಪುತ್ತಾನೆ. ಅನಂತರ ಷಾಹಜಿಯನ್ನು ಅಲ್ಲಿಯೆ ಸಮಾಧಿ ಮಾಡಲಾಗುತ್ತದೆ. ಪ್ರಸ್ತುತ ಈ ಸಮಾಧಿಯು ಹೊದಿಗೆರೆಯಲ್ಲಿ ಕಂಡುಬರುತ್ತದೆ ಎಂದು ವಿವರಿಸಿದ್ದಾರೆ. ಹಾಗೆಯೇ ಅವರ 'ಬ್ರಿಟಿಷ್‌ರನ್ನೇ ನಡುಗಿಸಿದ ವಾಘ್' ಎಂಬ ಲೇಖನವನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೩೮] ಈ ಲೇಖನದಲ್ಲಿ ಚನ್ನಗಿರಿಯ ದೊಂಡಿಯವಾಡ್‌ನ ದಂಗೆಯನ್ನು ವಿಶ್ಲೇಷಿಸಿದ್ದಾರೆ.

ಹೀಗೆ ಪೂರಕ ಆಕರ ಗ್ರಂಥಗಳನ್ನು, ಎಂ.ಫಿಲ್. ಪ್ರಬಂಧಗಳನ್ನು, ಪಿಎಚ್.ಡಿ. ಮಹಾಪ್ರಬಂಧಗಳನ್ನು ಸಂಶೋಧನ ಲೇಖನಗಳನ್ನು, ಪುರಾತತ್ವ ವಾರ್ಷಿಕ ವರದಿಗಳನ್ನು ಒಂದೆಡೆ ಸೆರೆಹಿಡಿದು ಮುಂದಿನ ಅಧ್ಯಾಯಗಳಲ್ಲಿ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿ :

೧. ಕರ್ನಾಟಕ ಸ್ಟೇಟ್ ಗೆಜೆಟಿಯರ್ : ಶಿವಮೊಗ್ಗ ಡಿಸ್ಟ್ರಿಕ್ಟ್, ಗೆಜೆಟಿಯರ್ ಆಫ್ ಇಂಡಿಯಾ, ಕರ್ನಾಟಕ ಸರ್ಕಾರ ಪ್ರಕಾಶನ, ೧೯೭೫.

೨. ಗಿರಿಜಾ ಟಿ., "ದಾವಣಗೆರೆ ಇದು ನಮ್ಮ ಜಿಲ್ಲೆ", ನಿಹಾರಿಕಾ ಪ್ರಕಾಶನ, ದಾವಣಗೆರೆ, ೨೦೦೧.

೩. ಸಂತೆಬೆನ್ನೂರು ಸುಮತೀಂದ್ರನಾಡಿಗ್, 'ದಾವಣಗೆರೆ ಜಿಲ್ಲೆ, ಇತಿಹಾಸದ ಕೆಲವು ಹೆಜ್ಜೆಗಳು' (ಐತಿಹಾಸಿಕ ಲೇಖನಗಳ ಸಂಗ್ರಹ), ವಿಜಯ ಯುವಕ ಸಂಘ ಪ್ರಕಾಶನ, ಸಂತೆಬೆನ್ನೂರು, ೫೭೭೫೫೨, ೨೦೧೦.

೪. ಸಂತೆಬೆನ್ನೂರು ಸುಮತೀಂದ್ರನಾಡಿಗ್, ಸಂತೆಬೆನ್ನೂರು ನಾಯಕರು (ಇತಿಹಾಸ ಮತ್ತು ದಾಖಲೆಗಳು) ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

೫. ಸುರೇಶ್ ಬಿ., ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನ ಪ್ರಕಾಶನ, ಬಾಲೇನಹಳ್ಳಿ, ಚಳ್ಳಕೆರೆ, ೫೭೭೫೨೨, ೨೦೦೬.

೬. ಸಂತೆಬೆನ್ನೂರು ಸುಮತೀಂದ್ರನಾಡಿಗ್, ಸೂಳೆಕೆರೆ ಸಾಂಗತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭. ಬೆನಕನಹಳ್ಳಿ ಜಿ. ನಾಯಕ್, ಚನ್ನಗಿರಿ ತಾಲ್ಲೂಕು ದರ್ಶನ, ಐ. ಬಿ. ಎಚ್. ಪ್ರಕಾಶನ, ಬೆಂಗಳೂರು, ೧೯೮೬.

೮. ಮಂಜುನಾಯ್ಕ ಆರ್., ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸೊಂಡೂರು, ೫೮೧೧೧೯, ೨೦೧೬.

೯. ರೈಸ್ ಬಿ. ಎಲ್., ಎ. ಕ. ಸಂ. ೭, ಭಾಗ–೨, ಮೈಸೂರು ಗವರ್ನಮೆಂಟ್, ಸೆಂಟ್ರಲ್ ಪ್ರೆಸ್, ಬೆಂಗಳೂರು, ೧೯೦೨.

೧೦. ಎನ್ಯುವಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯೊಲಾಜಿಕಲ್ ಎಂಎಆರ್ ಮೈಸೂರು ವಿಶ್ವವಿದ್ಯಾಲಯ ೧೯೩೫ ನೇ ವರ್ಷ, ಬೆಂಗಳೂರು ಮುದ್ರಣಾಲಯ, ಬೆಂಗಳೂರು, ೧೯೩೬.

೧೧. ಅದೇ, ೧೯೩೭, ಸರ್ಕಾರಿ ಮುದ್ರಣಾಲಯ, ಬೆಂಗಳೂರು – ೧೯೩೮.

೧೨. ಅದೇ, ೧೯೪೨, ಸರ್ಕಾರಿ ಮುದ್ರಣಾಲಯ, ಬೆಂಗಳೂರು – ೧೯೪೩.

೧೩. ಓಬಳೇಶಪ್ಪ ಎಂ. ಆರ್. ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ (ಕ್ರಿ.ಶ. ೧೦ನೇ ಶತಮಾನದಿಂದ ೧೩ನೇ ಶತಮಾನದವರೆಗೆ) ಅಪ್ರಕಟಿತ ಎಂ.ಫಿಲ್. ಪ್ರಬಂಧ, ೨೦೦೯, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ.

೧೪. ಸುರೇಶ್ ಬಿ., ಚಿತ್ರದುರ್ಗ – ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ (ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ೨೦೦೨, ಇತಿಹಾಸ ಮತ್ತು ಪುರಾತತ್ವ ವಿಭಾಗ ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

೧೫. ತಿಪ್ಪೇಸ್ವಾಮಿ ಹೆಚ್., ದಾವಣಗೆರೆ ಜಿಲ್ಲೆಯ ದೇವಾಲಯಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಸಂತೆಬೆನ್ನೂರು ಪಾಳೆಗಾರರು, ಇತಿಹಾಸದರ್ಶನ ಸಂ.೧೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೧೯೯೮, ಪು.೨೭೦–೨೭೯.

೧೭. --ಅದೇ-- ಸಂತೆಬೆನ್ನೂರು ನಾಯಕರ ಶಾಸನಗಳು, ಇತಿಹಾಸದರ್ಶನ ಸಂ.೧೪, ಕರ್ನಾಟಕ ಇತಿಹಾಸ ಅಕಾಡೆಮಿ ೧೯೯೯, ಪು.೮೩–೯೧.

೧೮. --ಅದೇ--, ಸಂತೆಬೆನ್ನೂರು, ಉಚ್ಚಂಗಿ ಪಾಂಡ್ಯರ ಕಾಲದ ಎರಡು ಅಪ್ರಕಟಿತ ಶಾಸನಗಳು, ಇತಿಹಾಸದರ್ಶನ ಸಂ.೧೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೨ ಪು.ಸಂ. ೫೯–೬೨.

೧೯. --ಅದೇ--, ಚನ್ನಗಿರಿ ತಾಲ್ಲೂಕಿನಲ್ಲಿ ಈಚೆಗೆ ದೊರೆತ ಹೊಯ್ಸಳರ ಒಂದು ಶಾಸನ, ಇತಿಹಾಸ ದರ್ಶನ ಸಂ.೧೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೪, ಪು.ಸಂ. ೬೯–೭೧.

೨೦. --ಅದೇ--, 'ಉಪನಾಯಕನಹಳ್ಳಿಯ ಅಪೂರ್ವ ಮಾಸ್ತಿಶಿಲ್ಪಗಳು' ಇತಿಹಾಸದರ್ಶನ ಸಂ.೨೦, ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ೨೦೦೬, ಪು.ಸಂ. ೧೭೦–೧೭೩.

೨೧. --ಅದೇ--, 'ಹೊಯ್ಸಳ ವೀರಬಲ್ಲಾಳನ ಕಾಲದ ಅಪ್ರಕಟಿತ ಶಾಸನ ಪ್ರತಿ' ಇತಿಹಾಸದರ್ಶನ ಸಂ.೨೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೮, ಪು.ಸಂ. ೫೭–೬೧.

೨೨. --ಅದೇ--, ಚನ್ನಗಿರಿ ತಾಲ್ಲೂಕಿನ ಜೈನ ವಿಗ್ರಹಗಳು, ಇತಿಹಾಸದರ್ಶನ ಸಂ.೨೪, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೯, ಪು.ಸಂ. ೨೦೩–೨೦೪.

೨೩. ರಾಜಶೇಖರಪ್ಪ. ಬಿ. ಹಿರೇಕೋಗಲೂರಿನ ಅಪ್ರಕಟಿತ ಶಾಸನಗಳು, ಇತಿಹಾಸದರ್ಶನ ಸಂ. ೧೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೨, ಪು.ಸಂ. ೫೦-೫೮.

೨೪. ಬಸವರಾಜಪ್ಪ ಕಂದಗಲ್, ಚನ್ನಗಿರಿ ತಾಲ್ಲೂಕಿನ ವಿಶಿಷ್ಟ ಸೂಳೆಕೆರೆ (ಶಾಂತಿಸಾಗರ) ಇತಿಹಾಸದರ್ಶನ, ಸಂ.೨೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ೨೦೦೬

೨೫. ಯೋಗಾನಂದ. ಎಸ್.ಕೆ. ನಲ್ಕುದುರೆಯ ಶಾಸನಗಳು ಮತ್ತು ದೇವಾಲಯಗಳು, (ಸಂ. ಕೆ.ಜಿ. ಭಟ್‌ಸೂರಿ,) ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ಸಂ. ೯, ಸಂಚಿಕೆ. ೧, ೨, ಜನವರಿ, ಜೂನ್ ೨೦೧೨, ಜುಲೈ, ಡಿಸೆಂಬರ್ ೨೦೧೨, ಪು.ಸಂ. ೧೬೯-೧೭೮

೨೬. ಯೋಗಾನಂದ. ಎಸ್.ಕೆ. ನೀತಿಗೆರೆ ಗ್ರಾಮದ ಶಾಸನೋಕ್ತ ವೀರಭದ್ರ ದೇವಾಲಯ ಮತ್ತು ಸ್ಮಾರಕಗಳು, ಸಿ.ಜಿ. ಭಟ್‌ಸೂರು ಮಠ, ಆರ್. ಗೋಪಾಲ್, ಟಿ.ಎಸ್. ಗಂಗಾಧರ (ಸಂ), ಪ್ರಾಚ್ಯ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಚನ್ನಗಿರಿ ದೇವಾಲಯಗಳ ಒಂದು ಅಧ್ಯಯನ, ಪು.ಸಂ. ೭೭-೮೫

೨೭. ಅದೇ. ಪು.ಸಂ. ೬೩ - ೬೭

೨೮. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಪಾಳಿಬಿದ್ದಿರುವ ಕಲ್ಲುಕೆರೆಯ ಹೊಯ್ಸಳರ ದೇವಸ್ಥಾನ, ಪ್ರಜಾವಾಣಿ ದೈನಿಕ, ಬೆಂಗಳೂರು, ದಿನಾಂಕ ೧೨-೨-೨೦೦೦.

೨೯. --ಅದೇ--, ಪುರಾತನ ತೀರ್ಥಂಕರ ವಿಗ್ರಹಗಳ ಪತ್ತೆ, ಪ್ರಜಾವಾಣಿ ದೈನಿಕ, ಬೆಂಗಳೂರು

೩೦. --ಅದೇ--, ಉಡಗಿರಿ ಕ್ಷೇತ್ರ ದೇವರಹಳ್ಳಿ, ಜನತವಾಣಿ ದೈನಿಕ, ದಾವಣಗೆರೆ ದಿನಾಂಕ ೨೩-೫-೧೯೯೯

೩೧. --ಅದೇ--, ಸಂತೆಬೆನ್ನೂರಿನ ಸುಂದರ ಪುಷ್ಕರಣಿ ಮಂಟಪಗಳು, ಸುಧಾ ವಾರಪತ್ರಿಕೆ, ಬೆಂಗಳೂರು, ದಿನಾಂಕ ೧೮-೨-೧೯೯೬.

೩೨. --ಅದೇ--, ಐತಿಹಾಸಿಕ ಪ್ರೇಕ್ಷಣೀಯ ಸ್ಥಳ ಹಾಗೂ ಧಾರ್ಮಿಕ ಕ್ಷೇತ್ರ ಸಂತೆಬೆನ್ನೂರು, ಜನತಾವಾಣಿ, ದೈನಿಕ, ದಾವಣಗೆರೆ, ದಿನಾಂಕ ೨೧-೩-೧೯೯.

೩೩. --ಅದೇ--, ಸಂತೆಬೆನ್ನೂರಿನ ಐತಿಹಾಸಿಕ ಪುಷ್ಕರಣಿ ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ ದಿನಾಂಕ ೩೧-೧೦-೧೯೯೯

೩೪. --ಅದೇ--, ಸಂತೆಬೆನ್ನೂರು ನಾಯಕರು ಮತ್ತು ಪುಷ್ಕರಣಿ' ಸಂತೆಬೆನ್ನೂರು ಉತ್ಸವದಲ್ಲಿ ಮಂಡಿಸಿದ ಲೇಖನ

೩೫. --ಅದೇ--, ಸಂತೆಯೊಳಗೊಂದು ಸುತ್ತು ಬದಲಾವಣೆಗೆ ಬಾಗಿದ ಸಂತೆಬೆನ್ನೂರು ಸಂತೆ, ಕನ್ನಡ ಪ್ರಭ, ದೈನಿಕ, ಬೆಂಗಳೂರು, ದಿನಾಂಕ ೬-೯-೨೦೦೪.

೩೬. --ಅದೇ--, ಹೊಯ್ಸಳರಾಣಿ ಉಮಾದೇವಿ ಚನ್ನಗಿರಿ ತಾಲ್ಲೂಕು ಉಬ್ರಾಣಿಯವಳೇ ಜನತಾವಾಣಿ, ದೈನಿಕ ದಾವಣಗೆರೆ, ದಿನಾಂಕ ೨೫-೧೨-೧೯೯೮.

೩೭. --ಅದೇ--, ಛತ್ರಪತಿ ಶಿವಾಜಿ ತಂದೆ ಷಾಹಜಿ ಸಮಾಧಿ ಇರುವ ಹೊದಿಗೆರೆ, ಗ್ರಾಮೀಣವಾಣಿ, ವಾರಪತ್ರಿಕೆ, ಸಂತೆಬೆನ್ನೂರು ಜುಲೈ ೧೯ ರಿಂದ ೨೨, ೧೯೯೨.

೩೮. --ಅದೇ--, ಬ್ರಿಟಿಷರನ್ನೇ ನಡುಗಿಸಿದ ವಾಘ್, ಮಯೂರ ಮಾಸಪತ್ರಿಕೆ, ಬೆಂಗಳೂರು, ಅಗಸ್ಟ್ – ೨೦೦೦

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆ

'ಭೂಗೋಳ ಮತ್ತು ಕಾಲ ಇತಿಹಾಸದ ಎರಡು ಕಣ್ಣುಗಳಿದ್ದಂತೆ'. ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ ತಿಳಿಯಲು ಆ ಪ್ರದೇಶದ ನಿರ್ದಿಷ್ಟ ಭೌಗೋಳಿಕ ಜ್ಞಾನದ ಅರಿವಿರಬೇಕು. ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಘಟನೆಯು, ಒಂದು ನಿರ್ದಿಷ್ಟ ಕಾಲದಲ್ಲಿ ಸಂಭವಿಸುತ್ತದೆ. ಈ ಹಿನ್ನೆಲೆಯಲ್ಲಿ ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳನ್ನು ತಿಳಿಯಲು, ಆ ಪ್ರದೇಶದ ಇತಿಹಾಸವನ್ನು ಅರಿಯಲು ಭೌಗೋಳಿಕ ಪರಿಚಯದ ಅವಶ್ಯಕತೆ ಇದೆ.

ಚನ್ನಗಿರಿ ತಾಲ್ಲೂಕು ಒಂದು ಅರೆಮಲೆನಾಡು. ಅಂದರೆ ಮಲೆನಾಡು ಮತ್ತು ಬಯಲುಸೀಮೆಯ ನಡುವಿನ ಪ್ರದೇಶ. ಭೌಗೋಳಿಕತೆಯನ್ನು ತಿಳಿಯುವುದರ ಮೊದಲು ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಸ್ಥಳನಾಮಗಳು ಮತ್ತು ಐತಿಹ್ಯಗಳನ್ನು ಅವಲೋಕಿಸುವ ಅವಶ್ಯಕತೆಯಿದೆ.

ಪುರಾತನ ಕಾಲದಲ್ಲಿ ಚನ್ನಗಿರಿಗೆ 'ಹುಲಿಗೆರೆ' ಎಂಬ ಹೆಸರಿತ್ತು. ಪ್ರಾಚೀನ ಕಾಲದಲ್ಲಿ ಚನ್ನಗಿರಿಯು ಒಂದು ಗ್ರಾಮವಾಗಿದ್ದು, ಸುತ್ತಲೂ ಕೆರೆಗಳಿಂದ ಆವೃತವಾಗಿತ್ತು. ಅಲ್ಲಿಗೆ ಹುಲಿಗಳು ನೀರನ್ನು ಕುಡಿಯಲು ಬರುತ್ತಿದ್ದವು. ಆದ್ದರಿಂದ ಈ ಸ್ಥಳಕ್ಕೆ 'ಹುಲಿಗೆರೆ' ಎಂದು ಕರೆಯಲಾಗುತ್ತಿತ್ತು. ಮುಂದೆ ಜನಪದರಿಂದ ಆ ಪ್ರದೇಶ 'ಹುಲಿಕೆರೆ' ಎಂದು ಅಪಭ್ರಂಶವಾಗಿರುವ ಸಾಧ್ಯತೆ ಇದೆ. ಕೆಳದಿಯ ನೃಪವಿಜಯದಲ್ಲಿ 'ಹೂಲಿ' ಗಿಡಗಳ ಪ್ರಸ್ತಾಪವಿದೆ. 'ಹೂಲಿ' ಎಂದರೆ ಒಂದು ರೀತಿಯ ಗಿಡ, ಒಂದು ರೀತಿಯ ಗದ್ದಲ ಮಾಡು ಎಂಬ ಅರ್ಥವಿದೆ. "ಕೆಳದಿಯ ರಾಣಿ ಚನ್ನಮ್ಮಾಜಿಯು ಹುಲಿಗೆರೆಯ ಬೆಟ್ಟದ ಮೇಲೆ ಒಂದು ಕೋಟೆಯನ್ನು ಕಟ್ಟಿಸಿ ಹುಲಿಗೆರೆಯನ್ನು ಚನ್ನಗಿರಿ ಎಂದು ನಾಮಕರಣ ಮಾಡಿ ತನ್ನ ಸೋದರಿಗೆ ಜಹಗೀರಾಗಿ ನೀಡಿದಳೆಂದು ತಿಳಿದುಬರುತ್ತದೆ."[೧] ಕಾಲಾಂತರದಲ್ಲಿ ಆ ಪ್ರದೇಶವೇ 'ಚನ್ನಗಿರಿ' ಎಂದಾಯಿತು.

"ಉಪನಾಯಕನಹಳ್ಳಿಯಲ್ಲಿ ಉಪನಾಯಕನು ಆಳ್ವಿಕೆ ಮಾಡಿದ್ದರಿಂದ ಅದಕ್ಕೆ ಉಪನಾಯಕಹಳ್ಳಿ ಹೆಸರು ಬಂದಿತು."[೨] ಚನ್ನಗಿರಿ ತಾಲ್ಲೂಕಿನ ಈಶಾನ್ಯಕ್ಕೆ ಇರುವ ಗಡಿ ಗ್ರಾಮವೇ ಕತ್ತಲಗೆರೆ. "ಸ್ಥಳೀಯರ ಐತಿಹ್ಯದ ಪ್ರಕಾರ ಕತ್ತಲರಾಯನೆಂಬ ರಾಜ ಆಳ್ವಿಕೆ ನಡೆಸುತ್ತಿದ್ದ ಎಂತಲೂ, ನಿತ್ಯ ಇಲ್ಲಿನ ದೇವಾಲಯಗಳಲ್ಲಿ ಲಕ್ಷದೀಪ ಉರಿಸಿ ಕತ್ತಲೆಯಲ್ಲೂ ಬೆಳಕಿನ ಗಾಳಿ ಮೂಡಿಸುತ್ತಿದ್ದಾಗಿಯೂ, ಇದರಿಂದ ಈ ಗ್ರಾಮಕ್ಕೆ 'ಕತ್ತಲಗೆರೆ' ಹೆಸರು ಬಂದಿದೆ ಎಂಬ ಪ್ರತೀತಿಯಿದೆ".[೩]

ಕರ್ನಲ್‌ಮೆಕೆಂಝಿ ಕೈಫಿಯತ್ತಿನಲ್ಲಿ ವಿಜಯನಗರದ ಅರಸ ಹರಿಹರ ಮಹದೇವ ಬೇಟೆಗಾಗಿ ಚನ್ನಗಿರಿಯ ದೇವರಹಳ್ಳಿಯ ಬಳಿ ಬಂದಾಗ ಆತನ ಸೈನಿಕರಿಗೆ ದೊಡ್ಡ ಉಡವೊಂದು ಕಾಣಿಸಿತು. ಅದನ್ನು ಹಿಡಿಯಲು ಬೆನ್ನಟ್ಟಿದಾಗ ಅದು ಈಗಿನ ಮರಡಿ ಗ್ರಾಮದ ಬಳಿ ಸುಗಂಧವಾಸನೆ ಹೊರ

ಚೆಲ್ಲಿದ್ದರಿಂದ ಅದಕ್ಕೆ ಧೂಪಮರಡಿ ಎಂದಾಯಿತೆಂದೂ, ನಂತರ ಬೆಳ್ಳಿಗನೊಡು ಬಳಿ ಬೆಳ್ಳಿಯಂತೆಯೂ, ಚನ್ನಪುರದ ಬಳಿ ಚಿನ್ನದಂತೆಯೂ, ಜಕಲಿ ಬಳಿ ಚಕ್ಕುಲಿ ಆಕಾರವಾಗಿಯೂ, ಹಿರೇಉಡ ಬಳಿ ದೊಡ್ಡ ಉಡವಾಗಿಯೂ, ಚಿಕ್ಕ ಉಡ ಬಳಿ ಚಿಕ್ಕದಾಗಿಯೂ ಕಾಣಿಸಿಕೊಂಡು ಕಾಕನೂರು ಬಳಿ ಕಾಗೆ ಕೂಗಿದ ಹಾಗೆ ಕೂಗಿತೆಂದೂ, ಕೊಂಡದಹಳ್ಳಿ ಬಳಿ ಕೆಂಡಾಕಾರವಾಗಿಯೂ, ರಾಮಗೊಂಡನಹಳ್ಳಿ ಬಳಿ 'ರಾಮ-ರಾಮ' ಎಂದು ಹೇಳಿತೆಂದೂ ನೀತಿಗೆರೆ ಬಳಿ ನೀತಿಹೇಳಿ, ನನ್ನ ಹಿಂದೆ ಬರಬೇಡಿರೆಂದು ಹೇಳಿ ಕಡೆಗೆ ನುಗ್ಗಿಹಳ್ಳಿ ಬಳಿ ನುಗ್ಗಿಕೊಂಡು, ಪ್ರಸ್ತುತ ದೇವರಹಳ್ಳಿಯ ಗುಡ್ಡದ ಮೇಲಿನ ಒಂದು ಹುತ್ತದಲ್ಲಿ ಅದು ಹೋಯಿತೆಂಬ ಕಥೆಯಿದೆ. ಆಗಲೂ ಸೈನಿಕರು ಬಿಡದೆ ಆ ಹುತ್ತವನ್ನು ಅಗೆದಾಗ ಉಡ ರೂಪ ಮಾಯವಾಗಿ ಲಿಂಗರೂಪವಾಗಿ ಪರಮಾತ್ಮ ಕಾಣಿಸಿಕೊಂಡನಂತೆ. ಹೀಗೆ ಉಡರೂಪ ಕಾಣಿಸಿಕೊಂಡಿದ್ದರಿಂದ ಉಡಗಿರಿ ರಂಗನಾಥಸ್ವಾಮಿ ಎಂದು ಪ್ರಸಿದ್ಧವಾಗಿದೆ. ಆ ಪ್ರದೇಶವೇ ಚನ್ನಗಿರಿಯ ದೇವರಹಳ್ಳಿಯಾಗಿದೆ.[೪]

ಉಡರೂಪವು ಸುತ್ತಿದ ಪ್ರದೇಶಗಳೇ ಮರಡಿ, ಬೆಳ್ಳಿಗನೊಡು, ಚನ್ನಾಪುರ, ಜಕಲಿ, ಹಿರೇಉಡ, ಚಿಕ್ಕ ಉಡ, ಕಾಕನೂರು, ಕೊಂಡದಹಳ್ಳಿ, ರಾಮಗೊಂಡನಹಳ್ಳಿ, ನೀತಿಗೆರೆ, ದೇವರಹಳ್ಳಿ ಗ್ರಾಮಗಳಿದ್ದು, ಸ್ಥಳೀಯ ಐತಿಹ್ಯವು ಈ ಗ್ರಾಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಗ್ರಾಮಗಳು ಸುಮಾರು ೧೫ನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿದ್ದವೆಂದು ಅಭಿಪ್ರಾಯಕ್ಕೆ ಬರಬಹುದಾಗಿದೆ. ಚನ್ನಗಿರಿ ಕಸಬಾದಲ್ಲಿರುವ ಕೊರಟಗೆರೆ ಸಿದ್ಧಪ್ಪನವರ ಬಳಿ ಇರುವ ತಾಮ್ರಶಾಸನ ತಿಳಿಸುವಂತೆ ಒಂದು ಸಾರಿ ಧೂಮರಾಜ ಭೈರವ ದೇವರ ಉತ್ಸವ ನಡೆಸಿದಾಗ ಈ ಗ್ರಾಮದಲ್ಲಿ ಕೋಗಿಲೆಗಳ ಧ್ವನಿಯನ್ನು ಕೇಳಿ ಆನಂದಿಸಿ ನೆಲೆ ನಿಂತು ಇದಕ್ಕೆ ಕೋಗಿಲೂರು ಎಂದು ಹೆಸರಿಟ್ಟು 'ಕೋಗಿಲೆಗಳು ಉಲಿದ ಊರು ಕೋಗಿಲೂರು' ನಂತರ ಕೋಗಲೂರಾಯಿತೆಂಬ ಪ್ರತೀತಿ ಇದೆ. ಈ ಗ್ರಾಮದ ಪಕ್ಕದಲ್ಲಿ ಮತ್ತೊಂದು ಕೋಗಲೂರು ಇದ್ದು, ಇದನ್ನು ಚಿಕ್ಕಕೋಗಿಲೂರು ಎಂದು ಕರೆಯಲಾಗುತ್ತದೆ. ಬೂದಿ ಇರುವ ಗ್ರಾಮವೇ ಧೂಪ ಮರಡಿಗ್ರಾಮ. ಚಲೆಗೂಲೂರು ಚಂಡಿಮತ್ತೆ, ಕೆಂದೂಲೆ ಮತ್ತು ಧೂಮರಾಜರು ಸಲಹೆ ನೀಡಿದ ಗ್ರಾಮವೇ ನೀತಿಗೆರೆ. ಚೆಲಗೂಲೂರು ಚಂಡಿಮತ್ತೆಯ ಹೆಂಡತಿಗೆ ಜನಿಸಿದ ಮಕ್ಕಳಾದ ದೊಡ್ಡಗಂಗ ಮತ್ತು ಚಿಕ್ಕಗಂಗರವರ ನೆನಪಿಗಾಗಿ, ಹಿರೇಗಂಗೂರು ಮತ್ತು ಚಿಕ್ಕಗಂಗೂರು ಗ್ರಾಮಗಳು ಅಸ್ತಿತ್ವಕ್ಕೆ ಬಂದವು. ಬಿಲ್ಲಲ ಸೋಮಗೌಡ ಅವನ ಸಹೋದರರು ಹಾಗೂ ಹಿಂಬಾಲಕರು ಎಮ್ಮೆಗಳನ್ನು ದೊಡ್ಡಿಗೆ ಬಿಟ್ಟು ನೆಲೆಸಿದ ಪ್ರದೇಶವೇ ಎಮ್ಮಿಗನೂರು ಗ್ರಾಮವಾಗಿದೆ. ಕಲರತ್ರೆ-ಕನ್ನಮ್ಮ; ಕಲ್ಲಗಟ್ಟ ಸ್ಥಾಪನೆ ಮಾಡಿದಳು. ಅವಳ ಹಿರಿಯ ಮಗ ಹಿರಿಯೂರು ಗ್ರಾಮವನ್ನು ಸ್ಥಾಪಿಸಿದ. ಬರಗೂರಿನಲ್ಲಿ ನೆಲೆಸಿದ ಗೌಡರು ಬೈಬರಗೂರು ಸ್ಥಾಪಿಸಿದರು. ಕೆಂದೂಲೆ ಮತ್ತು ಧೂಮರಾಜರು ದುಮ್ಮಿ ಮತ್ತು ಗಂಜಿಗನೂರು ಗ್ರಾಮಗಳನ್ನು ಸ್ಥಾಪನೆ ಮಾಡಿದರು.[೫]

ಇಮ್ಮಡಿ ಕೆಂಗಪ್ಪನಾಯಕನು 'ರಂಗಾಪುರ' ಎಂಬ ಗ್ರಾಮದಲ್ಲಿ ಸಂತೆ ನಡೆಯುತ್ತಿದ್ದರಿಂದ ಆ ಊರಿಗೆ ಸಂತೆಬೆನ್ನೂರು ಎಂದು ನಾಮಕರಣ ಮಾಡಿ ರಾಜಧಾನಿಯಾಗಿಸಿಕೊಂಡು ಆಳ್ವಿಕೆ ಮಾಡಿದನು. ಅದುವೇ ಪ್ರಸ್ತುತ ಸಂತೆಬೆನ್ನೂರು.[೬] ಹಾಗೆಯೇ ಸೂಳೆಕೆರೆಯನ್ನು

ಸ್ವರ್ಗವತಿಪಟ್ಟಣವೆಂದು ಕರೆಯುತ್ತಿದ್ದರು.[೭] ಈ ಎಲ್ಲಾ ಗ್ರಾಮಗಳ ಸ್ಥಳನಾಮಗಳು ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸಂಬಂಧಿಸಿವೆ. ಇದು ಕ್ರಿ.ಶ. ೧೦೪೫ ರಲ್ಲಿ ತ್ರೈಲೋಕ್ಯ ನನ್ನಿನೊಳಂಬ ಪೆರಮಾಡಿಯಾ ಶಾಸನದಲ್ಲಿ ಉಲ್ಲೇಖವಿದೆ.[೮]

ಈ ಎಲ್ಲಾ ಗ್ರಾಮಗಳ ಸ್ಥಳನಾಮಗಳು ಪ್ರಸ್ತುತ ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಳಪಟ್ಟಿದೆ. ಇವು ಐತಿಹಾಸಿಕವಾಗಿ ಶಾಸನಗಳಿಂದ, ದೇವಾಲಯಗಳಿಂದ ಮತ್ತು ಮೂರ್ತಿ ಶಿಲ್ಪಗಳಿಂದ ಮಹತ್ವವನ್ನು ಪಡಿದಿವೆ.

೨.೧. ಚನ್ನಗಿರಿ ತಾಲ್ಲೂಕಿನ ಭೌಗೋಳಿಕತೆ

ಭೂಗೋಳ ಮತ್ತು ಕಾಲ ಇತಿಹಾಸದ ಎರಡು ಕಣ್ಣುಗಳು. ಆ ಪ್ರದೇಶದ ಐತಿಹಾಸಿಕ ಘಟನೆಗಳು ಸಂಭವಿಸಲು ಅಲ್ಲಿನ ಭೌಗೋಳಿಕ ಅಂಶಗಳು ಪ್ರತ್ಯೇಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಈ ಮಹಾಪ್ರಬಂಧವು ಚನ್ನಗಿರಿ ತಾಲ್ಲೂಕಿನ ಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನಕ್ಕೆ ಸಂಬಂಧಿಸಿದ್ದಾದರೂ, ಶಾಸನಗಳು ಮತ್ತು ಸ್ಮಾರಕಗಳು ರೂಪುಗೊಳ್ಳಲು ಭೌಗೋಳಿಕ ಅಂಶಗಳು ಕಾರಣವಾಗಿರುವುದರಿಂದ ಪ್ರಸ್ತುತ ಭೌಗೋಳಿಕ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳುವ ಅಗತ್ಯತೆ ಇದೆ.

ಚನ್ನಗಿರಿ ತಾಲ್ಲೂಕು ಕ್ರಿ.ಶ. ೧೮೭೦ರಲ್ಲಿಯೇ ಅಸ್ತಿತ್ವಕ್ಕೆ ಬಂದಿತ್ತು. ಇದು ಈ ಮೊದಲು ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿತ್ತು. ಆದರೆ ಜಿಲ್ಲಾವಾರು ಪುನರ್‌ವಿಂಗಡಣೆಯ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಬೇರ್ಪಟ್ಟು ದಿನಾಂಕ ೧೮-೦೮-೧೯೯೭ರಂದು ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕಾಯಿತು. ತಾಲ್ಲೂಕು ಕೇಂದ್ರವಾದ ಚನ್ನಗಿರಿ ಉತ್ತರ-ಪಶ್ಚಿಮ ೧೪-೭೫° ಅಕ್ಷಾಂಶದವರೆಗೆ ವಿಸ್ತರಿಸಿದೆ. ಇದು ಸಮುದ್ರ ಮಟ್ಟದಿಂದ ೨೧೭೧ ಅಡಿಗಳಷ್ಟು ಎತ್ತರದಲ್ಲಿದ್ದು, ದಾವಣಗೆರೆಯಿಂದ ೫೯ ಕಿ.ಮೀ. ಅಂತರದಲ್ಲಿದೆ.

ಚನ್ನಗಿರಿ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೧೨ ಚ.ಕಿ.ಮೀ. ಆಗಿದ್ದು, ೨೪೫ ಗ್ರಾಮಗಳಿದ್ದು ಅದರಲ್ಲಿ ೨೦೫ ಗ್ರಾಮಗಳು ಜನವಸತಿ ಪ್ರದೇಶಗಳಾಗಿದ್ದು, ೪೦ ಜನವಸತಿ ಇಲ್ಲದ ಗ್ರಾಮಗಳಾಗಿವೆ. ಚನ್ನಗಿರಿ ಶಿವಮೊಗ್ಗ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿದ್ದು, ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು, ಪೂರ್ವ ದಿಕ್ಕಿನಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ ಹಾಗೂ ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಧರ್ಮದ ಜನರು ಇಲ್ಲಿ ನೆಲೆಸಿದ್ದಾರೆ.

ಚನ್ನಗಿರಿ ತಾಲ್ಲೂಕಿನಲ್ಲಿ ಒಟ್ಟು ೭೬೫೬೭ ಹೆಕ್ಟೇರ್ ಭೂಮಿ ವ್ಯವಸಾಯಕ್ಕೆ ಸೂಕ್ತವಾಗಿದ್ದು, ವ್ಯವಸಾಯವು ಪ್ರಮುಖ ವೃತ್ತಿಯಾಗಿದೆ. ತಾಲ್ಲೂಕಿನ ವಾಯುವ್ಯ ಭಾಗ ಫಲವತ್ತಾದ ಕಪ್ಪು ಮಣ್ಣಿನಿಂದಲೂ, ದಕ್ಷಿಣದಲ್ಲಿ ಕಲ್ಲು ಮಿಶ್ರಿತ ಕೆಂಪುಮಣ್ಣಿನಿಂದಲೂ, ಉಳಿದ ಭಾಗ ಕಪ್ಪು ಮತ್ತು ಕೆಂಪು ಮಣ್ಣಿನ ಭೂಲಕ್ಷಣಗಳಿಂದ ಕೂಡಿದೆ. ಸೂಳೆಕೆರೆಯು ಪ್ರಮುಖ ಕೆರೆಯಾಗಿದ್ದು, ನೀರಾವರಿಯ

ಪ್ರಮುಖ ಮೂಲವಾಗಿದೆ. ಹರಿದ್ರಾ ನದಿಯು ಈ ತಾಲ್ಲೂಕಿನಲ್ಲಿ ಹರಿಯುವ ಏಕೈಕ ನದಿಯಾಗಿದೆ. ಇಲ್ಲಿ ಪ್ರಮುಖವಾಗಿ ಅಡಿಕೆ, ಭತ್ತ, ಬಾಳೆ, ತೆಂಗು, ಕಬ್ಬು, ರಾಗಿ, ಹತ್ತಿ, ಮೆಕ್ಕೆಜೋಳ, ಹಣ್ಣು ತರಕಾರಿಗಳನ್ನು ಬೆಳೆಯುತ್ತಾರೆ. ಚಿಕ್ಕಪುಟ್ಟ ಬೆಟ್ಟಗುಡ್ಡಗಳಿದ್ದು, ಗ್ರಾನೈಟ್, ಕಪ್ಪುಶಿಲೆ, ಬಳಪದಶಿಲೆ, ಚರ್ಟ್, ಡೊಲರೈಟ್ ಶಿಲೆಗಳು, ಕಬ್ಬಿಣ, ಟೈಟಾನಿಯಂ ಖನಿಜ ಅದಿರುಗಳು ಇಲ್ಲಿ ದೊರೆಯುತ್ತವೆ.

ಚನ್ನಗಿರಿಯು ಸಮತಟ್ಟಾದ ಬಯಲು ಭೂಮಿ. ಹರಿದ್ರಾ ನದಿ, ಕೆರೆಗಳ ನೀರಿನ ಮೂಲದಿಂದ ಜನರು ಈ ಪ್ರದೇಶದಲ್ಲಿ ಬಂದು ನೆಲೆಸಿದರು. ಇಲ್ಲಿ ದೊರೆಯುವ ಕಬ್ಬಿಣದ ಅದಿರುಗಳಿಂದ ಆಯುಧ ಉಪಕರಣಗಳನ್ನು ತಯಾರು ಮಾಡಿಕೊಂಡರು. ನೀರಾವರಿ ಮತ್ತು ಮಳೆಯ ಆಶ್ರಯದಿಂದ ಬೆಳೆಗಳನ್ನು ಬೆಳೆದರು. ಅಲ್ಲಿ ದೊರೆತ ಕಪ್ಪು ಶಿಲೆ, ಬಳಪದ ಶಿಲೆ, ಕಣಶಿಲೆಗಳಿಂದ ದೇವಾಲಯಗಳನ್ನು, ಶಾಸನಗಳನ್ನು, ಸ್ಮಾರಕಗಳನ್ನು ನಿರ್ಮಿಸಿದ್ದರಿಂದ ಸ್ವಾಭಾವಿಕವಾಗಿಯೇ ಈ ಪ್ರದೇಶದ ಶಾಸನಗಳು ಮತ್ತು ಸ್ಮಾರಕಗಳ ಮೇಲೆ ಪ್ರಭಾವ ಬೀರಿವೆ. ಈ ಭಾಗವು ಪ್ರಮುಖ ರಾಜ ಸಂತತಿಗಳು ಆ ಭಾಗದ ಮೇಲೆ ಹಿಡಿತವನ್ನು ಸಾಧಿಸಿದರು.

೨.೨. ಐತಿಹಾಸಿಕ ಹಿನ್ನೆಲೆ

ಪ್ರಸ್ತುತ ಚನ್ನಗಿರಿ ತಾಲ್ಲೂಕಿನ ಇತಿಹಾಸವನ್ನು ಅವಲೋಕಿಸಿದಾಗ ಇಲ್ಲಿ ಯಾವುದೇ ಪ್ರಾಗೈತಿಹಾಸದ ನೆಲೆಗಳು ಲಭ್ಯವಾಗಿಲ್ಲ. ಈ ಪ್ರದೇಶವು ಆರಂಭಿಕವಾಗಿ ಮೌರ್ಯರ ನಿಯಂತ್ರಣದಲ್ಲಿತ್ತು. ಅನಂತರ ಶಾತವಾಹನ, ಕದಂಬ, ಬಾದಾಮಿಚಳುಕ್ಯ, ಗಂಗ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯರ ಅಧೀನದಲ್ಲಿತ್ತು. ರಾಷ್ಟ್ರಕೂಟರವರೆಗೆ ಯಾವುದೇ ಶಾಸನಗಳಾಗಲಿ, ಸ್ಮಾರಕಗಳಾಗಲಿ ಈ ಭಾಗದಲ್ಲಿ ದೊರೆತಿಲ್ಲ. ಇಲ್ಲಿ ದೊರೆತ ರಾಷ್ಟ್ರಕೂಟರ ಸಾಮಂತನಾದ ಕಲ್ಯಾಣದ ಚಾಲುಕ್ಯರ ೩ನೆಯ ತೈಲಪನ ಶಾಸನವು ೯೯೨ಕ್ಕೆ ಸೇರಿದೆ. ಇದು ತ್ಯಾವಣಿಗಿಯಲ್ಲಿ ದೊರೆತಿದ್ದು ಚನ್ನಗಿರಿಯಲ್ಲಿ ದೊರೆತ ಪ್ರಾಚೀನ ಶಾಸನವಾಗಿದೆ.[ ] ಅಂದರೆ ಕಲ್ಯಾಣದಚಾಲುಕ್ಯರ ಕಾಲದಿಂದ ಚನ್ನಗಿರಿ ತಾಲ್ಲೂಕಿನ ಶಾಸನಗಳು ಹೆಚ್ಚಾಗಿ ಕಂಡುಬಂದಿವೆ. ೧೨ ಪ್ರಮುಖ ಐತಿಹಾಸಿಕ ಕೆರೆಗಳು ಇವೆ. ಶಾಸನೋಕ್ತ ಕೆರೆಗಳು ದೊರೆತಿವೆ.

ಕಲ್ಯಾಣ ಚಾಲುಕ್ಯ, ಸೇವುಣ, ಉಚ್ಚಂಗಿ ಪಾಂಡ್ಯರು, ನೊಳಂಬರು, ಹೊಯ್ಸಳರು, ಆಸಂದಿ ಗಂಗರು, ವಿಜಯನಗರ ಸಾಮ್ರಾಜ್ಯ, ಬಸವಪಟ್ಟಣದ ಪಾಳೇಗಾರರು, ಸಂತೆಬೆನ್ನೂರಿನ ನಾಯಕರು, ಕೆಳದಿಯ ಅರಸರು, ಬಿಜಾಪುರದ ಸುಲ್ತಾನರು, ಮರಾಠರಿಗೆ ಸಂಬಂಧಿಸಿದ ಶಾಸನಗಳು ಮತ್ತು ಸ್ಮಾರಕಗಳು ಈ ಪ್ರದೇಶದಲ್ಲಿ ದೊರೆತಿವೆ. ನಂತರ ಮೈಸೂರಿನ ಒಡೆಯರು ಈ ಭಾಗದ ಮೇಲೆ ಹಿಡಿತ ಸಾಧಿಸಿದರು. ಅನಂತರ ಭಾರತ ಸರ್ಕಾರದ ನಿಯಂತ್ರಣಕ್ಕೆ ಇದು ಒಳಪಟ್ಟಿತು. ಬೆಳಗುತ್ತಿ ಸಿಂಧರು ಈ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿದ್ದರು. ಆದರೆ ಬೆಳಗುತ್ತಿ ಸಿಂಧರ ಯಾವುದೇ ಶಾಸನಗಳು ಈವರೆಗೆ ಇಲ್ಲಿ ಕಂಡುಬಂದಿಲ್ಲ. ಮೌರ್ಯರಿಂದ ರಾಷ್ಟ್ರಕೂಟರವರೆಗೆ ಈ ಭಾಗದಲ್ಲಿ ಯಾವುದೇ ಶಾಸನಗಳಾಗಲಿ ಸ್ಮಾರಕಗಳಾಗಲಿ ಕಂಡುಬಂದಿಲ್ಲವಾದರೂ ಆದರೆ ಕಲ್ಯಾಣದ

ಚಾಲುಕ್ಯರಿಂದ ಮರಾಠರವರೆಗೆ ಈ ಪ್ರದೇಶದಲ್ಲಿ ಹಲವಾರು ಶಾಸನಗಳು, ಸ್ಮಾರಕಗಳು ಮೂರ್ತಿಶಿಲ್ಪಗಳು ಕಂಡುಬಂದಿವೆ.

ಚನ್ನಗಿರಿ ತಾಲ್ಲೂಕಿನಲ್ಲಿ ೧೦೩ ಶಾಸನಗಳು, ಅದರಲ್ಲಿ ನಾಲ್ಕು ತಾಮ್ರಶಾಸನಗಳಿವೆ. ಶಾಸನಶಿಲ್ಪಗಳು ೬೨, ದೇವಾಲಯಗಳು ೩೪, ಮೂರ್ತಿಶಿಲ್ಪಗಳು ೪೨, ಒಂದು ಪುಷ್ಕರಣಿ, ೪ ಶಾಸನೋಕ್ತ ಕೆರೆಗಳು, ೧೧ ಐತಿಹಾಸಿಕ ಕೆರೆಗಳು, ೨ ಬಾವಿಗಳು, ಒಂದು ಕೋಟೆ, ೪ ಕೋಟೆಯ ಅವಶೇಷಗಳು, ೩ ಅರಮನೆಯ ಅವಶೇಷ, ಬುರುಜುಗಳು, ಒಂದು ಹೊಯ್ಸಳರ ಲಾಂಛನವನ್ನು ಕಲ್ಲಿನಲ್ಲಿ ಕೆತ್ತಲಾಗಿದೆ. ರಾಣಿಯರ ಸ್ನಾನದ ಕಲ್ಲು, ಒಂದು ಕಬ್ಬಿಣದ ಭರ್ಚಿ (ಈಟಿ), ಹೊದಿಗೆರೆಯ ಷಾಹಜಿ ಸಮಾಧಿ, ಮುಸಾಫಿರ್‌ಖಾನ ಕಂಡುಬಂದಿವೆ. ಕಲ್ಯಾಣದಚಾಲುಕ್ಯರು, ಉಚ್ಚಂಗಿ ಪಾಂಡ್ಯರು, ನೊಳಂಬ ಪಲ್ಲವರು, ಸೇವುಣರು, ಹೊಯ್ಸಳರು, ಆಸಂದಿಗಂಗರು, ವಿಜಯನಗರ ಸಾಮ್ರಾಜ್ಯ, ಸಂತೆಬೆನ್ನೂರಿನ ನಾಯಕರು, ಚಿತ್ರದುರ್ಗದ ಪಾಳೆಯಗಾರರು, ಮರಾಠರು, ಬಿಜಾಪುರದ ಆದಿಲ್‌ಷಾಯಿಗಳಿಗೆ ಶಾಸನಗಳ ಮತ್ತು ಸ್ಮಾರಕಗಳು ದೊರೆತಿದ್ದು, ಮೈಸೂರು ಒಡೆಯರ ಒಂದು ಶಾಸನವೂ ದೊರೆತಿದೆ.

ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ-೭ರಲ್ಲಿ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ೮೩ ಶಾಸನಗಳು ಪ್ರಕಟಗೊಂಡಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಒಟ್ಟು ೧೦೩ ಶಾಸನಗಳು ದೊರೆತಿವೆ. ಆದರೆ ಟಿ. ಗಿರಿಜ ಅವರ ದಾವಣಗೆರೆ ಜಿಲ್ಲಾ ದರ್ಶಿನಿಯಲ್ಲಿ ೧೦೬ ಶಾಸನಗಳು ಪ್ರಕಟಗೊಂಡಿವೆ. ಎಂ.ಎ.ಆರ್. ೧೯೮೫ ರಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ೧೨ ಶಾಸನಗಳು ಪ್ರಕಟಣೆಗೊಂಡಿವೆ. ಅದರಲ್ಲಿ ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ಹತ್ತು ಶಾಸನಗಳು ಪ್ರಕಟಗೊಂಡಿವೆ.[೧೦] ಇತಿಹಾಸ ದರ್ಶನ ಸಂಪುಟಗಳಲ್ಲಿ ೫ ಶಾಸನಗಳು ಪ್ರಕಟಗೊಂಡಿವೆ.[೧೧] ಟಿ. ಗಿರಿಜಾರವರು ನಮ್ಮ ಜಿಲ್ಲೆ ದಾವಣಗೆರೆ ಕೃತಿಯಲ್ಲಿ ೧೦೬ ಶಾಸನಗಳು ಪ್ರಕಟಗೊಂಡಿವೆಯೆಂದು ತಿಳಿಸಿದ್ದಾರೆ.[೧೨] ಆದರೆ ಪ್ರಸ್ತುತ ೧೦೩ ಶಾಸನಗಳು ಪ್ರಕಟಣೆಗೊಂಡಿರುವ ಮಾಹಿತಿ ಲಭ್ಯವಾಗಿವೆ[೧೩]. ಹಾಗೆಯೇ ಒಂದು ಅಪ್ರಕಟಿತ ಶಾಸನ ಮಲಹಾಳಿಯಲ್ಲಿ ಇತ್ತೀಚೆಗೆ ಲಭ್ಯವಾಗಿದೆ ಹೆಚ್ಚಿನ ಶಾಸನಗಳು ಓದಲು ಸಾಧ್ಯವಾಗದಷ್ಟು ತ್ರುಟಿತವಾಗಿವೆ.

೬೨ ಸ್ಮಾರಕ ಶಿಲ್ಪಗಳು, ೩೩ ಮಹಾಸತಿಗಲ್ಲುಗಳು, ೨೯ ಶಾಸನರಹಿತ ವೀರಗಲ್ಲುಗಳು, ೪೨ ಮೂರ್ತಿಶಿಲ್ಪಗಳು, ೩೬ ದೇವಾಲಯಗಳು ಲಭ್ಯವಾಗಿದ್ದು ಈ ಎಲ್ಲಾ ಶಾಸನಗಳು, ಶಾಸನಶಿಲ್ಪಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಸ್ಮಾರಕಗಳನ್ನು ಮುಂದಿನ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ರಾಜ ಮನೆತನಗಳ ಇತಿಹಾಸ

ಚನ್ನಗಿರಿ ತಾಲ್ಲೂಕು ಪ್ರಾರಂಭದಲ್ಲಿ ಮೌರ್ಯ, ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಅವರ ಆಳ್ವಿಕೆಗೆ ಸೇರಿದ್ದಿತು. ಆದರೆ ಈ ರಾಜಮನೆತನಗಳಿಗೆ ಸಂಬಂಧಿಸಿದ ಯಾವುದೇ ಶಾಸನಗಳಲ್ಲಿ ಸ್ಮಾರಕಗಳಲ್ಲಿ ಕಂಡುಬಂದಿಲ್ಲ. ತಾಲ್ಲೂಕಿನ ಹೊರಭಾಗದಲ್ಲಿ ಲಭ್ಯವಾದ ಪುರಾತತ್ವ ಮತ್ತು ಸಾಹಿತ್ಯ ಆಕರಗಳ ಸಹಾಯದಿಂದ ಈ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು

ತಿಳಿದುಬರುತ್ತದೆ. ಚನ್ನಗಿರಿ ತಾಲ್ಲೂಕಿನ ಲಭ್ಯವಾದ ಶಾಸನಗಳು ರಾಷ್ಟ್ರಕೂಟರ ನಂತರದ ಕಾಲಕ್ಕೆ ಸೇರಿದ್ದಾಗಿದೆ. ರಾಷ್ಟ್ರಕೂಟ ನಂತರದ ರಾಜಮನೆತನಗಳ ಐತಿಹಾಸಿಕ ಹಿನ್ನೆಲೆಯನ್ನು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದ ಶಾಸನ ಆಕರಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಈ ಕೆಳಗಿನಂತೆ ವಿವರಣೆ ನೀಡಿದೆ.

ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ನಂತರ ಉತ್ತರ ಕರ್ನಾಟಕದ ಭಾಗವನ್ನಲ್ಲದೆ, ದಕ್ಷಿಣ ಕರ್ನಾಟಕ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳ ಬಹುಭಾಗಗಳಲ್ಲಿ ಕಲ್ಯಾಣದಚಾಲುಕ್ಯರು ಆಳ್ವಿಕೆ ಮಾಡಿದರು. ಇವರ ಕಾಲದ ಮೂರು ಶಾಸನಗಳು ಎಫಿಗ್ರಾಫಿಯಾ ಕರ್ನಾಟಿಕಾ(ಹಳೆಯ ಆವೃತಿ)ಯಲ್ಲಿ ಪ್ರಕಟಗೊಂಡಿವೆ. ಎಂ.ಎ.ಆರ್. ವರದಿಗಳಲ್ಲಿ (೧೯೩೫–೪೦ರವರೆಗೆ) ಶಾಸನಗಳನ್ನು, ಬಿ. ರಾಜಶೇಖರಪ್ಪರವರು ಇತಿಹಾಸ ಅಕಾಡೆಮಿ ಸಂಪುಟ ೧೭ರಲ್ಲಿ ಪ್ರಕಟಿಸಿದ್ದಾರೆ.

ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ೯೫೦ ನೇ ಕಾಲದ ತಾಮ್ರ ಶಾಸನವು ಹಿರೇಕೋಗಿಲೂರಿನಲ್ಲಿ ದೊರೆತಿದ್ದು ಆದರೆ ಅದು ಲಭ್ಯವಾಗಿಲ್ಲ.

ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಸಾಮಾಂತನದ ಕಲ್ಯಾಣದ ಚಾಲುಕ್ಯರ ಕಾಲದ ರಾಜಾಧಿತ್ಯನ ವಂಶಾವಳಿಯನ್ನು ಈ ತಾಮ್ರ ಶಾಸನದಲ್ಲಿ ಕೊಟ್ಟಿದೆ. ಅಲ್ಲದೆ ಇದರಲ್ಲಿ ಇಮ್ಮಡಿ ರಾಜಾಧಿತ್ಯನನ್ನು 'ನನ್ನಿಕೆ' ಎಂದು ವರ್ಣಿಸಲಾಗಿದೆ. ಈ ಶಾಸನದಲ್ಲಿ ಚಾಲುಕ್ಯರ ಮೂಲವನ್ನು ವಿವರಿಸುತ್ತಾ ದ್ರೋಣನ ಮಗನಾದ ಅಶ್ವತ್ಥಾಮ ಸಂಧ್ಯಾ ಸಮಯದಲ್ಲಿ ಮಂತ್ರಪೂಜಿತವಾದ ಗಂಗಾಜಲವನ್ನು ಬೊಗಸೆಯಿಂದ ಚೆಲ್ಲಿದಾಗ 'ಚಳುಕಿ' ಎಂಬ ವೀರ ಹುಟ್ಟಿದನೆಂದೂ ಅವನು ಶತ್ರುಗಳನ್ನು ಹೊಡೆದೋಡಿಸಬಲ್ಲವನಾದ ಕಾರಣ 'ಚಾಳಯತಿ ಚಾಲುಕ್ಯ' ಎಂದು ಹೆಸರು ಬಂದಿತೆಂದೂ ಹೇಳಿದೆ. ಚಾಲುಕ್ಯರ ಹುಟ್ಟಿನ ಬಗ್ಗೆ ತಿಳಿಸುವ ಈ ಶಾಸನ ಕರ್ನಾಟಕ ಇತಿಹಾಸಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ.[೧೪]

ಎರಡನೇ ತೈಲಪ (ಕ್ರಿ.ಶ. ೯೭೩–೯೯೭)

ಕ್ರಿ.ಶ. ೯೯೨ರ ತ್ಯಾವಣಿಗೆಯ ಕಲ್ಲೇಶ್ವರ ದೇವಾಲಯದ ಪೂರ್ವದ ಕಡೆ ನಿಲ್ಲಿಸಲ್ಪಟ್ಟಿರುವ ಶಾಸನವು ಎರಡನೇ ತೈಲಪನ ಕಾಲಕ್ಕೆ ಸೇರಿದೆ. ಅವನನ್ನು ಅಹವಮಲ್ಲದೇವ ಎಂದು ವರ್ಣಿಸಿದೆ.[೧೫] ಸತ್ಯಾಶ್ರಯನಿಗೆ ಇರಿವಬೇಡಿಂಗ, ಸಾಹಸಭೀಮ ವಿಜಯ, ಅಕಳಂಕಚರಿತ, ಅಹವಮಲ್ಲ ಎಂಬ ಬಿರುದುಗಳಿದ್ದವು. ಸತ್ಯಶ್ರಾಯನು ಕ್ರಿ.ಶ. ೯೯೭ರಲ್ಲಿ ಅಧಿಕಾರಕ್ಕೆ ಬಂದ ಇವನು ಕ್ರಿ.ಶ. ೧೦೦೮ರ ವರೆಗೆ ಆಳ್ವಿಕೆ ಮಾಡಿದನು. ಚನ್ನಗಿರಿ ತಾಲ್ಲೂಕಿನಲ್ಲಿ ಇದುವರೆಗೂ ಲಭ್ಯವಾದ ಶಾಸನಗಳಲ್ಲಿಯೇ ಇದು ಮೊದಲನೆಯ ಶಾಸನವಾಗಿದೆ.

ಆರನೇ ವಿಕ್ರಮಾದಿತ್ಯ (ಕ್ರಿ.ಶ. ೧೦೭೬–೧೧೨೬)

ಕಲ್ಯಾಣದಚಾಲುಕ್ಯರ ಪ್ರಸಿದ್ಧ ಅರಸ ಆರನೇ ವಿಕ್ರಮಾದಿತ್ಯನ ಶಾಸನ ಚನ್ನಗಿರಿ ತಾಲ್ಲೂಕಿನ ಹಿರೇಉಡದ ಕ್ರಿ.ಶ. ೧೦೮೩ನೇ ಶಾಸನವು ದಾನಶಾಸನವಾಗಿದ್ದು, ಅಕ್ಷರಗಳು ಅಳಿಸಿ ಹೋಗಿರುವುದರಿಂದ ಕಾಲ ಅಸ್ಪಷ್ಟವಾಗಿದೆ.[೧೬]

ಒಂದನೇ ಜಗದೇಕಮಲ್ಲ (ಕ್ರಿ.ಶ. ೧೦೧೫–೧೦೪೩)

ಕ್ರಿ. ಶ. ೧೦೧೫ ರಲ್ಲಿ ಅಧಿಕಾರಕ್ಕೆ ಬಂದ ಒಂದನೇ ಜಗದೇಕಮಲ್ಲ ೧೦೪೩ರ ವರೆಗೂ ಆಳ್ವಿಕೆ ನಡೆಸಿದನು. ಇವನ ಮತ್ತೊಂದು ಹೆಸರೇ ಸಿಂಗದೇವ. ಇವನಿಗೆ ಜಗದೇಕಮಲ್ಲ ತ್ರೈಲೋಕ್ಯಮಲ್ಲ ಮಲ್ಲಿಕಾಮೋದ ವಿಕ್ರಮಸಿಂಹ ಎಂಬ ಬಿರುದುಗಳಿವೆ.[೧೭] ಎಂ.ಎ.ಆರ್. ೧೯೩೫ ವರದಿಯಲ್ಲಿನ ೩೫ನೇ ಶಾಸನವು ಹಿರೇಉಡ ಗ್ರಾಮದ ಉಬ್ರಾಣಿ ಹಾಲಪ್ಪರ ಹೊಲದಲ್ಲಿರುವ ಶಾಸನವು ಕಲ್ಯಾಣದ ಚಾಲುಕ್ಯ ಜಗದೇಕಮಲ್ಲನಿಗೆ ಸೇರಿದ್ದಾಗಿದೆ.[೧೮]

ನೊಳಂಬರು

ಆಗ್ನೇಯ ಕರ್ನಾಟಕದ ಭಾಗದಲ್ಲಿ ಸು. ಕ್ರಿ.ಶ. ೭೫೦–೧೦೫೪ರವರೆಗೆ ಆಳಿದ ಒಂದು ಸಾಮಂತ ರಾಜವಂಶ. ಇವರ ರಾಜಧಾನಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿರುವ ಹೇಮಾವತಿ ಪ್ರಾಚೀನ ಹೆಂಜೇರು ಇವರ ರಾಜಲಾಂಛನ ನಂದಿ. ಎಂಟನೆಯ ಶತಮಾನದ ಮಧ್ಯ ಭಾಗದಲ್ಲಿ 'ನೊಳಂಬ ಸಾಸಿರ' ಎಂಬ ಪ್ರದೇಶದ ಮೇಲೆ ಆಳ್ವಿಕೆ ಆರಂಭಿಸಿದ ನೊಳಂಬರು ಕ್ರಿ.ಶ. ೯–೧೦ನೆಯ ಶತಮಾನದಲ್ಲಿ ರಾಜಕೀಯವಾಗಿ ಪ್ರಬಲರಾಗಿ ನೊಳಂಬವಾಡಿ ೩೨೦೦೦ ಎಂಬ ವಿಶಾಲ ಪ್ರಾಂತ್ಯದ ಅಧಿಪತಿಗಳಾದರು.[೧೯] ಈ ಪ್ರಾಂತ್ಯ ಪ್ರಮುಖವಾಗಿ ಇಂದಿನ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಅನಂತಪುರ, ಧರ್ಮಪುರಿ ಮೊದಲಾದ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿತ್ತು. ಇವರು ಬಾದಾಮಿ ಚಳುಕ್ಯರ, ಗಂಗರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದರು.

'ತ್ರಿನಯನ' ಎಂಬುವವನು ನೊಳಂಬರ ಮೂಲಪುರುಷ. ಮೊದಲ ಅರಸ 'ಮಂಗಳ ನೊಳಂಬಾದಿರಾಜ' ಕ್ರಿ.ಶ. ಸು. ೭೩೫ರಲ್ಲಿ ಅಧಿಕಾರಕ್ಕೆ ಬಂದು, ಕ್ರಿ. ಶ. ೭೮೫ರವರೆಗೆ ಆಳ್ವಿಕೆ ಮಾಡಿದನು. ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿರುವ ಮೂರು ಶಾಸನಗಳು ನೊಳಂಬರ '೨ನೇ ತ್ರೈಲೋಕ್ಯಮಲ್ಲನನ್ನು ನೊಳಂಬ ಪಲ್ಲವ ಪೆರ್ಮಾನಡಿ' ಸಂಬಂಧಿಸಿವೆ.[೨೦]

ಎರಡನೇ ತ್ರೈಲೋಕ್ಯ ನನ್ನಿನೊಳಂಬ ಪೆರ್ಮಾನಡಿ (ಕ್ರಿ.ಶ. ೧೦೪೪–೧೦೫೪)

ಕ್ರಿ.ಶ. ೧೦೫೦ ತ್ಯಾವಣಿಗಿಯಲ್ಲಿ ೨ನೇ ತ್ರೈಲೋಕ್ಯ ನನ್ನಿನೊಳಂಬ ಪಲ್ಲವ ಪೆರ್ಮಾನಡಿಗೆ ಸಂಬಂಧಿಸಿದ ಎರಡು ಶಾಸನಗಳು, (ಇಸಿ–೭ರ ಹಳೆಯ ಆವೃತಿ ೧೮ ಮತ್ತು ೧೯ನೇ ಶಾಸನಗಳು) ಇವನಿಗೆ ಸಂಬಂಧಿಸಿವೆ.[೨೧] ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಾಡಿ ಉದಯಾದಿತ್ಯನ ಕಿರಿಯ ಮಗನೇ ೨ನೇ ತ್ರೈಲೋಕ್ಯನನ್ನಿನೊಳಂಬ ಪಲ್ಲವ ಪೆರ್ಮಾನಡಿ ಇವನು ಚಾಲುಕ್ಯರ ೧ನೆಯ

ಸೋಮೇಶ್ವರನ ಸಾಮಂತನಾಗಿದ್ದ. ಈತನು ಕೋಗಳಿ ೫೦೦, ಕದಂಬಳಿಗೆ ೧೦೦೦, ಬಲ್ಲಕುಂದೆ ೩೦೦, ಕನೆಯಕಲು ೩೦೦, ಕುಡಿಹರವಿ ೭೦ ಮತ್ತು ಕರಿವೀಡಿ ೩೦ ಪ್ರಾಂತ್ಯಗಳ ಮೇಲೆ ರಾಜ್ಯಭಾರ ನಡೆಸಿದನು. ಕೊಪ್ಪಂ ಯುದ್ಧದಲ್ಲಿ ೧೦೫೪ರಲ್ಲಿ ಚೋಳರ ವಿರುದ್ಧ ಹೋರಾಟ ಮಾಡಿ ಸಾವನ್ನಪ್ಪಿದನು. ನೊಳಂಬರ ಕೊನೆಯ ಅರಸ ಇವನೇ ಆಗಿದ್ದಾನೆ.[೨೧] ಕ್ರಿ.ಶ. ೧೦೪೭ರ ಹಿರೇಕೋಗಲೂರಿನ ಶಾಸನವು ಕಲ್ಯಾಣದಚಾಲುಕ್ಯರ ೧ನೇ ಸೋಮೇಶ್ವರನ ಸಾಮಂತನದ ೨ನೇ ತ್ರೈಲೋಕ್ಯಮಲ್ಲನನ್ನಿನೊಳಂಬಪಲ್ಲವ ಪೆರ್ಮಾನಡಿಗೆ ಸೇರಿದ ದ್ವಿಮುಖ ಶಾಸನವು ಪತ್ತೆಯಾಗಿದೆ.[೨೨] ನೊಳಂಬ ಪಲ್ಲವರು ಕಲ್ಯಾಣದಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ ಸಂಗತಿಯನ್ನು ತಿಳಿಸುವ ಶಾಸನವಾಗಿದೆ.

ಉಚ್ಚಂಗಿ ಪಾಂಡ್ಯರು

೧೧ ಮತ್ತು ೧೨ನೆಯ ಶತಮಾನಗಳಲ್ಲಿ ಕಲ್ಯಾಣದ ಚಾಲುಕ್ಯರ ಆಶ್ರಯದಲ್ಲಿ ಸಣ್ಣಪುಟ್ಟ ನಾಡುಗಳನ್ನು ಆಳುತ್ತಿದ್ದ ೧೨ ಸಾಮಂತ ಮನೆತನಗಳಲ್ಲೊಂದಾಗಿತ್ತು. ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡ ನೊಳಂಬವಾಡಿ ೩೨,೦೦೦ ಪ್ರದೇಶವನ್ನು ನೊಳಂಬ ಪಲ್ಲವರ ಆನಂತರ ಪಾಂಡ್ಯರು ಮಹಾಮಂಡಳೇಶ್ವರ, ಕಾಂಚಿಪುರವಧೀಶ್ವರ, ಪರಿಚ್ಛೇದಿಗಂಡ ಬಿರುದುಗಳನ್ನು ಧರಿಸಿಕೊಂಡು ಉಚ್ಚಂಗಿಯಲ್ಲಿ ಆಳ್ವಿಕೆ ಮಾಡುತ್ತಿದ್ದರು.[೨೩] ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಒಂದು ಗಿರಿದುರ್ಗವಾದ ಉಚ್ಚಂಗಿಯು ಇವರ ರಾಜಧಾನಿ. ಇವರು ಮೂಲತಃ ಕೊಂಕಣದ ಶಿಸುಗಲಿಯಲ್ಲಿ ನೆಲೆಸಿದ್ದರು.[೨೪] ಅನಂತರ ನೊಳಂಬವಾಡಿ ಪ್ರದೇಶಕ್ಕೆ ಬಂದು ಆಳ್ವಿಕೆ ನಡೆಸಿದರು. 'ಆದಿತ್ಯದೇವ' ಅಥವಾ ಮಂಗಯ್ಯನು ಈ ವಂಶವನ್ನು ಸ್ಥಾಪಿಸಿದನು. ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರಿಂದ ಎಲ್ಲಾ ಶಾಸನಗಳಲ್ಲಿ ಕಲ್ಯಾಣದ ಚಾಲುಕ್ಯ ಅರಸರ ಸಾಮಂತಿಕೆಯನ್ನು ಒಪ್ಪಿಕೊಂಡು ಅವರ ಹೆಸರಿನ ನಂತರ ತಮ್ಮ ಹೆಸರುಗಳ ಕಾರ್ಯಗಳನ್ನು ವರ್ಣಿಸಿಕೊಂಡಿದ್ದಾರೆ.

ಮಾಚಗಾವುಂಡ

ಉಚ್ಚಂಗಿ ಪಾಂಡ್ಯರ ಸಾಮಂತನಾದ ಮಾಚಗಾವುಂಡನು ಮೆದಕೆರೆ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನು. ಕ್ರಿ.ಶ. ೧೦೬೩ರ ಮೆದಕೆರೆಯ ಶಾಸನವು ಕಲ್ಯಾಣದ ಚಾಲುಕ್ಯರ ಸಾಮಂತನಾದ ಉಚ್ಚಂಗಿ ಪಾಂಡ್ಯರ ಮಾಚಗಾವುಂಡನಿಗೆ ಸೇರಿದ ದಾನಶಾಸನವಾಗಿದೆ.[೨೫]

ತ್ರಿಭುವನ ಮಲ್ಲಪಾಂಡ್ಯ

ಕ್ರಿ.ಶ. ೧೦೮೦ರ ಶಿದ್ಧರಮಠದ ಶಾಸನ ಉಚ್ಚಂಗಿ ಪಾಂಡ್ಯರ ತ್ರಿಭುವನಮಲ್ಲ ಪಾಂಡ್ಯನಿಗೆ ಸೇರಿದ ಶಾಸನವಾಗಿದ್ದು, ಇದು ಅವನ ರಾಜ್ಯ ವಿಸ್ತರಣೆಯ ಬಗ್ಗೆ ವಿವರಿಸುತ್ತದೆ.[೨೬] ಕ್ರಿ.ಶ. ೧೦೮೩ರ ಹಿರೇಉಡ ಗ್ರಾಮದ ಶಾಸನವು ಕಲ್ಯಾಣದ ಚಾಲುಕ್ಯರ ಸಾಮಂತನಾದ ತ್ರಿಭುವನಮಲ್ಲದೇವನು

ಚೋಳರ ಮೇಲೆ ಹೋರಾಟ ಮಾಡಿ ವಿಜಯವನ್ನು ಸಾಧಿಸಿ, ನೊಳಂಬವಾಡಿ ೩೨೦೦೦ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನೆಂದು ವಿವರಿಸುತ್ತದೆ.[೨೭]

ಇರುವೆಕ್ಕಲ್ ಅಥವಾ ಫಲಮಂದಪಾಂಡ್ಯ. (ಕ್ರಿ.ಶ. ೧೦೮೭–೧೧೨೩)

ಕ್ರಿ.ಶ. ೧೧೦೦ ರ ಬೆಂಕಿಕೆರೆ ಗ್ರಾಮದ ಶಾಸನವು ಕಲ್ಯಾಣದ ಚಾಳುಕ್ಯರ ತ್ರಿಭುವನ ಮಲ್ಲನ ಸಾಮಂತನಾದ ಉಚ್ಚಂಗಿಪಾಂಡ್ಯರ ಇರುವೆಕ್ಕಲ್ ಅಥವಾ ಪಲಮಂದ ಪಾಂಡ್ಯನ ಕಾಲಕ್ಕೆ ಸೇರಿದ ವೀರಗಲ್ಲು ಶಾಸನವಾಗಿದ್ದು[೨೮] ಅವನ ಕಾಲದ ಬೆಂಕಿಕೆರೆಯ ಬಗ್ಗೆ ವಿವರಿಸಿದೆ. ಕ್ರಿ.ಶ, ೧೧೨೦ ಮೆದಕೆರೆ ಗ್ರಾಮದ ಶಾಸನವು ಕಲ್ಯಾಣದ ಚಾಲುಕ್ಯರ ಸಾಮಂತರಾದ ಉಚ್ಚಂಗಿ ಪಾಂಡ್ಯರ ಅರಸನಾದ ಇರುಕ್ಕವೆಲ್ ಅಥವಾ ಪಲಿಂದಪಾಂಡ್ಯನ ಕಾಲಕ್ಕೆ ಸೇರಿದ ದಾನಶಾಸನವಾಗಿದೆ.[೨೯]

ವೀರಪಾಂಡ್ಯ

ಕ್ರಿ.ಶ. ೧೧೪೯ರ ಅಸ್ತಾಪುರ ಗ್ರಾಮದ ಶಾಸನವು ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನ ಸಾಮಂತನಾದ ಉಚ್ಚಂಗಿಪಾಂಡ್ಯರ ವೀರಪಾಂಡ್ಯನಿಗೆ ಸೇರಿದ ದಾನಶಾಸನವಾಗಿದೆ.[೩೦] ಗ್ರಾಮದಲ್ಲಿ ದೇವಾಲಯದ ಸ್ಥಾಪನೆ ಮತ್ತು ಅದರ ಬೆಳವಣಿಗೆಯ ಬಗ್ಗೆ ವಿಶ್ಲೇಷಿಸಲಾಗಿದೆ. ಕ್ರಿ.ಶ. ೧೧೪೯ರ ಅಸ್ತಾಪನಹಳ್ಳಿ ಗ್ರಾಮದ ನೈರುತ್ಯದಲ್ಲಿರುವ ಸೋಮೇಶ್ವರ ದೇವಾಲಯದಲ್ಲಿರುವ ಶಾಸನವು ಕಲ್ಯಾಣದ ಚಾಲುಕ್ಯರ ಜಗದೇಕ ಮಲ್ಲನ ಸಾಮಂತ ವೀರಪಾಂಡ್ಯನಿಗೆ ಸೇರಿದ್ದಾಗಿದ್ದು[೩೧] ದೇವಾಲಯಕ್ಕೆ ದಾನ ನೀಡಿದ ಬಗ್ಗೆ ವಿವರಿಸಿದೆ. ಇತಿಹಾಸದರ್ಶನ ಸಂಪುಟ ೧೭ರಲ್ಲಿ ಮೆದಿಕೆರೆ ಮತ್ತು ದೊಡ್ಡಬ್ಬಿಗೆರೆಯಲ್ಲಿ ಅಪ್ರಕಟಿತ ಶಾಸನವು ಉಚ್ಚಂಗಿಪಾಂಡ್ಯರ ಎರಡನೇ ಶಾಸನದಲ್ಲಿ ಸುಮತೀಂದ್ರ ನಾಡಿಗ್‌ರವರು ಪ್ರಕಟಿಸಿದ್ದಾರೆ.[೩೨] ಇವನ ಸಾಮಂತ ಮಾಚಗಾವುಂಡನು ದಾನವನ್ನು ನೀಡಿದ ವಿವರಣೆ ಇದೆ. ಉಚ್ಚಂಗಿ ಪಾಂಡ್ಯರ ಅರಸನಾದ ತ್ರಿಭುವನಮಲ್ಲಪಾಂಡ್ಯ ಫಲಮಂದ ಪಾಂಡ್ಯದೇವ, ಇರುವೆಕ್ಕಲ್ ಅಥವಾ ಫಲಮಂದ ಪಾಂಡ್ಯರ ಶಾಸನಗಳು ದೊರೆತಿವೆ. ಅವರ ಸಾಮಂತನಾದ ಮಾಚಗಾವುಂಡನನ್ನು ಇದು ಉಲ್ಲೇಖಿಸಿದೆ.

ಸೇವುಣರು

೯ನೆಯ ಶತಮಾನದಿಂದ ೧೪ನೆಯ ಶತಮಾನದ ಆರಂಭದವರೆಗೆ ಆಳಿದ ಸೇವುಣರು ಇತಿಹಾಸಕಾರರಿಗೆ ದೇವಗಿರಿಯ ಯಾದವರೆಂದೇ ಪರಿಚಿತರಾಗಿದ್ದರು. ಎ.ವಿ. ನರಸಿಂಹಮೂರ್ತಿ ಮತ್ತು ಶ್ರೀನಿವಾಸರಿತ್ತಿ ಅವರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಇವರನ್ನು 'ದೇವಗಿರಿಯ ಸೇವುಣರು' ಎಂದು ದಾಖಲಿಸಿದ್ದಾರೆ.[೩೩] ಈ ವಂಶದ ದೃಡಪ್ರಹಾರನ ಹೆಸರು ಕೆಲವು ಶಾಸನಗಳಲ್ಲಿ ಮಾತ್ರ ಕಂಡುಬರುತ್ತದೆ. ಅವನ ನಂತರ ಅಧಿಕಾರಕ್ಕೆ ಬಂದವನೇ ಒಂದನೇ ಸೇವುಣಚಂದ್ರ, ಬಹುಶಃ ಇವನೇ ಈ ವಂಶದ ಮೊದಲ ದೊರೆ. ಇವನ ರಾಜಧಾನಿ ಸಿಂಧಿನೇರ ಎಂಬ ಪ್ರಾಂತ್ಯದಲ್ಲಿದ್ದ ಸೇವುಣಪುರ. ಸೇವುಣರಿಗೆ ಸಂಬಂಧಿಸಿದಂತೆ ೧೦ ಶಾಸನಗಳು ಚನ್ನಗಿರಿ

ತಾಲ್ಲೂಕಿನಲ್ಲಿ ದೊರೆತಿವೆ.[೩೪] ಅವು ಸೇವುಣರ ೨ನೇ ಸಿಂಘಣ, ಮಹದೇವರಾಯ ಮತ್ತು ರಾಮಚಂದ್ರ ದೇವರಿಗೆ ಸಂಬಂಧಿಸಿವೆ.

ಎರಡನೇ ಸಿಂಘಣ (ಕ್ರಿ.ಶ. ೧೨೦೦-೧೨೪೭)

೨ನೇ ಸಿಂಘಣ ಸೇವುಣರಲ್ಲಿ ಅತ್ಯಂತ ಪ್ರಸಿದ್ಧ ಅರಸ. ಈತನು ಕರ್ನಾಟಕದಲ್ಲಿ ಹೊಯ್ಸಳರ ಶಕ್ತಿ ಸಾಮರ್ಥ್ಯಗಳಿಗೆ ತಡೆ ಒಡ್ಡಿದನು. ಇವನಿಗೆ ಸೇರಿದ ಒಂದು ಶಾಸನವು ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿದೆ. ಕ್ರಿ.ಶ. ೧೨೪೨ರ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದ ಆವರಣದಲ್ಲಿನ ಒಂದನೇ ವೀರಕಲ್ಲು ಯಾದವರ ಎರಡನೇ ಸಿಂಘಣನಿಗೆ ಸೇರಿದೆ.[೩೫] ಈ ಶಾಸನದಲ್ಲಿ ನಲ್ಕುದರೆಯಲ್ಲಿ ಬೇಡರು ಮತ್ತು ಸೋಮಯ್ಯನ ಮಗನ ನಡುವೆ ನಡೆದ ಕಾಳಗದ ಬಗ್ಗೆ ವಿಶ್ಲೇಷಿಸಿದೆ.

ಮಹದೇವರಾಯ (ಕ್ರಿ.ಶ. ೧೨೬೧-೧೨೭೧)

ಮಹದೇವರಾಯನು ಕೃಷ್ಣನ ತರುವಾಯ ಕ್ರಿ.ಶ. ೧೨೬೧ರಲ್ಲಿ ಪಟ್ಟಕ್ಕೆ ಬಂದನು. ಇವನಿಗೆ ಸಂಬಂಧಿಸಿದಂತೆ ಮೂರು ಶಾಸನಗಳು ಚನ್ನಗಿರಿಯಲ್ಲಿ ದೊರೆತಿದೆ. ಕ್ರಿ.ಶ. ೧೨೬೮ರ ಹಿರೇಕೋಗಿಲೂರಿನ ವೀರಭದ್ರಯ್ಯನ ಹಿತ್ತಲಿನಲ್ಲಿನ ಶಾಸನವು ಮಹದೇವರಾಯನಿಗೆ ಸಂಬಂಧಿಸಿದ ಶಾಸನವಾಗಿದ್ದು, ಮಹದೇವರಾಯನ ಸಾಮಂತನಾದ ಚತ್ತರಸನ ಮಗನಾದ ಚೌಡನು ಸಿಂಹಾಸನರೋಹಣ ಸಂದರ್ಭದಲ್ಲಿ ನೀಡಿದ ದಾನದ ಬಗ್ಗೆ ಉಲ್ಲೇಖಿಸುತ್ತದೆ.[೩೬] ಕ್ರಿ.ಶ. ೧೨೬೫ರ ಹಳೇಕತ್ತಲಗೆರೆಯ ರಾಮೇಶ್ವರ ದೇವಾಲಯದ ಮುಂದಿನ ಗೋಡೆಗೆ ನಿಲ್ಲಿಸಿದ ಈ ಶಾಸನವು ಮಹದೇವರಾಯನಿಗೆ ಸಂಬಂಧಿಸಿದ ದಾನಶಾಸನವಾಗಿದೆ. ಕ್ರಿ.ಶ. ೧೨೬೮ರ ಹಿರೇಕೋಗಿಲೂರಿನ ಕಲ್ಲೇಶ್ವರ ದೇವಾಲಯದ ಬಾಗಿಲಿನ ದಕ್ಷಿಣಕ್ಕೆ ನಿಲ್ಲಿಸಿದ ಶಾಸನವು ಮಹದೇವರಾಯನ ಸಾಮಂತರಾದ ಆಸಂದಿಗಂಗರು ದಾನವನ್ನು ನೀಡಿದ ಬಗ್ಗೆ ಉಲ್ಲೇಖಿಸುತ್ತದೆ.[೩೭] ಶೈವ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಶಾಸನ ತಿಳಿಸುತ್ತದೆ. ಈ ಮೂರೂ ಶಾಸನಗಳು ದಾನಶಾಸನಗಳಾಗಿವೆ.[೩೮]

ವೀರ ರಾಮಚಂದ್ರದೇವ (ಕ್ರಿ.ಶ. ೧೨೭೧-೧೩೧೧)

ಮಹಾದೇವನು ೧೨೭೧ರಲ್ಲಿ ಮರಣ ಹೊಂದಿದನು. ಅವನ ತರುವಾಯ ಅವನ ಮಗ ಅಮ್ಮಣ್ಣ ಮತ್ತು ಕೃಷ್ಣ(ಕ್ರಿ.ಶ. ೧೨೪೭-೧೨೬೧)ನ ಮಗನಾದ ರಾಮಚಂದ್ರರ ನಡುವೆ ಸಿಂಹಾಸನಕ್ಕಾಗಿ ಪೈಪೋಟಿ ಏರ್ಪಟ್ಟಿತು. ಅಮ್ಮಣ್ಣನು ರಾಜ್ಯಭಾರವಹಿಸಿಕೊಂಡನಾದರೂ, ರಾಮಚಂದ್ರನು ತನ್ನ ಸೈನಿಕರಲ್ಲಿ ಕೆಲವರನ್ನು ನರ್ತಕಿಯರ ವೇಷದಲ್ಲಿ ಕಳುಹಿಸಿ ರಾಜ ಅಮ್ಮಣ್ಣನನ್ನು ಸೆರೆ ಹಿಡಿದು ಕೊಂದನು. ರಾಮಚಂದ್ರನು ಸೇವುಣ ವಂಶದ ದೊರೆಯಾದನು. ಈತ ಈ ವಂಶದ ಕೊನೆಯ ಪ್ರಮುಖ ದೊರೆ. ಕ್ರಿ.ಶ. ೧೨೮೨ರ ಹಿರೇಕೋಗಿಲೂರಿನ ಕಲ್ಲೇಶ್ವರ ದೇವಾಲಯದ ಪಶ್ಚಿಮ ದಿಕ್ಕಿನ ಒಂದನೇ ವೀರಕಲ್ಲು ಯಾದವರಾಮಚಂದ್ರನಿಗೆ ಸಂಬಂಧಿಸಿದ ಶಾಸನದಲ್ಲಿ[೩೯] ಕ್ರಿ.ಶ. ೧೨೮೦ರ ಹಿರೇಕೋಗಿಲೂರಿನ ಕಲ್ಲೇಶ್ವರ ದೇವಾಲಯದ ಪಶ್ಚಿಮ ದಿಕ್ಕಿನ ಎರಡನೇ ವೀರಗಲ್ಲು ಶಾಸನವು ರಾಮಚಂದ್ರ ಕಾಲಕ್ಕೆ ಸೇರಿದ್ದಾಗಿದ್ದು, ಇವನ ಸಾಮಂತನು ಕುಮ್ಮಟದುರ್ಗದ ನಾಯಕರ

ಅರಸನಾದ ಮುಮ್ಮಡಿಸಿಂಗನಾಯಕನು ದೂರವಾಡೆಯ ಪ್ರದೇಶದ ಮೇಲೆ ಧಾಳಿ ಮಾಡಿದ್ದನ್ನು ದಾಖಲಿಸಿವೆ.[೪೦]

ಕ್ರಿ.ಶ. ೧೨೯೫ರ ಹಿರೇಕೋಗಲೂರಿನ ದಕ್ಷಿಣದ ಪಾಳು ಈಶ್ವರ ದೇವಾಲಯದ ಬಳಿ ನಿಲ್ಲಿಸಲ್ಪಟ್ಟ ಶಾಸನವು ವೀರರಾಮಚಂದ್ರನಿಗೆ ಸಂಬಂಧಿಸಿದೆ. ಈ ಶಾಸನವು ಯಾದವನಾರಾಯಣ ಬಹುಭುಜಬಲ ಪ್ರೌಢ-ಪ್ರತಾಪ-ಚಕ್ರವರ್ತಿ ವೀರ ರಾಮಚಂದ್ರ ದೇವನನ್ನು ವರ್ಣಿಸಿದ್ದು, ಅವನ ಅಧೀನದಲ್ಲಿದ್ದ ಮಹಮಂಡಲೇಶ್ವರರಾದ ಸೇವಭೋವ, ಬೀಚಭೋವ ಅವರ ದಿಗ್ವಿಜಯ ಮತ್ತು ಅವರ ಶೌರ್ಯವನ್ನು ತಿಳಿಸುತ್ತದೆ.[೪೧] ಕ್ರಿ.ಶ. ೧೨೭೭ರ ಹಳೇ ಕತ್ತಲಗೆರೆಯ ಹನುಮಂತ ದೇವಾಲಯದ ಪೂರ್ವದ ಕಡೆಯ ಶಾಸನವೂ ರಾಮಚಂದ್ರದೇವನಿಗೆ ಸಂಬಂಧಿಸಿದೆ.[೪೨] ಇದರಲ್ಲಿ ದೇವಾಲಯದ ಅಂಗ, ರಂಗ ಭೋಗ ಮತ್ತು ನೈವೇದ್ಯಕ್ಕೆ ದಾನ ನೀಡಿದ್ದನ್ನು ತಿಳಿಸಿದೆ. ಕ್ರಿ.ಶ. ೧೨೭೭ರ ನಲ್ಕುದರೆ ಗ್ರಾಮದ ಬ್ರಹ್ಮೇಶ್ವರ ದೇವಾಲಯದ ಹೊರಗಡೆ ನೆಟ್ಟ ಎರಡನೇ ಶಾಸನೋಕ್ತ ವೀರಗಲ್ಲು ಯಾದವ ರಾಮಚಂದ್ರದೇವನ ಕಾಲಕ್ಕೆ ಸೇರಿದ್ದಾಗಿದ್ದು, ನಲ್ಕುದರೆಯಲ್ಲಿನ ತುರುಕಾಳಗದ ಬಗ್ಗೆ ವಿವರಿಸುತ್ತದೆ.[೪೩]

ಕ್ರಿ.ಶ. ೧೨೭೯ರ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದ ಹೊರಗಡೆ ನೆಟ್ಟ ಮೂರನೇ ಶಾಸನೋಕ್ತ ವೀರಗಲ್ಲು ರಾಮಚಂದ್ರದೇವನಿಗೆ ಸೇರಿದೆ. ನಲ್ಕುದರೆಯಲ್ಲಿನ ತುರುಕಾಳಗಕ್ಕೆ ಮಡಿದ ಜಯದೇವಣ್ಣನಾಯಕನಿಗೆ ಅವನ ವೀರತ್ವವನ್ನು ಪ್ರಶಂಸಿಸಿ 'ಕೋಗಿಲೂರು ದಾರಿ ಇಂಬಡಗಲು ತಾಳಕಟ್ಟದ ತೆಂಕಣಕೋಡಿಯ ಹಿಂದೆ ಗಂಗನಲೆಯಲು ಕಂಬ ನೆತ್ತುರುಗೆಯಾಗಿ ಭೂಮಿಯನ್ನು ದಾನವನ್ನಾಗಿ ನೀಡಿದರು.[೪೪] ಇವನ ಕಾಲಕ್ಕೆ ಸೇರಿದ ಶಾಸನಗಳು, ವೀರಗಲ್ಲುಗಳು ಹಾಗು ತುರುಗೋಳ್ ಶಾಸನಗಳು ಸೇರಿ ೯ ಶಾಸನಗಳು ದೊರೆತಿವೆ. ಅಂದರೆ ಆ ಕಾಲಘಟ್ಟದಲ್ಲಿ ಈ ಭಾಗದಲ್ಲಿ ಹೆಚ್ಚು ದಾಳಿಗಳು ನಡೆದಿವೆ ಎಂಬುದನ್ನು ಈ ಶಾಸನಗಳು ಸೂಚಿಸುತ್ತವೆ.

ಹೊಯ್ಸಳರು

ಹೊಯ್ಸಳರು ಆರಂಭದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದರು. ಚಾಲುಕ್ಯರ ಅವನತಿಯ ಕಾಲದಲ್ಲಿ ಸ್ವತಂತ್ರರಾದ ಹೊಯ್ಸಳರು ೧೧ನೇ ಶತಮಾನದ ಆರಂಭದ ಕಾಲದಲ್ಲಿ ೧೪ನೇ ಶತಮಾನದ ಮಧ್ಯಭಾಗದವರೆಗೆ ಸುಮಾರು ೩ ಶತಮಾನಗಳವರೆಗೂ ಹೆಚ್ಚು ಕಾಲ ವೈಭವೋಪೇತವಾಗಿ ದಕ್ಷಿಣ ಭಾರತದಲ್ಲಿ ರಾಜ್ಯವಾಳಿದರು. ಈ ವಂಶದ ಸ್ಥಾಪಕ ಸಳ. ಮೊದಲ ದೊರೆ ನೃಪಕಾಮ, ವಿಷ್ಣುವರ್ಧನ ಮತ್ತು ಎರಡನೇ ವೀರಬಲ್ಲಾಳರು ಪ್ರಮುಖ ಅರಸರಾಗಿದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಹೊಯ್ಸಳರಿಗೆ ಸಂಬಂಧಿಸಿದಂತೆ ಹತ್ತು ಶಾಸನಗಳು ದೊರಕಿವೆ. ಅವುಗಳಲ್ಲಿ ಕೆಲವು ಶಾಸನಗಳು ಅವರ ಸಾಮಂತರಾದ ಅಸಂದಿಗಂಗರಿಗೆ ಸಂಬಂಧಿಸಿದ್ದಾಗಿದೆ. ಹೊಯ್ಸಳರ ಅರಸರಾದ ೧ನೇ ನರಸಿಂಹ, ವೀರಬಲ್ಲಾಳ, ವೀರನರಸಿಂಹ, ಎರೆಯಂಗನಿಗೆ ಸಂಬಂಧಿಸಿದ ಶಾಸನಗಳು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿವೆ.[೪೫]

ಒಂದನೇ ನರಸಿಂಹ (ಕ್ರಿ.ಶ. ೧೧೪೨–೧೧೭೦)

ವಿಷ್ಣುವರ್ಧನನ ನಂತರ ಅವನ ಮಗ ಒಂದನೇ ನರಸಿಂಹನು ಅಧಿಕಾರಕ್ಕೆ ಬಂದನು. ಈತನು ಚಿಕ್ಕ ವಯಸ್ಸಿನಲ್ಲೇ ತಂದೆಯ ಆಡಳಿತದಲ್ಲಿ ಭಾಗಿಯಾಗಿ ಆಡಳಿತದ ಅನುಭವ ಪಡೆದಿದ್ದನು. ರಾಜ ಪ್ರತಿನಿಧಿಯಾಗಿ ಕೆಲಸ ಮಾಡಿದ ಅನುಭವವೂ ಅವನಿಗಿತ್ತು. ಆದರೆ ಆತ ರಾಜನಾಗಿ ಉತ್ತಮ ಆಡಳಿತವನ್ನು ಕೊಡಲು ವಿಫಲನಾದನು. ಇವನಿಗೆ ಸಂಬಂಧಿಸಿದ ಮೂರು ಶಾಸನಗಳು ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿವೆ. ಕ್ರಿ.ಶ. ೧೧೪೨ರ ಚನ್ನಗಿರಿಯ ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ದೊರೆತ ಶಾಸನ ಒಂದನೇ ನರಸಿಂಹನಿಗೆ ಸಂಬಂಧಿಸಿದ ದಾನಶಾಸನವಾಗಿದೆ. ಕೇತೇಶ್ವರ ದೇವಾಲಯಕ್ಕೆ ಭೂದಾನ ನೀಡಿದ ಬಗ್ಗೆ ಉಲ್ಲೇಖಿಸಿದೆ.[೪೬] ಕ್ರಿ.ಶ. ೧೧೬೮ರ ತಾವರಕೆರೆ ಶಾಸನವು ಗ್ರಾಮದ ನೀಲಕಂಠೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಶಾಸನ ಒಂದನೇ ನರಸಿಂಹನಿಗೆ ಸಂಬಂಧಿಸಿದ ದಾನಶಾಸನವಾಗಿದೆ.[೪೭] ಭೂದಾನವನ್ನು ನೀಡಿದ ಬಗ್ಗೆ ಇದು ತಿಳಿಸಿದೆ.

ಕ್ರಿ.ಶ. ೧೧೭೦ರ ಬಿಲ್ಲಹಳ್ಳಿಯ ಉತ್ತರ ಕಲ್ಲೇಶ್ವರ ದೇವಾಲಯದಲ್ಲಿ ನಿಲ್ಲಿಸಲ್ಪಟ್ಟ ಒಂದನೇ ವೀರಗಲ್ಲು ಶಾಸನವು ಹೊಯ್ಸಳರ ವೀರನರಸಿಂಹದೇವನಿಗೆ ಸಂಬಂಧಿಸಿದ್ದು, ಈ ಶಾಸನದಲ್ಲಿ ವೀರನರಸಿಂಹದೇವನು ಸುರಲೋಕಕ್ಕೆ ಹೋದನೆಂದು ದಾಖಲಿಸುತ್ತದೆ. ಒಂದನೇ ನರಸಿಂಹ ಸಾವನ್ನಪ್ಪಿದ ಬಗ್ಗೆ ಈ ಶಾಸನವು ದಾಖಲಿಸುವ ಮಹತ್ವದ ಶಾಸನವಾಗಿದೆ.[೪೮] ಇತಿಹಾಸಕಾರರು ಒಂದನೇ ನರಸಿಂಹನು ಕ್ರಿ. ಶ. ೧೦೭೩ ರಲ್ಲಿ ಸಾವನ್ನಪ್ಪುತ್ತಾನೆಂದು ತಿಳಿಸಿದ್ದಾರೆ. ಆದರೆ ಸಂಪುಟ–೭ ರಲ್ಲಿನ ೩೬ನೆ ಶಾಸನವು ಕ್ರಿ.ಶ. ೧೧೭೦ರಲ್ಲಿ ವೀರನರಸಿಂಹ ಮರಣ ಹೊಂದಿದನೆಂದು ತಿಳಿಸುತ್ತದೆ.

ಎರಡನೇ ವೀರಬಲ್ಲಾಳ (ಕ್ರಿ.ಶ. ೧೧೭೩–೧೨೨೦)

ಒಂದನೇ ನರಸಿಂಹನ ಮಗನಾದ ಇವನು ತಂದೆಯನ್ನು ಸಿಂಹಾಸನದಿಂದ ಕೆಳಗೆ ಇಳಿಸಿ ತಾನೇ ಸಿಂಹಾಸನವನ್ನೇರಿದನು. ತನ್ನ ಅಜ್ಜನಾದ ವಿಷ್ಣುವರ್ಧನನ ಗುರಿಯಾಗಿದ್ದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ಎರಡನೇ ವೀರಬಲ್ಲಾಳ ಮಹಾಪರಾಕ್ರಮಿ ಅರಸನಾಗಿದ್ದನು. ಮಹಾರಾಜಾಧಿರಾಜ, ರಾಜಪರಮೇಶ್ವರ, ಸಮಸ್ತ ಭುವನಾಶ್ರಯ, ಶ್ರೀಪೃಥ್ವಿವಲ್ಲಭ, ಪರಮಭಟ್ಟಾರಕ, ದಕ್ಷಿಣಾಧೀಶ್ವರ, ಯಾದವ ಚಕ್ರವರ್ತಿ, ಯಾದವ ನಾರಾಯಣ, ವಿಕ್ರಮಗಂಗ, ಪ್ರತಾಪ ಚಕ್ರವರ್ತಿ ಮೊದಲಾದ ಬಿರುದುಗಳನ್ನು ಧರಿಸಿದನು.[೪೯] ಚನ್ನಗಿರಿ ತಾಲ್ಲೂಕಿನಲ್ಲಿ ಎರಡನೇ ವೀರಬಲ್ಲಾಳನಿಗೆ ಸಂಬಂಧಿಸಿದಂತೆ ಎರಡು ಶಾಸನಗಳು ದೊರೆತಿವೆ.

ಕ್ರಿ.ಶ. ೧೨೦೦ರ ಬಿಲ್ಲಹಳ್ಳಿಯ ಉತ್ತರದಲ್ಲಿರುವ ಕಲ್ಲೇಶ್ವರ ದೇವಾಲಯದಲ್ಲಿ ನೆಟ್ಟಿರುವ ೨ನೆಯ ವೀರಗಲ್ಲು ಶಾಸನವು ಹೊಯ್ಸಳರ ಎರಡನೇ ವೀರಬಲ್ಲಾಳನಿಗೆ ಸಂಬಂಧಿಸಿದೆ. ಕ್ರಿ.ಶ. ೧೧೮೦ರ ತಾವರೆಕೆರೆಯ ನಾಗಮಂಗಲ ಸಿದ್ಧಪ್ಪನ ಹೊಲದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನ ಹೊಯ್ಸಳರ ಎರಡನೇ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದೆ. ಈ ಶಾಸನದಲ್ಲಿ ಎರಡನೇ ವೀರಬಲ್ಲಾಳನು ವಿಜಯವನ್ನು ಸಾಧಿಸಿ ರಾಜಧಾನಿಯನ್ನು ಕ್ಷೇಮ ಮತ್ತು ಸುಖಕರವಾಗಿ ಆಳ್ವಿಕೆ ಮಾಡುವಂತಹ

ಸಂದರ್ಭದಲ್ಲಿ ಆಸಂದಿಯ ಗಂಗರಾಜನು ಇವನ ಸಾಮಂತ ಅಡಿದಾವರೆಯಲ್ಲಿ ರಾಜ್ಯ ವಿಸ್ತರಣೆಯ ಕಾರ್ಯಾಚರಣೆಯನ್ನು ಕೈಗೊಂಡ ವಿಷಯ ತಿಳಿಸಿದೆ. ಕ್ರಿ.ಶ. ೧೨೨೦ರ ಕಾರಿಗನೂರು ಕಲ್ಲೇಶ್ವರ ದೇವಾಲಯದ ಒಳಗೆ ನೆಟ್ಟಿರುವ ಶಾಸನವು ಹೊಯ್ಸಳರ ಎರಡನೇ ವೀರಬಲ್ಲಾಳನಿಗೆ ಕಾಲದ್ದಾಗಿದ್ದು, ಇದು ದಾನಶಾಸನವಾಗಿದೆ.[೫೦]

ಎರಡನೇ ವೀರನರಸಿಂಹ (ಕ್ರಿ.ಶ. ೧೨೨೦-೧೨೩೩)

ಎರಡನೇ ನರಸಿಂಹನು ಎರಡನೇ ವೀರಬಲ್ಲಾಳನ ಮಗ. ತನ್ನ ೨೨ನೇ ವಯಸ್ಸಿನಲ್ಲಿ ಸಿಂಹಾಸನವೇರಿದನು. ಇವನ ಕಾಲದಲ್ಲಿ ತಮಿಳುನಾಡಿನ ಚೋಳ ಸಾಮ್ರಾಜ್ಯವನ್ನು ಉಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನು ಚೋಳಮಂಡಲಪ್ರತಿಷ್ಠಾಚಾರ್ಯ ಬಿರುದನ್ನು ಧರಿಸಿದ್ದನು.[೫೧] ಕ್ರಿ.ಶ. ೧೨೨೫ರ ಕಾಶಿಪುರದ ಗ್ರಾಮಕ್ಕೆ ಪಶ್ಚಿಮಕಲ್ಲು ಬುರುಜಿನ ಬಳಿ ಬಿದ್ದಿರುವ ವೀರಗಲ್ಲು ಶಾಸನವು ಹೊಯ್ಸಳರ ಎರಡನೇ ನರಸಿಂಹನ ಕಾಲದ್ದಾಗಿದ್ದು ತುರುಗೋಳ್ ಶಾಸನವಾಗಿದೆ.[೫೨] ಕ್ರಿ.ಶ. ೧೨೨೯ರ ದೊಂದ್ರಘಟ್ಟದ ಮಲ್ಲೇಶ್ವರ ದೇವಾಲಯದ ಪೂರ್ವ ದಿಕ್ಕಿನಲ್ಲಿ ಹಳ್ಳದ ಸಮೀಪವಿರುವ ಶಾಸನೋಕ್ತ ವೀರಗಲ್ಲು ಹೊಯ್ಸಳರ ವೀರನರಸಿಂಹದೇವನ ಕಾಲದ ತುರುಗೋಳ್ ಶಾಸನವಾಗಿದೆ.[೫೩] ಕ್ರಿ.ಶ. ೧೨೩೩ರ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದೊಳಗೆ ಗೋಡೆಯ ಮಗ್ಗಲಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ವೀರನರಸಿಂಹದೇವನ ಕಾಲದ ದಾನಶಾಸನವಾಗಿದೆ.[೫೪] ಎರಡನೇ ವೀರನರಸಿಂಹನ ಕಾಲಕ್ಕೆ ಸೇರಿದ ತುರುಗೋಳ್ ಶಾಸನ ಒಂದು ದಾನಶಾಸನವು ಕ್ರಮವಾಗಿ ಕಾಶಿಪುರ, ದೊಂದ್ರಘಟ್ಟ, ನಲ್ಕುದರೆಗಳಲ್ಲಿ ಒಟ್ಟು ಮೂರು ಶಾಸನಗಳು ದೊರೆತಿವೆ.

ಆಸಂದಿ ಗಂಗರು

ಚೋಳರ ಒಂದನೆ ರಾಜರಾಜನು ಗಂಗರ ಅರಸ ರಕ್ಕಸಗಂಗನನ್ನು ಕ್ರಿ.ಶ. ೧೦೨೪ರಲ್ಲಿ ಸೋಲಿಸಿ, ಗಂಗರನ್ನು ತಲಕಾಡಿನಿಂದ ಹೊರಹಾಕಿದನು. ಅನಂತರದಲ್ಲಿ ತಾವು ಗಂಗವಂಶದವರೆಂದು ಹೇಳಿಕೊಳ್ಳುವ ಅನೇಕ ಸಣ್ಣಮನೆತನಗಳು ಸಾಮಂತರಾಗಿ ವಿವಿಧ ಪ್ರಾಂತ್ಯಗಳಲ್ಲಿ ಆಳ್ವಿಕೆಯನ್ನು ನಡೆಸಿದರು. ಹೀಗೆ ಆಳ್ವಿಕೆ ನಡೆಸಿದ ಮನೆತನಗಳಲ್ಲಿ ಆಸಂದಿಯಲ್ಲಿ ಹೊಯ್ಸಳರ ಮಾಂಡಲೀಕರಾಗಿ ಅಸ್ಥಿತ್ವಕ್ಕೆ ಬಂದ ಗಂಗರಸರು ಸುಮಾರು ೨ ಶತಮಾನಗಳ ಕಾಲ ಹೊಯ್ಸಳರ ಮಾಂಡಲಿಕರಾಗಿ ಆಳ್ವಿಕೆಯನ್ನು ನಡೆಸುತ್ತಾರೆ.[೫೫]

ಪ್ರಸ್ತುತ ಆಸಂದಿ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಇದು ಕಡೂರಿಗೆ ಈಶಾನ್ಯ ದಿಕ್ಕಿನಿಂದ ೨೦ ಕಿ.ಮೀ. ದೂರದಲ್ಲಿದೆ. ಅಜ್ಜಂಪುರ-ಹೊಸದುರ್ಗ ರಸ್ತೆಯಲ್ಲಿರುವ ಬೇಗೂರು ಗ್ರಾಮದಿಂದ ೨ ಮೈಲು ದೂರದಲ್ಲಿದೆ. ಮಲೆನಾಡು ಮತ್ತು ಬಯಲು ಸೀಮೆಯ ಮಧ್ಯೆ ಹರಡಿರುವ ಅರೆ ಮಲೆನಾಡಿನ ಭೂಲಕ್ಷಣ ಮತ್ತು ಪ್ರಾಕೃತಿಕ ಹಿನ್ನೆಲೆಯನ್ನು ಹೊಂದಿರುವ ಆಸಂದಿ, ಪ್ರಸ್ತುತ ಸೀಗೆ ಮತ್ತು ಜಾಲಿಯ ಕುರುಚಲು ಕಾಡಿನಿಂದ ಆವೃತ್ತವಾಗಿದೆ.

ಆಸಂದಿಯನ್ನು ಕೇಂದ್ರವಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಮೊದಲನೇ ವೈಜರಸ, ನಾಡರಸ, ಎರಡನೇ ವೈಜರಸ, ನರಸಿಂಹರು ಪ್ರಮುಖ ಅರಸರಾಗಿದ್ದಾರೆ. ಆಸಂದಿಗಂಗರು ಕ್ರಿ.ಶ. ೧೨೦೫ರವರೆಗೆ ಆಳ್ವಿಕೆಯನ್ನು ಮಾಡಿದರು. ಚನ್ನಗಿರಿ ತಾಲ್ಲೂಕಿನಲ್ಲಿ ಹೊಯ್ಸಳರ ಸಾಮಂತರಾಗಿ ಆಳ್ವಿಕೆ ನಡೆಸಿದ ಆಸಂದಿಗಂಗರ ಮೂರು ಶಾಸನಗಳು ದೊರಕಿವೆ.[೫೬]

ಕ್ರಿ.ಶ. ೧೨೧೪ರ ಅಲಕನಾಳು ಗ್ರಾಮದ ದಕ್ಷಿಣದಿಕ್ಕಿನಲ್ಲಿರುವ ಜಲ್ಲೇಶ್ವರದೇವಾಲಯದ ರಂಗಮಂಟಪದ ಆಗ್ನೇಯ ಮೂಲೆಯಲ್ಲಿರುವ ಶಾಸನವು ಹೊಯ್ಸಳರ ೨ನೇ ವೀರಬಲ್ಲಾಳನ ಸಾಮಂತರಾದ ಆಸಂದಿಗಂಗರ ನರಸಿಂಹ ಅರಸನಿಗೆ ಸಂಬಂಧಿಸಿದ್ದುದು ತಿಳಿಸುತ್ತದೆ. ಈ ಶಾಸನದಲ್ಲಿ ನರಸಿಂಹಅರಸನ ಸಾಮಂತನಾದ ಮೂಡಿಗೆರೆ ನಾಡಪ್ರಭುವಿನ ವಂಶಾವಳಿ ಅವನು ಕೆರೆಗಳನ್ನು ಕಟ್ಟಿಸಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿದ ಬಗ್ಗೆ ಈ ಶಾಸನವು ದಾಖಲಿಸಿದೆ.[೫೭]

ಕ್ರಿ.ಶ. ೧೨೨೧ರ ಕಲ್ಕೆರೆಗ್ರಾಮದ ಜಲ್ಲೇಶ್ವರ ದೇವಾಲಯದ ಮುಖಮಂಟಪದ ಆವರಣದಲ್ಲಿರುವ ಶಾಸನವು ಎರಡನೇ ವೀರನರಸಿಂಹನ ಕಾಲದ ಆಸಂದಿಗಂಗರಿಗೆ ಸಂಬಂಧಿಸಿದೆ. ಈ ಶಾಸನವು ಚನ್ನಗಿರಿಯಲ್ಲಿ ಲಭ್ಯವಾದ ಶಾಸನಗಳಲ್ಲಿ ಅತ್ಯಂತ ದೊಡ್ಡ ಶಾಸನವಾಗಿದೆ. ಈ ಶಾಸನದಲ್ಲಿ ಸಮಸ್ತ ಗೌಡರು ಜಲ್ಲೇಶ್ವರ ದೇವಾಲಯಕ್ಕೆ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ.[೫೮]

ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯವನ್ನು ತುಂಗಭದ್ರ ನದಿಯ ತೀರದಲ್ಲಿ ಹಂಪಿಯಲ್ಲಿ ವಿದ್ಯಾರಣ್ಯರ ನೇತೃತ್ವದಲ್ಲಿ ಹರಿಹರ, ಬುಕ್ಕಾರಾಯ, ಕಂಪಣ, ಮುದ್ದಣ, ಮಾರಪ್ಪನಾಯಕ ಈ ಐದು ಜನರು ಸಂಗಮ ಸಹೋದರರು ಸ್ಥಾಪಿಸಿದರು. ಸಂಗಮ, ಸಾಳುವ, ತುಳುವ, ಅರವೀಡು ವಂಶಗಳು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದು, ಈ ಸಂತತಿಯಲ್ಲಿ ತುಳುವ ನರಸನಾಯಕನ ಮಗನೇ ಶ್ರೀಕೃಷ್ಣದೇವರಾಯ. ಇವನು ವಿಜಯನಗರದ ಪ್ರಸಿದ್ಧ ದೊರೆ. ವಿಜಯನಗರದ ಸಾಮ್ರಾಜ್ಯಕ್ಕೆ ಸೇರಿದ ಐದು ಶಾಸನಗಳು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿವೆ.[೫೯]

ಎರಡನೇ ಹರಿಹರ (ಕ್ರಿ.ಶ. ೧೩೭೭–೧೪೦೪)

ಒಂದನೇ ಬುಕ್ಕನು ೧೩೭೭ರಲ್ಲಿ ಮರಣ ಹೊಂದಿದ ನಂತರ ಅವನ ಮಗ ಎರಡನೇ ಹರಿಹರನು ಅಧಿಕಾರಕ್ಕೆ ಬಂದನು. ೨೭ ವರ್ಷಗಳ ಕಾಲ ಆಳ್ವಿಕೆ ಮಾಡಿದ ಹರಿಹರ ಮೊದಲ ಬಾರಿಗೆ 'ಮಹಾರಾಜಾಧಿರಾಜ' ಬಿರುದನ್ನು ಧರಿಸಿದ. ಇವನಿಗೆ 'ವೇದಮಾರ್ಗ ಸ್ಥಾಪನಾಚಾರ್ಯ' ಎಂಬ ಮತ್ತೊಂದು ಬಿರುದಿತ್ತು.[೬೦]

ಇವನ ಕಾಲಕ್ಕೆ ಸೇರಿದ ಎರಡು ಶಾಸನಗಳು ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿವೆ. ಕ್ರಿ.ಶ. ೧೩೯೪ರ ತ್ಯಾವಣಗಿ ಗ್ರಾಮದ ನಾಡಿಗ ಗುರುರಾಯರ ವಶದಲ್ಲಿದ್ದ ತಾಮ್ರಶಾಸನವು ವಿಜಯನಗರದ ೨ನೇ ಹರಿಹರನ ಕಾಲಕ್ಕೆ ಸೇರಿದ ದಾನಶಾಸನವಾಗಿದೆ. ಈ ಶಾಸನದಲ್ಲಿ ವಿಜಯನಗರದ ಸ್ಥಾಪಕರ

ತಂದೆಯಾದ ಸಂಗಮದೇವನನ್ನು ವಾಸುದೇವನಿಗೆ ಹೋಲಿಸಲಾಗಿದೆ. ಹಾಗೆಯೇ ಸಂಗಮದೇವನ ಪತ್ನಿ 'ಗೌರಂಬಿಕೆ' ಎಂದು ದಾಖಲಿಸಿದೆ. ವಿಜಯನಗರ ಸಮ್ರಾಜ್ಯದ ಸ್ಥಾಪಕರಾದ ಹರಿಹರ, ಕಂಪಣ, ಬುಕರಾಯ, ಮಾರಪ್ಪ, ಮುದ್ದಣ್ಣನನ್ನು ಉಲ್ಲೇಖಿಸಿದೆ.[೬೧]

ಕ್ರಿ.ಶ. ೧೪೦೪ರ ನೀತಿಗೆರೆ ಗ್ರಾಮದ ವೀರಭದ್ರ ದೇವಾಲಯದ ನವರಂಗದ ಭಿತ್ತಿಯ ಮೇಲಿರುವ ಶಾಸನವು ವಿಜಯನಗರದ ೨ನೇ ಹರಿಹರನ ಕಾಲಕ್ಕೆ ಸೇರಿದ್ದಾಗಿದ್ದು, ವಿಜಯನಗರದ ಸಾಮಂತರದ ದುಮ್ಮಿಸಾವಿರನಾಡಿನ ಪಾಳೇಗಾರರ ಕಾಲಕ್ಕೆ ಸೇರಿದ ದಾನಶಾಸನವಾಗಿದೆ.[೬೨]

ಎರಡನೇ ದೇವರಾಯ (ಕ್ರಿ.ಶ. ೧೪೨೪–೧೪೪೬)

ಸಂಗಮವಂಶದ ಅತ್ಯಂತ ಪ್ರಬಲವಾದ ದೊರೆ ಎರಡನೇ ದೇವರಾಯ. ಇವನನ್ನು ಪ್ರೌಢದೇವರಾಯ ಹೆಸರಿನಿಂದಲೂ ಕರೆಯಲಾಗಿದೆ. ಇವನ ಕಾಲಕ್ಕೆ ಸೇರಿದ ಒಂದು ಶಾಸನವು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿದೆ. ಕ್ರಿ.ಶ. ೧೪೩೨ರ ಕಲ್ಕೆರೆಗ್ರಾಮದ ಆಂಜನೇಯ ದೇವಾಲಯದ ಹಿಂಭಾಗದಲ್ಲಿ ನಿಲ್ಲಿಸಲ್ಪಟ್ಟಿರುವ ಈ ಶಾಸನವು ವಿಜಯನಗರದ ಅರಸನಾದ ಎರಡನೇ ದೇವರಾಯನ ಕಾಲದ್ದಾಗಿದೆ. ಈ ಶಾಸನದಲ್ಲಿ ಬುಕ್ಕಾರಾಯನ ಕುಮಾರ ಶ್ರೀವೀರಪ್ರತಾಪದೇವರ ಹೆಗಡೆ ಓಬಳನಾಯಕ ದೇವಾಲಯವನ್ನು ಸ್ಥಾಪಿಸಿ, ದಾನವನ್ನು ನೀಡಿದ್ದನ್ನು ದಾಖಲಿಸಿದೆ.[೬೩]

ಅಚ್ಯುತರಾಯ (ಕ್ರಿ.ಶ. ೧೫೨೯–೧೫೪೨)

ಕೃಷ್ಣದೇವರಾಯನ ಮಲಸಹೋದರ ಅಚ್ಯುತರಾಯ. ಈತ ಕ್ರಿ.ಶ. ೧೫೨೯ರಲ್ಲಿ ಸಿಂಹಾಸನ್ನೇರಿದನಾದರೂ ದಾಯಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಕ್ರಿ.ಶ. ೧೫೩೯ರ ಸೂಳೆಕೆರೆ ಸಿದ್ಧೇಶ್ವರ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ವಿಜಯನಗರದ ಅರಸರ ಅಚ್ಯುತರಾಯನ ಕಾಲಕ್ಕೆ ಸೇರಿದೆ. ಅವರ ಸಾಮಂತರಾದ ಸಂತೆಬೆನ್ನೂರಿನ ಪಾಳೇಗಾರರ ಕಾಲದ್ದಾಗಿದೆ.[೬೪]

ಸದಾಶಿವರಾಯ (ಕ್ರಿ.ಶ. ೧೫೪೨–೧೫೭೦)

ಸದಾಶಿವರಾಯನು ಅಚ್ಯುತರಾಯನ ಸಹೋದರನಾದ ರಂಗನ ಮಗನಾಗಿದ್ದಾನೆ. ಅವನನ್ನು ಅರಸನ್ನಾಗಿ ಮಾಡಿದರೂ. ಅಪ್ರಾಪ್ತನಾಗಿದ್ದರಿಂದ ಸದಾಶಿವರಾಯನನ್ನು ಕೈಗೊಂಬೆಯನ್ನಾಗಿ ಮಾಡಿಕೊಂಡು ಅವನ ಹೆಸರಿನಲ್ಲಿ ತಾನೇ ಸರ್ವಾಧಿಕಾರಿಯಾದನು. ಪ್ರಾಪ್ತವಯಸ್ಕನಾದ ನಂತರ ಕ್ರಿ.ಶ ೧೫೫೦ರಲ್ಲಿ ತಾನೇ ಅಧಿಕಾರ ವಹಿಸಿಕೊಂಡನು. ಆದರೆ ಅವನನ್ನು ಅಳಿಯ ರಾಮರಾಯನು ಸೆರೆಯಲ್ಲಿಟ್ಟು ಆಳ್ವಿಕೆ ಮಾಡಿದನು. ಇವನ ಕಾಲಕ್ಕೆ ಸೇರಿದ ಒಂದು ಶಾಸನವು ಚನ್ನಗಿರಿ ತಾಲ್ಲೂಕಿನಲ್ಲಿ ದೊರೆತಿದೆ.[೬೫]

ಕ್ರಿ.ಶ. ೧೫೪೫ರ ತಾವರೆಕೆರೆಯ ನೀಲಕಂಠೇಶ್ವರ ದೇವಾಲಯದ ಸ್ತಂಭದಲ್ಲಿರುವ ಶಾಸನವು ಸದಾಶಿವರಾಯನ ಕಾಲಕ್ಕೆ ಸೇರಿದ್ದು ಅವರ ಸಾಮಂತರ ಅಧೀನ ಪಾಳೇಗಾರರಿಗೆ ಸಂಬಂಧಿಸಿದ್ದಾಗಿದ್ದು ದೇವಾಲಯದ ನಿರ್ಮಾಣದ ಬಗ್ಗೆ ವಿವರಿಸಿದೆ.[೬೬]

ಚಿತ್ರದುರ್ಗದ ಪಾಳೇಗಾರರು

ವಿಜಯನಗರದ ಅಮರನಾಯಕರಲ್ಲಿ ಒಬ್ಬರಾಗಿದ್ದ ಚಿತ್ರದುರ್ಗದ ಪಾಳೇಗಾರರು ಈ ವಂಶದ ಸ್ಥಾಪಕ ಮತ್ತಿ ತಿಮ್ಮಣ್ಣನಾಯಕ. ಇವರು ವಾಲ್ಮೀಕಿ ಗೋತ್ರದವರಾಗಿದ್ದು, ಕಾಮಗೇತಿ ವಂಶಸ್ಥರು ನಾಯಕ ಸಮುದಾಯಕ್ಕೆ ಸೇರಿದವರಾಗಿದ್ದು, ಮಹಾನಾಯಕ ಆಚಾರ್ಯರೆಂದು ಕರೆಯಲ್ಪಡುತ್ತಾರೆ. ಇವರ ಲಾಂಛನ ಗರುಡ ಆಂಜನೇಯ. ಐದನೇ ಮದಕರಿ ನಾಯಕ ಚಿತ್ರದುರ್ಗದ ಪಾಳೇಗಾರರ ಪ್ರಸಿದ್ಧ ಅರಸನಾಗಿದ್ದಾನೆ.[೬೭] ಇವರಿಗೆ ಸಂಬಂಧಿಸಿದಂತೆ ಚನ್ನಗಿರಿ ತಾಲ್ಲೂಕಿನಲ್ಲಿ ಎರಡು ಶಾಸನಗಳು ದೊರೆತಿವೆ.

ಕ್ರಿ.ಶ. ೧೬೭೫ರ ಚಿಕ್ಕಕೋಗಿಲೂರು ಹನುಮಂತ ದೇವಾಲಯದ ಆವರಣದಲ್ಲಿ ನಿಲ್ಲಿಸಿದ ಶಾಸನವು ಚಿತ್ರದುರ್ಗದ ಪಾಳೇಗಾರರ ಅರಸ ಕರಿಯಪ್ಪನವರ ಮಗ ಮದಕರಿ ನಾಯಕನ ಕಾಲಕ್ಕೆ ಸೇರಿದೆ. ದೇವಾಲಯಕ್ಕೆ ದಾನವನ್ನು ನೀಡಿದ ಬಗ್ಗೆ ಇದು ದಾಖಲಿಸುತ್ತದೆ.[೬೮] ಕ್ರಿ.ಶ. ೧೬೮೯ರ ಮರಡಿ ಗ್ರಾಮದ ಗುಡ್ಡದಲ್ಲಿ ಮಲ್ಲೇಶ್ವರ ದೇವಾಲಯದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ಮೆದಿಕೆರೆ ನಾಯಕನ ಮಗನಾದ ಬೊಮ್ಮನಾಯಕನ ಕಾಲಕ್ಕೆ ಸೇರಿದ ದಾನಶಾಸನವಾಗಿದ್ದು ಶಿವ ದೇವಾಲಯಕ್ಕೆ ದಾನ ನೀಡಿದ್ದನ್ನು ವಿವರಿಸಿದೆ.[೬೯]

ಸಂತೆಬೆನ್ನೂರಿನ ನಾಯಕರು

ಇವರು ವಿಜಯನಗರದ ಅರಸರ ಸಾಮಂತರಾಗಿ, ಆಳ್ವಿಕೆ ಮಾಡಿದ ಬಸವಪಟ್ಟಣದ ಪಾಳೆಗಾರರಾಗಿದ್ದರು. ನಂತರ ಸಂತೆಬೆನ್ನೂರಿನಲ್ಲಿ ನೆಲೆಸಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿ ಸಂತೆಬೆನ್ನೂರಿನ ನಾಯಕ(ಸಂತೆಬೆನ್ನೂರಿನ ಪಾಳೆಗಾರ)ರೆಂದು ಪ್ರಸಿದ್ಧಿಯಾಗಿದ್ದಾರೆ. ಅನಂತರ ಸಂತೆಬೆನ್ನೂರಿನಿಂದ ತರೀಕೆರೆಗೆ ಬಂದು ನೆಲೆಸಿದರು. ಇವರನ್ನೇ ತರೀಕೆರೆಯ ಪಾಳೇಗಾರರು ಎಂದು ಕರೆಯುವರು. ತರೀಕೆರೆಯ ಪಾಳೆಗಾರರಾದ ಸರ್ಜಾ ಹನುಮಪ್ಪನಾಯಕನು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಸಾವನ್ನಪ್ಪುತ್ತಾನೆ.[೭೦] ಸಂತೆಬೆನ್ನೂರಿನಲ್ಲಿ ವಿಜಯನಗರದ ಸಾಮಂತರಾಗಿ ಆಳ್ವಿಕೆ ಮಾಡಿದ ಪಾಳೇಗಾರರಾದ ಸಂತೆಬೆನ್ನೂರಿನ ನಾಯಕರು ೧೬ ರಿಂದ ೧೮ನೇ ಶತಮಾನದವರೆಗೆ ಈ ಭಾಗದಲ್ಲಿ ಆಳ್ವಿಕೆ ಮಾಡಿದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿ ಸಂತೆಬೆನ್ನೂರು ನಾಯಕರ ಹತ್ತು ಶಾಸನಗಳು ದೊರಕಿವೆ.

ಪಿಲಪ್ಪನಾಯಕ (ಕ್ರಿ.ಶ. ೧೫೫೦–೧೫೬೫)

ಕ್ರಿ.ಶ. ೧೫೬೨ ರ ಚಿಕ್ಕಗಂಗೂರಿನ ಈಶ್ವರ ದೇವಾಲಯದ ಹಿಂದೆ ಸಿರಿಯಪ್ಪನ ದೇವಾಲಯದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ಸಂತೆಬೆನ್ನೂರು ನಾಯಕರ ಪಿಲಪ್ಪನಾಯಕನಿಗೆ ಸಂಬಂಧಿಸಿದ್ದು, ಚಿಕ್ಕಗಂಗೂರಿನ ಗೌಡನ ಮಕ್ಕಳಿಗೆ 'ನೆತ್ತರ ಗೌಡಗಿಯನ್ನು' ನೀಡಿದ್ದನ್ನು ವಿಶ್ಲೇಷಿಸಿದೆ.[೭೧]

ಕೆಂಗಪ್ಪನಾಯಕ (ಕ್ರಿ.ಶ. ೧೫೬೫–೧೫೬೭)

ಪಿಲಪ್ಪ ನಾಯಕನ ಸಹೋದರನಾದ ಕೆಂಗಪ್ಪನಾಯಕನು ಅರಸನ ಜೊತೆಯಲ್ಲಿಯೇ ಆಳ್ವಿಕೆ ನಡೆಸಿದನು. ಕ್ರಿ.ಶ. ೧೫೬೫ರ ಚನ್ನಗಿರಿಯ ನಾಡಿಗ ಘಟ್ಟಪ್ಪನ ಮಗ ಬಾಳಬಸ್ಯೆಯ್ಯನ ವಶದಲ್ಲಿರುವ ತಾಮ್ರ ಶಾಸನವು ಸಂತೆಬೆನ್ನೂರು ನಾಯಕರ ಕೆಂಗಪ್ಪನಾಯಕನಿಗೆ ಸಂಬಂಧಿಸಿದ ದಾನಶಾಸನವಾಗಿದ್ದು[೨೨] ಅಪ್ಪಣ್ಣಭಟ್ಟರ ಕಿರಿಯ ಸಹೋದರನಿಗೆ ಕಂದಾಯ ಸಂಗ್ರಹಿಸಿ ಕೊಡುವ ಅಧಿಕಾರ ನೀಡಿದ್ದನ್ನು ತಿಳಿಸಿದೆ. ಕ್ರಿ.ಶ. ೧೫೬೫ರ ಹೊದಿಗೆರೆ ಗ್ರಾಮದ ದಕ್ಷಿಣದ ಪುಟ್ಟಬಸಪ್ಪನ ಹೊಲದಲ್ಲಿರುವ ಶಾಸನವು ಕೆಂಗಪ್ಪನಾಯಕನ ಕಾಲಕ್ಕೆ ಸಂಬಂಧಿಸಿದ್ದು, ಶಾಸನದಲ್ಲಿ ದುಮ್ಮಿ ಸಾವಿರದ ಭೂಮಿ 'ವಿರಕ್ತಮಠಕ್ಕೆ' ಸೇರಿದ್ದೆಂದು ಉಲ್ಲೇಖಿಸಿದೆ.[೨೩] ಕ್ರಿ.ಶ. ೧೫೬೫ರ ಗೋಪೆನಹಳ್ಳಿಯ ಆಂಜನೇಯ ದೇವಾಲಯದ ಪ್ರಕಾರದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ಸಂತೆಬೆನ್ನೂರಿನ ನಾಯಕರ ಕೆಂಗಪ್ಪನಾಯಕನಿಗೆ ಸಂಬಂಧಿಸಿದ ದಾನಶಾಸನವಾಗಿದ್ದು, ದೊಂಬರ ಕೆಂಗಪ್ಪನು ಗ್ರಾಮವನ್ನು ದಾನವನ್ನು ಪಡೆದ ಬಗ್ಗೆ ವಿವರಿಸಿದೆ.[೨೪]

ಮುಮ್ಮಡಿ ಹನುಮಪ್ಪನಾಯಕ (ಕ್ರಿ.ಶ. ೧೫೬೯–೧೫೭೦)

ಕ್ರಿ.ಶ. ೧೬೦೧ರ ಹೊಸಹಳ್ಳಿಯ ಈಶ್ವರ ದೇವಾಲಯದ ಸಮೀಪ ನಿರ್ಮಿಸಲ್ಪಟ್ಟಿರುವ ಈ ಶಾಸನವು ಸಂತೆಬೆನ್ನೂರಿನ ನಾಯಕರ ಮುಮ್ಮಡಿ ಹನುಮಪ್ಪನಾಯಕರಿಗೆ ಸಂಬಂಧಿಸಿದ ದಾನಶಾಸನವಾಗಿದೆ.[೨೫] ಕ್ರಿ.ಶ. ೧೬೧೦ರ ಹಿರೇಕೋಗಿಲೂರು ಕಲ್ಲೇಶ್ವರ ದೇವಾಲಯದ ಮಠದ ಮರುಳಯ್ಯನ ಮನೆಯ ಸಮೀಪದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನವು ಹನುಮಪ್ಪನಾಯಕರಿಗೆ ಸೇರಿದೆ. ಇದೊಂದು ದಾನಶಾಸನವಾಗಿದೆ.[೨೬] ಕ್ರಿ.ಶ. ೧೬೧೫ರ ಹಿರೇಮಾಡಳು ಮಲ್ಲೇಶ್ವರ ದೇವಾಲಯದ ಉತ್ತರದ ಕಡೆ ಸಿಕ್ಕಿರುವ ಒಂದನೇ ಶಾಸನವು ಸಂತೆಬೆನ್ನೂರಿನ ಮುಮ್ಮಡಿ ಹನುಮಪ್ಪ ನಾಯಕನಿಗೆ ಸೇರಿದೆ.[೨೭] ಕ್ರಿ.ಶ. ೧೬೦೬ರ ಹಿರೇಮಾಡಳು ಮಲ್ಲೇಶ್ವರ ದೇವಾಲಯದ ೨ನೇ ಶಾಸನವು ಸಂತೆಬೆನ್ನೂರಿನ ನಾಯಕರ ಮುಮ್ಮಡಿ ಹನುಮಪ್ಪನಾಯಕರ ಕಾಲಕ್ಕೆ ಸೇರಿದ್ದು, ಮರಾಠಿ ಭಾಷೆಯಲ್ಲಿರುವ ಈ ಶಾಸನವು ಭೂಮಿ, ಗೋವು, ಬಂಗಾರವನ್ನು ದಾನ ನೀಡಿದ್ದನ್ನು ಉಲ್ಲೇಖಿಸಿದೆ.[೨೮] ಕ್ರಿ.ಶ. ೧೬೨೫ರ ಮಂಟರಗಟ್ಟದ ಊರ ಬಾಗಿಲ ಬಳಿ ನಿಲ್ಲಿಸಲ್ಪಟ್ಟ ಶಾಸನವು ಮುಮ್ಮಡಿ ಹನುಮಪ್ಪನಾಯಕನ ಕಾಲಕ್ಕೆ ಸೇರಿದ್ದು, ಅಗ್ರಹಾರವನ್ನು ಬ್ರಾಹ್ಮಣರಿಗೆ ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೨೯]

ಸೀತಾರಾಮಪ್ಪನಾಯಕ (ಕ್ರಿ.ಶ. ೧೬೪೮–೧೬೭೯)

ಕ್ರಿ.ಶ. ೧೫೭೭ರ ಲಕ್ಷ್ಮೀಸಾಗರ ಗ್ರಾಮದ ಹನುಮಂತ ದೇವಾಲಯದ ಬಳಿ ನೆಟ್ಟ ಒಂದನೇ ಶಾಸನವು, ಸಂತೆಬೆನ್ನೂರಿನ ನಾಯಕರ ಸೀತರಾಮಪ್ಪನಾಯಕನ ಕಾಲಕ್ಕೆ ಸೇರಿದ, ದಾನಶಾಸನವಾಗಿದೆ.[೩೦] ಕ್ರಿ.ಶ. ೧೪ನೇ ಶತಮಾನದ ಸಂತೆಬೆನ್ನೂರಿನ ಗ್ರಾಮದ ಉಪ್ಪಾರದುರ್ಗಪ್ಪನ ತೋಟದಲ್ಲಿರುವ ಶಾಸನೋಕ್ತ ವೀರಗಲ್ಲು ವಿಜಯನಗರದ ಸಾಮಂತರಾದ ಸಂತೆಬೆನ್ನೂರಿನ ನಾಯಕರ ಕಾಲಕ್ಕೆ ಸೇರಿದೆ. ಕಣಶಿಲೆಯನ್ನು ಬಳಸಿದ್ದು, ಈ ಶಾಸನೋಕ್ತ ವೀರಗಲ್ಲನ್ನು ಬೆನ್ನೂರಿನ

ಮಲ್ಲಿಗೌಡನ ಮಗ ಸುಬ್ಬಪ್ಪ ಮಾಡಿಸುತ್ತಾನೆ. ಈ ಶಾಸನೋಕ್ತ ವೀರಗಲ್ಲು 'ಬೆನ್ನೂರು' ಹೆಸರನ್ನು ಉಲ್ಲೇಖಿಸಿದೆ. ಅಂದಿನ ಬೆನ್ನೂರೇ ಇಂದಿನ ಸಂತೆಬೆನ್ನೂರು ಎಂದು ಶಾಸನದಲ್ಲಿ ಗುರುತಿಸಲಾಗಿದೆ.[೮೧]

೧೭ನೇ ಶತಮಾನದ ಮಂಗೇನಹಳ್ಳಿ ಗ್ರಾಮದ ಪೂರ್ವಹಳ್ಳದ ಪಕ್ಕದಲ್ಲಿ ದೊರೆತಿರುವ ಸಂತೆಬೆನ್ನೂರಿನ ನಾಯಕರ ಕಾಲಕ್ಕೆ ಸೇರಿದ ಶಾಸನದಲ್ಲಿ ಶಿವ ದೇವಾಲಯದ ಸೇವೆಗಾಗಿ ನರಿಗೌಡನಿಂದ ಈ ಭೂಮಿ ದೊರೆತಿದೆ ಎಂದು ಬರೆಯಲ್ಪಟ್ಟಿದೆ. ಇದರಲ್ಲಿ ರಾಜನ ರಾಜ ಸಂತತಿಯ ಯಾವುದೇ ಹೆಸರು ಇಲ್ಲದಿದ್ದರೂ ಲಿಪಿಯ ಆಧಾರದ ಮೇಲೆ ಸಂತೆಬೆನ್ನೂರು ನಾಯಕರಿಗೆ ಸೇರಿದ್ದೆಂದು ಗುರುತಿಸಬಹುದಾಗಿದೆ.[೮೨] ೧೮ನೇ ಶತಮಾನಕ್ಕೆ ಸೇರಿದ ಹಿರೇಕೋಗಲೂರಿನ ಕೋಟೆಸಿದ್ದಪ್ಪನ ಕಣದ ಬೇಲಿವತ್ತಿನಲ್ಲಿರುವ ಶಾಸನವು ಸಂತೆಬೆನ್ನೂರು ನಾಯಕರ ಕಾಲಕ್ಕೆ ಸೇರಿದ್ದಾಗಿದೆ. ಬಸವಲಿಂಗ ಮಠದ ಮುಖ್ಯಸ್ಥ ಬಕ್ಕೆಣ್ಣವೀರಯ್ಯನು ಐದು ಹಳ್ಳಿಗಳನ್ನು ದಂಡಿಗಾಗಿ ದಾನವನ್ನು ನೀಡುತ್ತಾನೆ ಎಂದು ಶಾಸನವು ಉಲ್ಲೇಖಿಸಿದೆ..[೮೩]

ಬಿಜಾಪುರದ ಆದಿಲ್ ಷಾಹಿಗಳು

ಮಹಮದ್ ಬಿನ್ ತೊಘಲಕ್‌ನು ದೆಹಲಿಯ ಸುಲ್ತಾನನಾಗಿದ್ದಾಗ ದಖ್ಖನಿನಲ್ಲಿ ಬಹುಮನಿ ರಾಜ್ಯವನ್ನು ಅಲ್ಲಾ-ಉದ್ದಿನ್-ಹಸನ್ ಬಹಮನ್-ಷಾನು ಕಲ್ಬುರ್ಗಿ (ಗುಲ್ಬರ್ಗಾ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹಮನಿ ರಾಜ್ಯವನ್ನು ೧೩೪೭ರಲ್ಲಿ ಸ್ಥಾಪಿಸಿದನು.[೮೪] ಬಹಮನಿ ರಾಜ್ಯವು ವಿಘಿತವಾಗಿ ೧೪೯೦ರ ನಂತರ ಐದು ಷಾಹಿ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಅದರಲ್ಲಿ ೧೪೮೯ರಲ್ಲಿ ಮಹಮದ್ ಬಂಟನಾಗಿದ್ದ ಯುಸೂಫ್ ಆದಿಲ್ ಖಾನನು ಸ್ವತಂತ್ರವನ್ನು ಘೋಷಿಸಿಕೊಂಡು ಆದಿಲ್‌ಷಾಹಿ ರಾಜ್ಯವನ್ನು ಸ್ಥಾಪಿಸಿದನು. ಆದಿಲ್ ಷಾಹಿ ಸುಲ್ತಾನರಲ್ಲಿ ಎರಡನೇ ಇಬ್ರಾಹಿಂದ ಆದಿಲ್ ಷಾ (ಕ್ರಿ.ಶ. ೧೫೮೦–೧೬೨೭) ಶ್ರೇಷ್ಠನಾದ ಅರಸ. ೧೬೮೬ರವರೆಗೆ ಆದಿಲ್ ಷಾಹಿಗಳು ಆಳ್ವಿಕೆ ಮಾಡಿದರು. ನಂತರ ಮೊಘಲರ ದಾಳಿಗೆ ತುತ್ತಾಗಿ ಮೊಘಲರ ಸಾಮ್ರಾಜ್ಯದಲ್ಲಿ ವಿಲೀನವಾಯಿತು. ಚನ್ನಗಿರಿ ತಾಲ್ಲೂಕಿನಲ್ಲಿ ಆದಿಲ್ ಷಾಹಿಗಳಿಗೆ ಸಂಬಂಧಿಸಿದ ಶಾಸನಗಳು ದೊರಕಿವೆ.[೮೫]

ಮಹಮದ್ ಆದಿಲ್ ಷಾ (ಕ್ರಿ.ಶ. ೧೬೨೭–೧೬೫೬)

ಇವನ ಆಳ್ವಿಕೆಯ ಕಾಲದಲ್ಲಿ ಮೊಘಲರು ಬಿಜಾಪುರದ ಮೇಲೆ ದಾಳಿಗಳನ್ನು ಮಾಡತೊಡಗಿದರು. ಇವನು ಮೊಘಲರ ವಿರುದ್ಧ ಸೋತರೂ, ಮಹಮದ್ ಆದಿಲ್ ಷಾಹನು ಬೇರೆಡೆ ತನ್ನ ರಾಜ್ಯವಿಸ್ತರಣೆ ಮಾಡಿದನು. ಇದಕ್ಕೆ ಕಾರಣ ಅವನ ಬಳಿ ರಣದುಲ್ಲಾಖಾನ್ ಮತ್ತು ಷಾಹಜಿಬೋಸ್ಲೆ ಎಂಬ ಇಬ್ಬರು ಸೇನಾಧಿಪತಿಗಳಿದ್ದರು. ಅವರ ಸಾಮ್ರಾಜ್ಯದ ನೇತೃತ್ವದಲ್ಲಿ ಅನೇಕ ಪ್ರದೇಶಗಳನ್ನು ಗೆದ್ದರು. ಚನ್ನಗಿರಿ ತಾಲ್ಲೂಕಿನ ಪ್ರದೇಶವು ಆ ಕಾಲಘಟ್ಟದಲ್ಲಿ ಅವರ ಸಾಮ್ರಾಜ್ಯದ ವ್ಯಾಪ್ತಿಗೆ ಸೇರಿದ್ದಿತು. ರಣದುಲ್ಲಾಖಾನನು ಈ ಪ್ರದೇಶವನ್ನು ಸಂತೆಬೆನ್ನೂರಿನ ನಾಯಕರನ್ನು

ಸೋಲಿಸಿ ಆಕ್ರಮಿಸಿಕೊಂಡಿದ್ದನು. ನಂತರ ಸಂತೆಬೆನ್ನೂರಿನ ನಾಯಕರು ರಣದುಲ್ಲಾಖಾನನ ಸಾವಿನ ನಂತರ ೧೬೪೩ರ ನಂತರ ಪುನಃ ವಶಪಡಿಸಿಕೊಂಡರು.[೮೬]

ಮಹಮದ್ ಆದಿಲ್ ಷಾಹನು ಬಿಜಾಪುರದ ಜಗತ್ ಪ್ರಸಿದ್ಧ ಗೋಲ್‌ಗುಂಬಜ್‌ನ್ನು[೮೭] ನಿರ್ಮಿಸಿದನು. ಇವನಿಗೆ ಸಂಬಂಧಿಸಿದ ಎರಡು ಶಾಸನಗಳು ಚನ್ನಗಿರಿಯ ಹೊಸಹಳ್ಳಿಯಲ್ಲಿ ದೊರಕಿವೆ. ಕ್ರಿ.ಶ. ೧೬೪೩ರ ಹೊಸಹಳ್ಳಿಯ ಬಡೇಸಾಬಿಕೆರೆಯ ಕಟ್ಟೆಯಲ್ಲಿನ ಒಂದನೇ ಶಾಸನವು ಬಿಜಾಪುರದ ಒಂದನೇ ಮಹಮದ್ ಆದಿಲ್‌ಷಾಹಿ ಸುಲ್ತಾನರ ಒಂದನೇಮಹಮದ್-ಆದಿಲ್‌ಷಾನ ಕಾಲಕ್ಕೆ ಸಂಬಂಧಿಸಿದ್ದಾಗಿತ್ತು. ಇದು ಪರ್ಷಿಯನ್ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ಇಸ್ಲಾಂಧರ್ಮಕ್ಕೆ ಸೇರಿದೆ. ತಾವರೆಕೆರೆಯನ್ನು ಕಟ್ಟಿಸಿ, ಅದರಿಂದ ಹಿಂದೂ-ಮುಸ್ಲಿಂ ಸೌಹಾರ್ದರಾಗಿ ಜೀವಿಸಲೆಂದು ಶಾಸನವು ತಿಳಿಸುತ್ತದೆ. ಕೆರೆಯನ್ನು ಕಟ್ಟಿದ ಕೀರ್ತಿ ಬಡೇಮಲಿಕ್‌ಗೆ ಸಲ್ಲುತ್ತದೆ ಎಂದೂ ಕಟ್ಟಲು ಸಹಕರಿಸಿದ ಎಲ್ಲಾ ನೌಕರರಿಗೆ ಶುಭಾಷಯಗಳನ್ನು ತಿಳಿಸಿರುವುದು ವಿಶೇಷವಾಗಿದೆ.[೮೮]

ಕ್ರಿ.ಶ. ೧೬೫೩ರ ಹೊಸಹಳ್ಳಿಯ ಬಡೇಸಾಬಿ ಕೆರೆಯ ಕಟ್ಟೆಯ ಮೇಲಿದ್ದ ೨ನೇ ಶಾಸನವು ಬಿಜಾಪುರದ ಸುಲ್ತಾನ ಒಂದನೇ ಮಹಮದ್ ಆದಿಲ್ ಷಾನ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದ ಆರಂಭದಲ್ಲಿ ಇಸ್ಲಾಂ ಪ್ರವರ್ತಕರಾದ ಅಲ್ ಮಹಮದ್ ಅಬೂಬಕರ್, ಉಮಾರ್, ಉಸ್ಮಾನ್, ಆಲಿಯನ್ನು ಸ್ತುತಿಸುತ್ತ ಪ್ರಾರಂಭವಾಗುತ್ತದೆ. ವಾಲಿಸುರರ್ (ಸ್ನೇಹಿತನ ಸಂತೋಷ) ಎಂಬ ಕೆರೆಯನ್ನು ಕಟ್ಟಿಸಿದ್ದರ ಬಗ್ಗೆ ಉಲ್ಲೇಖಿಸುತ್ತದೆ.[೮೯] ಕ್ರಿ.ಶ. ೧೭೫೮ರ ಉಡುವನಹಳ್ಳಿ ಗ್ರಾಮದ ಹನುಮಂತ ದೇವಾಲಯದ ಮುಂದೆ ಬೇವಿನಮರದ ಬುಡದಲ್ಲಿದ್ದ ಶಾಸನ 'ಕೊಲೆ' ಪ್ರದೇಶಕ್ಕೆ ಸಂಬಂಧಿಸಿದೆ. ಉಡುವಹಳ್ಳಿಯನ್ನು ಪಾಲಿಕೆ ಉಂಬಳಿಯನ್ನಾಗಿ ನೀಡಿದ ಬಗ್ಗೆ ಇದು ತಿಳಿಸುತ್ತದೆ.[೯೦]

೨.೩. ಆಡಳಿತ ವಿಭಾಗಗಳು

ಪ್ರಸ್ತುತ ಚನ್ನಗಿರಿ ತಾಲ್ಲೂಕಿನ ಶಾಸನಗಳಲ್ಲಿ ಕ್ರಿ.ಶ. ೧೦ನೇ ಶತಮಾನದಿಂದ ೧೮ನೇ ಶತಮಾನದವರೆಗೂ ಹಲವಾರು ಆಡಳಿತ ವಿಭಾಗಗಳನ್ನು ಉಲ್ಲೇಖಿತವಾಗಿವೆ. ಅವುಗಳೆಂದರೆ ಬಿಳಚಿ ಎಪ್ಪತ್ತು, ನಲ್ಲೂರು ಸೀಮೆ, ದುಮ್ಮಿಸೀಮೆ, ನೊಳಂಬವಾಡಿ ಮೂವತ್ತೆರಡು ಸಾವಿರ, ಬೆತೂರು, ಅಸಾಂದಿನಾಡು, ಮದಕರಿಸೀಮೆ, ಸಂತೆಬೆನ್ನೂರು, ಉತ್ಸಂಗಿವೆಂಟೆ ಸೀಮೆಗಳನ್ನು ಶಾಸನದ ಸಹಾಯದಿಂದ ಗುರುತಿಸಬಹುದಾಗಿದೆ.

ಬಿಳಚಿ ಎಪ್ಪತ್ತು

ಪ್ರಸ್ತುತ ಚಿಕ್ಕ ಗ್ರಾಮವಾಗಿರುವ ಬಿಳಚಿಯು ಕ್ರಿ.ಶ [೧೦೮೩-೧೨೬೮]ರವರೆಗೆ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಅದರ 'ಸುತ್ತಮುತ್ತಲಿನ ೭೦ ಹಳ್ಳಿಗಳನ್ನು ಅದರೊಂದಿಗೆ ವಿಲೀನಗೊಳಿಸಿದ್ದರು. ಹಾಗಾಗಿ ಬಿಳಚಿ ಎಪ್ಪತ್ತು ಪ್ರಮುಖ ಆಡಳಿತ ಕೇಂದ್ರವಾಗಿದ್ದಿತ್ತು.'

ಕ್ರಿ.ಶ.೧೦೫೦ರ ಕಗ್ಗತ್ತೂರಿನ ವೀರಭದ್ರ ದೇವಾಲಯದ ಮುಂದೆ ನೆಟ್ಟ ಸ್ತಂಭಶಾಸನದಲ್ಲಿ ಸಾವಿರ ನಾಡಿನ ಸಿಂಗಚತ್ತರಸ ಮತ್ತು ನಾಡಪ್ರಭು ಬಿಳಚಿ ಎಪ್ಪತ್ತರಿಂದ ದಾನ ನೀಡುತ್ತಾನೆ.[೯೧]

ಕ್ರಿ.ಶ. ೧೧೪೯ರ ಅಸ್ತಾಪನಹಳ್ಳಿ ಗ್ರಾಮದ ನೈರುತ್ಯದಲ್ಲಿ ಸೋಮೇಶ್ವರ ದೇವಾಲಯದ ಉತ್ತರಕ್ಕೆ ನಿಂತಿರುವ ಶಾಸನವು ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನ ಕಾಲಕ್ಕೆ ಸೇರಿದ್ದು ಈ ದಾನಶಾಸನದಲ್ಲಿ 'ಬಿಳಚಿ ಎಪ್ಪತ್ತರ ಮುಖ್ಯಸ್ಥನಾಗಿ ಸೂಸೂಲಗೆರೆಯಿಂದ (ಅಸ್ತಾಪನಹಳ್ಳಿ) ಆಳ್ವಿಕೆ ಮಾಡುತ್ತಿರುವ ಇಡುವರಸ ತನ್ನ ರಾಜ್ಯದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡಿದ್ದಾನೆ.[೬೨] ಕ್ರಿ.ಶ. ೧೧೨೫ರ ಕಲ್ಯಾಣ ಚಾಲುಕ್ಯರ ತ್ರಿಭುವನ ಮಲ್ಲದೇವನ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ತ್ರಿಭುವನಮಲ್ಲದೇವನ ಪಾದಪದ್ಮಗಳಲ್ಲಿ ನೆಲೆಸಿರುವ ಸಾಮಂತನಾದ ಪಲ್ಲವರಾಯನು 'ಬಿಳಚಿಎಪ್ಪತ್ತು' ಮತ್ತು ದುಮ್ಮಿ ಹನ್ನೆರಡುಗಳನ್ನು ಮೂರು ತಲೆಮಾರುಗಳಿಂದ ಸಂತೋಷವಾಗಿ ರಕ್ಷಿಸಿದ್ದಾನೆ ಎನ್ನಲಾಗಿದೆ. ಮತ್ತು 'ಮಹಾಸಾಮಂತ ಸೋಮರಸ' ಬಿಳಚಿಎಪ್ಪತ್ತರಲ್ಲಿನ ಮನ್ನೆಯ ರಕ್ಷಣೆಯ ಹಕ್ಕನ್ನು ಹೊಂದಿದ್ದಾನೆ.[೬೩] ಬಿಳಚಿ ಎಪ್ಪತ್ತರಲ್ಲಿ ಸಂತವಳ್ಳಿ ಮತ್ತು ನಲ್ಲೂರು ಊರ ಒಡೆಯ ಬಸವಳಿ, ಮನುಜವೊಳಲು ಹನ್ನೆರಡರಲ್ಲಿ ಮಲ್ಲಿಗೆ, ಹರಕಲಿ ಹನ್ನೆರಡರಲ್ಲಿ ಕುಂಕವದಳ್ಳಿ ಈ ಐದು ಪಟ್ಟಣಗಳ ಮಹಾಪ್ರಭು ಇರುಗಮಯ್ಯನಾಯಕನು ಆಳ್ವಿಕೆ ಮಾಡುತ್ತಾನೆ. ಬಿಳಚಿ ಎಪ್ಪತ್ತರಲ್ಲಿ ಸಂತವಳ್ಳಿ, ನಲ್ಲೂರು, ಬಸವಳಿ ಮಲ್ಲಿಗೆ, ಕುಂಕವದಳ್ಳಿ, ಮನುಜವೊಳಲು, ಹರಕಲಿ ಹನ್ನೆರಡು ಇವೆಲ್ಲ ಸೇರಿ ಬಿಳಚಿಎಪ್ಪತ್ತಾಗಿತ್ತು. ಇದನ್ನು ಇರುಗಮಯ್ಯ ನಾಯಕನು ಆಳ್ವಿಕೆ ಮಾಡುತ್ತಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ.[೬೪]

ನೊಳಂಬವಾಡಿ ಮೂವತ್ತೆರಡು ಸಾವಿರ

ಶಾಸನಗಳಲ್ಲಿ ನೊಳಂಬವಾಡಿ ಎಂದು ಕಾಣಿಸಿಕೊಂಡ ಈ ವಿಭಾಗವನ್ನು ಪಲ್ಲವ ವಂಶದ ನೊಳಂಬರು ಆಳ್ವಿಕೆ ಮಾಡುತ್ತಿದ್ದರು. ತಮಿಳಿನಲ್ಲಿ 'ನೊಳಂಬ ವಾಡಿ ಪದಕ್ಕೆ ದೊಡ್ಡಭಾಗ ಎಂಬ ಅರ್ಥವಿದೆ.[೬೫] ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಇದು ಸಾವಿರ ಹಳ್ಳಿಗಳ ಆಡಳಿತ ವಿಭಾಗವಾಗಿತ್ತು. ಚಿಕ್ಕಮಧುರೆ ಶಾಸನದಲ್ಲಿ 'ನೊಳಂಬಳ್ಳಿ ಸಾಸಿರಮೂ' ಎಂದು ಸ್ಪಷ್ಟವಾಗಿ ದಾಖಲಿಸಿದೆ. ಇದನ್ನು ಪಲ್ಲವಾದಿರಾಜನು ಆಳುತ್ತಿದ್ದನು. ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ವೇಳೆ ನೊಳಂಬವಾಡಿಯು ೩೨೦೦೦ ಹಳ್ಳಿಗಳಾಗಿ ಬೆಳೆಯಿತು, ಆಗ ಅದರ ರಾಜಧಾನಿ ಹೆಂಜೆರು ಆಗಿತ್ತು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೇಮಾವತಿಯ ಪ್ರಾಚೀನ ಹೆಸರು ಪೆಂಜೆರು ಆಗಿದೆ. ಹಾಗೆಯೇ ಕ್ರಿ.ಶ ೧೦೮೩ರಿಂದ ಕ್ರಿ.ಶ ೧೧೪೯ರವರಗೆ ಉಚ್ಚಂಗಿದುರ್ಗವು ನೊಳಂಬವಾಡಿಯ ರಾಜಧಾನಿಯಾಗಿತ್ತೆಂದು ಚನ್ನಗಿರಿ ತಾಲ್ಲೂಕಿನ ಕೆಲವು ಶಾಸನಗಳು ಮಾಹಿತಿಯನ್ನು ಒದಗಿಸಿವೆ.[೬೬]

ನೊಳಂಬವಾಡಿಯು ಉತ್ತರದಲ್ಲಿ ತುಂಗಭದ್ರಾ ನದಿಯನ್ನು ಬಳಸಿಕೊಂಡು (ಕರ್ನೂಲಿನಿಂದ) ದಕ್ಷಿಣದಲ್ಲಿ ಪಾಪಾಗ್ನಿ ವೇದಾವತಿ ನದಿಯವರೆಗಿನ ಭೂಪ್ರದೇಶವನ್ನು ಒಳಗೊಂಡಿತ್ತು. ಅಂದರೆ ಆಂಧ್ರಪ್ರದೇಶದ ಕರ್ನೂಲು, ಅನಂತಪುರ, ಕಡಪ ಜಿಲ್ಲೆಗಳು, ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಸಿರಾ ತಾಲೂಕು, ಚಿತ್ರದುರ್ಗ, ದಾವಣಗೆರೆ ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿತ್ತು.[೬೭]

ಕ್ರಿ.ಶ. ೧೦೮೩ರ ಹಿರೇಉಡ ಗ್ರಾಮದ ದೊಡ್ಡಬಸವಯ್ಯನ ಜಮೀನಿನಲ್ಲಿನ ಶಾಸನವು ಕಲ್ಯಾಣಿ ಚಾಲುಕ್ಯರ ಕಾಲದ ತ್ರಿಭುವನ ಮಲ್ಲದೇವನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ

ಮಹಮಂಡಲೇಶ್ವರ ತ್ರಿಭುವನಮಲ್ಲ ಪಾಂಡ್ಯದೇವ ನೊಳಂಬವಾಡಿ ಮೂವತ್ತೆರಡು ಸಾವಿರ ಆಳ್ವಿಕೆ ಮಾಡುತ್ತಾನೆ.[೯೮]. ಕ್ರಿ.ಶ. ೧೧೨೫ರಲ್ಲಿ ಕಲ್ಯಾಣದ ಚಾಲುಕ್ಯರ ತ್ರಿಭುವನ ಮಲ್ಲದೇವನ ಕಾಲಕ್ಕೆ ಸೇರಿದ ಶಾಸನ ತ್ರಿಭುವನಮಲ್ಲದೇವರಾಯ ನೊಳಂಬವಾಡಿ ಮೂವತ್ತೆರಡು ಸಾವಿರ ಮತ್ತು ಸಾಂತಲಿಗೆ ಸಾವಿರ ರಕ್ಷಿಸುತ್ತಿರುತ್ತಾನೆಂದು ತಿಳಿಸುತ್ತದೆ.[೯೯] ಸಾಂತಲಿಗೆ ಸಾವಿರವು ಶಿವಮೊಗ್ಗ ಜಿಲ್ಲೆಯಲ್ಲಿ ಬರುತ್ತಿದ್ದ ಮಧ್ಯಯುಗಿನ ಕಾಲದ ಆಡಳಿತ ಕೇಂದ್ರ, ಇದನ್ನು ಶಾಂತಹಾರರು ಆಳ್ವಿಕೆ ಮಾಡುತ್ತಿದ್ದರು.

ಕ್ರಿ.ಶ. ೧೧೪೯ರ ಆಸ್ತಾಪನಹಳ್ಳಿ ಗ್ರಾಮಕ್ಕೆ ನೈರುತ್ಯದಲ್ಲಿ ಸೋಮೇಶ್ವರ ದೇವಾಲಯದ ಉತ್ತರದಲ್ಲಿನ ಶಾಸನವು ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನ ಕಾಲಕ್ಕೆ ಸೇರಿದ ಶಾಸನವು ರಾಜೇಂದ್ರಚೋಳ ಧಾಳಿ ಮಾಡಿದ ಸಂದರ್ಭದಲ್ಲಿ ನೊಳಂಬವಾಡಿ ಮೂವತ್ತೆರಡು ಸಾವಿರದ ರಕ್ಷಣೆಗಾಗಿ ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಜಗದೇಕಮಲ್ಲನು ಆಳ್ವಿಕೆ ನಡೆಸಿದ್ದನ್ನು ಉಲ್ಲೇಖಿಸಿವೆ.[೧೦೦]

ಕ್ರಿ.ಶ. ೧೨೬೮ರಲ್ಲಿ ಹಿರೇಕೋಗಿಲೂರು ಗ್ರಾಮದ ಪಟೇಲ್ ವೀರಭದ್ರಯ್ಯನ ಹಿತ್ತಲಿನ ಶಾಸನವು ಯಾದವರ ಸಿಂಗಣನ ಕಾಲಕ್ಕೆ ಸೇರಿದೆ. ಮಹಾಮಂತ್ರಿಗಳಾದ ಚತ್ತರಸ ಮತ್ತು ಕುಚರಸರು ಪೆಸಲಹನುಮಂತನ ಧ್ವಜವನ್ನು ಹೊಂದಿದ್ದು, ನೊಳಂಬವಾಡಿ ಮೂವತ್ತೆರಡು ಸಾವಿರದಲ್ಲಿ ಬೆತೂರು ಅರವತ್ತನ್ನು ಶಾಂತಿ ಮತ್ತು ಬುದ್ಧಿವಂತಿಕೆಯಿಂದ ಘನವಂತವಾಗಿ ಆಳುತ್ತಿರುತ್ತಾರೆ ಎಂದು ಉಲ್ಲೇಖಿಸಿದೆ.[೧೦೧]

ದುಮ್ಮಿ

ಬಿಲ್ಲಸೋಮಗೌಡ ಮತ್ತು ಅವನ ಸಹವರ್ತಿಗಳು ದುಮ್ಮಿಯಲ್ಲಿ ನೆಲೆಸಿದರು. ಬಿಲ್ಲ ಸೋಮಗೌಡನನ್ನು ದುಮ್ಮಿಯ ಗೌಡನನ್ನಾಗಿ ನೇಮಿಸಿದರು. ಧೂಮ್ಮರಾಜ ಎಂಬುವನು 'ದುಮ್ಮಿ' ಗ್ರಾಮ ಸ್ಥಾಪಿಸಿದ್ದು ಕ್ರಿ.ಶ. ೧೦೪೭–೧೫೬೫ ದವರೆಗಿನ ಅವಧಿಯಲ್ಲಿ ಚನ್ನಗಿರಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖವಿದೆ.[೧೦೨] ಪ್ರಸ್ತುತ ಹೊಳಲ್ಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ದುಮ್ಮಿಯು ಕ್ರಿ.ಶ. ೧೦೪೭ರಲ್ಲಿ ೧೨ ಗ್ರಾಮಗಳನ್ನೊಳಗೊಂಡ ಪ್ರದೇಶವಾಗಿ ವಿಜಯನಗರದ ಎರಡನೇ ಹರಿಹರನ ಕಾಲದಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ದುಮ್ಮಿ ಪಾಳೇಗಾರರು ಆಳ್ವಿಕೆ ನಡೆಸುತ್ತಿದ್ದರು. ನಂತರ ದುಮ್ಮಿ ಸೀಮೆಯಾಗಿ, ಕ್ರಿ.ಶ.೧೫೬೫ರ ವೇಳೆಗೆ ದುಮ್ಮಿ ಸಾವಿರ ಪ್ರದೇಶ ಆಡಳಿತ ಕೇಂದ್ರವಾಗಿತ್ತು.[೧೦೩]

ಕ್ರಿ.ಶ. ೧೪೦೪ರ ನೀತಿಗೆರೆ ವೀರಭದ್ರ ದೇವಾಲಯದ ಒಳಭಾಗದ ಭಿತ್ತಿಯ ಮೇಲೆ ಶಾಸನವಿದೆ. ಇದು ವಿಜಯನಗರದ ಎರಡನೇ ಹರಿಹರನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ದುಮ್ಮಿಯನ್ನು ಗಂಗೆನಾಯಕನ ಮಗ ಶ್ರೀರಂಗನಾಥನಾಯಕ ಆಳಿದರೆ, ದುಮ್ಮಿಯ ಹಿರೇಪೆಮ್ಮನಾಯಕ ಗಂಗೂರಿನಲ್ಲಿ ಆಳ್ವಿಕೆ ಮಾಡಿದನು.[೧೦೪]

ಕ್ರಿ.ಶ. ೧೫೬೨ರ ಚಿಕ್ಕಗಂಗೂರಿನ ಶಾಸನವು ಈಶ್ವರ ದೇವಾಲಯದ ಹಿಂಭಾಗದ ಸಿರಿಯಪ್ಪನ ಗುಡಿಯಲ್ಲಿದೆ. ವಿಜಯನಗರ ಸಾಮ್ರಾಜ್ಯದ ಸದಾಶಿವರಾಯನ ಸಾಮಂತರಾದ ಸಂತೆಬೆನ್ನೂರು ನಾಯಕರ ಪಿಲಪ್ಪನಾಯಕನ ಕಾಲಕ್ಕೆ ಸೇರಿದ ಶಾಸನವಾಗಿದ್ದು, ವಿಜಯನಗರದ ಸದಾಶಿವರಾಯನು ಆಳುತ್ತಿರುವಾಗ ದುಮ್ಮಿ ಸೀಮೆಯು ಪ್ರಸಿದ್ಧವಾಗಿತ್ತು. ಅದರ ಅಮರತ್ವವು ಅಯ್ಯನ-ಮಲುಕ-ಒಡೆಯರ್‌ರವರ ಅಧೀನದಲ್ಲಿತ್ತು. ಚಿಕ್ಕಗಂಗೂರಿನ ಗೌಡನನ್ನು ಠಾಣದಾರ್ ದಿಲ್‌ವಾರ್‌ನು ಕೊಂದಿದ್ದರಿಂದ ದುಮ್ಮಿ ಸೀಮೆಯನ್ನು ಸಂತೆಬೆನ್ನೂರಿನ ಪಿಲಪ್ಪನಾಯಕರಿಗೆ ದಾನವನ್ನಾಗಿ ನೀಡಲಾಗುತ್ತದೆ.[೧೦೫]

ಕ್ರಿ.ಶ. ೧೫೬೫ರ ಹೊದಿಗೆರೆಯ ಗ್ರಾಮದ ದಕ್ಷಿಣದ ಪುಟ್ಟ ಬಸಪ್ಪನ ಹೊಲದಲ್ಲಿ ನೆಟ್ಟಿರುವ ಶಾಸನವು ಸಂತೆಬೆನ್ನೂರಿನ ಕೆಂಗಪ್ಪ ನಾಯಕರ ಕಾಲಕ್ಕೆ ಸೇರಿದ್ದು, ಈ ಶಾಸನದಲ್ಲಿ ದುಮ್ಮಿ ಸಾವಿರದ ಭೂಮಿ ವಿರಕ್ತಮಠದ್ದು ಎಂದಿದೆ.[೧೦೬]

ನಲ್ಲೂರು ಸೀಮೆ

ಸಂತೆಬೆನ್ನೂರಿನ ನಾಯಕರ ಕಾಲದಲ್ಲಿ ನಲ್ಲೂರಿನ ಸುತ್ತಮುತ್ತಲಿನ ಹಳ್ಳಿಗಳನ್ನೊಳಗೊಂಡ ಪ್ರದೇಶವನ್ನು 'ನಲ್ಲೂರು ಸೀಮೆ' ಎನ್ನುತ್ತಿದ್ದರು. ಕ್ರಿ.ಶ.೧೬೭೯ರ ಹಿರೇಮಾಡಾಳು ಗ್ರಾಮದ ಸಂತೆಬೆನ್ನೂರು ನಾಯಕರ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಬಸವಪಟ್ಟಣದ ನವದಿವಾನರಾದ ಸುಬೇದಾರ್ ಲಿಂಗಪ್ಪ ನಲ್ಲೂರು ಸೀಮೆಯ ಹಿರೇಮಾಡಳು ಹಳ್ಳಿಯನ್ನು ದಾನವನ್ನಾಗಿ ನೀಡುತ್ತಾನೆ.[೧೦೭]

ಸೂಳೆಕೆರೆ ಸೀಮೆ

ಕ್ರಿ.ಶ.೧೮ನೇ ಶತಮಾನದಲ್ಲಿ ಸೂಳೆಕೆರೆ ಸುತ್ತ-ಮುತ್ತಲಿನ ಗ್ರಾಮಗಳ ಪ್ರದೇಶದ ವ್ಯಾಪ್ತಿಯೇ ಸೂಳೆಕೆರೆ ಸೀಮೆ. ಕ್ರಿ.ಶ.೧೭೫೮ರ ಉಡವ ಗ್ರಾಮದ ಹನುಮಂತ ದೇವಾಲಯದ ಮುಂದೆ ಬೇವಿನ ಮರದ ಬುಡದಲ್ಲಿರುವ ಶಾಸನವು ಸಂತೆಬೆನ್ನೂರಿನ ನಾಯಕರ ಕಾಲಕ್ಕೆ ಸೇರಿದೆ, ಶ್ರೀಮಂತ ಸಾಹಿಬ್ ಸರ್ ಜಮೀನ್ದಾರ್ ಬಸವಪಟ್ಟಣದ ಸಾಗರ್ ಪೇಟ್ ಸೆಟ್ಟಿಗಳ ಸಮ್ಮುಖದಲ್ಲಿ ಮರಿಲಿಂಗಪ್ಪನಿಗೆ 'ಸೆಟ್ಟಿ' ಕಾರ್ಯನಿರ್ವಹಿಸಲು ಸೂಳೆಕೆರೆ ಸೀಮೆಯಲ್ಲಿ 'ಕೋಲೆ' ಎಂಬ ಪ್ರದೇಶಕ್ಕೆ ಸಂಬಂಧಿಸಿದ 'ಉಡವ' ಹಳ್ಳಿಯನ್ನು ಪಾಲಿಕೆ ಉಂಬಳಿಯನ್ನಾಗಿ ನೀಡುತ್ತಾರೆ.[೧೦೮]

ಆಸಂದಿನಾಡು

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ 'ಆಸಂದಿಗ್ರಾಮ' ಮುಖ್ಯ ಪಟ್ಟಣವಾಗಿದೆ. ಕದಂಬರ ಕಾಲದಲ್ಲಿ ಆಡಳಿತ ಪ್ರಮುಖ ಪ್ರದೇಶವಾಗಿ ಮುಂದುವರೆಯಿತು. ಸೇಂದ್ರಕರ ಪ್ರಭಾವ ಕಡಿಮೆಯಾಗುತ್ತಲೇ 'ಆಸಂದಿನಾಡು' ವಿಸ್ತೃತವಾಗಿ ಬೆಳೆಯಿತು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಐದುನೂರು ಹಳ್ಳಿಗಳ ಕೇಂದ್ರಸ್ಥಳವಾಯಿತು. ಆಸಂದಿಯನ್ನು ಬಲ್ಲೇಶ್ವರಪುರವೆಂದು ಕರೆಯುತ್ತಿದ್ದರು.[೧೦೯] ಆಸಂದಿನಾಡು ಚಿಕ್ಕಮಗಳೂರು, ಕಡೂರು, ತರಿಕೆರೆ, ನರಸಿಂಹರಾಜಪುರ

ಹಾಸನ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನ ಪಶ್ಚಿಮೋತ್ತರ ಭಾಗದಿಂದ ಚನ್ನಗಿರಿಯ ಕಲ್ಕೆರೆ ಪ್ರದೇಶದವರೆಗೂ ವ್ಯಾಪಿಸಿತ್ತು.[೧೧೦]

ಕ್ರಿ.ಶ. ೧೨೧೪ರ ಅಲಕನಾಳು ಗ್ರಾಮದ ದಕ್ಷಿಣ ಕನ್ನಡ ಜಲ್ಲೇಶ್ವರ ದೇವಾಲಯದ ರಂಗಮಂಟಪದ ಅಗ್ನೇಯ ಮೂಲೆಯಲ್ಲಿನ ಶಾಸನ. ಈ ಶಾಸನದಲ್ಲಿ ನರಸಿಂಹ ಅರಸ ಆಸಂದಿಯಲ್ಲಿ ನೆಲೆಸಿ ರಾಜ್ಯವನ್ನು ಆಳುತ್ತಿರುವಾಗ. ಆಸಂದಿನಾಡಿನ ಮಹಾಪ್ರಭು ರಾಮಗೌಡ ಮತ್ತು ಗಂಗಗೌಡಿಯರಿಗೆ ಬಿಲ್ಲಗೌಡ, ರಾಮಗೌಡ ಮತ್ತು ನಾಗಗೌಡರು ಜನಿಸಿರುತ್ತಾರೆ. ರಾಜಗುರು ಕರಿಯಸಕ್ತಿದೇವ ಮತ್ತು ಆಸಂದಿನಾಡಿನ ಏಳುಕೋಟಿ ಋಷಿಗಳು(ಸಂತರು) ಇದುರನ ಮಗನಾದ ಹಂದನು ಶ್ಲೋಕಗಳಿಂದ ಬಿಲ್ಲೇಶ್ವರ ದೇವರನ್ನು ಆರಾಧಿಸುತ್ತಾನೆ. ದಾನವನ್ನು ಹಣದ ರೂಪದಲ್ಲಿ ನೀಡುತ್ತಾರೆ.[೧೧೧]

ಮದಕರಿ ಸೀಮೆ

ಮೆದಕೆರೆ ಗ್ರಾಮದ ಸುತ್ತಮುತ್ತಲಿನ ಹಳ್ಳಿಗಳನ್ನೊಳಗೊಂಡ ಪ್ರದೇಶವೇ ಮೆದಕೆರೆ ಸೀಮೆ. ಕ್ರಿ.ಶ. ೧೩೯೪ರ ತ್ಯಾವಣಿಗೆಯ ಗುರುರಾಯರ ವಶದಲ್ಲಿದ್ದ ತಾಮ್ರ ಶಾಸನವು ವಿಜಯನಗರ ಸಾಮ್ರಾಜ್ಯದ ಎರಡನೇ ಹರಿಹರನ ಕಾಲಕ್ಕೆ ಸೇರಿದ ಸಂಸ್ಕೃತಿ ಲಿಪಿಯ ಕನ್ನಡ ಶಾಸನವಾಗಿದೆ. ೨ನೇ ಹರಿಹರನು ಚಂದ್ರಮಂಡಲ ನಾಡಿನಲ್ಲಿರುವ ಮದಕರಿ ಸೀಮೆಯ ರಾಜಮಹಾರಂಗನ ಆಡಳಿತಕ್ಕೆ ಸೇರಿದ ಉತ್ಸಂಗಿ, ವೆಂತ್ಯೆ (ಹಸ್ತಿನಾವತಿಗೆ ಸಮನಾದ) ಇದನ್ನು ಇಂದ್ರಕಂಠವೆನ್ನುವರು. ಇದನ್ನು ನರಸಿಂಹಭಟ್ಟ ಎಂಬ ಜ್ಯೋತಿಷ್ಯಕಾರನಿಗೆ ನೀಡುತ್ತಾರೆ.[೧೧೨]

ಉತ್ಸಂಗಿ ವೆಂಟೆ (ಉಚ್ಚಂಗಿವೆಂಟೆ) ಸಂತೆಬೆನ್ನೂರು ಸೀಮೆ

ಸಂತೆಬೆನ್ನೂರಿನ ಸುತ್ತಮುತ್ತಲಿನ ಗ್ರಾಮಗಳನ್ನೊಳಗೊಂಡ ಈ ಪ್ರದೇಶ ನೊಳಂಬರು, ಉಚ್ಚಂಗಿಪಾಂಡ್ಯರಿಂದ ಸಂತೆಬೆನ್ನೂರಿನ ನಾಯಕರವರೆಗೆ ಈ ಪ್ರದೇಶ ಕಂಡುಬರುತ್ತದೆ. ಕ್ರಿ.ಶ. ೧೦೪೭ರ ಹಿರೇಕೋಗಿಲೂರು ಕೋಟೆ ಚನ್ನಬಸಪ್ಪ ಎಂಬುವವರ ಮನೆಯ ಹಿತ್ತಲಲ್ಲಿನ ಶಾಸನ ನೊಳಂಬ ಪಲ್ಲವರ ತ್ರೈಲೋಕ್ಯ ಮಲ್ಲ ನನ್ನಿ ನೊಳಂಬ ಪಲ್ಲವ ಪೆರಮಾಡಿಯ ಕಾಲದ್ದಾಗಿದೆ. ಈ ಶಾಸನದಲ್ಲಿ ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರಮಡಿಯು ಕೋಗಳಿ ೫೦೦, ಬಲಕುಂದೆ ೩೦೦, ಕುಣಿಯಕಲ್ ೩೦೦, ಕುಡಿಪರವಿ ೭೦, ಕರಿವೀಡಿ ೩೦ ಈ ಪಂಚಗ್ರಾಮದ ಜೊತೆಗೆ ಕದಂಬಳಿಗೆ ೧೦೦೦ವನ್ನು ಆಳುತ್ತಿರುತ್ತಾನೆ. ಅವನ ಅಧೀನನಾಗಿ ಸುಭತುಂಗನು ಪಿರಿಯ ಕೋಗಿಲೂರು, ಕಿರಿಯ ಕೋಗಿಲೂರು, ಕೂಡಲಿಗೆರಿ, ಮೆದಿಕೆರೆ ಎರ್ಮ್ಮೆಯನೂರು, ದುಮ್ಮಿ ೧೨, ಇವುಗಳನ್ನು ತ್ರಿಭೋಗ ಸಹಿತವಾಗಿ ನಾಳ್ಗಾವುಂಡನಾಗಿ ಆಳುತ್ತಿದ್ದನೆಂದು ಶಾಸನವು ಉಲ್ಲೇಖಿಸುತ್ತದೆ.[೧೧೩] ಈ ಶಾಸನದ ವಿಶೇಷತೆಯೆಂದರೆ ಉಚ್ಚಂಗಿ ಪಾಂಡ್ಯರ ಕದಂಬಗಳಿಗೆ ೧೦೦೦ ಉಲ್ಲೇಖಿತವಾಗಿದೆ, ಅದರ ಜೊತೆಯಲ್ಲಿ ಕೋಗಳಿ ೫೦೦, ಬಲಕುಂದೆ ೩೦೦, ಕುಣಿಯಕಲ್ ೩೦೦, ಕುಡಿಪರವಿ ೭೦, ಕರಿವೀಡಿ ೩೦ ಈ ಐದು ಗ್ರಾಮಗಳನ್ನು ಉಲ್ಲೇಖಿಸಿದೆ. ಇವು ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಬರುವ

ಗ್ರಾಮವಾಗಿದೆ. ಈ ಎಲ್ಲಾ ಪ್ರದೇಶಗಳು ಉಚ್ಚಂಗಿ ಪಾಂಡ್ಯರಿಗೆ ಸೇರಿದ್ದವೆಂದು ಶಾಸನದಿಂದ ಸ್ಪಷ್ಟವಾಗುತ್ತದೆ.

ಶುಭತುಂಗನ ಅಧೀನವಿದ್ದ ಪಿರಿಯಕೋಗಿಲೂರು, ಕಿರಿಯಕೋಗಿಲೂರು, ಕೂಡಲಿಗೇರಿ, ಮೆದಿಕೆರೆ, ಎರ್ಮ್ಮೆಯನೂರು, ದುಮ್ಮಿ ೧೨, ಇವುಗಳನ್ನು ಆಳ್ವಿಕೆ ಮಾಡುತ್ತಿದ್ದ ಎಂದು ಶಾಸನವು ತಿಳಿಸಿದೆ. ಪಿರಿಯಕೋಗಿಲೂರು ಎಂದರೆ ಹಿರಿಯ ಕೋಗಿಲೂರು, ಕಿರಿಯಕೋಗಿಲೂರು ಎಂದರೆ ಚಿಕ್ಕ ಕೋಗಿಲೂರು, ಕೂಡಲಿಗೇರಿ ಎಂದರೆ ಕೂಡಲಿಕೆರೆ, ಮೆದಿಕೆರೆ ಎಂದರೆ ಮೆದಕೆರೆ, ಎರ್ಮ್ಮೆಯನೂರು ಎಂದರೆ ಇಂದಿನ ಎಮ್ಮಿಗನೂರು, ದುಮ್ಮಿ ೧೨ ಎಂದರೆ ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ ಈ ಎಲ್ಲಾ ಪ್ರದೇಶಗಳನ್ನು ಶುಭತುಂಗನು ತ್ರೈಲೋಕ್ಯ ನನ್ನಿ ನೊಳಂಬ ಪಲ್ಲವ ಪೆರಮಾಡಿಯ ಅಧೀನನಾಗಿ ಆಳ್ವಿಕೆ ಮಾಡುತ್ತಿದ್ದನು. ಇದೇ ಶಾಸನದಲ್ಲಿ ಶುಭತುಂಗನ ತಂದೆಯು ಬಿದಿರೂರು ೫೦೦ ಎಂಬುದರ ನಾಳ್ಗಾವುಂಡನಾಗಿದ್ದ. ತಂದೆಯಂತೆಯೇ ಶುಭತುಂಗನು ಕುಣಂಗಿಲ್ ೫೦೦, ಮಣ್ಣೆ ೩೦೦, ಮರುಗೆರೆ ೩೦೦ ಈ ಪ್ರದೇಶಗಳ ಜೊತೆಗೆ ಹಾಸನದ ಅರಸೀಕೆರೆಗೆ ಸಹ ನಾಳ್ಗಾವುಂಡನಾಗಿದ್ದನೆಂದು ಶಾಸನವು ಉಲ್ಲೇಖಿಸಿದೆ.[೧೧೪] ನೊಳಂಬವಾಡಿ ೩೨ ಸಾವಿರವನ್ನು ಶಾಸನದಲ್ಲಿ ನೊಳಂಬವಾಡಿ ೩೪ ಸಾವಿರ ಎಂದು ಉಲ್ಲೇಖಿಸಿರುವುದು ಹೆಚ್ಚು ಗ್ರಾಮಗಳು ಈ ವಿಭಾಗದಲ್ಲಿ ಸೇರಿದ್ದನ್ನು ಪ್ರತಿನಿಧಿಸುತ್ತದೆ.

ಕ್ರಿ.ಶ. ೧೧೨೨ರ ದೊಡ್ಡ ಅಬ್ಬಿಗೆರೆಯ ಶ್ರೀ ಕಲ್ಲೇಶ್ವರ ದೇವಾಲಯದ ದಕ್ಷಿಣ ಭಾಗಕ್ಕೆ ಉಚ್ಚಂಗಿ ಪಾಂಡ್ಯರ ಕಾಲದ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ಆರನೇ ವಿಕ್ರಮಾದಿತ್ಯನ ಮಹಾಮಂಡಲೇಶ್ವರನಾಗಿದ್ದ ಉಚ್ಚಂಗಿ ಪಾಂಡ್ಯ ರಾಜವಂಶಕ್ಕೆ ಸೇರಿದ ತ್ರಿಭುವನಮಲ್ಲ ರಾಯಪಾಂಡ್ಯದೇವನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಉಚ್ಚಂಗಿ ಪಾಂಡ್ಯರ ದೊರೆ ತ್ರಿಭುವನಮಲ್ಲ ರಾಯಪಾಂಡ್ಯದೇವನು ನೊಳಂಬವಾಡಿ ಮೂವತ್ನಾಲ್ಕು ಸಾವಿರವನ್ನು ಆಳುತ್ತಿರುತ್ತಾನೆ.[೧೧೫] ಕ್ರಿ.ಶ. ೧೫೬೫ರಲ್ಲಿ ನಾಡಿಗ ಘಟ್ಟಪ್ಪನ ಮಗ ಬಾಳಬಸ್ವೆಯ್ಯನ ವಶದಲ್ಲಿದ್ದ ತಾಮ್ರ ಶಾಸನ ಸಂತೆಬೆನ್ನೂರು ನಾಯಕರ ಕೆಂಗಪ್ಪನಾಯಕನ ಕಾಲಕ್ಕೆ ಸೇರಿದ್ದು, ಈ ಶಾಸನದಲ್ಲಿ ಉಚ್ಚಂಗಿ–ವೆಂಟೆ ಸಂತೆಬೆನ್ನೂರು ಎಲ್ಲಾ ಹಳ್ಳಿಗಳು ಸೇನಾಭೋವಾ ಮತ್ತು ಪುರೋಹಿತರ ಕಛೇರಿಯ ಅಧೀನಕ್ಕೆ ಬರುತ್ತದೆ ಎಂದು ದೃಢೀಕರಿಸಲಾಗಿದೆ.[೧೧೬]

೨.೪. ವೃತ್ತಿಗಳು ಮತ್ತು ಜಾತಿ ಸಮುದಾಯಗಳು

ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಋಗ್ವೇದದ ೧೦ನೇ ಮಂಡಲದಲ್ಲಿ ಪುರುಷ ಸೂಕ್ತದಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾಜವನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿದೆ.[೧೧೭] ಋಗ್ವೇದ ಕಾಲದಲ್ಲಿ ವರ್ಣ ವ್ಯವಸ್ಥೆ ಅಸ್ತಿತ್ವದಲ್ಲಿತ್ತು, ಯಾವುದೇ ವ್ಯಕ್ತಿ ಯಾವುದೇ ವೃತ್ತಿಯನ್ನು ತನಗೆ ಇಚ್ಚೆ ಅನುಸಾರ ಕೈಗೊಳ್ಳಬಹುದಿತ್ತು. ಅಲ್ಲಿ ಜಾತಿ ವ್ಯವಸ್ಥೆ ಇರಲಿಲ್ಲ. ಆದರೆ ನಂತರದ ವೇದಗಳ ಕಾಲದಲ್ಲಿ ವೃತ್ತಿಗಳ ಆಧಾರದ ಮೇಲೆ ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಆರಂಭಿಕ ಮಧ್ಯಯುಗೀನ ಕಾಲದಿಂದ ಮಧ್ಯಕಾಲೀನ ಯುಗದ ಅಂತ್ಯದವರೆಗೆ ಹಲವಾರು ವೃತ್ತಿಗಳು ಮತ್ತು ಜಾತಿ

ವ್ಯವಸ್ಥೆಯನ್ನು ಕಾಣಬಹುದಾಗಿದೆ. ಪ್ರಮುಖವಾಗಿ ಈ ಕಾಲಘಟ್ಟದಲ್ಲಿ ಚನ್ನಗಿರಿ ತಾಲ್ಲೂಕಿನಲ್ಲಿಯೂ ಅಲ್ಲಿನ ಜನರು ಅನೇಕ ವೃತ್ತಿಗಳನ್ನು ಹೊಂದಿದ್ದರು. ಅವುಗಳೆಂದರೆ, ಗೌಡರು, ಸೇನುಭೋವ, ಊರ ಒಡೆಯ, ರೈತರು, ದೊಂಬರು, ಬಡಗಿ ವೃತ್ತಿಗಳನ್ನು ಕಾಣಬಹುದಾಗಿದೆ. ಹಾಗೆಯೇ ಅನೇಕ ಜಾತಿ ಸಮುದಾಯಗಳು ಸಹ ಅಸ್ಥಿತ್ವದಲ್ಲಿದ್ದವು. ಅವುಗಳೆಂದರೆ, ಬ್ರಾಹ್ಮಣರು (ಪುರೋಹಿತಶಾಹಿ), ಬೇಡರು, ಶೆಟ್ಟಿಗಳು, ಕ್ಷೌರಿಕರು, ಗಾಣಿಗರು ಈ ಎಲ್ಲಾ ವೃತ್ತಿಗಳು ಮತ್ತು ಜಾತಿ ಸಮುದಾಯಗಳನ್ನು ಚನ್ನಗಿರಿ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಿತವಾಗಿವೆ.[೧೧೮]

ವೃತ್ತಿಗಳು

ಶಾಸನಗಳಲ್ಲಿ ಉಲ್ಲೇಖಿತವಾದ ವೃತ್ತಿಗಳನ್ನು ಚನ್ನಗಿರಿ ತಾಲ್ಲೂಕಿನಲ್ಲಿ ಆರಂಭಿಕ ಮಧ್ಯಯುಗೀನ ಕಾಲದಿಂದ ಕ್ರಿ.ಶ ೧೮ನೇ ಶತಮಾನದವರೆಗೂ ಉಲ್ಲೇಖಿತವಾಗಿರುವುದನ್ನು ಕಾಣಬಹುದಾಗಿದೆ. ಅಂತಹ ಎಲ್ಲಾ ಶಾಸನಗಳನ್ನು ಕ್ರೋಢೀಕರಿಸಿ ಒಂದೆಡೆ ಇಲ್ಲಿ ಸೆರೆ ಹಿಡಿಯಲಾಗಿದೆ.

ಗೌಡ

ಗಾವುಂಡ, ಗವುಡ ಮತ್ತು ಗೌಡ ಎಂದು ಶಾಸನಗಳಲ್ಲಿ ಕ್ರಿ.ಶ. ೧೦೫೦ ರಿಂದ ೧೫೨೬ ರವರೆಗೆ ಉಲ್ಲೇಖಿತವಾದ ಪದವಾಗಿದೆ. ೧೦೫೦ರ ತ್ಯಾವಣಿಗೆಯ ಕಲ್ಲೇಶ್ವರ ದೇವಾಲಯದ ಪೂರ್ವದ ಕಡೆ ನೆಟ್ಟಿರುವ ಶಾಸನವು ನೊಳಂಬರ ಕಾಲಕ್ಕೆ ಸೇರಿದ್ದು, ಈ ಶಾಸನದಲ್ಲಿ ಬೆಳಗೌಡನ ಅಳಿಯ ನೆನಿಗೆಯ ಮಲ್ಲನು ದೇವಾಲಯವನ್ನು ಕಟ್ಟಿಸಿ, ಅದಕ್ಕೆ ಭೂಮಿಯನ್ನು ದಾನವನ್ನಾಗಿ ನೀಡಿ ನೊಳಂಬ ರಾಜನ ಆಜ್ಞೆಯಂತೆ ಯುದ್ಧವನ್ನು ಮಾಡಿ ಸಾವನ್ನಪ್ಪಿದ್ದನ್ನು ತಿಳಿಸುತ್ತದೆ.[೧೧೯] ಕ್ರಿ.ಶ. ೧೧೪೯ರ ಬಲ್ಲಹಳ್ಳಿಯ ಉತ್ತರ ಕಲ್ಲೇಶ್ವರ ದೇವಾಲಯದಲ್ಲಿನ ೨ನೇ ವೀರಗಲ್ಲು, ಕಲ್ಯಾಣದ ಚಾಲುಕ್ಯರ ವೀರಬಲ್ಲಾಳನ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದಲ್ಲಿ ಬಿಲ್ಲಹಳ್ಳಿಯ ಬಿಲ್ಲಗೌಡನ ಮಗನಾದ ಮಾದಿಗೌಡ ಹೋರಾಟ ಮಾಡಿ ಸಾವನ್ನಪ್ಪಿದ ಬಗ್ಗೆ ಗೌಡರ ಶೌರ್ಯಗುಣವನ್ನು ಉಲ್ಲೇಖಿಸಿದೆ.[೧೨೦]

ಕ್ರಿ.ಶ. ೧೨೧೪ರ ಅಲಕನಾಳು ಗ್ರಾಮದ ದಕ್ಷಿಣ ಕಡೆ ಜಲ್ಲೇಶ್ವರ ದೇವಾಲಯದ ರಂಗಮಂಟಪದಲ್ಲಿನ ಹೊಯ್ಸಳರ ಎರೆಯಂಗನ ಸಾಮಂತರಾದ ಆಸಂದಿಗಂಗರ ನರಸಿಂಹ ಅರಸನ ಕಾಲಕ್ಕೆ ಸೇರಿದ್ದು ಬಿಲ್ಲಗೌಡ, ರಾಮಗೌಡ ಮತ್ತು ನಾಗಗೌಡರು ನಾಡ ಮಹಾಪ್ರಭು ರಾಮಗೌಡ ಮತ್ತು ಗಂಗಸಾಂಡಿಯರಿಗೆ ಜನಿಸಿರುತ್ತಾರೆ. ಮೂಡಿಗೆರೆಯ ಮಹಾಪ್ರಭು ರಾಮಗೌಡರ ಹೆಸರನ್ನು ಶಾಸನ ಪ್ರಸ್ತಾಪಿಸಿದೆ. ಇಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ಕಟ್ಟಿಸುತ್ತಾರೆ.[೧೨೧] ಕ್ರಿ.ಶ. ೧೨೨೧ರ ಕಲ್ಕೆರೆ ಗ್ರಾಮದ ಜಲ್ಲೇಶ್ವರ ದೇವಾಲಯದ ಮುಖಮಂಟಪದಲ್ಲಿನ ಆಸಂದಿ ಗಂಗರ ಬೊಮ್ಮರಸನಿಗೆ ಸೇರಿದ್ದು, ಈ ಶಾಸನದಲ್ಲಿ ಕಲ್ಕೆರೆಯ ಕಂಗಗೌಡ, ಕಲ್ಕೆರೆಯ ಊರೊಡೆಯ ಮಾರ್ಕಂಡದೇವ, ಕಲ್ಕೆರೆಯ ಮತ್ತೊಬ್ಬ ಗೌಡನಾದ ಬೆಳೆಗೌಡ, ಮೆದಿಕೆರೆಯ ರಾಮಗೌಡ ಅಲಕನಾಳ್ ಕದಂಬಗೌಡ, ತಡಗದ ಕಂಬಗೌಡ, ಶಿವನಿಯ ಕಲ್ಲಗೌಡ, ಕಣಬಗಟ್ಟದ ಹೊನ್ನಗೌಡ,

ಆಸಂದಿಯ ಬೊಮ್ಮಗೌಡರು ಕಲ್ಕೆರೆಯ ಬೆಳೇಶ್ವರ ದೇವಾಲಯಕ್ಕೆ ದಾನ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ಈ ಶಾಸನದಿಂದ ಗ್ರಾಮಗಳಲ್ಲಿ ಗೌಡರ ಆಳ್ವಿಕೆ ಅಸ್ಥಿತ್ವದಲ್ಲಿದ್ದಿತೆಬುಂದು ಸ್ಪಷ್ಟವಾಗುತ್ತದೆ.[೧೨೨]

ಗೌಂಡ ಅಥವಾ ಗೌಡ ಎಂದು ಕರೆಯಿಸಿಕೊಳ್ಳುತ್ತಿದ್ದ ವ್ಯಕ್ತಿ ಗ್ರಾಮದ ಮುಖ್ಯಸ್ಥನಾಗಿದ್ದು, ಸಮಾಜದಲ್ಲಿ ಮಹತ್ವವಾದ ಪಾತ್ರವಹಿಸುತ್ತಿದ್ದ. ಗೌಡನು ರಾಜನ, ಸಾಮಂತನ ಪರವಾಗಿ ಗೋವುಗಳಿಗಾಗಿ ಯುದ್ಧ ಮಾಡುತ್ತಿದ್ದು, ಜನರಿಗೊಸ್ಕರ ಕೆರೆಗಳನ್ನು ಕಟ್ಟಿಸಿದ್ದನು. ಜನರ ಭಕ್ತಿಗಾಗಿ ದೇವಾಲಯಗಳನ್ನು ನಿರ್ಮಿಸಿ, ದೇವಾಲಯಗಳಿಗೆ ಭೂಮಿಯನ್ನು ದಾನವನ್ನಾಗಿ ನೀಡುತ್ತಿದ್ದನು. ದೇವಾಲಯಗಳ ನಿರ್ಮಾಣದ ಮುಖ್ಯ ಮೇಲ್ವಿಚಾರಣೆ ವಹಿಸಿಕೊಳ್ಳತ್ತಿದ್ದ. ಚನ್ನಗಿರಿ ತಾಲ್ಲೂಕಿನ ಶಾಸನಗಳಲ್ಲಿ ಗೌಡವೃತ್ತಿ ಗ್ರಾಮದ ಅತಿ ಮುಖ್ಯ ಹುದ್ದೆಯಾಗಿದ್ದು, ಸಮಾಜದಲ್ಲಿ ಮಹತ್ವವಾದ ಪಾತ್ರವಹಿಸುತ್ತಿದ್ದನು.

ಕ್ರಿ.ಶ. ೧೨೨೯ರ ಹೊಯ್ಸಳರ ವೀರನರಸಿಂಹದೇವನ ಕಾಲಕ್ಕೆ ಸೇರಿದ ತುರುಗೋಳ್ ಶಾಸನದಲ್ಲಿ ದೊಂಡ್ರಘಟ್ಟದಲ್ಲಿನ ಸಂಕರಗೌಡನ ಮಗನಾದ ಬೀರಗೌಡ ಮತ್ತು ಮಲ್ಲಗೌಡರ ಮಗನಾದ ಸಂಕರಗೌಡ ಹೆಸರುಗಳು ಮತ್ತು ಅವರ ೧೦೮ ಕಾರ್ಯದ ವೈಖರಿ ಕುರಿತಾಗಿದೆ.[೧೨೩] ಕ್ರಿ.ಶ. ೧೪೦೪ರ ನೀತಿಗೆರೆ ವೀರಭದ್ರೇಶ್ವರ ದೇವಾಲಯದ ಒಳಭಾಗದ ಮೇಲಿನ ಶಾಸನ ನೀತಿಗೆರೆಯ ವೀರಭದ್ರ ದೇವಾಲಯಕ್ಕೆ ಹಲವಾರು ಗೌಡರು ಮತ್ತು ವ್ಯಕ್ತಿಗಳು ನೀತಿಗೆರೆ ವೀರಭದ್ರನಿಗೆ ಕೊಟ್ಟ ದಾನದ ಕುರಿತಿದೆ. ಕನ್ನಗೌಡರು ದೇವಾಲಯವನ್ನು ಕಟ್ಟಿಸಿದನು.[೧೨೪] ಕ್ರಿ.ಶ. ೧೫೬೨ರ ಚಿಕ್ಕಗಂಗೂರಿನ ಈಶ್ವರ ದೇವಾಲಯದ ಹಿಂದೆ ಸಿರಿಯಪ್ಪ ಗುಡಿಯಲ್ಲಿನ ಶಾಸನವು ವಿಜಯನಗರ ಸಾಮ್ರಾಜ್ಯದ ಸದಾಶಿವರಾಯನ ಸಾಮಂತರಾದ ಸಂತೆಬೆನ್ನೂರು ನಾಯಕ ಪಿಲಪ್ಪನಾಯಕನ ಕಾಲಕ್ಕೆ ಸೇರಿದೆ. ಇದರಲ್ಲಿ ಸಂತೆಬೆನ್ನೂರು ಗೌಡನನ್ನು ಠಾಣದಾರ್ ದಿಲ್‌ವಾರ್‌ನು ಕೊಲ್ಲಲ್ಪಟ್ಟಿದ್ದರಿಂದ ಚಿಕ್ಕಗಂಗೂರಿನ ಜನರು ರಣದಾರ್ ದಿಲ್‌ವಾರ್‌ನನ್ನು ಶಿಕ್ಷಿಸುವಂತೆ ಮತ್ತು ಚಿಕ್ಕಗಂಗೂರಿನ ಗೌಡ್ಯ ವೃತ್ತಿಯನ್ನು ಗೌಡ್ಯನ ಮಕ್ಕಳಿಗೆ ನೆತ್ತರು ಗೌಡಿಗೆ ನೀಡಲು ಜನರು ವಿನಂತಿಸಿಕೊಳ್ಳುತ್ತಾರೆ.[೧೨೫]

ಕ್ರಿ.ಶ. ೧೬ನೇ ಶತಮಾನದ ತಣಿಗೆರೆ ಗ್ರಾಮದ ಹಜಾಮಚನ್ನನ ಕಣದಲ್ಲಿ ದೊರೆತಿರುವ ಶಾಸನ ಕಲ್ಲಣಗೌಡನ ಮಗ ತಳಿಗೆರೆಗೌಡನು ದಾನ ನೀಡಿದ್ದನ್ನು ತಿಳಿಸಿದೆ. ಗೌಡರು ಗ್ರಾಮದ ಮುಖ್ಯ ಆಡಳಿತಗಾರರಾಗಿದ್ದರೆಂಬುದಕ್ಕೆ ಇದೊಂದು ನಿದರ್ಶನ.[೧೨೬] ಇಂತಹ ಅನೇಕ ಸಂಗತಿಗಳು ಗೌಡ ವೃತ್ತಿ ಅದರ ಪ್ರಾಮುಖ್ಯತೆಯನ್ನು ಶಾಸನ ಬರಹಗಳಲ್ಲಿ ಚಿತ್ರಿಸಿವೆ.

ಊರ ಒಡೆಯ

ಗ್ರಾಮದ ಮುಖ್ಯಸ್ಥನನ್ನು ಊರಿನ ಒಡೆಯ ಅಥವಾ ಧಣಿ ಎಂದು ಕರೆಯುತ್ತಿದ್ದರು. ಕ್ರಿ.ಶ. ೧೧೨೦ರ ಮೆದಿಕೆರೆ ಪೂಜಾರಿ ಕಣದಲ್ಲಿ ನೆಟ್ಟಿರುವ ಹೊಯ್ಸಳರ ಶಾಸನವು ಊರ ಒಡೆಯ ಹನುಮಂತದೇವನು ಬಸವನ ಗುಡಿಯನ್ನು ಕಟ್ಟಿಸಿದ ವಿಷಯ ತಿಳಿಸುತ್ತದೆ.[೧೨೭] ಕ್ರಿ.ಶ. ೧೨೨೫ರ

ಕಾಲಕ್ಕೆ ಸೇರಿದ್ದ ಕಾಶಿಪುರ ಗ್ರಾಮದ ಪಶ್ಚಿಮಕ್ಕೆ ಕಲ್ಲು ಬುರುಜಿನ ಬಳಿ ಬಿದ್ದಿರುವ ವೀರಗಲ್ಲು(ಹೊಯ್ಸಳರ ವೀರ ನರಸಿಂಹದೇವನ ಕಾಲಕ್ಕೆ ಸೇರಿದ್ದಾಗಿದ್ದು) ಹದಲಕೆರೆ ಹರಿಯ ಊರ ಒಡೆಯನ ಕಾಲುವೆಗೆ ಗೌಡಿಹಳ್ಳಿಯ ಗೋವುಗಳು ಬಂದಿದ್ದವೆಂಬುದನ್ನು ದಾಖಲಿಸುತ್ತದೆ.[೧೨೮]

ಕ್ರಿ.ಶ. ೧೨೩೩ರ ನಲ್ಕುದರೆ ಬ್ರಹ್ಮೇಶ್ವರ ದೇವಾಲಯದೊಳಗಿನ ಬಿತ್ತಿಯಲ್ಲಿನ ಶಾಸನ ಹೊಯ್ಸಳರ ವೀರನರಸಿಂಹದೇವನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಊರ ಒಡೆಯ ಚಂದ್ರದೇವ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದ ನಿರ್ವಹಣೆ ಮತ್ತು ಜೀರ್ಣೋದ್ಧಾರಕ್ಕಾಗಿ ಋಷಿಯಗುರು ಪಾದವನ್ನು ತೊಳೆದು ಭೂಮಿಯನ್ನು ದಾನವನ್ನಾಗಿ ನೀಡಲಾಗುವ ವಿಷಯ ತಿಳಿಸಲಾಗಿದೆ.[೧೨೯] ಕ್ರಿ.ಶ. ೧೧೨೦ರ ಮತ್ತು ೧೨೩೩ರ ಕ್ರಮವಾಗಿ ಮೆದಿಕೆರೆ ಮತ್ತು ನಲ್ಕುದರೆಯ ಶಾಸನಗಳು ಗ್ರಾಮದ ಮುಖ್ಯಸ್ಥನನ್ನು ಊರಿನ ಒಡೆಯ ಎಂದು ಕರೆಯಲಾಗಿದ್ದು ಇವನು ದೇವಾಲಯವನ್ನು ನಿರ್ಮಿಸುವ ನಿರ್ವಹಣೆ, ಜೀರ್ಣೋದ್ಧಾರಕ್ಕಾಗಿ ಭೂಮಿಯನ್ನು ದಾನ ನೀಡುತ್ತಿದ್ದನೆಂದು, ಊರಿನ ಧಾರ್ಮಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನೆಂದು ಈ ಶಾಸನಗಳಲ್ಲಿ ತಿಳಿಸಲಾಗಿದೆ.[೧೩೦]

ಸೇನುಭೋವ

ಗ್ರಾಮದಲ್ಲಿ ಗೌಡನ ನಂತರ ಬರುವ ವ್ಯಕ್ತಿಯೇ ಸೇನುಭೋವ, ಗ್ರಾಮದ ಸೇನುಭೋವಿಕೆ (ಲೆಕ್ಕ ವ್ಯವಹಾರ) ನೋಡಿಕೊಳ್ಳುತ್ತ ಸೇನಭೋವಿಕೆ ಮಾಡುತ್ತಾನೆ. ಕ್ರಿ.ಶ. ೧೫೪೫ರ ತಾವರೆಕೆರೆ ನೀಲಕಂಠೇಶ್ವರ ದೇವಾಲಯದ ಸ್ತಂಭಶಾಸನದ ವಿಜಯನಗರ ಕಾಲಕ್ಕೆ ಸೇರಿದೆ. ಸಬದೇವನು ವಿಷಸಂವತ್ಸರದಲ್ಲಿ ತುಂಗಭದ್ರೆಯಿಂದ ಓಡಿಬಂದನು. ಇದನ್ನು ಬರೆದವನು ಸೇನುಭೋವ ನಾಗಯ್ಯ.[೧೩೧] ಕ್ರಿ.ಶ. ೧೫೬೫ರ ಚನ್ನಗಿರಿ ನಾಡಿಗ ಪುಟ್ಟಪ್ಪನ ಮಗ ಬಳಬಸಯ್ಯನ ವಶದಲ್ಲಿದ್ದ ತಾಮ್ರಶಾಸನವು ಸಂತೆಬೆನ್ನೂರಿನ ನಾಯಕರ ಕೆಂಗಪ್ಪನಾಯಕನ ಕಾಲಕ್ಕೆ ಸೇರಿದ್ದು ಈ ಶಾಸನದಲ್ಲಿ ಉತ್ಸಂಗಿವೆಂಟೆ ಸಂತೆಬೆನ್ನೂರು ಸೀಮೆಯ ಎಲ್ಲಾ ಗ್ರಾಮಗಳು ಸೇನುಭೋವ ಮತ್ತು ಪುರೋಹಿತರ ಕಛೇರಿಯ ಅಧೀನಕ್ಕೆ ಬರುತ್ತವೆಂದು ದಾಖಲಿಸಿದೆ.[೧೩೨] ಅಂದರೆ ಸೇನುಭೋವನು ಶಿಲ್ಪಗಾರರ ಸಮುದಾಯಕ್ಕೆ ಸೇರಿರಬೇಕೆಂದು ಊಹಿಸಿಬಹುದಾಗಿದೆ.

ನಾಡಿಗರ್/ಬ್ರಾಹ್ಮಣರು

ಕ್ರಿ.ಶ. ೧೫೭೭ರ ಲಕ್ಷ್ಮಿಸಾಗರ ಗ್ರಾಮದ ಹನುಮಂತ ದೇವಾಲಯದ ಬಳಿ ನೆಟ್ಟ ಒಂದನೇ ಸಂತೆಬೆನ್ನೂರು ಶಾಸನವು ಲಕ್ಷ್ಮಿಸಾಗರ ಗ್ರಾಮವನ್ನು ಹೊದಿಗೆರೆ ಸೀಮೆಯ ನಾಡಿಗರ್‌ನಾದ ಬಂಕಿಪುರದ ಮಲ್ಲಪ್ಪನಿಗೆ, ತಿಮ್ಮಪ್ಪನ ಮಗನಾದ ರಂಗಪ್ಪನಿಗೆ ಉಂಬಳಿಯಾಗಿ ಕೊಟ್ಟಿದ್ದನ್ನು ದಾಖಲಿಸಿದೆ.[೧೩೩] ಕ್ರಿ.ಶ. ೧೬೫೩ರ ಹೊಸಹಳ್ಳಿಯ ಬಡೇಸಾಬಿ ಕೆರೆ ಕಟ್ಟೆಯ ಮೇಲೆ ಇದ್ದ ಒಂದನೇ ಶಾಸನ ಬಿಜಾಪುರದ ಸುಲ್ತಾನರ ಮಹಮದ್-ಷಾ-ಇಬ್ರಾಹಿಂನ ಸಾಮಂತ ಖಾನ್-ಐ-ಖಾನ್ ಆಳ್ವಿಕೆಯ ನಾಲ್ಕು ರೈತ ಕುಟುಂಬಗಳು ನೆಲೆಸಿದ್ದು, ಈ ಕುಟುಂಬಗಳು ನಾಡಿಗರನ್ನು ಶೆಟ್ಟಿಗಳನ್ನು ಅವಲಂಭಿಸಿದ್ದರು ಎಂದು ತಿಳಿಸಿದೆ.[೧೩೪]

ಬಡಗಿ

ಮರವನ್ನು ಕೆತ್ತುವ ಕಾರ್ಯವನ್ನು ನಿರ್ವಹಿಸುತ್ತಾ ಜೀವನ ಸಾಗಿಸುವ ಸಮುದಾಯವೇ ಬಡಗಿಗಳು. ಗೃಹ, ಕೃಷಿ ಉಪಕರಣ, ಯುದ್ಧ ಉಪಕರಣಗಳನ್ನು ಮಾಡಿಕೊಡುವ ಸಮುದಾಯ. ಕ್ರಿ.ಶ. ೧೨೨೫ರ ಕಾಶಿಪುರ ಗ್ರಾಮದ ಪಶ್ಚಿಮ ಕಲ್ಲುಬುರುಜಿನ ಬಳಿ ಬಿದ್ದಿರುವ ವೀರಗಲ್ಲು ಹೊಯ್ಸಳರ ನರಸಿಂಹದೇವನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಹದಲಕೆರೆ ಹರಿಯ ಗ್ರಾಮದಲ್ಲಿ ಬಡಗಿಯ ಕಾಲುವೆಗೆ ಗೌಡಿಹಳ್ಳಿಯ ಗೋವುಗಳು ಬಂದಿದ್ದಾಗ ಅವುಗಳನ್ನು ಹಿಂದಕ್ಕೆ ತರುವಲ್ಲಿ ಪ್ರಯತ್ನಿಸಿದ ಬಡಗಿಮಾಕೋಜ ಸಾವನ್ನಪ್ಪಿದ್ದನು.[೧೩೫] ಕ್ರಿ.ಶ. ೧೩ನೇ ಶತಮಾನದ ಬೊಮ್ಮೇನಹಳ್ಳಿಯ ಆಂಜನೇಯ ದೇವಸ್ಥಾನದ ಗರ್ಭಗೃಹದಲ್ಲಿನ ಶಾಸನದಲ್ಲಿ ಬಡಗಿ ಲಿಂಗಣ್ಣನು ತನ್ನ ಕಾರ್ಯದ ಫಲವಾಗಿ ದಾನ ಪಡೆದನೆಂದು ತಿಳಿಸಿದೆ.[೧೩೬]

ರೈತರು

೧೨೬೩ ರ ಕಾರಿಗನೂರಿನ ಶಾಸನವು ರೈತರು ಆಡುಗಳನ್ನು ಕಲ್ಲಿದೇವರ ಪೂಜಾರಿಗೆ ತೆರಿಗೆಯನ್ನು ನೀಡುತ್ತಾರೆ.[೧೩೭]

ಕ್ಷೌರಿಕರು(ನಾಯಿಂದರು)

ಕ್ರಿ.ಶ.೧೫೪೫ರ ತಾವರೆಕೆರೆ ಹನುಮಂತ ದೇವಾಲಯದಲ್ಲಿನ ಶಾಸನವು ಸದಾಶಿವರಾಯನ ಅಧಿಕಾರಿ ರಾಮರಾಜ ಒಡೆಯರು ಕ್ಷೌರಿಕ ವೃತ್ತಿಯ ಮೇಲೆ ಹಾಕುವ ಕುಲತೆರಿಗೆಯನ್ನು ವಿಶೇಷ ಸಂದರ್ಭದಲ್ಲಿ(ಆಚರಣೆ) ಕ್ಷೌರಿಕರ ಮೇಲೆ ಕುಲ ತೆರಿಗೆಯನ್ನು ವಿಧಿಸುತ್ತಾರೆ.[೧೩೮] ಇದು ವೃತ್ತಿಯ ಮೇಲಿನ ತೆರಿಗೆಯನ್ನು ಸೂಚಿಸುತ್ತದೆ.

ಜಾತಿ ಸಮುದಾಯಗಳು

ಶಾಸನದಲ್ಲಿ ಅನೇಕ ಜಾತಿ ಸಮುದಾಯಗಳು ಉಲ್ಲೇಖಿತವಾಗಿರುವುದನ್ನು ಚನ್ನಗಿರಿ ತಾಲ್ಲೂಕಿನ ಶಾಸನಗಳಲ್ಲಿ ಕಾಣಬಹುದು, ಆದ್ದರಿಂದ ಆ ಎಲ್ಲಾ ಜಾತಿ ಸಮುದಾಯಗಳ ಮಾಹಿತಿಯನ್ನು ಒಂದೆಡೆ ಸೆರೆಹಿಡಿಯಲಾಗಿದೆ.

ಬ್ರಾಹ್ಮಣರು ಅಥವಾ ಪುರೋಹಿತರು

ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿದ್ದರು. ಶಾಸನದಲ್ಲಿ ಬ್ರಾಹ್ಮಣ ಗುರು ಅಥವಾ ಪುರೋಹಿತ ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೨೫ರ ಚನ್ನಗಿರಿಯ ಕಸಬೆಯಲ್ಲಿನ ಕಲ್ಯಾಣದ ಚಾಲುಕ್ಯರ ತ್ರಿಭುವನಮಲ್ಲನ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಐದು ಪಟ್ಟಣಗಳ ಮಹಾಪ್ರಭುವಾದ ಇರುಗಮಯ್ಯನು ದೇವಾಲಯಕ್ಕೆ ದಾನ ನೀಡುವ ಮೊದಲು ಬ್ರಾಹ್ಮಣ ಗುರುವಾದ 'ಸಿಖಿಸಿವ ಗುರು'ವಿನ ಪಾದಗಳನ್ನು ತೊಳೆದು ಭೂಮಿಯನ್ನು ಮತ್ತು ಹಣವನ್ನು ದಾನವನ್ನಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ.[೧೩೯] ಕ್ರಿ.ಶ. ೧೧೪೨ರ ಚನ್ನಗಿರಿಯ ಕಸಬೆಯಲ್ಲಿನ ಕಲ್ಲೇಶ್ವರ ದೇವಾಲಯದ

ಪಕ್ಕದಲ್ಲಿರುವ ಹೊಯ್ಸಳರ ಶಾಸನವು ಸಾಮಂತ ಭಾಗಶಃ ಕೇತೇಶ್ವರ ದೇವಾಲಯದ ನಿರ್ವಹಣೆಗೆ ಬ್ರಾಹ್ಮಣ ಗುರುವಾದ ರುದ್ರಶಕ್ತಿಗೆ ಪಾದಗಳನ್ನು ತೊಳೆದು ಭೂಮಿಯನ್ನು ದಾನ ಮಾಡಿದ್ದನ್ನು ದಾಖಲಿಸಿದೆ.[೧೪೦]

ಕ್ರಿ.ಶ. ೧೨೧೪ರ ಅಲಕನಾಳು ಗ್ರಾಮದ ದಕ್ಷಿಣದ ಕಡೆ ಜಲ್ಲೇಶ್ವರ ದೇವಾಲಯದ ರಂಗಮಂಟಪದ ಹೊಯ್ಸಳರ ಶಾಸನವು ಎರೆಯಂಗನ ಕಾಲಕ್ಕೆ ಸೇರಿದೆ. ಹರಿಹರ ದೇವರ ಸಕಲಚಾರ್ಯ ಶಿವದೇವ ಭಟ್ಟೋಪಾಧ್ಯಾಯ, ಬಿಲ್ಲೇಶ್ವರ ದೇವಾಲಯದ ಛತ್ರ ನಿರ್ವಹಣೆಗೆ ದಾನವನ್ನು ಪಡೆಯುತ್ತಾನೆ.[೧೪೧] ಕ್ರಿ.ಶ. ೧೨೩೩ರ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದೊಳಗೆ ಗೋಡೆಯ ಮಗ್ಗುಲಲ್ಲಿ ನಿಲ್ಲಿಸಲಾದ ಹೊಯ್ಸಳರ ವೀರನರಸಿಂಹದೇವನ ಕಾಲಕ್ಕೆ ಸೇರಿದ ಈ ಶಾಸನವು ನಲ್ಕುದರೆಯ ಊರ ಒಡೆಯನಿಂದ ಮೊದಲು ಬ್ರಾಹ್ಮಣ ಗುರು 'ವಮಋಷಿ' ದೇವಾಲಯದ ನಿರ್ವಹಣೆಗೆ ದಾನವನ್ನಾಗಿ ನೀಡಲಾಗುತ್ತದೆ. ಪುರೋಹಿತ ರೈತರಿಂದ ತೆರಿಗೆ ಪಡೆಯುತ್ತಾನೆ.[೧೪೨]

ಕ್ರಿ.ಶ. ೧೨೬೮ರ ಹಿರೇಕೋಗಿಲೂರು ಪಟೇಲ್ ವೀರಭದ್ರಯ್ಯನ ಹಿತ್ತಲಿನ ಯಾದವರ ಸಿಂಗಣ್ಣನ ಶಾಸನವು ಚತ್ತರಾಜನ ಹಿರಿಯ ಮಗನಾದ ಚೌಡನ ಸಿಂಹಾಸನಾರೋಹಣದ ಆಚರಣೆಯ ಸಂದರ್ಭದಲ್ಲಿ ಬ್ರಾಹ್ಮಣ ಗುರುವಾದ ಆಸ್ಥಾನಿಕ ಸ್ಥಹಿಕ ದಂಡಪಾಣಿ ಗುರುಗಳ ಪಾದಗಳನ್ನು ತೊಳೆದು ಭೂಮಿಯನ್ನು ದಾನ ನೀಡುತ್ತಾನೆ.[೧೪೩] ಕ್ರಿ.ಶ. ೧೨೭೭ರ ಹಳೇ ಕತ್ತಲಗೆರೆಯ ಹನುಮಂತ ದೇವಾಲಯದಲ್ಲಿನ ಶಾಸನದಲ್ಲಿ ಯಾದವ ರಾಮಚಂದ್ರರಾಯನ ಕಾಲಕ್ಕೆ ಸೇರಿದ್ದು ಶಾಸನದಲ್ಲಿ ಯಾದವ ರಾಮಚಂದ್ರರಾಯನು ರಾಜ್ಯ ವಿಸ್ತರಣೆ ಮಾಡಿದ್ದರಿಂದ ರಾಜಗುರುವಾದ ರೇಣುಕಾದೇವ ಹರಿಹರ ದೇವಾಲಯಕ್ಕೆ ದಾನವನ್ನು ನೀಡಿದ್ದನ್ನು ದಾಖಲಿಸಿದೆ.[೧೪೪]

ಕ್ರಿ.ಶ. ೧೩೯೪ರ ಸಂತೆಬೆನ್ನೂರಿನ ನಾಡಿಗ ಗುರುರಾಯರ ವಶದಲ್ಲಿದ್ದ ತಾಮ್ರಶಾಸನವು ವಿಜಯನಗರದ ಎರಡನೇ ಹರಿಹರನ ಕಾಲಕ್ಕೆ ಸೇರಿದೆ. ಈ ಶಾಸನ ೨ನೇ ಹರಿಹರನ ಸಾಮಂತ ಮದಕರಿ ಸೀಮೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಮಹಾರಂಗನ ಆಡಳಿತಕ್ಕೆ ಸೇರಿದ ಉತ್ಸಂಗಿವೆಂಟಾ(ಇಂದ್ರಕಂಟ)ವನ್ನು ಬ್ರಾಹ್ಮಣ ಜ್ಯೋತಿಷ್ಯಕಾರ ನರಸಿಂಹಭಟ್ಟರಿಗೆ ನೀಡಿದ ವಿಷಯವನ್ನು ತಿಳಿಸಿದೆ.[೧೪೫] ಕ್ರಿ.ಶ. ೧೬೦೧ರ ಹೊಸಹಳ್ಳಿಯ ಈಶ್ವರ ದೇವಾಲಯದ ಬಳಿಯ ಶಾಸನವು ಸಂತೆಬೆನ್ನೂರಿನ ಮುಮ್ಮಡಿ ಹನುಮಪ್ಪನಾಯಕರ ಕಾಲಕ್ಕೆ ಸೇರಿದೆ. ಈ ಶಾಸನ ಮುಮ್ಮಡಿ ಹನುಮಪ್ಪನಾಯಕನು ಬ್ರಾಹ್ಮಣ ಸಿಂಹದ ಮಲ್ಲಿಭಟ್ಟ ಉಪಾಧ್ಯರ ಮಗನಾದ ನಿಂಗಣ್ಣಭಟ್ಟರಿಗೆ ನೀಡಿದ ಭೂಮಿದಾನವನ್ನು ದಾಖಲಿಸಿದೆ.[೧೪೬] ಕ್ರಿ.ಶ. ೧೬೨೫ರ ಮಂಟರುಘಟ್ಟ ಗ್ರಾಮದ ಶಾಸನವು ಸಂತೆಬೆನ್ನೂರಿನ ನಾಯಕರ ಮುಮ್ಮಡಿ ಹನುಮಪ್ಪನಾಯಕರು ಭಟ್ಟರ ವೆಂಕಟರಾಯರಿಗೆ ಮಂಟರಗಟ್ಟ ಗ್ರಾಮದ ಭಟ್ಟರ-ಅಗ್ರಹಾರವನ್ನು ದಾನವನ್ನಾಗಿ ನೀಡಿದ್ದನ್ನು ಉಲ್ಲೇಖಿಸಿದೆ.[೧೪೭]

ಈ ಮೇಲಿನ ಶಾಸನಗಳಿಂದ ಬ್ರಾಹ್ಮಣ ಅಥವಾ ಪುರೋಹಿತಶಾಹಿ ವರ್ಗವು ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ಹೊಂದಿದ್ದು, ರಾಜರಿಂದ ಸಾಮಂತರಿಂದ ಭೂಮಿಯನ್ನು

ಗ್ರಾಮ(ಅಗ್ರಹಾರ)ಗಳನ್ನು ದಾನವನ್ನಾಗಿ ಪಡೆದಿದ್ದರು. ಹಾಗೆಯೇ ರಾಜರು, ಸಾಮಂತರು ದಾನವನ್ನು ನೀಡುವ ಸಂದರ್ಭದಲ್ಲಿ ಬ್ರಾಹ್ಮಣ ಗುರುಗಳ ಪಾದಗಳನ್ನು ತೊಳೆದು ದಾನವನ್ನು ನೀಡುತ್ತಿದ್ದರು. ಬ್ರಾಹ್ಮಣ ಗುರುಗಳು ಸಹ ದೇವಾಲಯಗಳ ಅಂಗಭೋಗ, ರಂಗಭೋಗ, ನೈವೇದ್ಯ ಮತ್ತು ದೇವಾಲಯದ ಪುನರುಜ್ಜೀವನಕ್ಕಾಗಿ ದಾನವನ್ನು ಪಡೆಯುತ್ತಿದ್ದರೆಂದು ಚನ್ನಗಿರಿ ತಾಲ್ಲೂಕಿನ ಹೆಚ್ಚಿನ ಶಾಸನಗಳಲ್ಲಿ ಉಲ್ಲೇಖಿತವಾಗಿವೆ.

ಬೇಡರು

ಕಾಡಿನಲ್ಲಿ ವಾಸಿಸುತ್ತಾ ಬೇಡರಿಗೆ ಪಶುಪಾಲನೆ, ಬೇಟೆಗಾರಿಕೆ ಪ್ರಮುಖ ವೃತ್ತಿಯಾಗಿತ್ತು. ಆದರೆ ಕೆಲವೊಮ್ಮೆ ಗ್ರಾಮಗಳ ಮೇಲೆ ದಾಳಿ ಮಾಡಿ ಸಂಪತ್ತನ್ನು ದೋಚುತ್ತಿದ್ದರೆಂದು ಹೇಳಲಾಗಿದೆ, ಸಧೃಡವಾದ ಮೈಕಟ್ಟು ಮತ್ತು ಶಕ್ತಿದಾಯಕ ಜನಸಮುದಾಯದವರೇ ಬೇಡರು.[೧೪೮] ಇವರನ್ನು ಪ್ರಸ್ತುತ ನಾಯಕ ಸಮುದಾಯದರೆಂದು ಕರೆಯುತ್ತಾರೆ. ಕ್ರಿ.ಶ.೧೨೦೦ರ ಬಿಲ್ಲಹಳ್ಳಿಯ ಉತ್ತರ ಕಲ್ಲೇಶ್ವರ ದೇವಾಲಯದಲ್ಲಿ ನಿರ್ಮಿಸಲ್ಪಟ್ಟಿರುವ ಹೊಯ್ಸಳರ ವೀರಗಲ್ಲು ಕಾಲಕ್ಕೆ ಬಿಲ್ಲಹಳ್ಳಿಯ ಬಿಲ್ಲಗೌಡನ ಮಗನಾದ ಮಾದಿಗೌಡನು ಬೇಡರೊಡನೆ ಹೋರಾಡಿ ಸಾವನ್ನಪ್ಪುತ್ತಾನೆ ಎಂದು ದಾಖಲಿಸಿದೆ.[೧೪೯] ಕ್ರಿ.ಶ. ೧೨೪೨ರ ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದ ಒಂದನೇ ವೀರಗಲ್ಲಿನಲ್ಲಿ ಬೇಡರ ಬಲಿಷ್ಠ ವ್ಯಕ್ತಿಯಾದ ದುಗಿಸೆಟ್ಟಿಯ ಗುಂಡಿನ ದಾಳಿಯಿಂದ ಸೋಮಯ್ಯನ ಮಗನಾದ ಬೊಮ್ಮನಾಯಕ ದುಗ್ಗಿಸೆಟ್ಟಿಯನ್ನು ಕೊಂದು ಸಾವನ್ನಪ್ಪುತ್ತಾನೆ ಎಂದಿದೆ.[೧೫೦]

ಕಾಡಿನಲ್ಲಿದ್ದ ಬೇಡರು ಒಮ್ಮೊಮ್ಮೆ ಊರಿನ ಮೇಲೆ ದಾಳಿ ಮಾಡುತ್ತಿದ್ದರು. ಆ ಕಾಲಘಟ್ಟದಲ್ಲಿ ಗ್ರಾಮದ ವೀರರು ಅವರ ವಿರುದ್ಧ ಹೋರಾಟ ಮಾಡಿ ಸಾವನ್ನಪ್ಪುತ್ತಿದ್ದರು. ಮಾದಿಗೌಡನು ಹೋರಾಟ ಮಾಡಿ ಸಾವನ್ನಪ್ಪಿದ್ದನೆಂದು ಶಾಸನದಿಂದ ತಿಳಿದು ಬರುತ್ತದೆ. ದುಗಿಸೆಟ್ಟಿಯ ಬಗ್ಗೆ ಕ್ರಿ.ಶ. ೧೨೪೨ರ ನಲ್ಕುದರೆ ಶಾಸನದಲ್ಲಿ ದುಗಿಸೆಟ್ಟಿಯನ್ನು ಬೇಡರ ಬಲಿಷ್ಠ ವ್ಯಕ್ತಿಯೆಂದು ಶಾಸನ ವರ್ಣಿಸಿದೆ. ಬೇಡರು ಬಹಳ ಬಲಿಷ್ಟರು ದೃಢಕಾಯವಾದ ಮೈಕಟ್ಟನ್ನು ಹೊಂದಿದ್ದರೆಂದು, ಬೊಮ್ಮನಾಯಕನು ದುಗಿಸೆಟ್ಟಿಯನ್ನು ಕೊಂದು ಸಾವನ್ನಪ್ಪಿದನೆಂದು ಶಾಸನವು ತಿಳಿಸುತ್ತದೆ.[೧೫೧] ಈ ಶಾಸನದ ಮೂಲಕ ಬೇಡರ ಈ ಸಮುದಾಯ ಚನ್ನಗಿರಿಯಲ್ಲಿ ಆ ಕಾಲಘಟ್ಟದಲ್ಲಿ ನೆಲೆಸಿದ್ದರೆಂಬುದು ಸ್ಪಷ್ಟವಾಗಿದೆ.

ಶೆಟ್ಟಿಗಳು(ಸೆಟ್ಟಿಗಳು)

ವ್ಯಾಪಾರಿ ಸಮುದಾಯದವರಿಂದ ಇವರು ಸಮಾಜದಲ್ಲಿ ಉನ್ನತ ಸ್ಥಾನಮಾನ ಗಳಿಸಿದ್ದರು. ಸರ್ಕಾರದ ಅಧಿಕಾರಿಗಳಾಗಿ ಕಾರ್ಯ ನಿರ್ವಸುತ್ತಿದ್ದರು. ಕ್ರಿ.ಶ. ೧೦೫೦ರ ಕಗ್ಗತ್ತೂರು ಗ್ರಾಮದ ವೀರಭದ್ರ ದೇವಾಲಯದ ಮುಂದೆ ಸ್ತಂಬ ಶಾಸನದಲ್ಲಿ ಸೋಮನಾಥ ದೇವಾಲಯವನ್ನು ನಿರ್ಮಿಸಲೆಂದು ಸೆಟ್ಟಿಗಳು ಮೂರು ಕಲ್ಲನ್ನಿಟ್ಟು ದೇವಾಲಯವನ್ನು ಕಟ್ಟಿಸಿದ್ದನ್ನು ದಾಖಲಿಸಿದೆ.[೧೫೨] ಕ್ರಿ.ಶ. ೧೭೫೮ರ ಉಡುವ ಗ್ರಾಮದ ಹನುಮಂತ ದೇವಾಲಯದ ಬೇವಿನ ಮರದ ಬುಡದಲಿನ ಶಾಸನವು ಸರ್ ಜಮೀನ್ದಾರ್ ಬಸವಾಪಟ್ಟಣದ ಸಾಗಪೇಟ್ ಶೆಟ್ಟಿಗಳ ಸಮ್ಮುಖದಲ್ಲಿ ಮರಿಲಿಂಗಪ್ಪನಿಗೆ

ಶೆಟ್ಟಿ(ಸೆಟ್ಟಿ) ಕಾರ್ಯನಿರ್ವಹಿಸಲು ಸೂಳೆಕೆರೆ ಸೀಮೆಯಲ್ಲಿ 'ಕೋಲೆ' ಪ್ರದೇಶಕ್ಕೆ ಸಂಬಂಧಿಸಿದ ಉಡವಹಳ್ಳಿಯನ್ನು ಪಾಲಿಕೆ ಉಂಬಳಿಯಾಗಿ ನೀಡಿದ್ದನ್ನು ದಾಖಲಿಸಿದೆ.[೧೫೩]

ಶೆಟ್ಟಿಗಳು ಸಮಾಜದಲ್ಲಿ ಮಹತ್ವದ ಸ್ಥಾನಮಾನ ಹೊಂದಿದ್ದರೂ, ಕಗ್ಗತ್ತೂರಿನ ದೇವಾಲಯವನ್ನು ನಿರ್ವಹಿಸಲು ಅಡಿಗಲ್ಲನ್ನು ಇಟ್ಟವರು ಇವರಾಗಿದ್ದು, ಕಗ್ಗತ್ತೂರು ಗ್ರಾಮದ ಮೇಲ್ವಿಚಾರಕರೆಂದು ತಿಳಿಯುತ್ತದೆ. ಹಾಗೆಯೇ ಶೆಟ್ಟಿ ಹುದ್ದೆಯ ಕಾರ್ಯನಿರ್ವಹಿಸಲು ಉಂಬಳಿಯಾಗಿ ಉಡವಹಳ್ಳಿಯನ್ನು ಪಡೆದಿದ್ದ ಮರಿಲಿಂಗಪ್ಪನ ಹೆಸರನ್ನು ಉಡವ ಗ್ರಾಮದ ಶಾಸನ ತಿಳಿಸುತ್ತದೆ.[೧೫೪]

ದೊಂಬರು

ಕ್ರಿ.ಶ.೧೫೬೫ರ ಗೊಪ್ಪೇನಹಳ್ಳಿಯ ಆಂಜನೇಯದ ಆವರಣದಲ್ಲಿ ನಿಲ್ಲಿಸಿರುವ ಶಾಸನದಲ್ಲಿ ಕೆಂಗಪ್ಪನಾಯಕನು ದೊಂಬರ ಕೆಂಗಪ್ಪನಿಗೆ ಗೋಪ್ಪೆನಹಳ್ಳಿ ಗ್ರಾಮವನ್ನು ದಾನವನ್ನಾಗಿ ನೀಡಿದ್ದನು. ಇದರಲ್ಲಿ ದೊಂಬರು ಎಂಬ ಜನಸಮುದಾಯ ಈ ಕಾಲ ಘಟ್ಟದಲ್ಲಿ ನೆಲೆಸಿದ್ದರು ಎಂದು ತಿಳಿದುಬರುತ್ತದೆ.[೧೫೫]

೨.೫. ಆರ್ಥಿಕ ಚಟುವಟಿಕೆಗಳು

ಕ್ರಿ.ಶ. ೧೦೬೩ರ ಮೆದಿಕೆರೆ ಗ್ರಾಮದ ಪೂರ್ವದ ಮಧುಕೇಶ್ವರ ದೇವಾಲಯದ ಬಳಿಯಿರುವ ಶಾಸನವು ಕಲ್ಯಾಣದ ಚಾಲುಕ್ಯರ ವಿಜಯಾದಿತ್ಯನ ಕಾಲಕ್ಕೆ ಸೇರಿದೆ. ಶಾಸನದಲ್ಲಿ ಮಾಚಗಾವುಡನು ಎರಡು ಎತ್ತು ಸುತ್ತುವ ಗಾಣದ ಕೈಗಾರಿಕೆಯನ್ನು ದಾನವನ್ನಾಗಿ ನೀಡುತ್ತಾನೆ ಎಂದಿದೆ.[೧೫೬] ಕ್ರಿ.ಶ.೧೧೨೫ರ ಚನ್ನಗಿರಿ ಕಸಬೆ ಗ್ರಾಮದಲ್ಲಿನ ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲದೇವನ ಕಾಲಕ್ಕೆ ಸೇರಿದ ಶಾಸನದಲ್ಲಿ ಗಾಣದ ಕೈಗಾರಿಕೆಯನ್ನು ಇರುಗನು ಇರುಗೇಶ್ವರ ದೇವಾಲಯಕ್ಕೆ ದಾನವಾಗಿ ನೀಡುತ್ತಾನೆ.[೧೫೭] ಕ್ರಿ.ಶ.೧೬೫೩ರ ಹೊಸಹಳ್ಳಿಯ ಬಡೇಸಾಬಿ ಕೆರೆಯ ಕಟ್ಟೆಯ ಮೇಲಿನ ಒಂದನೇ ಮಹಮದ್–ಷಾ–ಇಬ್ರಾಹಿಂನ ಕಾಲಕ್ಕೆ ಸೇರಿದ ಪರ್ಷಿಯನ್ ಶಾಸನದಲ್ಲಿ ಮಹಮದ್–ಷಾಹ–ಖಾನ್–ಖಾನ್ ಸಾಹಿಬ್ ತಾವರೆಕೆರೆಯ ಎರಡು ಕಡೆ ನೀರು ಹರಿಯುವ ಎತ್ತರವಾದ ಪ್ರದೇಶದಲ್ಲಿ ಗಾಣದ ಕೈಗಾರಿಕೆಯನ್ನು ಸ್ಥಾಪಿಸುತ್ತಾರೆ ಎಂದಿದೆ. ಕಾಶಿ ಮತ್ತು ರಾಮೇಶ್ವರಕ್ಕೆ ಹೋಗುವ ಜನರು ಗಾಣದ ಕೈಗಾರಿಕೆಯ ಎಣ್ಣೆಯನ್ನು ತೆಗೆದುಕೊಂಡು ಹೋಗುತ್ತಾರೆ. ಕೆರೆಯ ಸಹಾಯದಿಂದ ಕೃಷಿಕಾಯಕ ನಡೆಯುತ್ತಿತ್ತು. ಭತ್ತವನ್ನು, ದ್ರಾಕ್ಷಿಯನ್ನು, ತಂಪುಪಾನೀಯ ಗಿಡಗಳನ್ನು ಬೆಳೆಯುತ್ತಿದ್ದರು. ಅಂದರೆ ಯಾತ್ರೆಗೆ ಮುಖ್ಯ ರಹದಾರಿಯಾಗಿತೆಂದು ತಿಳಿದುಬರುತ್ತದೆ. ಆರ್ಥಿಕ ಚಟವಟಿಕೆಯ ಪ್ರಮುಖ ಕೈಗಾರಿಕೆಯಾಗಿತ್ತು.[೧೫೮]

ಕಂದಾಯ ಪದ್ಧತಿ

ಕ್ರಿ.ಶ. ೧೫೪೬ರ ತಾವರೆಕೆರೆ ಗ್ರಾಮದ ಹನುಮಂತ ದೇವಾಲಯದ ಮುಂಭಾಗದಲ್ಲಿನ ಶಾಸನವು ವಿಜಯನಗರ ಸಾಮ್ರಾಜ್ಯದ ಸದಾಶಿವರಾಯನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೬೮ನೇ ಸಲ್ಲುವ ವರ್ತಮಾನ ವಿಶ್ವಾವ ಸಂವತ್ಸರದ ಬಾದ್ರಪದ ಶುಭ ಹನ್ನೆರಡನೆ ಭಾನುವಾರದ ಶ್ರೀ ವೀರಪ್ರತಾಪ ಸದಾಶಿವರಾಯ ಮಹರಾಯನ ರಾಮರಾಜೊಡೆಯರು ನಾಯಿಂದರು(ಕ್ಷೌರಿಕರು) ಮೇಲೆ ವಿಧಿಸುವ ಕುಲ ತೆರಿಗೆಯನ್ನು ವಿಶೇಷ ಸಂದರ್ಭಗಳಲ್ಲಿ ವಿಧಿಸಿದರು ಎಂದಿದೆ.[೧೫೯]

ಕ್ರಿ.ಶ.೧೫೬೫ರ ಚನ್ನಗಿರಿಯ ನಾಡಿಗ ಘಟ್ಟಪ್ಪನ ಮಗ ಬಾಳಬಸಯ್ಯನ ವಶದಲ್ಲಿದ್ದ ತಾಮ್ರಶಾಸನವು ಅಳಿಯ ರಾಮರಾಯನ ಸಾಮಂತನಾದ ಸಂತೆಬೆನ್ನೂರು ಕೆಂಗಪ್ಪನಾಯಕನ ಕಾಲಕ್ಕೆ ಸೇರಿದ ಶಾಸನದಲ್ಲಿ, ಕೆಂಗಪ್ಪನಾಯಕರು ಮಲ್ಲಿಭಟ್ಟನ ಮಗನಾದ ಲಿಂಗಣ್ಣನಿಗೆ ಸೇನಭೋವ ಮತ್ತು ಪುರೋಹಿತ ಹುದ್ಧೆಯನ್ನು ನೀಡಿ, ಮಕ್ಕಳು ಮತ್ತು ಮೊಮ್ಮಕ್ಕಳು ಶಿಸ್ತು (ಕಂದಾಯ) ಸಂಗ್ರಹಿಸುವ ಹಕ್ಕನ್ನು ನೀಡಿದ್ದಾರೆಂಬ ವಿಷಯವಿದೆ.[೧೬೦] ಕ್ರಿ.ಶ. ೧೬೫೭ರ ಹೊಸಹಳ್ಳಿಯ ಬಡೇಸಾಬಿ ಕೆರೆ ಕಟ್ಟೆಯ ಮೇಲೆ ಇದ್ದ ಒಂದನೇ ಶಾಸನವು ಬಿಜಾಪುರದ ಮಹಮದ್–ಷಾ–ಇಬ್ರಾಹಿಂ ಕಾಲದ ಶಾಸನದಲ್ಲಿ ಬಸವಾಪಟ್ಟಣವು ಸಹ ಈ ರಾಯರೇಖೆಗೆ ಸೇರಿದೆ ಎಂದು ತಿಳಿಸಲಾಗಿದೆ.[೧೬೧]

ವಿಜಯನಗರ ಕಾಲ ರಾಯರೇಖೆ ಭೂ ಕಂದಾಯ ವಿಧಿಸುವ ಪದ್ಧತಿ ಅಸ್ತಿತ್ವದಲ್ಲಿತ್ತು. ಇದು ಬಸವಾಪಟ್ಟಣದ ವ್ಯಾಪ್ತಿಗೆ ಬಿಜಾಪುರದ ಷಾಹಿಸುಲ್ತಾನರ ಕಾಲಕ್ಕೂ ಮುಂದುವರೆಯುತ್ತದೆ. ಕಂದಾಯ ಪದ್ಧತಿ ಶಿಸ್ತು ಗ್ರಾಮಗಳಿಂದ ಸಂಗ್ರಹಿಸುತ್ತಿದ್ದ, ತೆರಿಗೆ ಪದ್ಧತಿ ಕೆಳದಿಯ ಶಿವಪ್ಪನಾಯಕನ ಪೂರ್ವದಲ್ಲಿ ಸಂತೆಬೆನ್ನೂರು ನಾಯಕರ ಕೆಂಗಪ್ಪನಾಯಕನ ಕಾಲಕ್ಕೆ ಸಂಗ್ರಹವಾಗುತ್ತೆಂಬುದು ತಿಳಿದುಬರುತ್ತದೆ. ಸಂತೆಬೆನ್ನೂರು 'ಕೆಂಗಪ್ಪನಾಯಕನ ಶಿಸ್ತುಪದ್ಧತಿ ಮುಂದೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶಿವಪ್ಪನಾಯಕನಿಗೆ ಕಂದಾಯಪದ್ದತಿ ಮಾದರಿಯಾಗಿತ್ತೆಂದು' ಶಾಸನದಿಂದ ತಿಳಿದುಬರುತ್ತದೆ.

ಚನ್ನಗಿರಿ ತಾಲ್ಲೂಕಿನ ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆಯಲ್ಲಿ ಈ ಅಧ್ಯಾಯದಲ್ಲಿ ಸ್ಥಳನಾಮ, ಐತಿಹ್ಯಗಳು(ಶಾಸನಗಳ ಮೂಲಕ) ಚನ್ನಗಿರಿ, ಕತ್ತಲಗೆರೆ, ನೀತಿಗೆರೆ, ದೇವರಹಳ್ಳಿ, ಚಿಕ್ಕುಡ, ಹಿರೇಉಡ ಮೊದಲಾದ ಗ್ರಾಮಗಳ ಮಾಹಿತಿಯನ್ನು ಕ್ರೋಡೀಕರಿಸಿಕೊಂಡು ವಿವರಿಸಿದೆ. ಐತಿಹಾಸಿಕ ಹಿನ್ನೆಲೆಯಲ್ಲಿ ರಾಜಮನೆತನಗಳ ರಾಷ್ಟ್ರಕೂಟರ ನಂತರ ಕಂಡುಬರುವಂತಹ ಕಲ್ಯಾಣದ ಚಾಲುಕ್ಯರು, ಉಚ್ಚಂಗಿ ಪಾಂಡ್ಯರು, ಹೊಯ್ಸಳರು, ಅಸಂದಿಗಂಗರು, ವಿಜಯನಗರ ಸಾಮ್ರಾಜ್ಯ, ಸಂತೆಬೆನ್ನೂರಿನ ನಾಯಕರು, ಚಿತ್ರದುರ್ಗದ ಪಾಳೇಗಾರರು ಮತ್ತು ಬಿಜಾಪುರದ ಆಧಿಲ್‌ಷಾಹಿಗಳ ಇತಿಹಾಸವನ್ನು ಚನ್ನಗಿರಿ ತಾಲ್ಲೂಕಿನ ದೊರೆತ ಶಾಸನಗಳ ಆಧಾರದ ಮೇಲೆ ಅಲ್ಲಿನ ರಾಜಮನೆತನಗಳ ಅರಸರ ಶಾಸನೋಕ್ತ ಚರಿತ್ರೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವಂತಹ ಪ್ರಯತ್ನ ಮಾಡಿದೆ.

ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ಚರಿತ್ರೆ ಅಷ್ಟೇ ಅಲ್ಲ ಅದರೊಂದಿಗೆ ಜನಸಾಮಾನ್ಯರ ಅಧ್ಯಯನವು ಸಹ ಆಗಿದೆ. ಆದ್ದರಿಂದ ಶಾಸೋಕ್ತ ವೃತ್ತಿಗಳು ಮತ್ತು ಜಾತಿ ಸಮುದಾಯಗಳು, ಆರ್ಥಿಕ ಚಟುವಟಿಕೆಗಳು ಮತ್ತು ಆ ಕಾಲಘಟ್ಟ ಆಡಳಿತ ವಿಭಾಗಗಳನ್ನು ವಿವರಿಸಿದೆ.

ಆಡಳಿತ ವಿಭಾಗಗಳಾದಂತಹ ಬಿಳಚಿ ಎಪ್ಪತ್ತು, ನೊಳಂಬವಾಡಿ ಮೂವತ್ತೆರಡು ಸಾವಿರ, ದುಮ್ಮಿ, ನಲ್ಲೂರು ಸೀಮೆ, ಅಸಂದಿನಾಡು, ಮದಕರಿಸೀಮೆ, ಉತ್ಸಂಗಿವೆಂಟೆ, ಶಾಸನದಲ್ಲಿ ಲಭ್ಯವಾಗಿವೆ. ಹಾಗೆಯೇ ವೃತ್ತಿಗಳಾದ ಗೌಡ, ಊರೊಡೆಯ, ಸೇನುಭೋವ, ನಾಡಿಗರ್, ಬಡಗಿ, ರೈತರು ಮತ್ತು ಜಾತಿ ಸಮುದಾಯಗಳಾದ ಬ್ರಾಹ್ಮಣ ಅಥವಾ ಪುರೋಹಿತ, ಬೇಡರು, ಶೆಟ್ಟಿಗಳು, ದೊಂಬರದಂತಹ ಸಮುದಾಯಗಳು ಶಾಸನದಲ್ಲಿ ಉಲ್ಲೇಖವಾಗಿವೆ. ಹಾಗೂ ಕಂದಾಯ ಪದ್ಧತಿ, ಗಾಣದ ಕೈಗಾರಿಕೆ, ಕೃಷಿಯಂತಹ ಆರ್ಥಿಕ ಚಟುವಟಿಕೆಗಳು ಶಾಸನದಲ್ಲಿ ಲಭ್ಯವಾಗಿದ್ದು, ಇವೆಲ್ಲವುಗಳ ಮಾಹಿತಿಯನ್ನು ಸಂಗ್ರಹಿಸಿಕೊಂಡು ಈ ಅಧ್ಯಯನವನ್ನು ರಚಿಸುವಂತಹ ಪ್ರಯತ್ನವಾಗಿದೆ.

ಕೊನೆಟಿಪ್ಪಣಿ

೧. ಸಂತೆಬೆನ್ನೂರು ಸುಮತೀಂದ್ರ ನಾಡಿಗ್ : ದಾವಣಗೆರೆ ಜಿಲ್ಲೆ - ಇತಿಹಾಸದ ಕೆಲವು ಹೆಜ್ಜೆಗಳು(ಐತಿಹಾಸಿಕ ಲೇಖನಗಳು), ಪು. ೯೬

೨. ಅದೇ, ಪು. ೧೧೬

೩. ಅದೇ, ಪು. ೧೨೭

೪. ಅದೇ, ಪು. ೧೧೦-೧೧೧

೫. ರೈಸ್ ಬಿ.ಎಲ್., ಇಸಿ. ಸಂ-೭, ಪು.೪೭೪

೬. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಪೂರ್ವೋಕ್ತ , ಪು.೧೩೬

೭. ಅದೇ, ಪು. ೧೨೪-೧೨೫

೮. ಅದೇ, ಪು. ೭೬

೯. ಗಿರಿಜಾ ಟಿ : ದಾವಣಗೆರೆ ಇದು ನಮ್ಮ ಜಿಲ್ಲೆ, ಪು.೫೩೦

೧೦. ಅದೇ, ಪು. ೫೩೨.

೧೧. ಇತಿಹಾಸ ದರ್ಶನ ಸಂ-೧೭, ಪು.೧೯,೨೧

೧೨. ಗಿರಿಜಾ ಟಿ., ಪೂರ್ವೋಕ್ತ, ಪು. ೫೩೨.

೧೩. ಅದೇ, ಪು. ೫೩೨.

೧೪. ಬಿ. ರಾಜಶೇಖರಪ್ಪ, ಹಿರೇಕೋಗಲೂರಿನ ಅಪ್ರಕಟಿತ ಶಾಸನಗಳು, ಇತಿಹಾಸ ದರ್ಶನ, ಪು. ೫೧.

೧೫. ರೈಸ್ ಬಿ. ಎಲ್., ಪೂರ್ವೋಕ್ತ, ಪು. ೪೨೭.

೧೬. ಅದೇ, ಪು. ೪೪೧.

೧೭. ಅಂಬಳಿಕೆ ಹಿರಿಯಣ್ಣ(ಸಂ.), ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಪು.೫೫೫.

೧೮. ಮೈಸೂರು ಆರ್ಕಿಲಾಜಿಕಲ್ ರಿಪೋರ್ಟ್(ಎಂಎಆರ್), ಪು. ೧೧೧-೧೧೨.

೧೯. ಅಂಬಳಿಕೆ ಹಿರಿಯ, ಪೂರ್ವೋಕ್ತ, ಕನ್ನಡ ವಿಷಯ ವಿಶ್ವಕೋಶ, ಪು. ೪೨೭.

೨೦. ಅದೇ, ಪು. ೫೫೬

೨೧. ಇತಿಹಾಸ ದರ್ಶನ ಸಂ.೧೭, ಪೂರ್ವೋಕ್ತ, ಪು. ೫೧

೨೨. ಅದೇ ಪು.೫೨

೨೩. ರೈಸ್ ಬಿ.ಎಲ್., ಪೂರ್ವೋಕ್ತ, ಪು. ೧೮೧

೨೪. ಅದೇ, ೧೮೩

೨೫. ಅದೇ, ಪು. ೧೯೧

೨೬. ಅದೇ, ಪು. ೧೮೦

೨೭. ಅದೇ, ಪು. ೧೮೮

೨೮. ಅದೇ, ಪು.೧೮೯

೨೯. ಅದೇ, ಪು.೧೮೮

೩೦. ಅದೇ, ಪು.೧೮೮

೩೧. ಅದೇ, ಪು. ೧೮೮

೩೨. ಇತಿಹಾಸ ದರ್ಶನ ಸಂ., ಪೂರ್ವೋಕ್ತ, ಪು.೫೯

೩೩. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಕನ್ನಡ ವಿಷಯ ವಿಶ್ವಕೋಶ, ಪು.೧೧೦೬

೩೪. ಗಿರಿಜಾ ಟಿ., ಪೂರ್ವೋಕ್ತ, ಪು.೫೩೨

೩೫. ರೈಸ್ ಬಿ. ಎಲ್., ಪೂರ್ವೋಕ್ತ, ಪು. ೧೮೧

೩೬. ಅದೇ, ಪು. ೧೮೨

೩೭. ಅದೇ, ಪು. ೧೦೭-೧೦೮

೩೮. ಅದೇ, ಪು. ೧೮೨

೩೯. ಅದೇ, ಪು.೧೮೨

೪೦. ಅದೇ, ಪು. ೧೮೩

೪೧. ಅದೇ, ಪು. ೧೭೯

೪೨. ಅದೇ, ಪು. ೧೮೮

೪೩. ಅದೇ, ಪು.೧೮೮

೪೪. ಅದೇ, ಪು.೧೮೯

೪೫. ಗಿರಿಜಾ ಟಿ., ಪೂರ್ವೋಕ್ತ, ಪು.೫೩೨

೪೬. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೯೪

೪೭. ಅದೇ, ಪು.೧೮೪

೪೮. ಅದೇ, ಪು.೧೮೫

೪೯. ಶಿವಪ್ಪ ಅರಿವು : ಕರ್ನಾಟಕ ಇತಿಹಾಸ, ಪು.೧೭೬

೫೦. ಅದೇ, ಪು.೧೮೫

೫೧. ಶಿವಪ್ಪ ಅರಿವು, ಪೂರ್ವೋಕ್ತ, ಪು.೧೮೬

೫೨. ರೈಸ್ ಬಿ.ಎಲ್., ಪೂರ್ವೋಕ್ತ, ಪು.೧೮೬.

೫೩. ಅದೇ, ಪು.೧೮೮

೫೪. ಅದೇ, ಪು.೧೯೯

೫೫. ಶಿವಪ್ಪ ಅರಿವು, ಪೂರ್ವೋಕ್ತ, ಪು.೧೯೯

೫೬. ಗಿರಿಜಾ ಟಿ., ಪೂರ್ವೋಕ್ತ, ಪು.೫೩೨

೫೭. ರೈಸ್ ಬಿ.ಎಲ್., ಪೂರ್ವೋಕ್ತ ಪು.೧೯೧-೧೯೨

೫೮. ಅದೇ, ಪು.೧೮೦

೫೯. ಗಿರಿಜಾ ಟಿ., ಪೂರ್ವೋಕ್ತ, ಪು.೫೩೨

೬೦. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಕನ್ನಡ ವಿಷಯ ವಿಶ್ವಕೋಶ, ಪು.೯೩೨

೬೧. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೮೩

೬೨. ಅದೇ, ಪು.೪೭೦

೬೩. ಅದೇ, ಪು.೪೧೫

೬೪. ಅದೇ, ಪು.೧೮೩

೬೫. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಕನ್ನಡ ವಿಷಯ ವಿಶ್ವಕೋಶ, ಪು.೯೬೩

೬೬. ಅದೇ, ಪು. ೧೮೧

೬೭. ಸೂರ್ಯನಾಥ ಕಾಮತ್, ಕರ್ನಾಟಕ ಇತಿಹಾಸ, ಪು.೬೭

೬೮. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೮೩

೬೯. ಅದೇ, ಪು.೧೯೧

೭೦. ಗಿರಿಜಾ ಟಿ., ಪೂರ್ವೋಕ್ತ, ಪು.೫೧೮

೭೧. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೮೯

೭೨. ಅದೇ, ಪು.೧೯೧

೭೩. ಅದೇ, ಪು.೧೯೧

೭೪. ಅದೇ, ಪು.೧೮೫

೭೫. ಅದೇ, ಪು.೧೮೨

೭೬. ಅದೇ, ಪು.೧೮೩

೭೭. ಅದೇ, ಪು.೧೮೩

೭೮. ಅದೇ, ಪು.೧೮೪

೭೯. ಅದೇ, ಪು.೧೮೮

೮೦. ಎಂ. ಎ. ಆರ್-೧೯೩೫, ಪು.೧೧೩

೮೧. ಅದೇ, ಪು.೧೧೨-೧೧೩.

೮೨. ಅದೇ, ಪು.೧೧೪

೮೩. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೮೬

೮೪. ಕನ್ನಡ ವಿಷಯ ವಿಶ್ವಕೋಶ, ಪೂರ್ವೋಕ್ತ, ಪು.೯೭೭

೮೫. ಅದೇ, ಪು.೯೭೮

೮೬. ಅದೇ, ಪು.೯೭೮

೮೭. ಗಿರಿಜಾ ಟಿ., ಪೂರ್ವೋಕ್ತ, ಪು.೫೩೨

೮೮. ರೈಸ್ ಬಿ. ಎಲ್., ಪೂರ್ವೋಕ್ತ, ಪು.೧೮೬

೮೯. ಅದೇ, ಪು.೧೮೭

೯೦. ಅದೇ, ಪು.೧೮೭

೯೧. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೪೦

೯೨. ಅದೇ, ಪು.೪೪೪

೯೩. ಅದೇ, ಪು.೪೫೬

೯೪. ಅದೇ, ಪು.೪೫೭

೯೫. ನಾಗಯ್ಯ ಜೆ. ಎಂ., ಆರನೇ ವಿಕ್ರಮಾದಿತ್ಯನ ಶಾಸನಗಳು, ಪು.೧೧೮

೯೬. ಎ. ಕೆ. ಸಂ–೧೧(ರೈಸ್ ಆವೃತ್ತಿ), ಪು.೩೩, (ಚಿಕ್ಕಮಧುರೆ ಶಾಸನ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ)

೯೭. ಚನ್ನಬಸವಯ್ಯ ಹಿರೇಮಠ, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪು.೧೦೮

೯೮. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೪೦

೯೯. ಅದೇ, ಪು.೪೫೬

೧೦೦. ಅದೇ, ಪು.೪೪೪

೧೦೧. ಅದೇ, ಪು.೪೩೩

೧೦೨. ರೈಸ್ ಬಿ. ಎಲ್., ಇ.ಸಿ. ಎ. ಕ. ಸಂ.೭, ಭಾಗ–೨, ಪು.೪೫೬

೧೦೩. ಅದೇ, ಪು.೪೫೬

೧೦೪. ಅದೇ, ಪು.೪೫೭

೧೦೫. ಅದೇ, ಪು.೪೬೫

೧೦೬. ಅದೇ, ಪು.೪೬೮

೧೦೭. ಅದೇ, ಪು.೪೪೮

೧೦೮. ಅದೇ, ಪು.೪೫೦

೧೦೯. ಚನ್ನಬಸವಯ್ಯ ಹಿರೇಮಠ, ಪೂರ್ವೋಕ್ತ, ಪು.೨೨೯

೧೧೦. ಅದೇ, ಪು.೨೨೯

೧೧೧. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೬೦

೧೧೨. ಅದೇ, ಪು.೪೨೯

೧೧೩. ಇತಿಹಾಸ ದರ್ಶನ ಸಂ-೧೭, ಪೂರ್ವೋಕ್ತ, ಪು.೫೯

೧೧೪. ಅದೇ, ಪು.೫೩

೧೧೫. ಅದೇ, ಪು. ೫೯

೧೧೬. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೩೧

೧೧೭. ಸದಾಶಿವ ಕೆ., ಸಮಗ್ರ ಭಾರತದ ಇತಿಹಾಸ, ಪು.೯೬

೧೧೮. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೩೨

೧೧೯. ಅದೇ, ಪು.೪೨೭

೧೨೦. ಅದೇ, ಪು.೪೬೦

೧೨೧. ಅದೇ, ಪು.೪೩೧

೧೨೨. ಅದೇ, ಪು.೪೬೬

೧೨೩. ಅದೇ, ಪು.೪೪೮

೧೨೪. ಅದೇ, ಪು.೪೪೮

೧೨೫. ಅದೇ, ಪು.೪೬೫

೧೨೬. ಅದೇ, ಪು.೪೩೦

೧೨೭. ಅದೇ, ಪು.೪೩೦

೧೨೮. ಅದೇ, ಪು.೪೪೫

೧೨೯. ಅದೇ, ಪು.೪೫೧

೧೩೦. ಅದೇ, ಪು.೪೫೧

೧೩೧. ಅದೇ, ಪು.೪೭೨

೧೩೨. ಅದೇ, ಪು.೪೫೮

೧೩೩. ಅದೇ, ಪು.೪೬೬

೧೩೪. ಅದೇ, ಪು.೪೪೬

೧೩೫. ಅದೇ, ಪು.೪೪೫

೧೩೬. ಅದೇ, ಪು.೪೩೯

೧೩೭. ಅದೇ, ಪು.೪೨೬

೧೩೮. ಅದೇ, ಪು.೪೭೨

೧೩೯. ಅದೇ, ಪು.೪೫೬

೧೪೦. ಅದೇ, ಪು.೪೫೫

೧೪೧. ಅದೇ, ಪು.೬೦

೧೪೨. ಅದೇ, ಪು.೪೫೧

೧೪೩. ಅದೇ, ಪು.೪೩೩

೧೪೪. ಅದೇ, ಪು.೪೨೫

೧೪೫. ಅದೇ, ಪು.೪೨೮

೧೪೬. ಅದೇ, ಪು.೪೪೬

೧೪೭. ಅದೇ, ಪು.೪೪೨

೧೪೮. ಕರ್ನಾಟಕ ರಾಜ್ಯಕೋಶ-೪: ಜನಸಮುದಾಯ ಸಂಪುಟ, ಪು.೭೪

೧೪೯. ರೈಸ್ ಬಿ. ಎಲ್., ಪೂರ್ವೋಕ್ತ, ಪು.೪೪೨

೧೫೦. ಅದೇ, ಪು.೪೫೫

೧೫೧. ಅದೇ, ಪು.೪೪೦

೧೫೨. ಅದೇ, ಪು.೪೫೦

೧೫೩. ಅದೇ, ಪು.೪೬೪

೧೫೪. ಅದೇ, ಪು.೪೩೧

೧೫೫. ಅದೇ, ಪು.೪೫೬

೧೫೬. ಅದೇ, ಪು.೪೪೬

೧೫೭. ಅದೇ, ಪು.೪೭೨

೧೫೮. ಅದೇ, ಪು.೪೫೯

೧೫೯. ಅದೇ, ಪು.೪೪೬

೧೬೦. ಅದೇ, ಪು.೪೨೭

೧೬೧. ಅದೇ, ಪು.೪೬೦

ಶಾಸನದಲ್ಲಿ ಉಲ್ಲೇಖಿತ ಆಡಳಿತ ವಿಭಾಗಗಳು

ಕ್ರ.ಸಂ.	ಕಾಲ	ಸಂತತಿ	ರಾಜ	ಬಿಳಚಿ ಎಪ್ಪತ್ತು ಸಾಮಂತ	ಆಡಳಿತ ವಿಭಾಗ	ಸ್ಥಳ	ವಿವರಣೆ	ಪ್ರಕಟಣೆ
೧.	೧೦೫೦	–	–	ಸಾವಿರ ನಾಡಿನ ಸಿಂಗಚತ್ತರ	ಬಿಳಚಿ ಎಪ್ಪತ್ತು	ಕಗ್ಗತ್ತೂರು	–	ಇ.ಸಿ.–೭ ೩೨ನೇ ಶಾಸನ
೨.	೧೧೪೯	ಕಲ್ಯಾಣದ ಚಾಲುಕ್ಯರು	ಜಗದೇಕಮಲ್ಲ	ಇಡುವರಸ	ಬಿಳಚಿ ಎಪ್ಪತ್ತು	ಅಸ್ತಾಪನಹಳ್ಳಿ	ಸೂಸಲಾಗೆರೆಯಿಂದ ಆಳ್ವಿಕೆ ಮಾಡುತ್ತಾನೆ	ಇ.ಸಿ.–೭ ೩೯ನೇ ಶಾಸನ
೩.	೧೧೨೫	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲದೇವ	ಸೋಮರಸ ಇರುಗಮಯ್ಯ	ಬಿಳಚಿ ಎಪ್ಪತ್ತು ಮನುಜವೊಳಲು ಹನ್ನೆರಡು ಹರಕಲಿ ಹನ್ನೆರಡು	ಚನ್ನಗಿರಿ	ಇರುಗಮಯ್ಯ ಆಳ್ವಿಕೆ ಮಾಡುತ್ತಾನೆ	ಇ.ಸಿ.–೭ ೬೧ನೇ ಶಾಸನ
೪.	೧೦೮೩	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲದೇವ	ಉಚ್ಚಂಗಿ ಪಾಂಡ್ಯರು	ನೊಳಂಬವಾಡಿ ಮೂವತ್ತೆರಡು ಸಾವಿರ	ಹಿರೇಉಡ	ಮಹಮಂಡಲೇಶ್ವರ ತ್ರಿಭುವನ ಮಲ್ಲ ಪಾಂಡ್ಯದೇವ ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಆಳ್ವಿಕೆ ಮಾಡುತ್ತಾನೆ	ಇ.ಸಿ.–೭ ೩೩ನೇ ಶಾಸನ
೫.	೧೨೬೮	ಯಾದವರು	ಸಿಂಗಣ	ಚಿತ್ತರಾಜ	ನೊಳಂಬವಾಡಿ ಮೂವತ್ತೆರಡು ಸಾವಿರದಲ್ಲಿ ಬೆತ್ತೂರು ಅರವತ್ತು	ಹಿರೇಕೋಗಿಲೂರು	ಚತ್ತರಾಜನ ಮಗನಾದ ಚಾಡನ ಸಿಂಹಾಸನಾರೋಹಣದ ಸಂದರ್ಭದಲ್ಲಿ ತಿಗೋಳಪೊಲೆಯಿಂದ ದಾನ ಮಾಡುತ್ತಾನೆ	ಇ.ಸಿ.–೭ ೨೧ನೇ ಶಾಸನ

೬.	೧೧೪೯	ಕಲ್ಯಾಣದ ಚಾಲುಕ್ಯರು	ಜಗದೇಕಮಲ್ಲ	ಇಡುವರಸ	ನೊಳಂಬವಾಡಿ ಮೂವತ್ತೆರಡು ಸಾವಿರದ ರಾಜಧಾನಿ ಉಚ್ಚಂಗಿ	ಅಸ್ತಾಪನಹಳ್ಳಿ	ಚೋಳರ ರಾಜೇಂದ್ರ ಚೋಳ ಧಾಳಿ ಮಾಡುವಂತಹ ಸಂದರ್ಭದಲ್ಲಿ ನೊಳಂಬವಾಡಿ ನೊಳಂಬವಾಡಿ ಮೂವತ್ತೆರಡು ಸಾವಿರದ ರಕ್ಷಣೆಗಾಗಿ ಉಚ್ಚಂಗಿಯನ್ನು ಜಗದೇಕಮಲ್ಲ ರಾಜಧಾನಿಯನ್ನಾಗಿ ಮಾಡಿತ್ತಾನೆ	ಇ.ಸಿ.–೭ ೩೯ನೇ ಶಾಸನ
೭.	೧೧೨೫	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲದೇವ	ಸೋಮರಸ ಇರಂಗಮಯ್ಯ	ನೊಳಂಬವಾಡಿ	ಚನ್ನಗಿರಿ	–	ಇ.ಸಿ.–೭ ೬೧ನೇ ಶಾಸನ
೮.	೧೪೦೪	ವಿಜಯನಗರ	೨ನೇ ಹರಿಹರ	ದುಮ್ಮಿಯ ಶ್ರೀರಂಗನಾಥ	ದುಮ್ಮಿ ಸೀಮೆ	ನೀತಿಗೆರೆ	ನೀತಿಗೆರೆಯ ವೀರಭದ್ರನಿಗೆ ದಾನವನ್ನು ನೀಡುವ ಬಗ್ಗೆ	ಇ.ಸಿ.–೭ ೨೮ನೇ ಶಾಸನ
೯.	೧೫೬೨	ವಿಜಯನಗರ ಸಾಮ್ರಾಜ್ಯ	ಸದಾಶಿವರಾಯ	ಸಂತೆಬೆನ್ನೂರು ನಾಯಕರ ಪಿಲಪ್ಪನಾಯಕ	ಹನುಮನಾಯಕರ ಮಗನಾದ ಪಿಲಪ್ಪ ನಾಯಕ, ದುಮ್ಮಿ ಸೀಮೆಯ ಆಳ್ವಿಕೆ ಮಾಡುತ್ತಾನೆ	ಚಿಕ್ಕಗಂಗೂರು	–	ಇ.ಸಿ.–೭ ೬೯ನೇ ಶಾಸನ
೧೦.	೧೫೬೫	ಸಂತೆಬೆನ್ನೂರು ನಾಯಕರು	ಕೆಂಗಪ್ಪನಾಯಕ	–	ದುಮ್ಮಿ ಸಾವಿರ	ಹೊದಿಗೆರೆ	ಇದು ದುಮ್ಮಿ ಸಾವಿರ ವಿರಕ್ತಮಠದ್ದು	ಇ.ಸಿ.–೭ ೬೬ನೇ ಶಾಸನ

೧೧.	೧೬೭೯	ಸಂತೆಬೆನ್ನೂರು ನಾಯಕರು	ನಿಚ್ಚಮದೋಣಿಗ ಹನುಮಪ್ಪನಾಯಕ	ನವಾಬ ದಿನವಾನ್ ಸುಬೇದಾರ್ ಲಿಂಗಪ್ಪ, ಸೂಳೆಕೆರೆ ಸೀಮೆ	ಬಸವಪಟ್ಟಣ ಆಡಳಿತ ವಿಭಾಗದ ನಲ್ಲೂರು ಸೀಮೆ	ಹಿರೇಮಾಡಳು	ನಲ್ಲೂರು ಸೀಮೆ, ಹಿರೇಮಾಡಲು ಹಳ್ಳಿಯನ್ನು ದಾನವನ್ನಾಗಿ ನೀಡುತ್ತಾನೆ	ಇ.ಸಿ.–೭ ೪೬ನೇ ಶಾಸನ
೧೨.	೧೭೫೮	ಸಂತೆಬೆನ್ನೂರು ನಾಯಕರು	–	ಶ್ರೀಮಾಂತ ಸಾಹಿಬ್	ನಲ್ಲೂರು ಸೀಮೆ, ಕೋಲೆ ಪ್ರದೇಶ		ಮರಿಲಿಂಗಪ್ಪ ಸೆಟ್ಟಿ ಕಾರ್ಯನಿರ್ವಹಿಸಲು ಕೋಲೆ ಪ್ರದೇಶದ ಉಡುವ ಹಳ್ಳಿಯನ್ನು ಪಾಲಿಕೆ ಉಂಬಳಿಯನ್ನಾಗಿ ನೀಡಲಾಯಿತು	ಇ.ಸಿ.–೭ ೫೧ನೇ ಶಾಸನ
೧೩.	೧೨೧೪	ಹೊಯ್ಸಳ	ಎರೆಯಂಗ	ಅಸಂದಿ ಗಂಗರ ನರಸಿಂಹ	ಅಸಂದಿನಾಡು	ಅಲಕನಾಳು	ಅಸಂದಿನಾಡಿನ ಏಳು ಕೋಟಿ ಋಷಿಗಳು (ಸಂತರು) ಇದುರನ ಮಗನಾದ ಹಂದನು ಶ್ಲೋಕಗಳನ್ನು ಹೇಳುತ್ತ ಬಿಲ್ಲೇಶ್ವರನನ್ನು ಆರಾಧಿಸುತ್ತಾನೆ. ಹಣದ ರೂಪದಲ್ಲಿ ದಾನವನ್ನು ನೀಡುತ್ತಾನೆ	ಇ.ಸಿ.–೭ ೬೪ನೇ ಶಾಸನ

೧೪.	೧೩೪೪	ವಿಜಯನಗರ	೨ನೇ ಹರಿಹರ	ಮಹರಂಗ	ಮದಕರಿ ಸೀಮೆ	ತ್ಯಾವಣಿಗಿ	ಮದಕರಿ ಸೀಮೆಯ ರಾಜಮಹರಂಗನ ಮದಕರಿ ಸೀಮೆಯ ಆಡಳಿತಕ್ಕೆ ಉತ್ಸಂಗಿವೆಂಟ್ಯೆ ಇದನ್ನು ಇಂದ್ರಕಂಠವೆಂದು ಕರೆಯುವರು	ಇ.ಸಿ.-೭ ೧೩ನೇ ಶಾಸನ
೧೫.	೧೫೬೫	ವಿಜಯನಗರ	ವೀರರಾಮದೇವರಾಯ	ಕೆಂಗಪ್ಪ ನಾಯಕ	ಉಚ್ಚಂಗಿವೆಂಟೆ ಸಂತೆಬೆನ್ನೂರು ಸೀಮೆ	ಚನ್ನಗಿರಿ	ಈ ಸೀಮೆ ಎಲ್ಲಾ ಹಕ್ಕುಗಳು ಸೇನೋಭವ ಮತ್ತು ಪುರೋಹಿತರ ಅಧೀನಕ್ಕೆ ಬರುತ್ತದೆ	ಇ.ಸಿ.-೭ ೬೨ನೇ ಶಾಸನ
೧೬	೧೬೫೩	ಬಿಜಾಪುರದ ಸುಲ್ತಾನರು	ಮಹಮದ್ ಷಾ ಇಬ್ರಾಹಿಂ	ದಿವಾನ್-ಮಹಮದ್-ಆದಿಲ್‌ಷಾಹ-ಖಾನ್-ಖಾನ್-ಸಾಹಿಬ್	ಸೇಂದ್ರದೇಶ ಮತ್ತು ಮೊಲ್ಲಿಪುರದ ಪಟ್ಟಣ	ಹೊಸಹಳ್ಳಿ		ಇ.ಸಿ.-೭ ೪೬ನೇ ಶಾಸನ
೧೭.	-	-	-	ಮಾರಪ್ಪ	ಬೆನ್ನೂರು (ಸಂತೆಬೆನ್ನೂರು)	ಸಂತೆಬೆನ್ನೂರು	ಮಾರಪ್ಪ ಉನ್ನತ ದರ್ಜೆಯ ಸಾಮಂತನಾಗಿದ್ದು ಬೆನ್ನೂರನ್ನು ಕಾಣಿಕೆಯಾಗಿ ಪಡೆಯುತ್ತಾನೆ	ಎಂ.ಎ.ಆರ್. ೧೯೩೭ ೩೭ನೇ ಶಾಸನ

ಶಾಸನದಲ್ಲಿ ಉಲ್ಲೇಖಿತ ವೃತ್ತಿಗಳು

ಕ್ರಸಂ.	ಸಂತತಿ	ಕಾಲ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	ನೊಳಂಬ	೧೦೫೦	ನೊಳಂಬ	–	ಗೌಡ	ಬೆಳಗೌಡನ ಅಳಿಯ ಸೆನಿಗೆಯನು ವೀರ ಮರಅತ್ತ್ವದ ಬಗ್ಗೆ	ಇಸಿ–೭ ೮ನೇ ಶಾಸನ	ಕಾರಿಗನೂರು
೨	ಕಲ್ಯಾಣದ ಚಾಲುಕ್ಯರು	೧೦೬೩	ವಿಜಯಾದಿತ್ಯ	–	ಗಾವುಡ/ ಗೌಡ	ಮಾಚಗೌಡನು ಮಲ್ಲಿಕಾರ್ಜುನ ದೇವಾಲಯಕ್ಕೆ ಒಂದು ಗಾಣವನ್ನು ಮಠಕ್ಕೆ ಭೂಮಿಯನ್ನು ದಾನ ಮಾಡಿದ ಬಗ್ಗೆ	ಇಸಿ–೭ ೧೮ನೇ ಶಾಸನ	ಮದೆಕೆರೆ
೩	ಹೊಯ್ಸಳರು	೧೧೪೯	ವೀರಬಲ್ಲಾಳ	–	ಗೌಡ	ಬಿಲ್ಲಹಳ್ಳಿಯ ಗೌಡನ ಮಗನಾದ ಮಾದಿಗಗೌಡನು ಬೇಡರೊಡನೆ ಹೋರಾಟ ಮಾಡಿ ಸಾವನ್ನಪ್ಪುತ್ತಾನೆ.	ಇಸಿ–೭ ೩೭ನೇ ಶಾಸನ	ಬಿಲ್ಲಹಳ್ಳಿ
೪	ಹೊಯ್ಸಳರು	೧೨೧೪	ಏರೆಯಂಗ	ಆಸಂದಿ ಗಂಗರ ನರಸಿಂಹ	ಗೌಡ	ಅಡಿಸಾಡ ರಾಮಗೌಡರ ವಂಶದ ಇತಿಹಾಸ ತಿಳಿಸುತ್ತದೆ	ಇಸಿ–೭ ೬೪ನೇ ಶಾಸನ	ಅಲಕನಾಳು
೫	ಅಸಂದಿ ಗಂಗರು	೧೨೨೧	ಬ್ರಹ್ಮರಸದೇವ		ಗೌಡ	ಗೌಡ ವೃತ್ತಿ ಬಗ್ಗೆ ಪ್ರಾಸ್ತಪಿಸಲಾಗಿದೆ.	ಇಸಿ–೭ ೬೪ನೇ ಶಾಸನ	ಕಲ್ಕೆರೆ
೬	ಹೊಯ್ಸಳರು	೧೨೨೯	ವೀರನರಸಿಂಹ ದೇವ	–	ಗೌಡ/ ನಾಡಪ್ರಭು	ಶಂಕರಗವಡರ ಮಗನಾದ ಬೀರಗೌಡ ಮತ್ತು ಮಲ್ಲಗೌಡರ ಮಗನಾದ ಶಂಕರಗೌಡ ಗೋವುಗಳಿಗಾಗಿ ಹೋರಾಟ ಮಾಡುತ್ತಿದ್ದರು.	ಇಸಿ–೭ ೪೫ನೇ ಶಾಸನ	ಬಿಲ್ಲಹಳ್ಳಿ
೭	ವಿಜಯನಗರ	೧೪೦೪	೨ನೇ ಹರಿಹರ	ದುಮ್ಮಿಯ ಹಿರೇ ಪೆಮ್ಮನಾಯಕ	ಗೌಂಡರು/ ಗೌಡರು	ನೀತಿಗೆರೆ ದೇವಾಲಯವನ್ನು ಕಟ್ಟಿಸಿದ್ದರು	ಇಸಿ–೭ ೨೮ನೇ ಶಾಸನ	ನೀತಿಗೆರೆ
೮	ಸಂತೆಬೆನ್ನೂರಿನ ನಾಯಕರು	೧೫೬೨	ಪಿಲಪ್ಪನಾಯಕ	–	ಗೌಡ	ಗೌಡನ ಮಕ್ಕಳಿಗೆ ನಿತ್ತರ ಗೌಡಗಿಯನ್ನು ನೀಡಲಾಗುತ್ತದೆ	ಇಸಿ–೭ ೬೯ನೇ ಶಾಸನ	ಚಿಕ್ಕಗಂಗೂರು
೯	ಹೊಯ್ಸಳ	೧೨ನೇ ಶತಮಾನ	೭ನೇ ನರಸಿಂಹ		ಗೌಡ	ಕಲ್ಲಗೌಡನ ನೌಕರ ತಳಿಗಿಗೆ ಗೌಡ ದೇವಾಲಯಕ್ಕೆ ದಾನ ನೀಡಿದ್ದಾನೆ.	ಇಸಿ–೭ ೧೬ನೇ ಶಾಸನ	ತಣಿಗೆರೆ

ಊರ ಒಡೆಯ

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೧೨೦	ಉಚ್ಚಂಗಿ ಪಾಂಡ್ಯ	ಇರುಕ್ಕವೇಲ್ ಅಥವಾ ಪಲಿತಪಾಂಡ್ಯ	–	ಊರ ಒಡೆಯ	ಹನುಮಂತಗೌಡ	ಇಸಿ–೭ ೧೭ನೇ ಶಾಸನ	ಮೆದಕೆರೆ
೨	೧೨೩೩	ಹೊಯ್ಸಳರು	ವೀರ ನರಸಿಂಹದೇವ	–	ಊರ ಒಡೆಯ	ಚಂದ್ರದೇವ	ಇಸಿ–೭ ೫೨ನೇ ಶಾಸನ	ನಲ್ಕುದುರೆ
೩	೧೨೨೫	ಹೊಯ್ಸಳರು	ನರಸಿಂಹದೇವ	–	ಊರ ಒಡೆಯ	ಹದಲಕೆರೆ ಹರಿಯ ಊರ ಒಡೆಯ	ಇಸಿ–೭ ೪೦ನೇ ಶಾಸನ	ಕಾಶಿಪುರ

ಸೇನುಭೋವ

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೫೪೫	ವಿಜಯನಗರ	–	–	ಸೇನುಭೋವ	ಶಾಸನವನ್ನು ಬರೆದವನು ಸೇನುಭೋವ ನಾಗಯ್ಯ ಎಂದು ತಿಳಿಸಲಾಗಿದೆ.	ಇಸಿ–೭ ೭೬ನೇ ಶಾಸನ	ತಾವರೆಕೆರೆ
೨	೧೫೬೫	ಸಂತೆಬೆನ್ನೂರು ನಾಯಕರು	ಕೆಂಗಪ್ಪ ನಾಯಕ	–	ಸೇನುಭೋವ / ಪುರೋಹಿತರು	ಉತ್ಸಂಗಿ ವೆಂಟೆ ಸಂತೆಬೆನ್ನೂರು ಸೀಮೆ ಎಲ್ಲಾ ಹಳ್ಳಿಗಳು ಸೇನುಭೋವ ಮತ್ತು ಪುರೋಹಿತರ ಕಛೇರಿಯ ಅಧೀನಕ್ಕೆ ಬರುತ್ತವೆ.	ಇಸಿ–೭ ೬೨ನೇ ಶಾಸನ	ಚನ್ನಗಿರಿ ಕಸಬ

ನಾಡಿಗರ್/ಬ್ರಾಹ್ಮಣ

ಕ್ರ.ಸಂ.	ಸಂತತಿ	ಕಾಲ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	ಬಿಜಾಪುರದ ಸುಲ್ತಾನರು	೧೬೫೩	ಮಹಮದ್-ಷಾ-ಇಬ್ರಾಹಿಂ	ಪದಷಾಹ ಖಾನ್-ಐ-ಖಾನ್-ಸಾಹಿದ್	ನಾಡಿಗರು	ನಾಲ್ಕು ರೈತ ಕುಟುಂಬಗಳು, ಸೆಟ್ಟಿಗಳು ನಾಡಿಗರನ್ನು ಅವಲಂಬಿಸಿದ್ದವು	ಇಸಿ-೭ ೪೩ನೇ ಶಾಸನ	ಹೊಸಹಳ್ಳಿ
೨	ಸಂತೆಬೆನ್ನೂರಿನ ನಾಯಕರು	೧೫೭೭	ನಿಜ್ಜಮ ದುಗಣಿ ಹನುಮಪ್ಪ ನಾಯಕ	–	ನಾಡಿಗರು	ಲಕ್ಷ್ಮಿಸಾಗರದ ಉಂಬಳಿ ಗ್ರಾಮವನ್ನು ಹೊದಿಗೆರೆ ಸೀಮೆ ನಾಡಿಗರಾದ ಬಂಕಿಪುರದ ಮಲ್ಲಪ್ಪನೆಂದು ತಿಳಿಸುತ್ತದೆ	ಇಸಿ-೭ ೭೧ನೇ ಶಾಸನ	ಲಕ್ಷ್ಮಿ ಸಾಗರ

ಬಡಗಿ

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೨೨೫	ಹೊಯ್ಸಳ	ನರಸಿಂಹ ದೇವ	–	ಬಡಗಿ	ಬಡಗಿ ಮಾಕೋಜ ಗೋವುಗಳನ್ನು ಹಿಂದಕ್ಕೆ ತರುವಲ್ಲಿ ಪ್ರಯತ್ನಿಸಿ ಸಾವನ್ನಪ್ಪಿದನು	ಇಸಿ-೭ ೪೦ನೇ ಶಾಸನ	ಕಾಶಿಪುರ
೨	೧೩ನೇ ಶತಮಾನ				ಬಡಗಿ	ಬಡಗಿ ಲಿಂಗಣ್ಣ ತನ್ನ ಕಾರ್ಯದ ಫಲವಾಗಿ ದಾನವಾಗಿ ಪಡೆಯುತ್ತಾನೆ.	ಇಸಿ-೭ ೩೦ನೇ ಶಾಸನ	ಬೋಮ್ಮೆನಹಳ್ಳಿ

ರೈತರು

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೨೬೩	ಯಾದವರು	ಮಹ ದೇವ	–	ರೈತರು	ಕಾರಿಗನೂರು ರೈತರು ಪ್ರಜಾರಿ ಕಲ್ಲೇದೇವನಿಗೆ ಆಡುಗಳನ್ನು ದಾನವನ್ನಾಗಿ ನೀಡುವರು	ಇಸಿ–೭ ೫ನೇ ಶಾಸನ	ಕಾರಿಗನೂರು

ಕ್ಷೌರಿಕರು/ನಾಯಿಂದರು

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ವೃತ್ತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೨೪೫	ವಿಜಯನಗರ	ಸದಾಶಿವ	–	ಕ್ಷೌರಿಕ	ಕ್ಷೌರಿಕ ವೃತ್ತಿ ಸಮುದಾಯದ ಬಗ್ಗೆ ಉಲ್ಲೇಖಿಸಿದೆ.	ಇಸಿ–೭ ೭೬ನೇ ಶಾಸನ	ತಾವರಕೆರೆ

ಶಾಸನದಲ್ಲಿ ಜಾತಿ ಸಮುದಾಗಳು / ಬ್ರಾಹ್ಮಣ / ಪುರೋಹಿತರು

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ಜಾತಿ ಸಮುದಾಯಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೧೨೫	ಕಲ್ಯಾಣದ ಚಾಲುಕ್ಯರು	ತ್ರಿಭುವನ ಮಲ್ಲದೇವ	ಇರುಗ	ಪುರೋಹಿ ತರು/ಬ್ರಾಹ್ಮಣ ಗುರುಗಳು	ಸುಖಿಸಿವ ಗುರು	ಇಸಿ–೭ ೬೧ನೇ ಶಾಸನ	ಚನ್ನಗಿರಿ
೨	೧೧೪೨	–	–	ನಾಗಣ್ಣ	ಪುರೋಹಿ ತರು/ಗುರುಗಳು	ರುದ್ರಶಕ್ತಿ ಗುರುಗಳಿಗೆ	ಇಸಿ–೭ ೬೦ನೇ ಶಾಸನ	ಚನ್ನಗಿರಿ ಕಸಬಾ
೩	೧೨೧೪	ಹೊಯ್ಸಳ	ಎರೆಯಂಗ	ಆಸಂದಿ ಗಂಗರ ನರಸಿಂಹ	ರಾಜಗುರು/ ಪುರೋಹಿತ	ಸಕಲಚಾಯ ಶಿವದೇವ ಭಟ್ಟೋಪಾಧ್ಯರು	ಇಸಿ–೭ ೬೪ನೇ ಶಾಸನ	ಅಲಕನಾಳು
೪	೧೨೩೩	ಹೊಯ್ಸಳ	ವೀರನರ ಸಿಂಹದೇವ ಹೊಯ್ಸಳರು	ನಲ್ಕುದುರೆಯ ಊರಒಡೆಯ ಚಂದ್ರದೇವ	ಬ್ರಾಹ್ಮಣ/ ಗುರುಗಳು/ ಪುರೋಹಿತರು	ವಮುಖಷಿ ಗುರು	ಇಸಿ–೭ ೫೨ನೇ ಶಾಸನ	ನಲ್ಕುದುರೆ
೫	೧೨೬೮	ಯಾದವರು	ಸಿಂಗಣ	ಚಿತ್ತರಾಜ (ಚಿತ್ತೂರು ಅರವತ್ತು)	ಪುರೋಹಿತ	ಸ್ಥಿದಂಡಪಾಣಿ ಗುರುಗಳು	ಇಸಿ–೭ ೨೧ನೇ ಶಾಸನ	ಹಿರೇಕೋಗಲೂರು
೬	೧೨೭೭	ಯಾದವರು	ರಾಮಚಂದ್ರ ರಾಯ	–	ರಾಜಗುರು/ ಪುರೋಹಿತ	ರೇಣುಕಾದೇವಾ	ಇಸಿ–೭ ೨ನೇ ಶಾಸನ	
೭	೧೩೯೪	ವಿಜಯನಗರ	೨ನೇ ಹರಿಹರ	ಮದಕರಿ ಸೀಮೆ ಮಹಾರಾಗ	ಬ್ರಾಹ್ಮಣರು	ಬ್ರಾಹ್ಮಣ ನರಸಿಂಹಭಟ್ಟ	ಇಸಿ–೭ ೧೩ನೇ ಶಾಸನ	ಕಾರಿಗನೂರು
೮	೧೬೦೧	ಸಂತೆಬೆನ್ನೂರಿನ ನಾಯಕರು	ಮುಮ್ಮಡಿ ಹನುಮಪ್ಪ ನಾಯಕ	–	ಬ್ರಾಹ್ಮಣ/ ಪುರೋಹಿತರು	ಸಿಂಹದಮಲ್ಲಿಭಟ್ಟರ ಉಪಾಧ್ಯರ ಮಗನಾದ ನಿಂಗಣ್ಣಭಟ್ಟರಿಗೆ	ಇಸಿ–೭ ೪೨ನೇ ಶಾಸನ	ಹೊಸಹಳ್ಳಿ
೯	೧೬೨೫	ಸಂತೆಬೆನ್ನೂರಿನ ನಾಯಕರು	ಮುಮ್ಮಡಿ ಹನುಮಪ್ಪ ನಾಯಕ	–	ಬ್ರಾಹ್ಮಣ/ ಪುರೋಹಿತ	ಭಟ್ಟರ ವೆಂಕಟರಾಯ	ಇಸಿ–೭ ೩೫ನೇ ಶಾಸನ	ಮಂಟರಘಟ್ಟ

ಬೇಡರು

ಕ್ರಸಂ.	ಕಾಲ	ಸಂತತಿ	ರಾಜ	ಸಾಮಂತ	ಜಾತಿ ಸಮುದಾಯಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೨೦೦	ಹೊಯ್ಸಳರು	ವೀರ ಬಲ್ಲಾಳ	–	ಬೇಡರು	ಬಿಲ್ಲಹಳ್ಳಿಯ ಬಿಲ್ಲಗೌಡನ ಮಗನಾದ ಮಾದಿಗಗೌಡನು ಬೇಡರೊಡನೆ ಹೋರಾಡಿ ಸಾವನ್ನಪ್ಪುತ್ತಾನೆ	ಇಸಿ–೭ ೩೭ನೇ ಶಾಸನ	ಬಿಲ್ಲಹಳ್ಳಿ
೨	೧೨೪೨	ಸೇವಣರು	೨ನೇ ಸಿಂಗಣ	–	ಬೇಡರು	ಬೇಡರ ಬಲಿಷ್ಠ ವ್ಯಕ್ತಿಯಾದ ದುಗ್ಗಿಸೆತ್ತಿಯ ಗುಂಪಿನ ದಾಳಿಯಿಂದ ಬೊಮ್ಮನಾಯಕನು ಸಾವನ್ನಪ್ಪುತ್ತಾನೆ	ಇಸಿ–೭ ೫೩ನೇ ಶಾಸನ	ನಲ್ಕುದುರೆ

ಶೆಟ್ಟಿಗಳು

ಕ್ರಸಂ.	ಕಾಲ	ಸಂತತಿ	ರಾಜ	ಸಾಮಂತ	ಜಾತಿ ಸಮುದಾಯಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೦೫೦	–	–	ಚತ್ತರಸ	ಶೆಟ್ಟಿಗಳು	ಶೆಟ್ಟಿಗಳು ಮೂರು ಕಲ್ಲು ಇಟ್ಟು ದೇವಾಲಯವನ್ನು ಕಟ್ಟುತ್ತಾರೆ.	ಇಸಿ–೭ ೩೨ನೇ ಶಾಸನ	ಕಗ್ಗತ್ತೂರು
೨	೧೭೫೮	ಸಂತೆಬೆನ್ನೂರು ನಾಯಕರು	ಸರ್ಜಾ ಕೃಷ್ಣಪ್ಪ ನಾಯಕ	–	ಶೆಟ್ಟಿಗಳು	ಬಸವಾಪಟ್ಟಣದ ಸಾಗರ್ ಪೇಟೆ ಸೆಟ್ಟಿಗಳು ಮರಿಲಿಂಗಪ್ಪನೇ ಸೆಟ್ಟಿಯಾಗಿ ಕಾರ್ಯ ನಿರ್ವಹಿಸಲು ಉಂಬಳಿ ನೀಡುತ್ತಾನೆ.	ಇಸಿ–೭ ೫೧ನೇ ಶಾಸನ	ಉಡವ

ಶಾಸನ ಉಲ್ಲೇಖಿತ ಆರ್ಥಿಕ ಚಟುವಟಿಕೆಗಳು

ಕ್ರ ಸಂ.	ಕಾಲ	ಸಂತತಿ	ರಾಜ	ಸಾಮಂತ	ಆರ್ಥಿಕ ಚಟುವಟಿಕೆಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೦೬೩	ಕಲ್ಯಾಣದ ಚಾಲುಕ್ಯರು	ವಿಜಯಾದಿತ್ಯ	ಮಾಚಗಾಂವುಡ	ಗಾಣದ ಕೈಗಾರಿಕಲೆ	ಮಾಚಗಾವುಂಡ ಮುದುಕಕೆರೆಯ ಮಲ್ಲಿಕಾರ್ಜುನ ದೇವಾಲಯಕ್ಕೆ ಎರಡು ಎತ್ತು ಸುತ್ತುವ ಗಾಣದ ಕೈಗಾರಿಕೆಯನ್ನು ನೀಡುತ್ತಾನೆ.	ಇಸಿ–೭ ೧೮ನೇ ಶಾಸನ	ಮೆದೆಕೆರೆ
೨	೧೧೨೫	ತ್ರಿಭುವನಮಲ್ಲ	ಬಿಳಚಿ ಎಪ್ಪತ್ತರ ಇರುಗ	ಗಾಣದ ಕೈಗಾರಿಕೆ		ಇರುಗೇಶ್ವರ ದೇವಾಲಯಕ್ಕೆ ಗಾಣದ ಕೈಗಾರಿಕೆಯನ್ನು ದಾನವಾಗಿ ನೀಡುತ್ತಾರೆ.	ಇಸಿ–೭ ೬೧ನೇ ಶಾಸನ	ಚನ್ನಗಿರಿ ಕಸಬ
೩	೧೬೫೩	ಬಿಜಾಪುರದ ಸುಲ್ತಾನ ರು	ಮಹಮದ್ ಷಾ–ಇಬ್ರಾಹಿಂ	ಮಹಮದ್ ಪಾದಷಾಹ–ಖಾನ್–ಖಾನ್–ಸಾಹಿಬ್	ಗಾಣದ ಕೈಗಾರಿಕೆ	ಮಹಮದ್–ಷಾದ್ ಷಾಹ–ಖಾನ್–ಖಾನ್–ಸಾಹಿಬ್ ತಾವರೆಕೆರೆಯ ಎರಡು ಕಡೆ ನೀರು ಹರಿಯುವ ಎತ್ತರವಾದ ಪ್ರದೇಶದಲ್ಲಿ ಗಾಣದ ಕೈಗಾರಿಕೆಯನ್ನು ಸ್ಥಾಪಿಸುತ್ತಾರೆ. ಕಾಶಿ ಮತ್ತು ರಾಮೇಶ್ವರಕ್ಕೆ ಹೋಗುವಂತಹ ಜನರು ಮಾರ್ಗಮಧ್ಯದಲ್ಲಿ ಇರುವಂತಹ ಈ ಗಾಣದ ಕೈಗಾರಿಕೆಯಿಂದ ಎಣ್ಣೆಯನ್ನು ತೆಗೆದುಕೊಂಡು ಹೋಗುತ್ತಾರೆ.	ಇಸಿ–೭ ೪೩ನೇ ಶಾಸನ	ಹೊಸಹಳ್ಳಿ
೪	೧೬೫೩	ಬಿಜಾಪುರದ ಸುಲ್ತಾನ ರು	ಮಹಮದ್ ಷಾ–ಇಬ್ರಾಹಿಂ	ಮಹಮದ್ ಪಾದಷಾಹ–ಖಾನ್–ಖಾನ್–ಸಾಹಿಬ್	ಕೃಷಿ	ತಾವರೆಕೆರೆಯ ನೀರಿನಿಂದ ತೆಂಗಿನಮರ, ತಂಪು ಪಾನೀಯಗಳು, ಗಿಡಗಳು, ದ್ರಾಕ್ಷಿ, ಭತ್ತ, ಬೆಳೆಯುತ್ತ ಜನರು ಸಮೃದ್ಧರಾಗಿದ್ದರು.	ಇಸಿ–೭ ೪೩ನೇ ಶಾಸನ	ಹೊಸಹಳ್ಳಿ

ಶಾಸನ ಉಲ್ಲೇಖಿತ ಕಂದಾಯ ಪದ್ಧತಿ

ಕ್ರ ಸಂ.	ಕಾಲ	ಸಂತತಿ	ರಾಜ	ಸಾಮಂತ	ಕಂದಾಯ ಪದ್ಧತಿಗಳು	ವಿವರಣೆ	ಪ್ರಕಟಣೆ	ಶಾಸನ ಸ್ಥಳ
೧	೧೫೪೬	ವಿಜಯನಗರ	ಸದಾಶಿವರಾಯ		ಕುಲತೆರಿಗೆ	ರಾಮರಾಜ ಒಡೆಯರ್ ಕ್ಷೌರಿಕರ ಮೇಲೆ ಕುಲ ತೆರಿಗೆಯನ್ನು ಹಾಕುತ್ತಾರೆ.	ಇಸಿ-೭ ೭೬ನೇ ಶಾಸನ	ತಾವರಕೆರೆ
೨	೧೫೬೫	ಸಂತೆ ಬೆನ್ನೂರು ನಾಯಕರು	ವಿಜಯನಗರ ಸಾಮ್ರಾಜ್ಯ ವೀರರಾಮದೇವ	ಕೆಂಗಪ್ಪ ನಾಯಕ	ಶಿಸ್ತು	ಲಿಂಗಣ್ಣನು ಸೇನಾಬೋವ ಮತ್ತು ಪುರೋಹಿತರ ಕಛೇರಿಯಿಂದ ಶಿಸ್ತು ದಾನಪಡೆಯಲು ಮನವಿ ಮಾಡಿಕೊಳ್ಳುತ್ತಾರೆ. ಉತ್ಸಂಗಿ ವೆಂಟೆ ಸಂತೆಬೆನ್ನೂರು ಸೀಮೆಯ ಎಲ್ಲಾ ಹಳ್ಳಿಗಳು ಪುರೋಹಿತ ಕಛೇರಿಯ ಅಧೀನಕ್ಕೆ ಬರುತ್ತವೆ.	ಇಸಿ-೭ ೬೨ನೇ ಶಾಸನ	ಚನ್ನಗಿರಿ ಕಸಬ್
೩	೧೫೬೩	ಬಿಜಾಪುರದ ಷಾಹಿ ಸುಲ್ತಾನದರು	ಮಹಮದ್ ಷಾ ಇಬ್ರಾಹಿಂ	ಮಹಮದ್ ಪಾದ ಷಾಹ ಖಾನ್-ಖಾನ್ ಸಾಹಿಬ್	ರಾಯರೇಖೆ	ಬಸವಾಪಟ್ಟಣವು ತಾವರೆಕೆರೆ ಕೆರೆಯ ವ್ಯಾಪ್ತಿಗೆ ರಾಯರೇಖೆಗೆ ಸೇರುತ್ತದೆ ಎಂದು ತಿಳಿಸಲಾಗಿದೆ.	ಇಸಿ-೭ ೪೩ನೇ ಶಾಸನ	ಹೊಸಹಳ್ಳಿ

ಅಧ್ಯಾಯ : ಮೂರು

ಶಾಸನಗಳ ವೈವಿಧ್ಯತೆ

೩.೧. ದಾನ ಶಾಸನಗಳು

೩.೧.೧. ಆಡಳಿತ ದಾನ ಶಾಸನಗಳು

೩.೧.೨. ಸಾಮಾಜಿಕ ದಾನ ಶಾಸನಗಳು

೩.೧.೩. ಧಾರ್ಮಿಕ ದಾನ ಶಾಸನಗಳು

೩.೨. ಶಾಸನಸಹಿತ ವೀರಗಲ್ಲುಗಳು

೩.೨.೧. ವೀರಗಲ್ಲುಗಳು

೩.೨.೨. ತುರುಗೋಳ್ ಶಾಸನಗಳು

೩.೩. ಇತರೆ ಶಾಸನಗಳು

೩.೪. ಸ್ಮಾರಕ ಶಿಲ್ಪಗಳು

೩.೪.೧. ಶಾಸನರಹಿತ ವೀರಗಲ್ಲುಗಳು

೩.೪.೨. ಮಹಾಸತಿಗಲ್ಲುಗಳು

೩.೫. ಗಡಿಕಲ್ಲುಗಳು

ಅಧ್ಯಾಯ : ಮೂರು

ಶಾಸನಗಳ ವೈವಿಧ್ಯತೆ

ಶಾಸನ ಶಬ್ದದ ಮೂಲವೇ ಶಾಸ್, ಎಂದರೆ ಆಜ್ಞೆ, ಆಜ್ಞೆ ಮಾಡು, ಶಿಕ್ಷಿಸು, ನಿಯಂತ್ರಿಸು, ಅರ್ಥವನ್ನು ಹೊಂದಿದೆ. ಇನ್ಸ್‌ಕ್ರಿಪ್‌ಷನ್ಸ್ ಆಂಗ್ಲ ಪದ ಇನ್ಸ್‌ಕ್ರೈಬ್ ಎಂಬ ಲ್ಯಾಟಿನ್ ಕ್ರಿಯಾಪದದಿಂದ ಬಂದಿದೆ. ಅಂದರೆ ಕೊರೆಯುವುದು, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ವಸ್ತುಗಳ ಮೇಲೆ ಬರಹವನ್ನು ಇನ್ಸ್‌ಕ್ರಿಪ್‌ಷನ್ಸ್, ಕನ್ನಡದಲ್ಲಿ ಶಾಸನಗಳು ಎಂದು ಸಂಭೋಧಿಸಲಾಗಿದೆ. ರಾಜನು ತನ್ನ ಆಜ್ಞೆಯನ್ನು ಕಲ್ಲು, ಲೋಹ, ಮರಗಳ ಫಲಕ ದೇವಾಲಯಗಳ ಬಿತ್ತಿಯ ಮೇಲೆ ಕೆತ್ತಿಸುತ್ತಾನೆ. ಯಾವುದೇ ಘಟನೆ, ದಾನ, ಕೆಲಸ ಮುಂದಿನ ಜನಾಂಗಕ್ಕೆ ದಾಖಲೆಯಾಗಿ ಉಳಿಯಬೇಕೆಂಬ ಕಾರಣದಿಂದ ದೀರ್ಘಕಾಲ ಇರಬಲ್ಲ ವಸ್ತುವಿನ ಮೇಲೆ ಕಂಡರಿಸಿದ ಬರಹವನ್ನು ಶಾಸನ ಎಂದು ಕರೆಯುತ್ತಾರೆ.[೧] ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದವು. ಕೌಟಿಲ್ಯನ ಪ್ರಕಾರ ಆಜ್ಞೆಗಳನ್ನು ತಿಳಿಸುವ ಬರಹವೇ ಶಾಸನ.[೨] ಶುಕ್ರಾಚಾರ್ಯರು ಶುಕ್ರನೀತಿಸಾರದಲ್ಲಿ, ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವು ಆಜ್ಞೆ, ಹೋರಾಟ ದಿನಾಂಕವು ಇರಬೇಕು ಮತ್ತು ಆಜ್ಞೆಯಂತೆ ನಡೆದುಕೊಳ್ಳಬೇಕೆಂದು ತಿಳಿಸುವ ದಾಖಲೆಗಳೇ ಶಾಸನಗಳು. ಮತ್ತು ರಾಜನ ಆಜ್ಞೆ ಪತ್ರಗಳು ಸಹ ಶಾಸನಗಳಾಗಿವೆ ಎಂದು ತಿಳಿಸಿದ್ದಾರೆ.[೩] ಕಾಳಿದಾಸನು ಸಹ ಶುಕ್ರಚಾರ್ಯರ ಮಾದರಿಯಲ್ಲಿಯೇ ಆಜ್ಞೆ ಪತ್ರಗಳು ಮತ್ತು ದಾಖಲೆ ಪತ್ರಗಳ ಬಗ್ಗೆ ಉಲ್ಲೇಖಿಸಿದ್ದಾನೆ.[೪]

ಅಶೋಕನು ಭಾರತದಲ್ಲಿ ಶಾಸನಗಳನ್ನು ಮೊಟ್ಟ ಮೊದಲು ಬಂಡೆಗಳ ಮೇಲೆ ಬರೆಸಿದವನು. ಆದ್ದರಿಂದ ಅವನನ್ನು ಶಾಸನಗಳ ಪಿತಾಮಹ ಎಂದು ಕರೆಯುತ್ತಾರೆ. ಉತ್ತರ ಭಾರತದಲ್ಲಿ ಲೋಹದ ಶಾಸನಗಳು, ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಶಿಲಾ ಶಾಸನಗಳು ಲಭ್ಯವಾಗಿವೆ.[೫]

ಕಲ್ಲು ಸುಲಭವಾಗಿ ಲಭ್ಯವಾಗುವ ಗಟ್ಟಿಯಾದ ಸಾಧನ, ಕಲ್ಲಿನ ಮೇಲೆ ಬರಹವು ಬಹಳ ಕಾಲ ಉಳಿಯುತ್ತದೆ. ಬರಹವು ಜನಸಾಮಾನ್ಯರ ಕಣ್ಣಿಗೆ ಸುಲಭವಾಗಿ ಗೋಚರಿಸುತ್ತದೆ. ಆದ್ದರಿಂದ ಜನರು ಅದರ ಉಪಯೋಗ ಅರಿತು ಶಾಸನಗಳನ್ನು ಕಲ್ಲಿನ ಮೇಲೆಯೇ ಕೊರೆಯಲರಂಭಿಸಿದರು.[೬]

ನಿರ್ದಿಷ್ಟ ಪ್ರದೇಶದಲ್ಲಿರುವ ಶಾಸನಗಳನ್ನು ಅಧ್ಯಯನ ಮಾಡಿ ಪ್ರದೇಶದ ಇತಿಹಾಸವನ್ನು ಗುರುತಿಸಬಹುದು. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಿರುವ ಶಾಸನಗಳನ್ನು ಕ್ರೋಢಿಕರಿಸಿಕೊಂಡು, ಅಲ್ಲಿನ ಇತಿಹಾಸ ಕಟ್ಟುವ ಅವಶ್ಯಕತೆಯಿದೆ.

೩.೧. ದಾನ ಶಾಸನಗಳು

ಒಬ್ಬ ವ್ಯಕ್ತಿ ಯಾವುದಾದರೂ ಒಂದು ಸಾರ್ಥಕ ಉದ್ದೇಶದಿಂದ ವ್ಯಕ್ತಿ, ಸಂಸ್ಥೆಗೆ ನೀಡುವ ನೆರವನ್ನು ದಾಖಲು ಮಾಡುವುದೇ ದಾನ ಶಾಸನದ ಪ್ರಮುಖ ಉದ್ದೇಶ.[೧೦] ದೇವಾಲಯದಲ್ಲಿ ನಡೆಯುವ ನಿತ್ಯ ಪೂಜೆ, ವಿದ್ಯಾದಾನ, ಪುರೋಹಿತರಿಗೆ, ನರ್ತಕಿಯರಿಗೆ, ವಾದ್ಯಗರಾರಿಗೆ, ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದಕ್ಕೆ ವ್ಯಕ್ತಿಯೊಬ್ಬನ ಸೇವೆ, ಪರಾಕ್ರಮ ಮನ್ನಿಸಿ ಕೆರೆ, ಬಾವಿ, ಮುಂತಾದ ಕಾರ್ಯಗಳಿಗೆ ನೀಡುವ ಆರ್ಥಿಕ ನೆರವು ಅಥವಾ ಭೂಮಿ, ಅಗತ್ಯ ವಸ್ತುಗಳನ್ನು ನೀಡುವುದೇ ದಾನವಾಗಿರುತ್ತದೆ.[೧೧]

ಇಂತಹ ದಾನವನ್ನು ಶಿಲೆಗಳ ಮೇಲೆ ಬರೆಸಿರುವ ಪಠ್ಯವನ್ನೇ ದಾನ ಶಾಸನವೆಂದು ಗುರುತಿಸಿದೆ. ಚನ್ನಗಿರಿ ತಾಲ್ಲೂಕಿನ ಪರಿಸರದಲ್ಲಿ ದೊರಕಿರುವ ಶಾಸನಗಳನ್ನು ವರ್ಗೀಕರಿಸಿ ದಾನ ನೀಡಿದ ವಿವರಣೆಯಿರುವ ಪಠ್ಯದ ಆಧಾರದ ಮೇಲೆ ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅಗತ್ಯತೆ ದಾನವನ್ನು ಯಾವ ಉದ್ದೇಶಕ್ಕೆ ನೀಡಿದೆ, ಆರ್ಥಿಕ ಆಡಳಿತ, ಸಾಮಾಜಿಕ, ಧಾರ್ಮಿಕ ಸಂಗತಿಗಳಿಗೆ ದಾನ ನೀಡಿದನೋ ಎಂಬ ಸಂಗತಿಯ ಆಧಾರದ ಮೇಲೆ ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಆದ್ದರಿಂದ

* ಆಡಳಿತ ದಾನ ಶಾಸನಗಳು
* ಸಾಮಾಜಿಕ ದಾನ ಶಾಸನಗಳು
* ಧಾರ್ಮಿಕ ಶಾಸನಗಳು

ಎಂದು ಅಧ್ಯಯನ ದೃಷ್ಟಿಯಿಂದ ವರ್ಗೀಕರಿಸಿದೆ. ಇದರಿಂದ ದಾನಿ ನೀಡಿದ ದಾನದ ಮುಖ್ಯ ಉದ್ದೇಶದ ಆಶಯ ಇಡೇರಿದಂತಾಗುತ್ತದೆ. ಇದರಿಂದಾಗಿ ದಾನ ಶಾಸನಗಳನ್ನು ವಿಂಗಡಿಸಿ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆ ದಾನಶಾಸನವೆಂದರೆ 'ರಾಜ, ಸಾಮಂತ, ಗ್ರಾಮದ ಒಡೆಯ, ಶ್ರೀಸಾಮಾನ್ಯ ಇವರಲ್ಲಿ ಯಾರಾದರೂ ಒಬ್ಬರೂ ಶ್ರೀಸಾಮಾನ್ಯನಿಗೆ, ದೇವಾಲಯಗಳಿಗೆ ಅಥವಾ ಮಠಗಳಿಗೆ ನೀಡಿದ ದಾನವನ್ನು ಉಲ್ಲೇಖಿಸುವ ಶಾಸನಗಳನ್ನು ದಾನಶಾಸನಗಳೆಂದು ಕರೆಯುತ್ತಾರೆ. ಪ್ರಸ್ತುತ ಚನ್ನಗಿರಿಯಲ್ಲಿ ದೊರಕಿರುವ ದಾನಶಾಸನಗಳನ್ನು ಆಡಳಿತ ದಾನಶಾಸನಗಳು, ಸಾಮಾಜಿಕ ದಾನಶಾಸನಗಳು ಮತ್ತು ಧಾರ್ಮಿಕ ದಾನಶಾಸನಗಳೆಂದು ವಿಂಗಡಿಸಿಕೊಳ್ಳಲಾಗಿದೆ.

೩.೧.೧. ಆಡಳಿತ ದಾನಶಾಸನಗಳು

ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಉದ್ದೇಶದಿಂದ ರಾಜರು, ಸಾಮಂತರು, ಸಾಮಾನ್ಯರು ದಾನವನ್ನು ನೀಡಿದ್ದಾರೆ. ಈ ದಾನವನ್ನು ಆ ಕಾಲಘಟ್ಟದಲ್ಲಿ

ಅಧಿಕಾರಿಗಳು, ಬ್ರಾಹ್ಮಣರು(ಪುರೋಹಿತ ವರ್ಗ), ಸಾಮಾನ್ಯ ಜನರು ಪಡೆದಿದ್ದಾರೆ. ಪ್ರಸ್ತುತ ಚನ್ನಗಿರಿ ಶಾಸನದಲ್ಲಿ ಆಡಳಿತ ದಾನ ಶಾಸನಗಳನ್ನು ಇಲ್ಲಿ ದಾಖಲಿಸಲಾಗಿದೆ.

ಗ್ರಾಮ : ತ್ಯಾವಣಿಗೆ

ಸ್ಥಳ : ನಾಡಿಗ ಗುರುರಾಯರ ವಂಶಸ್ಥರಲ್ಲಿದೆ

ರಾಜವಂಶ : ವಿಜಯನಗರ

ಅರಸ : ಎರಡನೇ ಹರಿಹರ

ಕಾಲ : ಕ್ರಿ. ಶ. ೧೩೯೪

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೧೩ನೇ ಶಾಸನ, ಪು.೪೨೮

ಈ ಶಾಸನವು ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯಲ್ಲಿರುವ ತಾಮ್ರ ಶಾಸನವಾಗಿದೆ. ವಿಜಯನಗರದ ಮೂಲ ವಂಶವಳಿಯನ್ನು ಹರಿಹರನ ಕಾಲದವರೆಗೆ ವಿವರಿಸಿದೆ. ಶ್ರೀವತ್ಸ ಗೋತ್ರ ಯಜಸ್‌ಶಕದಲ್ಲಿ ನರಸಿಂಹ ಭಟ್ಟರಿಗೆ ಜ್ಯೋತಿಷ್ಯ ಮತ್ತು ಪುರೋಹಿತ ಕಾರ್ಯನಿರ್ವಹಿಸಲು ಬ್ರಹ್ಮಗ್ರಾಮ ಮತ್ತು ಪರವಳಕಟ್ಟೆ ಗ್ರಾಮಗಳನ್ನು ದಾನವನ್ನಾಗಿ ನೀಡುತ್ತಾರೆ. ದಾನವನ್ನು ಸ್ವೀಕರಿಸಿದ ನರಸಿಂಹಭಟ್ಟನು ರಾಜನು ಶಾಶ್ವತವಾಗಿ ಜೀವಿಸಲಿ ಎಂದು ಆಶೀರ್ವದಿಸುತ್ತಾನೆ. ಚಂದ್ರ ಮಂಡಲನಾಡು ಮತ್ತು ಉತ್ಸಂಗಿ ವೇಂಟೆಯನ್ನು ಮಹಾಭಾರತದ ಹಸ್ತನಾವತಿಗೆ ಹೋಲಿಕೆ ಮಾಡಿದ್ದು, ನರಸಿಂಹ ಭಟ್ಟನನ್ನು ಇಂದ್ರಕಾಂತ ಎಂದು ವರ್ಣಿಸಿದೆ.[೧೨]

ಗ್ರಾಮ : ಚನ್ನಗಿರಿ

ಸ್ಥಳ : ನಾಡಿಗ ಘಟ್ಟಪ್ಪನ ಮಗ ಬಾಳಬಸಯ್ಯನ ವಂಶಸ್ಥರಲ್ಲಿದೆ

ರಾಜವಂಶ : ಸಂತೆಬೆನ್ನೂರು ನಾಯಕರು

ಅರಸ : ಹನುಮನಾಯಕ

ಕಾಲ : ಕ್ರಿ. ಶ. ೧೫೬೫

ಪ್ರಕಟಣೆ : ಬಿ.ಎಲ್.ರೈಸ್, ಇ.ಸಿ.ಸಂ.೭, ೬೨ನೇ ಶಾಸನ, ಪು.೪೫೮

ಕನ್ನಡ ಲಿಪಿಯಲ್ಲಿರುವ ತಾಮ್ರಶಾಸನವಾಗಿದ್ದು, ವಿಜಯನಗರ ಸಾಮ್ರಾಜ್ಯದ ಭೌಗೋಳಿಕ ಸ್ಥಾನ, ವಿರೂಪಾಕ್ಷ ದೇವಾಲಯದ ಸ್ಥಾಪನೆ ವಿಜಯನಗರದ ರಾಮರಾಯ (ವೀರ ರಾಮದೇವ)ನ ಸಾಮಂತರಾದ ಸಂತೆಬೆನ್ನೂರಿನ ಹನುಮ ನಾಯಕರ ಮಕ್ಕಳಾದ ಬಿಲ್ಲಪ್ಪ ನಾಯಕ ಮತ್ತು ಕೆಂಗಪ್ಪ ನಾಯಕರು, ಲಿಂಗಣ್ಣನಿಗೆ (ಇಂದ್ರವಾತಿ–ಅವಾಲ–ಮಲ್ಲಭಟ್ಟನ ಮಗ ಮತ್ತು ಅಪಭಟ್ಟರ ಕಿರಿಯ ಸಹೋದರ) ಸೇನಭೋವಿಕೆ, ಪುರೋಹಿತ ಮತ್ತು ಜ್ಯೋತಿಷ್ಯ ಕಾರ್ಯನಿರ್ವಹಿಸಲು ಸಂತೆಬೆನ್ನೂರು ಸೀಮೆಯ ಎಲ್ಲಾ ಹಳ್ಳಿಗಳನ್ನು ದಾನವನ್ನಾಗಿ ನೀಡಿ, ವಂಶ ಪಾರಂಪರ್ಯವಾಗಿ ಮುಂದುವರೆಯಲು ಹಕ್ಕನ್ನು ಮಾನ್ಯ ಮಾಡುತ್ತಾರೆ. ಶಾಸನದ ಕೊನೆಯಲ್ಲಿ ಶ್ರೀರಾಮ ಎಂದು ಬರೆಯಲಾಗಿದೆ.[೧೩]

ಗ್ರಾಮ : ಗೋಪೇನಹಳ್ಳಿ

ಸ್ಥಳ : ಇತ್ತೀಚಿನ ಆಂಜನೇಯ ದೇವಾಲಯದ ಆವರಣದ ಪ್ರಾಕಾರದಲ್ಲಿ ನಿಲ್ಲಿಸಲಾಗಿದೆ

ರಾಜವಂಶ : ಸಂತೇಬೆನ್ನೂರು ನಾಯಕರು

ಅರಸ : ಕೆಂಗಪ್ಪನಾಯಕ

ಕಾಲ : ಕ್ರಿ. ಶ. ೧೫೬೫

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ೬೭ನೇ ಶಾಸನ, ಪು.೪೬೪)

ಕೆಂಗಪ್ಪ ನಾಯಕನು, ದೊಂಬರ ಕೆಂಗಪ್ಪನಿಗೆ ಭೂದಾನವನ್ನು ನೀಡುತ್ತಾನೆ. ದಾನ ಯಾವು ಉದ್ದೇಶಕ್ಕೆಂದು ಶಾಸನದಲ್ಲಿ ವಿವರಣೆಯಿಲ್ಲ.[೧೪]

ಗ್ರಾಮ : ಲಕ್ಷ್ಮೀಸಾಗರ

ಸ್ಥಳ : ಹನುಮಂತ ದೇವಾಲಯದ ಪಕ್ಕದಲ್ಲಿದೆ

ರಾಜವಂಶ : ಸಂತೇಬೆನ್ನೂರು ನಾಯಕರು

ಅರಸ : ನಿಚ್ಚಮದುವಣಿಗ ಹನುಮಪ್ಪನಾಯಕ

ಕಾಲ : ಕ್ರಿ. ಶ. ೧೫೭೭

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೭೧ನೇ ಶಾಸನ, ಪು.೪೬೫

ಹೊದಿಗೆರೆ ಸೀಮೆಯ ನಾಡಿಗರನಾದ ಬಂಕಿಪುರದ ಮಲ್ಲಪ್ಪನು ಲಕ್ಷ್ಮೀಸಾಗರ (ಲಕ್‌ಷುಮಸಾಗರ) ಗ್ರಾಮವನ್ನು ತಿಮ್ಮಪ್ಪನ ಮಗನಾದ ರಂಗಪ್ಪನಿಗೆ ದಾನವನ್ನು ನೀಡುತ್ತಾನೆ.[೧೫]

ಗ್ರಾಮ : ಉಡವ

ಸ್ಥಳ : ಹನುಮಂತ ದೇವಾಲಯದ ಆವರಣದಲ್ಲಿದೆ

ರಾಜವಂಶ : ಸಂತೆಬೆನ್ನೂರಿನ ನಾಯಕರು

ಅರಸ : ಸರ್ಜಾ ಕೃಷ್ಣಪ್ಪ ನಾಯಕ

ಕಾಲ : ಕ್ರಿ. ಶ. ೧೭೫೮

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ೫೧ನೇ ಶಾಸನ, ಪು.೪೫೦)

ಜಮಿನ್ದಾರನ ಸಮ್ಮುಖದಲ್ಲಿ ಸಾಗರ ಪೇಟೆ ಸೆಟ್ಟಿಗಳು ತಮ್ಮ ಕಚೇರಿಗೆ ಸೇರಿದ ಸೂಳೆಕೆರೆ ಸೀಮೆಯ ಕೋಲೆ ಪ್ರದೇಶದ ಉಡವ ಗ್ರಾಮವನ್ನು ಮರಿಲಿಂಗಪ್ಪನಿಗೆ ದಾನವನ್ನು ನೀಡಿ ಶಾಸನವನ್ನು ಹಾಕಿಸುತ್ತಾರೆ.[೧೬]

ರಾಜನು ಆಡಳಿತವನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಬ್ರಾಹ್ಮಣರಿಗೆ ದಾನವನ್ನು ನೀಡಿದ್ದಾನೆ. ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿರುವ ದಾನಶಾಸನಗಳನ್ನು ವರ್ಗೀಕರಿಸಿ, ಆಡಳಿತಕ್ಕೆ ನೀಡಿದ ದಾನಶಾಸನಗಳನ್ನು ಪರಿಶೀಲಿಸಿದಾಗ ೬ ಶಾಸನಗಳು ಲಭ್ಯವಾಗಿದ್ದು, ಅವು ಕ್ರಿ.ಶ. ೧೫೪೪ ರಿಂದ ೧೭೫೮ರವರೆಗಿನ ಕಾಲಘಟ್ಟಕ್ಕೆ ಸೇರಿವೆ. ಆಡಳಿತ ಉದ್ದೇಶಕ್ಕೆ ದಾನವನ್ನು ನೀಡಿದ ಈ ಶಾಸನಗಳು ವಿಜಯನಗರ ಮತ್ತು ಸಂತೆಬೆನ್ನೂರು ನಾಯಕರ ಕಾಲಕ್ಕೆ ಸೇರಿವೆಯೆಂಬ ಮಾಹಿತಿ ತಿಳಿಯುತ್ತದೆ.

೩.೧.೨. ಸಾಮಾಜಿಕ ದಾನಶಾಸನಗಳು

ರಾಜರು, ಸಾಮಂತರು, ಸಾಮಾನ್ಯರು ಸಮಾಜಕ್ಕಾಗಿ ಪ್ರಜೆಗಳ ಅಭಿವೃದ್ಧಿಗಾಗಿ, ಸಮಾಜದ ಮುನ್ನಡೆಗಾಗಿ, ಸಮಾಜದಲ್ಲಿನ ಆಚಾರ ವಿಚಾರಗಳು, ಸಂಪ್ರದಾಯಗಳು ನಿರಂತರವಾಗಿ ಮುಂದುವರೆಯಲು ದಾನವನ್ನು ನೀಡಿ ಶಾಸನಗಳಲ್ಲಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ರಾಜನು ಸಾಮಾನ್ಯರಿಗೆ ದಾನವನ್ನು ನೀಡುತ್ತಾನೆ. ಇವುಗಳನ್ನು ದಾನಶಾಸನಗಳು ಪ್ರತಿನಿಧಿಸುತ್ತವೆ. ಆದರೆ ಸಮಾಜದ ಏಳಿಗೆಗಾಗಿ ಅಥವಾ ಅಭಿವೃದ್ಧಿಗಾಗಿ ರಾಜನು ದಾನ ನೀಡುತ್ತಾನೆ. ಅಂತಹ ಶಾಸನಗಳನ್ನು ಸಾಮಾಜಿಕ ದಾನಶಾಸನಗಳೆಂದು ಶೀರ್ಷಿಕೆ ನೀಡಿ, ಕ್ರೋಢೀಕರಿಸಲಾಗಿದೆ. ಪ್ರಸ್ತುತ ಚನ್ನಗಿರಿ ತಾಲೂಕಿನಲ್ಲಿ ಸಾಮಾಜಿಕ ದಾನಶಾಸನಗಳು ಲಭ್ಯವಾಗಿವೆ.

ಗ್ರಾಮ : ಅಸ್ತಾಪುರ
ಸ್ಥಳ : ಗ್ರಾಮದ ಪಶ್ಚಿಮಭಾಗದಲ್ಲಿದೆ
ರಾಜವಂಶ : ಕಲ್ಯಾಣದ ಚಾಲುಕ್ಯರು
ಅರಸ : ಜಗದೇಕಮಲ್ಲ
ಕಾಲ : ಕ್ರಿ. ಶ. ೧೧೪೯
ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೩೮ನೇ ಶಾಸನ, ಪು.೪೪೩

ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನು ರಾಜ್ಯವನ್ನು ವಿಸ್ತರಣೆ ಮಾಡುವ ಸಂದರ್ಭದಲ್ಲಿ ಸೋಮದೇವನು ನೊಳಂಬವಾಡಿ ಮೂವತ್ತೆರಡು ಸಾವಿರ ರಕ್ಷಣೆ ಮಾಡುತ್ತಿರುವ ಮಹಾಸಾಮಂತನಾಗಿರುತ್ತಾನೆ. ಸೋಮದೇವ ಮತ್ತು ಸೋವಿದೇವಿಯರಿಗೆ ಜನಿಸಿದ ಮಗನೇ ಇಡವರಿಯರಸನು. ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಇಡವರಿಯರಸನು ಆಳ್ವಿಕೆ ಮಾಡುವಂತಹ ಸನ್ನಿವೇಶದಲ್ಲಿ ಸೊಸಲಗೆರೆ ಮಲ್ಲಿಕಾರ್ಜುನ ದೇವಾಲಯದ ಅಂಗಭೋಗ, ರಂಗಭೋಗ ಮತ್ತು ನೈವೇದ್ಯ(ಪ್ರಸಾದ)ಕ್ಕಾಗಿ ದೇವಋಷಿ ಪಂಡಿತರಿಗೆ ಭೂದಾನವನ್ನು ನೀಡುತ್ತಾನೆ. ಈ ಶಾಸನವನ್ನು ಮಂಡಳಿಯ ಗುರು ತ್ರಿಲೋಚನದೇವನು ತಪ್ಪಿಲ್ಲದೆ ಬರೆದಿದ್ದಾನೆ. ಸೊಸಲಗೆರೆ ಇಂದಿನ ಅಸ್ತಾಪನಹಳ್ಳಿಯಾಗಿದೆ.[೧೭]

ಗ್ರಾಮ : ತಾವರೆಕೆರೆ

ಸ್ಥಳ : ನೀಲಕಂಠೇಶ್ವರ ದೇವಾಲಯದ ಆವರಣದ ದಕ್ಷಿಣ ದಿಕ್ಕಿನಲ್ಲಿದೆ.

ರಾಜವಂಶ : ಹೊಯ್ಸಳರು

ಅರಸ : ಒಂದನೇ ನರಸಿಂಹ

ಕಾಲ : ಕ್ರಿ. ಶ. ೧೧೬೮

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೭೪ನೇ ಶಾಸನ, ಪು.೪೭೧

ಹೊಯ್ಸಳರ ಶಂಕರದೇವ ಮತ್ತು ಸುಗ್ಗವೆ ದಂಪತಿಗಳ ಮಕ್ಕಳು ಹೊಯ್ಸಳರ ಸಾಮಂತರಾಗಿದ್ದಾರೆ. ರಾಜಗುರುಗಳ ಪಾದಗಳನ್ನು ತೊಳೆದು ಭೂಮಿಯನ್ನು ದಾನವನ್ನಾಗಿ ನೀಡಲಾಗುತ್ತದೆ ಎಂದು ವಿವರಿಸಲಾಗಿದೆ. ಆ ಕಾಲಘಟ್ಟದಲ್ಲಿ ರಾಜರು, ಸಾಮಂತರಿಗೆ ಮಕ್ಕಳು ಜನಿಸಿದ್ದರೆ ರಾಜಗುರುಗಳಿಗೆ ಪಾದಗಳನ್ನು ತೊಳೆದು ಭೂಮಿಯನ್ನು ದಾನವನ್ನಾಗಿ ನೀಡುತ್ತಿದ್ದರು.

ಹೊಯ್ಸಳರ ಕಾಲದಲ್ಲಿ ಶಂಕರದೇವ ಮತ್ತು ಸುಗ್ಗವೆಗೆ ತಾವರಕೆರೆ ಭಾಗವನ್ನು ಆಳ್ವಿಕೆ ಮಾಡುವಂತಹ ಮಕ್ಕಳು(ಹೊಯ್ಸಳರ ಸಾಮಂತರು) ಜನಿಸಿರುತ್ತಾರೆ. ಇದರಿಂದ ಬ್ರಾಹ್ಮಣರ ಪಾದಗಳನ್ನು ತೊಳೆದು ಭೂದಾನವನ್ನು ನೀಡುತ್ತಾರೆ.[೧೮] ಆ ಕಾಲಘಟ್ಟದಲ್ಲಿ ರಾಜರು ಸಾಮಂತರಿಗೆ ಮಕ್ಕಳು ಜನಿಸಿದರೆ ಬ್ರಾಹ್ಮಣರಿಗೆ ದಾನವನ್ನು ನೀಡುತ್ತರೆಂದು ಈ ಶಾಸನದ ನಿದರ್ಶನದಿಂದ ತಿಳಿಯುತ್ತದೆ.

ಗ್ರಾಮ : ಕಾರಿಗನೂರು

ಸ್ಥಳ : ಕಲ್ಲೇಶ್ವರ ದೇವಾಲಯದ ಆವರಣದಲ್ಲಿದೆ

ರಾಜವಂಶ : ಸೇವುಣರು

ಅರಸ : ಸಿಂಗಣ

ಕಾಲ : ಕ್ರಿ. ಶ. ೧೨೬೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೫ನೇ ಶಾಸನ, ಪು.೪೨೬

ಗ್ರಾಮದಲ್ಲಿ ಪೂಜಾರಿ ಕಲ್ಲಿದೇವನು ತನ್ನ ಪುರೋಹಿತ ಕರ್ತವ್ಯ ನಿರ್ವಹಣೆಗೋಸ್ಕರ, ಕಾರಿಗನೂರು ಗ್ರಾಮದ ಗೌಡನು ಪೂಜಾರಿ ಕಲ್ಲಿದೇವನಿಗೆ ೨೨ ಆಡುಗಳನ್ನು ದಾನವನ್ನಾಗಿ ನೀಡುತ್ತಾರೆ.[೧೯]

ಗ್ರಾಮ : ಹಿರೇಕೋಗಿಲೂರು

ಸ್ಥಳ : ಪಟೇಲ್ ವೀರಭದ್ರಯ್ಯನವರ ವಂಶಸ್ಥರ ಮನೆಯ ಆವರಣದಲ್ಲಿದೆ

ರಾಜವಂಶ : ಸೇವುಣರು

ಅರಸ : ಸಿಂಗಣ

ಸಾಮಂತ : ಚತ್ತರಾಜ

ಕಾಲ : ಕ್ರಿ. ಶ. ೧೨೬೮

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೨೧ನೇ ಶಾಸನ, ಪು.೪೩೩

ಶಂಭುವನ್ನು ಸ್ಮರಿಸುತ್ತಾ, ಮಹದೇವರಾಯನು ಮಾಳ್ವ, ಗೂರ್ಜ, ತೆಲಂಗಾಣದ ರಾಜರನ್ನು ಸೋಲಿಸಿ ವಿಜಯಿಯಾಗಿ ಆಳ್ವಿಕೆ ಮಾಡುವ ಸನ್ನಿವೇಶದಲ್ಲಿ ನಿಂಬಿರಾಜನ ಮಕ್ಕಳದ ಕುಚರಸ(ಕುಚರಾಜ) ಮತ್ತು ಚತ್ತರಸ(ಚತ್ತರಾಜ) ಮಹದೇವರಾಯನ ಮಂತ್ರಿಗಳಾಗಿ ನೊಳಂಬವಾಡಿ ಮೂವತ್ತೆರಡು ಸಾವಿರದ ಪ್ರದೇಶದಲ್ಲಿ ಬರುವ ಬೇತೂರು ಅರವತ್ತನ್ನು ಆಳ್ವಿಕೆ ಮಾಡುತ್ತಾರೆ. ಚತ್ತರಸನ ಮಗ ಚೌಡನು ಬೇತೂರು ಆರವತ್ತಲ್ಲಿ ಸಿಂಹಾಸನರೋಹಣದ ಆಚರಣೆಯ ಸಂದರ್ಭದಲ್ಲಿ ಕ್ರಿ.ಶ. ೧೧೯೦ನೇ ವಿಭವ ಸಂವತ್ಸರದ ದಿನ ಗ್ರಹಣದಲ್ಲಿ ಮಹಾಅಗ್ರಹಾರ ದಕ್ಷಿಣಾದಿತ್ಯವೊಳಲು(ಕೋಗಿಲೂರು) ಬಿಲ್ಲೇಶ್ವರ ದೇವಾಲಯದ ಅಂಗಭೋಗ, ರಂಗಭೋಗ ಮತ್ತು ನೈವೇದ್ಯಕ್ಕಾಗಿ ಸ್ತಹಿಕ ದಂಡಪಾಣಿ ಗುರುಗಳಿಗೆ ತಿಗುಳೆ ಪೊಲೆಯ ಗ್ರಾಮವನ್ನು ದಾನವನ್ನು ನೀಡುತ್ತಾನೆ.[೨೦]

ಗ್ರಾಮ : ಹಿರೇಕೋಗಿಲೂರು

ಸ್ಥಳ : ಗ್ರಾಮದ ದಕ್ಷಿಣ ಪಾಳು ಈಶ್ವರ ದೇವಾಲಯದ ಬಳಿ ನಿಲ್ಲಿಸಿದ ಶಾಸನ

ರಾಜವಂಶ : ಯಾದವರು

ರಾಜ : ವೀರರಾಮದೇವ

ಕಾಲ : ೧೨೯೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೨೬ನೇ ಶಾಸನ, ಪು.೪೩೬

ಸೇವಭೋವ ಮತ್ತು ಬೀಚಭೋವರು, ಯಾದವ ನಾರಾಯಣ ಬಹುಭುಜಬಲ ಪ್ರೌಢಪ್ರತಾಪ ಚಕ್ರವರ್ತಿ ವೀರರಾಮದೇವನ ಮಹಾಮಂಡಲೇಶ್ವರರಾಗಿರುತ್ತಾರೆ. ಸೇವಭೋವ ಮತ್ತು ಬೀಚಬೋವರು ಯುದ್ಧದಲ್ಲಿ ಪ್ರದರ್ಶಿಸಿದ ಅನುಭವ ಮತ್ತು ಶೌರ್ಯಕ್ಕೆ ಬೆರಗಾದ ವೀರರಾಮದೇವನು ಇವರಿಬ್ಬರಿಗೆ ದಾನವನ್ನು ನೀಡುತ್ತಾನೆ.[೨೧]

ಗ್ರಾಮ : ಹೊಸಹಳ್ಳಿ

ಸ್ಥಳ : ಈಶ್ವರ ದೇವಾಲಯದ ಸಮೀಪ

ರಾಜವಂಶ : ಸಂತೇಬೆನ್ನೂರಿನ ನಾಯಕರು

ಅರಸ : ಮುಮ್ಮಡಿ ಹನುಮಪ್ಪನಾಯಕ

ಕಾಲ : ಕ್ರಿ. ಶ. ೧೬೦೧

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೪೨ನೇ ಶಾಸನ, ಪು.೪೪೬

ಸಂತೆಬೆನ್ನೂರು ಮುಮ್ಮಡಿ ಹನುಮಪ್ಪ ನಾಯಕರು ಸಂತೆಬೆನ್ನೂರು ಸೀಮೆಯ ಮಲ್ಲಿಭಟ್ಟ ಉಪಾಧ್ಯರ ಮಗನಾದ ನಿಂಗಣಭಟ್ಟರಿಗೆ ಭೂಮಿಯನ್ನು ದಾನವನ್ನಾಗಿ ನೀಡಿದ್ದನ್ನು ವಿವರಿಸಿದೆ[೨೨].

ಗ್ರಾಮ : ಮಂಟರ ಘಟ್ಟ

ಸ್ಥಳ : ಹೊರಬಾಗಿಲ ಬಳಿ ನಿಲ್ಲಿಸಿದ ಶಾಸನ

ರಾಜವಂಶ : ಸಂತೆಬೆನ್ನೂರು ನಾಯಕರು

ರಾಜ : ಹನುಮಪ್ಪನಾಯಕ

ಕಾಲ : ಕ್ರಿ.ಶ. ೧೬೨೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೩೫ನೇ ಶಾಸನ, ಪು.೪೪೨

ಶ್ರೀಮತ್ ಕ್ರೋಧ ಸವಂತ್ಸರದ ಆಶ್ವಿಜ ಶುದ್ಧ ಪಂಚಮಿಲಿ ಮುಮ್ಮಡಿ ಹನುಮಪ್ಪ ನಾಯಕರು ಭಟ್ಟರ–ವೆಂಕಟಯ್ಯನಿಗೆ ಮಂಟರಗಟ್ಟ (ಮಂತುರಘಟ್ಟ)ಗ್ರಾಮದ ಭಟ್ಟರ ಅಗ್ರಹಾರವನ್ನು ದಾನವಾಗಿ ನೀಡಿದರು.[೨೩]

ಗ್ರಾಮ : ಚಿಕ್ಕಕೋಗಿಲೂರು

ಸ್ಥಳ : ಹನುಮಂತ ದೇವಾಲಯದ ಆವರಣ

ರಾಜವಂಶ : ಚಿತ್ರದುರ್ಗದ ಪಾಳೆಗಾರರು

ಅರಸ : ಹಿರಿಯ ತಿಮ್ಮಣ್ಣನಾಯಕ

ಕಾಲ : ಕ್ರಿ. ಶ. ೧೬೭೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೪೬ನೇ ಶಾಸನ, ಪು.೪೪೮

ಪ್ರಾರಂಭದ ಸಾಲುಗಳಲ್ಲಿ ಗಣಪತಿಗೆ ವಿಧೇಯತೆಯಿಂದ ಮನವಿ ಸಲ್ಲಿಸಲಾಗಿದೆ. ಬೋಳ ನಾಯಕನ ಮೊಮ್ಮಗನಾದ ಹಿರೇತಿಮ್ಮನಾಯಕ ಸೌರಮಾನ ಸಂದರ್ಭದಲ್ಲಿ ಚಿಕ್ಕಕೋಗಿಲೂರನ್ನು ದಾನವನ್ನಾಗಿ ನೀಡುತ್ತಾನೆ'[೨೪].

ಗ್ರಾಮ : ಹಿರೇಮಾಡಳು

ಸ್ಥಳ : ಕೆರೆಯ ಸಮೀಪ

ರಾಜವಂಶ : ಬಿಜಾಪುರದ ಸುಲ್ತಾನರು

ಅರಸ : ಮಹಮದ್ ಆದಿಲ್ ಷಾ

ಕಾಲ : ಕ್ರಿ ಶ. ೧೬೨೯

ಬಸವಪಟ್ಟಣದ ನವದಿವಾನರಾದ ಸುಭೇದಾರ್ 'ಲಿಂಗಪ್ಪ' ಗ್ರಾಮದಲ್ಲಿ ಹಂದಿಯನ್ನು ಕೊಂದಿದ್ದ ಅಪರಾಧವನ್ನು ತಡೆಯಲು ಸಫಲವಾದ್ದರಿಂದ ಹಿರೇಮಾಡಳು ಗ್ರಾಮವನ್ನು ದಾನವನ್ನಾಗಿ ನೀಡುತ್ತಾನೆ.'[೨೫].

ಗ್ರಾಮ : ಬೊಮ್ಮೇನಹಳ್ಳಿ

ಸ್ಥಳ : ಆಂಜನೇಯ ದೇವಾಲಯದ ಗರ್ಭಗೃಹ

ರಾಜವಂಶ : ಸಂತೇಬೆನ್ನೂರಿನ ನಾಯಕರು

ಅರಸ : ಮುಮ್ಮಡಿ ಹನುಮಪ್ಪ ನಾಯಕ

ಕಾಲ : ಕ್ರಿ. ಶ. ಹದಿನಾರನೆಯ ಶತಮಾನ

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ೩೦ನೇ ಶಾಸನ, ಪು.೪೩೯

ಶ್ರೀ ಮತುವೆಯ ಸವಂತ್ಸರದ ಕಾರ್ತಿಕ ಬಹುಳಪಾಡ್ಯ ಶುಕ್ರವಾರದಂದು ಪುಟ್ಟರಂಗಣನು ಬಡಗಿ ಲಿಂಗಣ್ಣನಿಗೆ ನಿರ್ವಹಿಸಿದ ಬಡಗಿತನದ ಕಾರ್ಯಕ್ಕಾಗಿ ದಾನವನ್ನು ನೀಡುತ್ತಾನೆ.[೨೬]

ಗ್ರಾಮ : ಬೊಮ್ಮನಹಳ್ಳಿ

ಸ್ಥಳ : ದಕ್ಷಿಣ ಪಟೇಲ ಕಲ್ಲಯ್ಯನ ವಂಶಸ್ಥರ ಹೊಲದಲ್ಲಿದೆ

ರಾಜವಂಶ : ಸಂತೆಬೆನ್ನೂರು ನಾಯಕರು

ರಾಜ : ಚಿಕ್ಕಣ್ಣ ನಾಯಕ

ಕಾಲ : ೧೭ನೇ ಶತಮಾನ

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ೩೦ನೇ ಶಾಸನ, ಪು.೪೩೯)

ಸಂತೆಬೆನ್ನೂರಿನ ಚಿಕ್ಕಣ್ಣ ನಾಯಕನ ಪಟ್ಟಾಭಿಷೇಕ ಸಂದರ್ಭದಲ್ಲಿ ನೀತಿಗೆರೆಯಲ್ಲಿ ಮುದ್ದೈಯ(ಮುದ್ದಯ್ಯ) ಬೊಮ್ಮನಹಳ್ಳಿಗೆ ನುಗ್ಗಿ ಅದನ್ನು ವಶಪಡಿಸಿಕೊಂಡದ್ದರಿಂದ ಪ್ರೇರಿತನಾದ ದಳವಾಯಿ ರಂಗಪ್ಪಾಜೀ ಭೂಮಿಯನ್ನು ದಾನವನ್ನು ನೀಡುತ್ತಾನೆ.[೨೭]

ರಾಜರು, ಸಮಾಂತರು, ಸಾಮಾನ್ಯರು ಸಮಾಜದ ಉದ್ಧಾರಕ್ಕಾಗಿ, ಅಭಿವೃದ್ಧಿಗಾಗಿ ಜನರಿಗೆ ದಾನವನ್ನು ನೀಡುತ್ತಾರೆ. ಮೇಲೆ ವಿಶ್ಲೇಷಿಸಿದವುಗಳನ್ನು ಪರಿಶೀಲಿಸಿದಾಗ ಕ್ರಿ.ಶ. ೧೦೫೦ ರಿಂದ ೧೬೨೫ರವರೆಗೆ ಸಮಾಜಕ್ಕೆ ನೀಡಿದ ದಾನದ ಬಗ್ಗೆ ದಾಖಲಿಸಿದ ಸಾಮಾಜಿಕ ದಾನಶಾಸನಗಳ ಕುರಿತಾಗಿದೆ. ಇವು ನೊಳಂಬರು, ಕಲ್ಯಾಣ ಚಾಲುಕ್ಯರು, ಸೇವುಣರು, ಹೊಯ್ಸಳರು ಮತ್ತು ಸಂತೆಬೆನ್ನೂರಿನ ನಾಯಕರ ಕಾಲಕ್ಕೆ ಸೇರಿದ ಶಾಸನಗಳಾಗಿವೆ. ಸಮಾಜದ ಏಳಿಗೆಗಾಗಿ ಆಚಾರ-ವಿಚಾರ, ಸಂಪ್ರದಾಯ ನೆರವೇರಿಸಲು ನೀಡಿದ ದಾನವನ್ನು ಬ್ರಾಹ್ಮಣರು ಹೆಚ್ಚಾಗಿ ಪಡೆದುಕೊಂಡಿದ್ದಾರೆ.

೩.೧.೩. ಧಾರ್ಮಿಕ ದಾನಶಾಸನಗಳು

ಧರ್ಮ ಎಂಬುದು ಸಂಸ್ಕೃತದ 'ಧೃ' ಎಂಬ ಧಾತುವಿನಿಂದ ಬಂದಿದೆ. ಇದು ಪೋಷಿಸು, ರಕ್ಷಿಸು ಎಂಬ ಅರ್ಥ ನೀಡುತ್ತದೆ. ತನ್ನ ಧರ್ಮದ ರಕ್ಷಣೆಗಾಗಿ ಧರ್ಮದ ಬೆಳವಣಿಗೆಗಾಗಿ ರಾಜರು, ಸಾಮಂತರು, ಸಾಮಾನ್ಯರು ದಾನವನ್ನು ದೇವಾಲಯಗಳಿಗೆ, ಮಠಗಳಿಗೆ, ಅಗ್ರಹಾರಗಳಿಗೆ ಬಂಗಾರ,

ಭೂಮಿ ಅಥವಾ ಹಣದ ರೂಪದಲ್ಲಿ ದಾನವನ್ನು ನೀಡುತ್ತಾರೆ. ರಾಜನಿಂದ ಧರ್ಮದ ಉಳಿವಿಗೆ, ಪ್ರಸಾರಕ್ಕೆ, ರಕ್ಷಣೆಗೆ ದಾನವನ್ನು ಪಡೆದ ಪುರೋಹಿತರು/ಬ್ರಾಹ್ಮಣರು ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುತ್ತಾರೆ. ಇಂತಹ ದಾನಶಾಸನಗಳು ಧಾರ್ಮಿಕ ಉದ್ದೇಶವನ್ನು ಪ್ರತಿನಿಧಿಸುವುದರಿಂದ ಇವುಗಳನ್ನು ಕ್ರೋಡೀಕರಿಸಿಕೊಂಡು ಧಾರ್ಮಿಕ ದಾನಶಾಸನಗಳೆಂಬ ಶೀರ್ಷಿಕೆಯಡಿಯಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಚನ್ನಗಿರಿ ತಾಲೂಕಿನಲ್ಲಿ ಧಾರ್ಮಿಕ ದಾನಶಾಸನಗಳು ಲಭ್ಯವಾಗಿವೆ.

ಗ್ರಾಮ : ಹಿರೇ ಉಡ
ಸ್ಥಳ : ಗ್ರಾಮದ ಪಕ್ಕದ ಹೊಲದಲ್ಲಿದೆ
ರಾಜವಂಶ : ಕಲ್ಯಾಣದ ಚಾಲುಕ್ಯರು
ಅರಸ : ಒಂದನೆ ಜಯಸಿಂಹ ಜಗದೇಕ ಮಲ್ಲ
ಕಾಲ : ೧೦೧೮
ಪ್ರಕಟಣೆ : ಎಂ.ಎ.ಆರ್.,ವರದಿ-೧೯೮೫,ಪ್ರಕಟಣೆ.೧೯೮೬,
೩೫ನೇ ಶಾಸನ, ಪು.೧೧೧

ಜಗದೇಕಮಲ್ಲನು ಆಳ್ವಿಕೆ ಮಾಡುತ್ತ ರಾಜ್ಯ ವಿಸ್ತರಣೆ ಮಾಡಿದಾಗ ಹಿರೇಉಡ ಗ್ರಾಮಕ್ಕೆ ಸೇರಿದ ಒಣಭೂಮಿಯನ್ನು ಶಿವ ದೇವಾಲಯಕ್ಕೆ ದಾನವನ್ನಾಗಿ ನೀಡಿದನ್ನು ದಾಖಲಿಸಿದೆ[೨೮].

ಗ್ರಾಮ : ಹಿರೇ ಕೋಗಿಲೂರು
ಸ್ಥಳ : ಕೋಟೇಚೆನ್ನಬಸಪ್ಪನವರ ಹಿತ್ತಲಿನ ಆವರಣ
ರಾಜವಂಶ : ನೊಳಂಬರು
ಅರಸ : ತ್ರೈಲೋಕ್ಯಮಲ್ಲ ನನ್ನಿ ನೊಳಂಬ ಪಲ್ಲವ ಪೆರ್ಮಾಡಿ
ಕಾಲ : ಕ್ರಿ.ಶ, ೧೦೪೭
ಪ್ರಕಟಣೆ : ಇತಿಹಾಸ ದರ್ಶನ, ಸಂಪುಟ-೧೭, ಪು.೫೨

ದ್ವಿಮುಖ ಶಾಸನಾವಾಗಿದ್ದು ಶಾಸನೋಕ್ತ ವೀರಗಲ್ಲಾಗಿದ್ದರೂ ಸಹ ಧಾರ್ಮಿಕ ದಾನದತ್ತಿಯ ಕುರಿತಿದೆ. ಕಲ್ಯಾಣ ಚಾಲುಕ್ಯರ ಸಮಾಂತರದ ನೊಳಂಬರ ತ್ರೈಲೋಕ್ಯನನ್ನಿನೊಳಂಬ ಪಲ್ಲವ ಪೆರ್ಮಾಡಿಯ ಅಧೀನನಾಗಿ ಶುಭತುಂಗನು ಪಿರಿಯಕೋಗಿಲೂರ್, ಕಿರಿಯಕೋಗಿಲೂರ್ ಕೂಡಲಗೇರಿ, ಮೆದೆಕೆರೆ, ಎರ್ಮಯನೂರು, ದುಮ್ಮಿ-೧೨ ಇವುಗಳನ್ನು ತ್ರಿಭೋಗ ಸಹಿತವಾಗಿ ಆಳುತ್ತಿದ್ದು ಶಕವರ್ಷ ೯೬೮(ಕ್ರಿ.ಶ. ೧೦೪೭)ನೆಯ ಸರ್ವಜಿತ್ ಸಂವತ್ಸರದ ವೈಶಾಖ ಶುದ್ಧ ತ್ರಯೋದಶಿ ಆದಿತ್ಯವಾರದಂದು ಸುಭತುಂಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಚಂದ್ರಾಭರಣ ಪಂಡಿತರ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ಮಠದ ತಪಸ್ವಿಗಳಿಗೆ ಊಟಕ್ಕಾಗಿ ಪಿರಿಯಕೆರೆ, ಗಾವುಂಡಕೆರೆ ಮತ್ತು ಗೊರವಕೆರೆ ಇವುಗಳ ವ್ಯಾಪ್ತಿಗೆ ಸೇರಿದ ಕೆಂಪು ಮತ್ತು ಎರೆ ಮಣ್ಣಿನ ಬೇರೆ ಬೇರೆ ಭೂಮಿಗಳನ್ನು

ದೇವರಿಗೂ ಒಂದು ತೋಟವನ್ನು ಮಠಕ್ಕೂ ದಾನಕೊಟ್ಟನು ಎಂದು ಶಾಸನವು ದಾಖಲಿಸಿದೆ.[೨೯] ಶಾಸನದ ಹಿಂಭಾಗದಲ್ಲಿ ಆನೆಯು ಮನುಷ್ಯನನ್ನು ತುಳಿಯುವ ಉಬ್ಬುಶಿಲ್ಪವಿದೆ. ಶಾಸನದ ಪಾಠವು ಶುಭತುಂಗನೇ ಆನೆಯೆಂದು ವರ್ಣಿಸಿದೆ. ತನ್ನ ಸಹೋದರನ ತಂಟೆಗೆ ಬಂದರೆ ಇದೇ ಗತಿ ಎಂದು ಎಚ್ಚರಿಕೆಯನ್ನು ನೀಡುತ್ತಾನೆ.[೩೦]

ಗ್ರಾಮ : ಕಗ್ಗತ್ತೂರು

ಸ್ಥಳ : ವೀರಭದ್ರದೇವಾಲಯದ ಮುಂಭಾಗದಲ್ಲಿ ನೆಟ್ಟ ಸ್ತಂಭದ ಮುಖದಲ್ಲಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ಅರಸ : ಒಂದನೇ ಸೋಮೇಶ್ವರ

ಸಾಮಂತ : ಸಾವಿರ ನಾಡಿನ ಸಿಂಗ ಚತ್ತರಸ

ಕಾಲ : ೧೦೫೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೨ನೇ ಶಾಸನ, ಪು.೪೧೦

ಅಮ್ಮಯ್ಯ, ರಾಚಯ್ಯ, ಕೇಸವಸಹಣಿ, ಸಿರಿಯಣ್ಣರಾಣಯ್ಯ ಒಮ್ಮೆಯಸಾಹಣಿಯ ಅಳಿಯ ಕೇಶಿಯಣಗೊಂದಯ್ಯ ಪಿರುಮಾಳಿಕೇಯಸಹಣಿಯ ಮಾರಯ್ಯ ಎಲ್ಲಾ ಸಮಸ್ತ ಸಹಣಿಯರು 'ವೀರ ಸೋಮನಾಥ' ದೇವರಿಗೆ ಅಂಗಭೋಗ, ರಂಗಭೋಗ, ನೈವೇದ್ಯಕ್ಕಾಗಿ ಗಂಗಪೋಲೆಯಿಂದ ದಾನವನ್ನು ನೀಡುತ್ತಾರೆ. ಸಾವಿರನಾಡಿನ ಚತ್ತರಸ, ನಾಲಪ್ರಭು(ನಾಡಪ್ರಭು) ಬಿಳಚಿ ಎಪ್ಪತ್ತರ ಗ್ರಾಮಗಳ ಸಮಸ್ತರು ಸೋಮನಾಥ ದೇವರಿಗೆ ದಾನವನ್ನು ನೀಡಿರುತ್ತಾರೆ. ದೇವಾಲಯದ ಕಾರ್ಯಗಳಿಗೆ ಜನರು ದಾನವನ್ನು ನೀಡಿದ್ದರೆಂದು ಅವರ ಹೆಸರುಗಳನ್ನು ಶಾಸನದಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲವೆಂದು ಅವರು ನೀಡಿದ ದಾನಕಾರ್ಯ ಶ್ರೇಷ್ಠವೆಂದು ಶ್ಲಾಘಿಸಿದೆ[೩೧]. ಇದೊಂದು ಸ್ತಂಭಶಾಸನವಾಗಿದೆ.

ಗ್ರಾಮ : ಮೆದಕೆರೆ

ಸ್ಥಳ : ಗ್ರಾಮದ ಪೂರ್ವದಿಕ್ಕಿನಲ್ಲಿರುವ ಮಧುಕೇಶ್ವರ ದೇವಾಲಯದಲ್ಲಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ರಾಜ : ಮಾಚಗಾವುಂಡ

ಕಾಲ : ಕ್ರಿ.ಶ. ೧೦೬೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೧೮ನೇ ಶಾಸನ, ಪು.೪೩೧

ಕಲ್ಯಾಣದ ಚಾಲುಕ್ಯಭರಣ ಶ್ರೀಮತು ಚಾಲುಕ್ಯರ ತ್ರೈಲೋಕ್ಯಮಲ್ಲದೇವ ತನ್ನ ರಾಜ್ಯವನ್ನು ಎಲ್ಲಾ ಕಡೆ ವಿಸ್ತರಿಸಿ, ಶಾಂತಿ ಮತ್ತು ಚತುರತೆಯಿಂದ ಆಳ್ವಿಕೆ ಮಾಡುತ್ತಿರುವಾಗ ಅವರ ಮಹಾಸಾಮಂತರಾಗಿ ಉಚ್ಚಂಗಿಪಾಂಡ್ಯರು ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು

ರಾಜ್ಯಭಾರ ಮಾಡುತ್ತಿರುವಾಗ ಅವರ ಅಧೀನ ಸಾಮಂತ ಮಾಚಗಾವುಂಡನು ೯೮೫ನೇ ಶೋಭಕ್ರಿತು ಸಂವತ್ಸರದ ಚೈತ್ರಶುದ್ಧ ಭಾನುವಾರದಂದು ನೈವೇದ್ಯ(ಪ್ರಸಾದ) ಮತ್ತು ಜೀರ್ಣೋದ್ಧಾರಕ್ಕೆ ಬೆದ್ದಲು ಹೊಲ ಮತ್ತು ಗದ್ದೆಯನ್ನು ಹಾಗೂ ದೇವರ ನಂದದೀವಿಗೆಗಾಗಿ ಎರಡು ಸುತ್ತು ಸುತ್ತುವ ಒಂದು ಗಾಣದ ಕೈಗಾರಿಕೆಯನ್ನು ದಾನವನ್ನಾಗಿ ನೀಡುತ್ತಾನೆ. ಹಾಗೆಯೇ ಸಕಲೇಶ್ವರ ಪಂಡಿತದೇವರ ಮಠಕ್ಕೆ ಭೂಮಿಯನ್ನು ದಾನವನ್ನಾಗಿ ನೀಡುತ್ತಾನೆ. ಮಲ್ಲಿಕಾರ್ಜುನ ದೇವಾಲಯವೇ ಮಧುಕೇಶ್ವರ ದೇವಾಲಯವೆಂದು ಬಿ.ಎಲ್.ರೈಸ್ ಗುರುತಿಸಿದ್ದಾರೆ. ಮಧುಕೆರೆಯೇ ಪ್ರಸ್ತುತ ಮೆದಕೆರೆಯಾಗಿದೆ.[೩೨]

ಗ್ರಾಮ	:	ಮೆದಕೆರೆ
ಸ್ಥಳ	:	ಮೆದಕೆರೆಯ ಪೂಜಾರಿ ಕಣದಲ್ಲಿದೆ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಅರಸ	:	ತ್ರಿಭುವನ ಮಲ್ಲ
ಸಾಮಂತ	:	ಇರುಗಮಯ್ಯ
ಕಾಲ	:	೧೧೨೦
ಪ್ರಕಟಣೆ	:	ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೧೭ನೇ ಶಾಸನ, ಪು.೪೩೦

ನುಗ್ಗೇನಹಳ್ಳಿಯ ಹನುಮಂತದೇವ ಮತ್ತು ಅವನ ಒಡೆಯರಾದ ಹಲಗು ಮತ್ತು ಕುರುಜರು ಸೇರಿಕೊಂಡು ಬಸವಣ್ಣ ದೇವಾಲಯವನ್ನು ಕಟ್ಟಿಸಿದರು. ಇದರಿಂದ ಪ್ರೇರಿತನಾದ ಹನುಮಂತದೇವರ ಮಗ ಕಂಗಳದೇವ ಪರದೇಶದಲ್ಲಿ ಬೇಡಿ ತಂದ ಹಣದಿಂದ ಹನುಮಂತ ದೇವಾಲಯಕ್ಕೆ ಕಟುಪಂಜರ ಮಾಡಿಸಿದನು. ಇದರಿಂದ ಸಮಸ್ತರಿಗೆ ಧರ್ಮ ಕೀರ್ತಿ ಸಿಗಲೆಂದು ಶಾಸನ ಆಶಿಸುತ್ತದೆ.[೩೩]

ಗ್ರಾಮ	:	ಮೆದಕೆರೆ
ಸ್ಥಳ	:	ಮಧುಕೇಶ್ವರ ದೇವಾಲಯದ ಪಶ್ಚಿಮಕ್ಕೆ ಇನ್ನೂರು ಅಡಿ ದೂರವಿರುವ ಹಾಲಪ್ಪನವರ ತೋಟದಲ್ಲಿ ದೊರೆತಿದೆ
ರಾಜವಂಶ	:	ಉಚ್ಚಂಗಿ ಪಾಂಡ್ಯರು
ಅರಸ	:	ಇರುಕ್ಕವೇಲ್ (ಪಲಿಂದ ಪಾಂಡ್ಯ)
ಸಾಮಂತ	:	ಮಾಚಗಾವುಂಡ
ಕಾಲ	:	ಕ್ರಿ.ಶ, ೧೧೨೧
ಪ್ರಕಟಣೆ	:	ಇತಿಹಾಸ ದರ್ಶನ, ಸಂ.೧೭, ಪು.೬೦

ಈ ಶಾಸನದಲ್ಲಿ ಚಾಲುಕ್ಯ ವಿಕ್ರಮ ಶಕ ೪೫ನೇ ಶಾರ್ವರಿ ಸಂವತ್ಸರದ ಆಷಾಡ ಶುದ್ಧ ೧೩ನೇ ಆದಿವಾರದಂದು ಸಾಮಂತ ಪ್ರಭು ಮಾಚಗಾವುಂಡ ಎಂಬುವವನು ಮಾಳೇಶ್ವರ ದೇವಾಲಯಕ್ಕೆ ಮಾವಿನಕೆರೆ ಮತ್ತು ಅಲಂಗೆರೆಯ ನಡುವೆ ಇರುವ ಇಪ್ಪತ್ತು ಮತ್ತರು ಭೂಮಿ ದಾನವನ್ನಾಗಿ ಕೊಟ್ಟಿರುವುದನ್ನು ತಿಳಿಸುತ್ತದೆ.[೩೪]

ಗ್ರಾಮ	:	ದೊಡ್ಡಬ್ಬಿಗೆರೆ
ಸ್ಥಳ	:	ಕಲ್ಲೇಶ್ವರ ದೇವಾಲಯದ ದಕ್ಷಿಣ ಭಾಗಕ್ಕೆ ನಿಲ್ಲಿಸಲ್ಪಟ್ಟಿರುವ ಶಾಸನವಾಗಿದೆ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಅರಸ	:	ತ್ರಿಭುವನ ಮಲ್ಲ ಆರನೆಯ ವಿಕ್ರಮಾಧಿತ್ಯ
ಸಾಮಂತರು	:	ಉಚ್ಚಂಗಿ ಪಾಂಡ್ಯ
ಸಾಮಂತರ ಅರಸ	:	ತ್ರಿಭುವನ ಮಲ್ಲ ರಾಯ ಪಾಂಡ್ಯ ದೇವ
ಕಾಲ	:	ಕ್ರಿ.ಶ. ೧೧೨೨
ಪ್ರಕಟಣೆ	:	ಇತಿಹಾಸ ದರ್ಶನ, ಸಂ.೧೭, ಪು.೫೯

ಉಚ್ಚಂಗಿ ಪಾಂಡ್ಯರ ದೊರೆ ತ್ರಿಭುವನ ಮಲ್ಲರಾಯ ಪಾಂಡ್ಯನು ನೊಳಂಬವಾಡಿ ೩೨ ಸಾವಿರವನ್ನು ಆಳುತ್ತಿರುವಾಗ ಅವನ ಸಾಮಂತನಾಗಿದ್ದ ಬೊಮ್ಮಯ್ಯ ಎಂಬುವವನು ವಿಕ್ರಮ ಶಕ ನಲವತ್ತೇಳನೇ ಪ್ಲವ ಸಂವತ್ಸರದ ಪುಷ್ಯ ಬಹುಳ ೧೪ನೇ ಮಂಗಳವಾರ ಉತ್ತರಾಯಣ ಸಂಕ್ರಾಂತಿಯಂದು ಅಬ್ಬಿಗೆರೆಯ ಕಲ್ಲೇದೇವರಿಗೆ ಜಪ, ತಪ, ಯಮ, ನಿಯಮ, ದಾನ್ಯ, ವರುಣ, ಧಾರಣ, ಮೌನ, ಅನುಷ್ಠಾನಗಳೆಂಬ ಅಷ್ಠಾಂಗ ಯೋಗಗಳಿಂದ ಇರುವ ಪಂಡಿತರ ಶಿಷ್ಯರಾದ ಜ್ಞಾನ ಪಂಡಿತರ ಪಾದಗಳನ್ನು ತೊಳೆದು ಆಲೂರಿನ ಕೆರೆಯ ಮೂಡಲ ಭೂಮಿಯನ್ನು ದಾನ ನೀಡಿದ್ದನ್ನು ಶಾಸನ ದಾಖಲಿಸಿದೆ.[೩೫]

ಗ್ರಾಮ	:	ಚನ್ನಗಿರಿ
ಸ್ಥಳ	:	ನಾಡಿಗ ಪ್ರಭಣ್ಣನ ವಂಶಸರ ಮನೆಹಿಂದಿನ ರಸ್ತೆಯ ಸಮೀಪದಲ್ಲಿದೆ
ರಾಜವಂಶ	:	ಉಚ್ಚಂಗಿಪಾಂಡ್ಯರು
ಅರಸ	:	ತ್ರಿಭುವನ ಮಲ್ಲ–ರಾಯ–ಪಾಚಿಡ್ಯದೇವ
ಸಾಮಂತ	:	ಇರುಗಮಯ್ಯ
ಕಾಲ	:	೧೧೨೫
ಪ್ರಕಟಣೆ	:	ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ–೨, ೬೧ನೇ ಶಾಸನ, ಪು.೪೫೬

ಕಲ್ಯಾಣದ ಚಾಲುಕ್ಯರ ತ್ರಿಭುವನಮಲ್ಲದೇವನು ರಾಜ್ಯವನ್ನು ವಿಸ್ತರಿಸುತ್ತಾ ಆಳ್ವಿಕೆ ಮಾಡುವಂತಹ ಸಂದರ್ಭದಲ್ಲಿ ಇವನ ಮಹಸಾಮಂತನಾದ ಉಚ್ಚಂಗಿಪಾಂಡ್ಯರ ತ್ರಿಭುವನಮಲ್ಲ ರಾಯಪಾಂಡ್ಯ ಮತ್ತು ಸಾಂತಲಿಗೆ ಸಾವಿರವನ್ನು ಶಾಂತಿ ಮತ್ತು ಸುಭಿಕ್ಷೆಯಿಂದ ಆಳ್ವಿಕೆ ನಡೆಸುತ್ತಾನೆ. ಉಚ್ಚಂಗಿ ಪಾಂಡ್ಯರ ಸಾಮಂತನಾದ ಸೋಮರಸನು ಬಿಳಚಿ ಎಪ್ಪತ್ತು ಮನ್ನೆಯ ಹಕ್ಕನ್ನು ಹೊಂದಿರುವನು. ಕೇಸಿರಾಜ ಮತ್ತು ಚಣಕಬ್ಬೆ ದಂಪತಿಗಳಿಗೆ ಜನಿಸಿದ ಮಗನೇ ಇರುಗ, ಅವನ ಪತ್ನಿ ಭವ್ಯೆಕಬ್ಬೆಯಾಗಿದ್ದಾಳೆ. ಬಸವಳ್ಳಿ, ಸರತಹಳ್ಳಿ, ನಲ್ಲೂರು, ಮನುಜವೊಳಲಿನ ಮಲ್ಲಿಗೆ ಗ್ರಾಮ, ಹರಲಿ ಹನ್ನೆರಡರಲ್ಲಿನ ಕುಂಕವದಹಳ್ಳಿ ಐದು ಗ್ರಾಮಗಳು ಬಿಳಚಿ ಎಪ್ಪತ್ತರಲ್ಲಿ ಬರುತ್ತವೆ. ಈ ಐದು ಪಟ್ಟಣಗಳ ಒಡೆಯ 'ಇರುಗಮಯ್ಯ ನಾಯಕ'(ಇರುಗ)ನಾಗಿದ್ದು, ಹೊಸಹಳ್ಳಿಯಲ್ಲಿ ಇರುಗೇಶ್ವರ ದೇವಾಲಯವನ್ನು ಕಟ್ಟಿಸಿದನು. ದೇವಾಲಯದ ಅಂಗಭೋಗ, ರಂಗಭೋಗ, ನೈವೇದ್ಯ ಪುರೋಹಿತನ ಜೀವನ ವೆಚ್ಚ, ಅತಿಥಿಗಳ ಸತ್ಕಾರ್ಯ ಪೋಷಣೆಗೋಸ್ಕರ 'ಸಿಖಸಿವ ಗುರುಗಳ' ಪಾದಗಳನ್ನು ತೊಳೆದು ದಾಸಯ್ಯ ಕೆರೆಯ ಕೆಳಭಾಗದ ಹೊಲಗದ್ದೆ ಮತ್ತು ತೋಟವನ್ನು ದಾನ ನೀಡುತ್ತಾನೆ. ಇರುಗನ ಹೆಂಡತಿಯಾದ ಭವ್ಯೆಕಬ್ಬೆಯು ದೇವಾಲಯದ ನಿರ್ವಹಣೆಗಾಗಿ ಗಾಣದ ಕೈಗಾರಿಕೆಯನ್ನು ದಾನ ನೀಡುತ್ತಾಳೆ.[೩೬]

ಗ್ರಾಮ : ಚನ್ನಗಿರಿ

ಸ್ಥಳ : ಕಲ್ಲೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಹಾಲಪ್ಪನ ಮಠದ ಸಮೀಪದಲ್ಲಿದೆ.

ರಾಜವಂಶ : ಕಲ್ಯಾಣದ ಚಾಲುಕ್ಯರ

ಅರಸ : ಎರಡನೆಯ ಜಗದೇಕ ಮಲ್ಲ

ಸಾಮಂತ : ನಾಗಣ್ಣ

ಕಾಲ : ಕ್ರಿ.ಶ. ೧೧೪೨

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ–೨, ೬೦ನೇ ಶಾಸನ, ಪು.೪೪೫)

ಸಾಮಂತ ನಾಗಣ್ಣ ಕೇತೇಶ್ವರ ದೇವಾಲಯದ ಅಂಗಭೋಗ, ರಂಗಭೋಗ, ನೈವೇದ್ಯ, ಜೀರ್ಣೋದ್ಧಾರ, ನಂದಾದೀವಿಗೆಗೆಂದು ರುದ್ರಶಕ್ತಿ ಗುರುಗಳಿಗೆ ಗದ್ದೆ(ಭೂಮಿ)ಯನ್ನು ದಾನ ನೀಡಿದ್ದನ್ನು ಮತ್ತು ಮೂರು ಕಾಲದಲ್ಲಿ ಮುಂದುವರೆಯಲಿ ಎಂದು ಶಾಸನ ಆಶಿಸುತ್ತದೆ.[೩೭]

ಗ್ರಾಮ : ಅಸ್ತಾಪನಹಳ್ಳಿ

ಸ್ಥಳ : ಸೋಮೇಶ್ವರ ದೇವಾಲಯದ ಉತ್ತರ ದಿಕ್ಕಿಗಿದೆ

ರಾಜವಂಶ : ಉಚ್ಚಂಗಿ ಪಾಂಡ್ಯರು

ಅರಸ : ವೀರಪಾಂಡ್ಯ

ಕಾಲ : ಕ್ರಿ.ಶ. ೧೧೪೯

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೯ನೇ ಶಾಸನ, ಪು.೪೪೪

ಕಲ್ಯಾಣದ ಚಾಲುಕ್ಯರ ಜಗದೇಕಮಲ್ಲನ ಸಾಮಂತನಾದ ಉಚ್ಚಂಗಿ ಪಾಂಡ್ಯರ ವೀರಪಾಂಡ್ಯದೇವನು ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಆಳ್ವಿಕೆ ಮಾಡುವ ಸನ್ನಿವೇಶದಲ್ಲಿ ರಾಜೆಂದ್ರ ಚೋಳನು ನೊಳಂಬವಾಡಿಯ ಮೇಲೆ ದಾಳಿ ಮಾಡಿದಾಗ ಜಗದೇಕಮಲ್ಲನು ನೊಳಂಬವಾಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಕ್ಷಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಉಚ್ಚಾಂಗಿ ಪಾಂಡ್ಯರ ಸಾಮಂತನಾದ ಇಡವರಿದೇವನು ಬಿಳಚಿ ಏಪ್ಪತ್ತನ್ನು ಆಳ್ವಿಕೆ ಮಾಡುತ್ತಾನೆ. ಇಡವರಿದೇವನ ತಂದೆ ಸೋಮರಸ, ತಾಯಿ ಸೋಬರಸಿ, ಅವನ ಪತ್ನಿಯರು ಮೂರು ಜನ(ಚಂದಲಾದೇವಿ, ಗಂಗರಸಿ)ರನ್ನು ಹೊಂದಿದ್ದಾನೆ. ಬಿಳಚಿ ಏಪ್ಪತ್ತರ ಮುಖ್ಯಸ್ಥನಾಗಿ ಸೊಸಲಗೆರೆಯಿಂದ ಆಳ್ವಿಕೆ ಮಾಡುತ್ತಿರುವ ಇಡವರಿದೇವ (ಇಡವರಸ) ತನ್ನ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಿದ್ದಾನೆ. ಆದ್ದರಿಂದ ಸೋಮೇಶ್ವರ ದೇವಾಲಯಕ್ಕೆ ಭೂದಾನವನ್ನು ನೀಡಿದ್ದನ್ನು ಶಾಸನವು ದಾಖಲಿಸಿದೆ.[೩೮]

ಗ್ರಾಮ : ಕಲ್ಕೆರೆ

ಸ್ಥಳ : ಕಲ್ಲೇಶ್ವರ ದೇವಾಲಯದ ರಂಗಮಂಟಪದೊಳಗೆ ನಿಲ್ಲಿಸಿರುವ ಶಾಸನ.

ರಾಜವಂಶ : ಅಸಂದಿಗಂಗರು

ಅರಸ : ಬ್ರಹ್ಮರಸದೇವನ ಮಗ ನರಸಿಂಹದೇವ

ಕಾಲ : ಕ್ರಿ.ಶ. ೧೧೮೦

ಪ್ರಕಟಣೆ: (ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೭ನೇ ಶಾಸನ, ಪು.೪೬೮)

ಹೊಯ್ಸಳರ ವೀರಬಲ್ಲಾಳನ ಸಮಾಂತರಾದ ಅಸಂದಿಗಂಗರ ನರಸಿಂಹ (ಬ್ರಹ್ಮರಸನಮಗ) ಆಸಂದಿಯನ್ನು ಆಳ್ವಿಕೆ ಮಾಡುವ ಸಂದರ್ಭದಲ್ಲಿ ಮಹಾನಾಲಪ್ರಭು ಹಿರಿಯ ಬೆಳೆಗೌಡ ಮತ್ತು ಅವನ ಸಹೋದರರು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿ ಆಧಿನಾಥ ಶಿವಲಿಂಗವನ್ನು ಪ್ರತಿಷ್ಠಾಪಿಸಿದರು. ದೇವಾಲಯದ ಅಂಗಭೋಗ, ರಂಗಭೋಗ, ನೈವೇದ್ಯ ಮತ್ತು ಜೀರ್ಣೋದ್ಧಾರಕ್ಕಾಗಿ, ಸೂರ್ಯಗ್ರಹಣದ 'ಕರಿಯಗುರು ದೇವರ' ಪಾದಗಳನ್ನು ತೊಳೆದು ಭೂಮಿಯನ್ನು ದಾನ ನೀಡುತ್ತಾರೆ. ಹಾಗೆಯೇ ದೇವಾಲಯದ ನಿತ್ಯದೀಪೋತ್ಸವಕ್ಕೆ ಐದು ಗಾಣದ ಕೈಗಾರಿಕೆಗಳನ್ನು ದಾನ ನೀಡಿ, ಅವುಗಳ ಮೇಲೆ ಇದ್ದ ತೆರಿಗೆಯನ್ನು ರದ್ದು ಮಾಡುತ್ತಾರೆ.

ಅಂತಿಮ ಸಾಲುಗಳಲ್ಲಿ ಅಸಂದಿವೃತ್ತಿ ಪ್ರದೇಶದಲ್ಲಿ ಬರುವ ಹೆಬ್ಬರಿಯ ಊರ ಒಡೆಯ(ಗೌಡ)ರು ಮತ್ತು ಹೊಳಲ್ಕೆರೆ ವೃತ್ತಿಪ್ರದೇಶದ ಗೌಡರ ನಡುವಿನ ಬದನಹಾಳು, ಮಲಹಾಳು,

ಕಲ್ಕೆರೆ ಗ್ರಾಮಗಳ ಗಡಿ ವ್ಯಾಜ್ಯವನ್ನು ವೀರಬಲ್ಲಾಳ ಮತ್ತು ಅವನ ಐದು ಜನ ಮಂತ್ರಿಗಳು ಪರಿಹರಿಸುತ್ತಾರೆ ಎಂಬುದನ್ನು ಶಾಸನ ದಾಖಲಿಸಿದೆ.[೩೯]

ಗ್ರಾಮ : ಸೂಳೇಕೆರೆ

ಸ್ಥಳ : ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ನಿಲ್ಲಿಸಲ್ಪಟ್ಟಿದೆ

ರಾಜವಂಶ : ಹೊಯ್ಸಳರು

ಅರಸ : ಎರಡನೆಯ ಬಲ್ಲಾಳ

ಕಾಲ : ಕ್ರಿ.ಶ. ೧೧೯೦

ಪ್ರಕಟಣೆ : ಇತಿಹಾಸ ದರ್ಶನ, ಸಂ.೨೩/೨೦೦೮, ಪು.೫೮

ಎರಡನೇ ಬಲ್ಲಾಳನು ಸೂಳೆಕೆರೆ ಸಿದ್ದೇಶ್ವರ ದೇವಾಲಯದ ಅಂಗಭೋಗ, ರಂಗಭೋಗ, ನೈವೇದ್ಯ ಜೀರ್ಣೋದ್ಧಾರಕ್ಕಾಗಿ ಬೊಂತೆವಾನರಸಿ ಗುರುಗಳ ಪಾದಗಳನ್ನು ತೊಳೆದು ದೇವಾಲಯಕ್ಕೆ ಅಷ್ಟ ಗ್ರಾಮಗಳನ್ನು ದಾನ ನೀಡುತ್ತದೆ.[೪೦]

ಗ್ರಾಮ : ಬಸಾಪುರ

ಸ್ಥಳ : ಏಕತಲೆ ಗುಡ್ಡದಲ್ಲಿರುವ ವೀರಭದ್ರ ದೇವಾಲಯದ ಎದುರಿಗೆ ನಿಲ್ಲಿಸಲ್ಪಟ್ಟ ಶಾಸನ

ರಾಜವಂಶ : ಹೊಯ್ಸಳರು

ಅರಸ : ಎರಡನೆಯ ಬಲ್ಲಾಳ

ಕಾಲ : ಕ್ರಿ.ಶ, ೧೧೯೮

ಪ್ರಕಟಣೆ : ಇತಿಹಾಸ ದರ್ಶನ, ಸಂ.೧೯, ಪು.೭೦

ಶಾಲಿವಾಹನ ಶಕವರ್ಷ ೧೧೨೦ (ಕ್ರಿ.ಶ. ೧೧೯೮)ನೇ ಕಾಳಯತ್ತಿ ಸಂವತ್ಸರದ ಶ್ರಾವಣ ಶುದ್ಧ ಪ್ರತಿಪದೆ ಸೋಮವಾರ ಉತ್ತರಾಯಣ ಸಂಕ್ರಮಣ ಕಾಲದಂದು ಹೊಯ್ಸಳರ ವೀರಬಲ್ಲಾಳನ ನಾಡಗಾವುಂಡ ಮತ್ತು ಮಾಚಗಾವುಂಡನ ಸಾಮಂತ ಬಲ್ಲಾಳನೆಂಬುವನು ಹೆಗ್ಗುಂದಲೆಯ ಬಲ್ಲೇಶ್ವರ ದೇವಾಲಯದ ರಂಗಭೋಗ, ತ್ರಿಸಂಧ್ಯಪೂಜೆ, ನೈವೇದ್ಯಕ್ಕೆ ಒಂದು ಮತ್ತರು ೫೦ ಕಂಬ ಅಳತೆಯ ಭೂಮಿಯನ್ನು ದತ್ತು ಬಿಟ್ಟಿದ್ದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿರುವಂತೆ ಹೆಗ್ಗುಂದಲೆ ಸ್ಥಳ ಈ ಬೆಟ್ಟಕ್ಕೆ ಕರೆದಿರುವ ಹೆಸರಾಗಿದೆ. ಹೊಯ್ಸಳರ ಎರಡನೇ ಬಲ್ಲಾಳನ ಹೆಸರಿನಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿ, ಬಲ್ಲೇಶ್ವರ ಎಂದು ಕರೆದಿರುವುದನ್ನು ಗುರುತಿಸಿದೆ. ಮತ್ತು ಆಸಂದಿಗಂಗರು ಆಸಂದಿಯಲ್ಲಿ ಬಲ್ಲೇಶ್ವರ ದೇವಾಲಯವನ್ನು ನಿರ್ಮಿಸಿದ್ದರು. ಅದೇ ರೀತಿಯ ಬಲ್ಲೇಶ್ವರ ದೇವಾಲಯವನ್ನು ಹೆಗ್ಗುಂದಲೆಯಲ್ಲಿ ಸ್ಥಾಪನೆ ಮಾಡಲಾಗಿದೆ. ಪ್ರಸ್ತುತ ಬಲ್ಲೇಶ್ವರ ದೇವಾಲಯ ನಾಶವಾಗಿದ್ದು ಅದರ ಪ್ರಾಚ್ಯಾವಶೇಷಗಳು ಲಭ್ಯವಾಗಿವೆ.[೪೧]

ಗ್ರಾಮ : ಅಲಕನಾಳು

ಸ್ಥಳ : ದಕ್ಷಿಣದ ಜಲ್ಲೇಶ್ವರ ದೇವಾಲಯದ ರಂಗಮಂಟಪದ ಆಗ್ನೇಯ ಮೂಲೆಯಲ್ಲಿದೆ

ರಾಜವಂಶ : ಅಸಂದಿ ಗಂಗರು

ಅರಸ : ನರಸಿಂಹ

ಕಾಲ : ಕ್ರಿ.ಶ. ೧೨೧೪

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೬೪ನೇ ಶಾಸನ, ಪು.೪೬೦

ಹೊಯ್ಸಳರ ಎರೆಯಂಗನ ಸಾಮಂತರಾದ ಆಸಂದಿಗಂಗರ ನರಸಿಂಹ (ವೈಜರಸ ಮತ್ತು ವೈಜಲಾದೇವಿಯರ ಮಗ) ಆಳ್ವಿಕೆಯನ್ನು ಮಾಡುವ ಸಂದರ್ಭದಲ್ಲಿ ಇವನ ಸಾಮಂತ ನಾಲಪ್ರಭು ಮೂಡಿಗೆರೆ ರಾಮಗೌಡನು ಅಲಕನಾಳಿನಲ್ಲಿ ಬಲ್ಲೇಶ್ವರ ದೇವಾಲಯವನ್ನು ಕಟ್ಟಿಸಿ ಲಿಂಗವನ್ನು ಪ್ರತಿಷ್ಠಾಪಿಸಿ ಕೆರೆಯನ್ನು ಕಟ್ಟಿಸುತ್ತಾನೆ. ದೇವಾಲಯದ ನಿತ್ಯ ಪೂಜೆಗಾಗಿ ಬ್ರಹ್ಮಪುರಿದೇವರ ಮಾಧವಭಟ್ಟರ ಸೋಮಯ್ಯನಿಗೆ ಕೆರೆಯ ಹಿಂದಿನ ಗದ್ದೆಯನ್ನು ದಾನ ನೀಡುತ್ತಾನೆ. ರಾಜಗುರು ಕರಿಯಸಕ್ತಿದೇವನು ಮಂತ್ರಗಳ ಉಚ್ಚಾರಣೆಯನ್ನು ಮಾಡುತ್ತ ಬಲ್ಲೇಶ್ವರ ಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಆಗ ಇಸುರನ ಮಗ ಹಂದ ಮತ್ತು ಋಷಿಗಳನ್ನು ಶ್ಲೋಕಗಳನ್ನು ಹೇಳುತ್ತಾರೆ. ಶಿವದೇವ ಚಟೋಪಾಧ್ಯಾಯ ಹರಿಹರ ದೇವರ ಸಲಕಚಾರ್ಯ ಬಿಲ್ಲೇಶ್ವರ ದೇವಾಲಯದ ಛತ್ರ ನಿರ್ವಹಣೆಗೆ ಹಣದ ರೂಪದಲ್ಲಿ ದಾನವನ್ನು ಪಡೆಯುತ್ತಾರೆ.[೪೨]

ಗ್ರಾಮ : ಕಾರಿಗನೂರು

ಸ್ಥಳ : ಕಲ್ಲೇಶ್ವರ ದೇವಾಲಯದ ಒಳಗೋಡೆಗೆ ನಿಲ್ಲಿಸಲಾಗಿದೆ

ರಾಜವಂಶ : ಹೊಯ್ಸಳ

ಅರಸ : ಎರಡನೆ ವೀರಬಲ್ಲಾಳ

ಕಾಲ : ೧೨೨೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೬ನೇ ಶಾಸನ, ಪು.೪೨೭

ಹೊಯ್ಸಳರ ವೀರಬಲ್ಲಾಳನು ತನ್ನ ಸಾಮ್ರಾಜ್ಯವನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತರಿಸಿ, ಶಾಶ್ವತವಾಗಿ ಆಳ್ವಿಕೆ ಮಾಡುವಾಗ ಕಾರಿಗನೂರು ಕಲ್ಲೇಶ್ವರ ದೇವಾಲಯದ ಅಂಗಭೋಗ, ರಂಗಭೋಗ, ನೈವೇದ್ಯ ನಂದಾದೀವಿಗೆಗೋಸ್ಕರ ವಿಕ್ರಮ ಸಂವತ್ಸರದ ಆಷಾಡ ಶುದ್ಧ ಎಂಟನೇ ಸೋಮವಾರ ದಕ್ಷಿಣ ಸಂಕ್ರಮಣದಂದು ದಾನ ನೀಡಿದ್ದನ್ನು ಈ ಶಾಸನ ದಾಖಲಿಸಿದೆ.[೪೩]

ಗ್ರಾಮ : ಕಲ್ಕೆರೆ

ಸ್ಥಳ : ಜಲ್ಲೇಶ್ವರ ದೇವಾಲಯದ ಮುಖಮಂಟಪದಲ್ಲಿ ನಿಲ್ಲಿಸಲ್ಪಟ್ಟ ಶಾಸನ

ರಾಜವಂಶ : ಹೊಯ್ಸಳರು

ಅರಸ : ಬಲ್ಲಾಳದೇವ

ಸಾಮಂತರು : ಅಸಂದಿಗಂಗರು

ಸಾಮಂತಅರಸ : ವೈಜರಸದೇವ

ಕಾಲ : ಕ್ರಿ.ಶ. ೧೨೨೧

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೭ನೇ ಶಾಸನ, ಪು.೪೭೦

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಲಭ್ಯವಾದ ಅತಿ ದೊಡ್ಡ ಕಲ್ಲಿನ ಶಾಸನವಾಗಿದೆ. ಆಸಂದಿಗಂಗರ ವೈಜರಸನು ಹೊಯ್ಸಳರ ಎರಡನೇ ಬಲ್ಲಾಳನ ಮಹಾಸಾಮಂತನಾಗಿರುತ್ತಾನೆ. ವೈಜರಸನ ಸಾಮಂತರಾಗಿರುವ ಮಹಾನಾಲಪ್ರಭು ಕಲ್ಕೆರೆಯ 'ಕನುಹಗೌಡ' ಇವನ ವಂಶಾವಳಿಯನ್ನು ವಿಶ್ಲೇಷಿಸುತ್ತದೆ. ಮಹಾನಾಲಪ್ರಭು ಕಲ್ಕೆರೆ ಕನುಹಗೌಡನು ಚಂದ್ರಮಾಸದಲ್ಲಿ ಶಿವಲಿಂಗವನ್ನು ಸ್ಥಾಪಿಸಿ ಬೆಳೇಶ್ವರ ದೇವಾಲಯವನ್ನು ಕಟ್ಟಿಸಿ, ಸೋಮೇಶ್ವರ ಗುರುಗಳ ಪಾದಗಳನ್ನು ತೊಳೆದು ದೇವಾಲಯದ ಅಂಗಭೋಗ, ರಂಗಭೋಗ ನೈವೇದ್ಯಕ್ಕೆ ಭೂದಾನವನ್ನು ನೀಡುತ್ತಾನೆ.

ಆಸಂದಿ ವೃತ್ತಿಯಲ್ಲಿನ ಹೆಬರಿ ಊರ ಒಡೆಯರು ಮತ್ತು ವೃತ್ತಿಯ ಗೌಡರು, ನಡುವೆ ಬದನಹಾಳು, ಮಲಹಾಳು ಮತ್ತು ಕಲ್ಕೆರೆ ಗಡಿಗಳ ವ್ಯಾಜ್ಯ ಮಾಡಿಕೊಂಡು ಇದರ ದೂರನ್ನು ಹೊಯ್ಸಳರ ಬಲ್ಲಾಳನವರೆಗೆ ಕೊಂಡೊಯ್ಯುತ್ತಾರೆ. ಈ ಗಡಿ ವ್ಯಾಜ್ಯವನ್ನು ಬಲ್ಲಾಳದೇವ ಮತ್ತು ಅವನ ಐದು ಜನಮಂತ್ರಿಗಳು ಸಮಸ್ಯೆಯನ್ನು ಪರಿಹರಿಸುತ್ತಾರೆ. ಗಂಗವಾಡಿ ಮತ್ತು ನೊಳಂಬವಾಡಿಯ ಗಡಿಗಳನ್ನು ನಿರ್ಧರಿಸುತ್ತಾರೆ. ಗಂಗವಾಡಿಯ ಪ್ರದೇಶಕ್ಕೆ ಗುಲಿಯಕಲ್ಲು, ಅದಂಗಿ ಬೆಟ್ಟ, ಅಕ್ಕಿಯದೋಣೆ, ತಾಲಿಯಕಟ್ಟೆ ಸೇರುತ್ತವೆ. ಈ ಗಂಗವಾಡಿ ಪ್ರದೇಶವು ಬಿದರಹಳ್ಳಿಯವರೆಗೂ ಮುಂದುವರೆಯುತ್ತದೆ ಎಂದು ಶಾಸನ ದಾಖಲಿಸಿದೆ[೪೪].

ಗ್ರಾಮ : ನಲ್ಕುದರೆ

ಸ್ಥಳ : ಬ್ರಹ್ಮೇಶ್ವರ ದೇವಾಲಯದ ನವರಂಗದ ಬಲಭಿತ್ತಿಯಲ್ಲಿದೆ

ರಾಜವಂಶ : ಹೊಯ್ಸಳ

ರಾಜ : ವೀರನರಸಿಂಹದೇವ

ಕಾಲ : ಕ್ರಿ.ಶ. ೧೨೩೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೫೨ನೇ ಶಾಸನ, ಪು.೪೫೧

ವೀರನರಸಿಂಹದೇವನು ಸಾಮ್ರಾಜ್ಯವನ್ನು ವಿಸ್ತರಿಸಿ, ಆಳ್ವಿಕೆ ಮಾಡುವ ಸನ್ನಿವೇಶದಲ್ಲಿ ಮಹಾನಾಲಪ್ರಭುಗಳು ಊರ ಒಡೆಯರು ನಲ್ಕುದರೆಯ ಬ್ರಹ್ಮೇಶ್ವರ ದೇವಾಲಯದ ಅಂಗಭೋಗ,

ರಂಗಭೋಗ ಮತ್ತು ನೈವೇದ್ಯ(ಪ್ರಸಾದ) ಹಾಗೂ ದೇವಾಲಯದ ಜೀರ್ಣೋದ್ಧಾರಕ್ಕಾಗಿ 'ವಮಋಷಿ-ಗುರು'ವಿನ ಪಾದಗಳನ್ನು ತೊಳೆದು ದಾನವನ್ನು ನೀಡುತ್ತಾರೆ. ಶಾಸನದ ಕೊನೆಯಲ್ಲಿ ಈ ಶಾಸನವನ್ನು ಬರೆದವನು ಊರೊಡೆಯ 'ಚಂದ್ರದೇವ' ರಚಿಸಿದವನು ದಾಸಕೀರ್ತಿದೇವ ಇದನ್ನು ಕೆತ್ತಿದವನು 'ಸಂಕರೋಜ' ಎಂದಿದೆ.[೪೫]

ಗ್ರಾಮ : ಕತ್ತಲಗೆರೆ

ಸ್ಥಳ : ರಾಮೇಶ್ವರ ದೇವಾಲಯದ ಮುಂದಿನ ಗೋಡೆಗೆ ನಿಲ್ಲಿಸಲ್ಪಟ್ಟಿರುವ ಶಾಸನ

ರಾಜವಂಶ : ಯಾದವರು

ಅರಸ : ಮಹಾದೇವ

ಕಾಲ : ಕ್ರಿ.ಶ, ೧೨೬೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪ನೇ ಶಾಸನ, ಪು.೪೨೬

ಈ ಶಾಸನದಲ್ಲಿ ಸೇವುಣರ ಮಹದೇವರಾಯನ ರಾಮೇಶ್ವರ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ.[೪೬]

ಗ್ರಾಮ : ಹಿರೇಕೋಗಿಲೂರು

ಸ್ಥಳ : ಕಲ್ಲೇಶ್ವರ ಅಥವಾ ಈಶ್ವರ ದೇವಾಲಯದ ಆವರಣದ ದಕ್ಷಿಣ ದಿಕ್ಕಿಗೆ

ರಾಜವಂಶ : ಯಾದವರು

ಅರಸ : ಸಿಂಹಣ (ಸಿಂಗಣ)

ಕಾಲ : ೧೨೬೮

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೨೧ನೇ ಶಾಸನ, ಪು.೪೩೪

ಸೇವುಣರ ಸಿಂಗಣನ ಪೂರ್ವ ವಂಶಾವಳಿಯನ್ನು ವಿವರಿಸಿದೆ. ಅವನ ಸಾಮಂತನಾದ ಚತ್ತರಸನ ಮಗನಾದ ಹಿರಿಯ ಪಟ್ಟದ ಕುಮಾರ ಚೌಡನು ಶೈಸ್ವಯಂಬು ಸಂವತ್ಸರದ ಮೂವತ್ತನೇ ಸೂರ್ಯಗ್ರಹಣದಲ್ಲಿ ಆಸ್ಥಾನದ ಸೋಮರಾಶಿ ಆಚಾರಸಿವಗುರುಗಳ ಪಾದಗಳನ್ನು ತೊಳೆದು, ದಕ್ಷಿಣಾದಿತ್ಯವೊಳಲು ಅಗ್ರಹಾರ(ಕೋಗಿಲೂರು)ದ ಶಿವದೇವಾಲಯಕ್ಕೆ ಅಂಗಭೋಗ, ರಂಗಭೋಗ ಮತ್ತು ನೈವೇದ್ಯಕ್ಕಾಗಿ ಭೂಮಿಯನ್ನು ದಾನ ನೀಡಿದ್ದನೆಂದು ಶಾಸನವು ದಾಖಲಿಸಿದೆ.[೪೭].

ಗ್ರಾಮ : ಕತ್ತಲಗೆರೆ

ಸ್ಥಳ : ಹನುಮಂತ ದೇವಾಲಯದ ಪೂರ್ವದಲ್ಲಿದೆ

ರಾಜವಂಶ : ಸೇವುಣ

ಅರಸ : ರಾಮಚಂದ್ರದೇವರು

ಕಾಲ : ಕ್ರಿ.ಶ, ೧೨೭೭

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ಪು.೪೨೫

ಶ್ರೀ ಹರಿಹರಾಯನಮಃ, ಸ್ವಸ್ತಿಶ್ರೀ ಶಕವರ್ಷ ೧೯೯೯ ನೆಯ ಈಶ್ವರ ಸಂವತ್ಸರದ ಜೇಷ್ಠಸು ೨ನೇ ಗುರುವಾರ ಯಾದವ ನಾರಾಯಣ ಬವುಭುಜಭಲ – ಪ್ರೌಢ – ಪ್ರತಾಪ – ಚಕ್ರವರ್ತಿ ಶ್ರೀ ರಾಮಚಂದ್ರರಾಯನು ರಾಜಗುರು ರೇಣುಕಾದೇವರ ಪಾದಗಳನ್ನು ತೊಳೆದು ಕತ್ತಲಗೆರೆಯ ಹರಿಹರ ದೇವರ ಅಂಗಭೋಗ, ರಂಗಭೋಗ ಮತ್ತು ನೈವೇದ್ಯಕ್ಕಾಗಿ ಭೂಮಿ ದಾನವನ್ನಾಗಿ ನೀಡುತ್ತಾನೆ.[೪೮]

ಗ್ರಾಮ : ತಣಿಗೆರೆ

ಸ್ಥಳ : ಅಜಾಮ ಚೆನ್ನಪ್ಪನ ವಂಶಸ್ಥರಲ್ಲಿ

ರಾಜವಂಶ : ಹೊಯ್ಸಳರು

ಅರಸ : ೨ನೇ ನರಸಿಂಹ

ಕಾಲ : ೧೩ನೇ ಶತಮಾನ

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೧೬ನೇ ಶಾಸನ, ಪು.೪೩೦

ಕಲ್ಲಗೌಡ (ಹೊನ್ನಮಲ್ಲಪ್ಪನ ನೌಕರ) ತಳಿಗೆರೆಗೌಡನ ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿದ ಬಗ್ಗೆ ಶಾಸನ ತಿಳಿಸಿದೆ.[೪೯]

ಗ್ರಾಮ : ನೀತಿಗೆರೆ

ಸ್ಥಳ : ವೀರಭದ್ರ ದೇವಾಲಯದ ಬಲಭಿತ್ತಿ

ರಾಜವಂಶ : ಸಂತೇಬೆನ್ನೂರಿನ ನಾಯಕರು

ಅರಸ : ಶ್ರೀ ರಂಗನಾಥನಾಯಕ

ಕಾಲ : ೧೪೦೪

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೨೮ನೇ ಶಾಸನ, ಪು.೪೩೭

ರುದ್ರನ ಮಗನಾದ ವೀರಭದ್ರನು ಗುರುವಿಗೆ ನಮಿಸುತ್ತಾ ದಕ್ಷನನ್ನು ನಾಶಮಾಡಿ, ಅವನ ಕತ್ತನ್ನು ಕತ್ತರಿಸಿ ನಂತರ ಅವನ ದೇಹಕ್ಕೆ ಮೇಕೆಯ ತಲೆಯನ್ನು ಜೋಡಿಸಿದನು. ಹಾಗೆಯೇ ವೀರಭದ್ರನು ನೀತಿಗೆರೆಯಲ್ಲಿ ನೆಲೆಸಿದನು. ೨ನೇ ಹರಿಹರನು ವಿಜಯನಗರ ಸಾಮ್ರಾಜ್ಯವನ್ನು ಶಾಂತಿಯುತವಾಗಿ ಆಳುವ ಸನ್ನಿವೇಶದಲ್ಲಿ, ದುಮ್ಮಿಯ ಗಂಗೇನಾಯಕನ ಮಗ ಶ್ರೀರಂಗನಾಥ ನಾಯಕರು ಆಳ್ವಿಕೆ ಮಾಡುವಾಗ ಶ್ರೀ ವೀರಭದ್ರ ದೇವರ ಅಮೃತಪಡಿಗೆ ಗದ್ದೆ, ಬೆದ್ದಲು ಹೊಲ, ದೇವರ ನಂದಾದೀವಿಗೆ ಗ್ರಾಮದ ಆಗ್ನೇಯ ದಿಕ್ಕಿನ ಎರೆಭೂಮಿಯನ್ನು ದಾನ ನೀಡಿದರು. ದುಮ್ಮಿಯ ಹಿರೇಪೆಮ್ಮನಾಯಕರು ವೀರಭದ್ರ ದೇವಾಲಯಕ್ಕೆ ಗಂಗೂರಿನ ನೈರುತ್ಯ ದಿಕ್ಕಿನ ಪಡುವ ಭೂಮಿಯನ್ನು ದಾನವನ್ನಾಗಿ ನೀಡುತ್ತಾನೆ. ಕೊಡೆನಾಡ ರಾಮಗೌಡನ ಅಧೀನದಲ್ಲಿ ಸಮಸ್ತಗೌಡರು ಮತ್ತು ಪ್ರಜೆಗಳು ನೀತಿಗೆರೆಯ ಗ್ರಾಮದ ನೈರುತ್ಯ ದಿಕ್ಕಿನ ನೀತಿಗೆರೆ ಸೀಮೆಯ ಒತ್ತಿನಿನಾಡ ದಾರಿಯ ಪಡುವ ಗದ್ದೆ ಮತ್ತು ಅದರ

ಪಕ್ಕದಲ್ಲಿರುವ ಹೊಲಗಳನ್ನು ದಾನವನ್ನು ನೀಡುತ್ತಾರೆ. ರಾಮಗೌಡನ ಮಗ ಕಲಗೌಡನು ನೀತಿಗೆರೆಯ ದೇವಾಲಯವನ್ನು ನಿರ್ಮಿಸಿದನು. 'ನಹಲ್ಲಿಯ'(ನಲ್ಲೋಜ) ನ ಮಗ ಮಲ್ಲೋಜ ದೇವಾಲಯವನ್ನು ಕಟ್ಟಿದನು.[೫೦]

ಗ್ರಾಮ : ಕಲ್ಕೆರೆ

ಸ್ಥಳ : ಆಂಜನೆಯ ದೇವಾಲಯದ ಹಿಂಭಾಗ

ರಾಜವಂಶ : ವಿಜಯನಗರ ಸಾಮ್ರಾಜ್ಯ

ಅರಸ : ಎರಡನೆಯ ದೇವರಾಯ (ವೀರಪ್ರಥಪ ದೇವರಾಯ)

ಸಾಮಂತ : ಹೆಗ್ಗಡೆ ಓಬಳನಾಯಕ

ಕಾಲ : ಕ್ರಿ.ಶ, ೧೪೩೨

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩ನೇ ಶಾಸನ, ಪು.೪೭೦

ಶಾಸನದಲ್ಲಿ ಎರಡನೇ ದೇವರಾಯನ ಮನೆಯ ಹೆಗ್ಗಡೆಯಾದ ಓಬಳನಾಯಕ ಮತ್ತೊಬ್ಬ ನಾಯಕನ ಹೆಸರು ಅಳಿಸಿದೆ. ಈ ಇಬ್ಬರೂ ನಾಯಕರು ಕ್ರಿ.ಶ. ೧೪೫೪ ನೇ ಪರಿಧಾವಿ ಸಂವತ್ಸರ ಶ್ರಾವಣ ಶುದ್ಧ ಹತ್ತನೇ ಆದಿವಾರದಂದು ಹನುಮಂತ ಮೂರ್ತಿಯನ್ನು ಪ್ರತಿಷ್ಠಾಪಿಸಿ, ದೇವಾಲಯವನ್ನು ಕಟ್ಟಿಸಿ, ಭೂಮಿಯನ್ನು ದಾನವನ್ನಾಗಿ ನೀಡಿದರು. ಈ ಪ್ರದೇಶದಲ್ಲಿ ದೇವಾಲಯವನ್ನು ನಿರ್ಮಿಸುವ ಪೂರ್ವದಲ್ಲಿ ಮಲ್ಲಿಕಾರ್ಜುನ ದೇವಾಲಯ ಮತ್ತು ತಿರುಮಲ ದೇವಾಲಯಗಳು ಇದ್ದವೆಂದು ಅವುಗಳಿಗೆ ಭೂದಾನವನ್ನು ನೀಡಲಾಗಿತ್ತೆಂದು ಪ್ರಸ್ತಾಪಿಸಲಾಗಿದೆ[೫೧].

ಗ್ರಾಮ : ತಣಿಗೆರೆ

ಸ್ಥಳ : ಗ್ರಾಮದ ಪಾಳು ಬಿದ್ದಿರುವ ಭೂಮಿಯ ದಕ್ಷಿಣಕ್ಕಿದೆ.

ರಾಜವಂಶ : ಸಂತೇಬೆನ್ನೂರು ನಾಯಕರು

ಅರಸ : ನಿಚ್ಚ ಮಧುವಣಿಗ ಹನುಮಪ್ಪನಾಯಕ

ಕಾಲ : ಕ್ರಿ.ಶ, ಹದಿನಾರನೆಯ ಶತಮಾನ

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೧೪ನೇ ಶಾಸನ, ಪು.೪೩೦

ತಣಿಗೆರೆಯ ನಾಯಕರು ಕೋಗುಂಡೆ ಬಸವದೇವರಿಗೆ ದಾನವನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ. ಸಂತೆಬೆನ್ನೂರ ನಾಯಕರ ಸಾಮಂತರಾದ ತಣಿಗೆರೆಯ ನಾಯಕರು ದಾನ ನೀಡಿದ ಬಗ್ಗೆ ತಿಳಿಸುತ್ತದೆ[೫೨].

ಗ್ರಾಮ : ಹಿರೇ ಕೋಗಿಲೂರು

ಸ್ಥಳ : ಕಲ್ಲೇಶ್ವರ ದೇವಾಲಯದ ದಕ್ಷಿಣದ ಮಠದ ಮರುಳಯ್ಯನ ಮನೆಯ ಸಮೀಪವಿದೆ

ರಾಜವಂಶ : ಸಂತೇಬೇನ್ನೂರು ನಾಯಕರು

ಅರಸ : ಹನುಮಪ್ಪನಾಯಕ

ಕಾಲ : ಕ್ರಿ.ಶ, ೧೬೧೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೨೫ನೇ ಶಾಸನ, ಪು.೪೩೬

ಈ ಶಾಸನದಲ್ಲಿ ಹನುಮಪ್ಪನಾಯಕರು ಸಂತೆಬೆನ್ನೂರಿನ ಸಿದ್ಧಲಿಂಗದೇವ ಮಠಕ್ಕೆ ದಾನವನ್ನು ನೀಡಿರುತ್ತಾರೆ ಎಂದು ತಿಳಿಸಲಾಗಿದೆ[೫೩].

ಗ್ರಾಮ : ಹಿರೇಮಾಡಳು

ಸ್ಥಳ : ಮಲ್ಲೇಶ್ವರ ದೇವಾಲಯದ ಉತ್ತರದಲ್ಲಿ ನಿಲ್ಲಿಸಲ್ಪಟ್ಟಿರುವ ಶಾಸನ

ರಾಜವಂಶ : ಸಂತೇಬೆನ್ನೂರು ನಾಯಕರು

ಅರಸ : ಹನುಮಪ್ಪನಾಯಕ

ಕಾಲ : ಕ್ರಿ.ಶ, ೧೬೧೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೭ನೇ ಶಾಸನ, ಪು.೪೯

ಶಾಸನವು ಮರಾಠಿ ಭಾಷೆಯಲ್ಲಿದೆ. ದಾಸಿಯರ ದಾಸಿಯ-ರಾಮನ ತಂದೆ-ತಾಯಿಯರು ಸುರಲೋಕ ಪ್ರಾಪ್ತಿಯನ್ನು ಹೊಂದಲೆಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಗೋವು ಬಂಗಾರ ಭೂಮಿಯನ್ನು ದೇವಾಲಯದ ಜೀರ್ಣೋದ್ಧಾರಕ್ಕಾಗಿ ದಾನ ನೀಡುತ್ತಾನೆ[೫೪].

ಗ್ರಾಮ : ಹಿರೇಮಾಡಳು

ಸ್ಥಳ : ಮಲ್ಲೇಶ್ವರ ದೇವಾಲಯದ ಪಕ್ಕದಲ್ಲಿ ನಿಲ್ಲಿಸಿದ ಎರಡನೆಯ ಶಾಸನ

ರಾಜವಂಶ : ಸಂತೇಬೆನ್ನೂರು ನಾಯಕರು

ಅರಸ : ಹನುಮಪ್ಪನಾಯಕ

ಕಾಲ : ಕ್ರಿ.ಶ, ೧೬೧೬

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೯ನೇ ಶಾಸನ, ಪು.೪೯

ಈ ಶಾಸನದಲ್ಲಿ ನಳ ಸಂವತ್ಸರದ ಕಾರ್ತಿಕ ಶುದ್ಧ ದಶಮಿ ಸೋಮವಾರದಂದು ಸಂತೆಬೆನ್ನೂರಿನ ಹನುಮಪ್ಪನಾಯಕನು ಆಳ್ವಿಕೆ ಮಾಡುತ್ತಿರುವಾಗ ದಾಸಿಯರ ದಾಸಿಯರಾಯನು ತುಂಗಭದ್ರೆಯ ಶಿವಪಾದ ಶಿವಲಿಂಗವನ್ನು ಪ್ರತಿಷ್ಠಾಪಿಸಿ, ದೇವಾಲಯಕ್ಕೆ ಹಿರೇಮಾಡಳು ಗ್ರಾಮ(ಭೂಮಿ)ವನ್ನು,

ಗೋವುಗಳನ್ನು ದಾನವನ್ನಾಗಿ ನೀಡುತ್ತಾನೆ. ಇದರಿಂದ ಅವನ ತಂದೆ-ತಾಯಿಗಳು ಸುರಲೋಕ ಪ್ರಾಪ್ತಿಯನ್ನು ಪಡೆಯಲೆಂದು ಇಚ್ಛಿಸುತ್ತಾನೆ[೫೬].

ಗ್ರಾಮ : ಮೊರಡಿ

ಸ್ಥಳ : ಬೆಟ್ಟದ ಮಲ್ಲೇಶ್ವರ ದೇವಾಲಯದ ಗೋಡೆಗೆ ನಿಲ್ಲಿಸಿದ ಶಾಸನ

ರಾಜವಂಶ : ಚಿತ್ರದುರ್ಗದ ಪಾಳೇಗಾರರು

ಅರಸ : ಕರಿಯಪ್ಪನಾಯಕ

ಕಾಲ : ಕ್ರಿ.ಶ, ೧೬೮೯

ಪ್ರಕಟಣೆ : ಬಿ.ಎಲ್.ರೈಸ್, ಇ.ಸಿ.ಸಂ.೭, ಭಾಗ-೨, ೨೦ನೇ ಶಾಸನ, ಪು.೪೩೨

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೬೩೭ ನೇ ಶುಕ್ಲನಾಮ ಸಂವತ್ಸರದ ವೈಶಾಖಶುದ್ಧ ೧೨ನೇ ಶ್ರೀಮನ್ ಮಹಾಚಾರ್ಯ ಕರಿಯಪ್ಪನಾಯಕನ ಮಗ ಮೆದಕೆರೆನಾಯಕನ ಮಗನಾದ 'ಬೊಮ್ಮಣ್ಣನಾಯಕ'ರು ಅಪಸ್ತಂಭ-ಸೂತ್ರದ, ಭಾರದ್ವಜಗೋತ್ರದ 'ಹರವೇಲಿ-ಹರಿ-ಭಟ್ಟರ ಮಗ ವೆಂಗಮಭಟ್ಟರ ಮಗನಾದ ಮಹಾಭಟ್ಟರಿಗೆ ಸಂತೆಬೆನ್ನೂರು ಸೀಮೆಯೊಳಗೂ ದೇಮಚಯವನ ದುರ್ಗವೆಂಬ ಗ್ರಾಮವನ್ನು ಈ ಮಹಾ ವೈಶಾಖ ಶುದ್ಧ ಪಾಡ್ಯ, ಪುಣ್ಯ ಕಾಲದಲ್ಲಿ ಶಿವನಪ್ರಾಪ್ತಿ ಮತ್ತು ಹಿರಿಯರುಗಳಿಗೆ ಸುಕೃತವಾಗಲೆಂದು ಈ ಗ್ರಾಮವನ್ನು ನಿಮಗೆ ದಾರಪೂರ್ವಕವಾಗಿ ದಾನ ನೀಡಿದ್ದೇನೆಂದು ಶಾಸನದಲ್ಲಿ ಉಲ್ಲೇಖವಿದೆ.[೫೭]

ಗ್ರಾಮ : ಮಂಗೇನಹಳ್ಳಿ

ಸ್ಥಳ : ಪೂರ್ವದ ದಿಕ್ಕಿನ ಹಳ್ಳದ ಪಕ್ಕದಲ್ಲಿದೆ

ರಾಜವಂಶ : ಸಂತೇಬೆನ್ನೂರು ನಾಯಕರು

ಕಾಲ : ಕ್ರಿ.ಶ, ೧೭ನೇ ಶತಮಾನ

ಪ್ರಕಟಣೆ : ಬಿ.ಎಲ್.ರೈಸ್-೧೯೩೫, ಪ್ರಕಟಣೆ-೧೯೩೬, ೩೬ನೇ ಶಾಸನ, ಪು.೧೧೨

ಈ ಶಾಸನದಲ್ಲಿ ನರಿಗೌಡನು ಶಿವದೇವಾಲಯದ ಪೂಜೆಗಾಗಿ ಈ ಭೂಮಿಯನ್ನು ದಾನವನ್ನಾಗಿ ನೀಡಿದನು ಎಂದು ಬರೆಯಲಾಗಿದೆ. ಲಿಪಿಯ ಆಧಾರದ ಮೇಲೆ ೧೭ನೇ ಶತಮಾನಕ್ಕೆ ಸೇರಿದೆ ಎಂದು ಗುರುತಿಸಲಾಗಿದೆ[೫೮].

ಗ್ರಾಮ : ಹಿರೇಕೋಗಿಲೂರು

ಸ್ಥಳ : ಕೋಟೆ ಸಿದ್ಧಪ್ಪನ ಕಣದ ಬೇಲಿ ವೃತ್ತದಲ್ಲಿರುವ ಶಾಸನ

ಕಾಲ : ೧೮ನೇ ಶತಮಾನ

ಪ್ರಕಟಣೆ : ಬಿ.ಎಲ್.ರೈಸ್-೧೯೩೫, ಪ್ರಕಟಣೆ-೧೯೩೬, ೩೮ನೇ ಶಾಸನ, ಪು.೧೧೩

ಆರಂಭದಲ್ಲಿ ಗುರುಬಸವಲಿಂಗನನ್ನು ಸ್ತುತಿಸುತ್ತದೆ. ಮಠಕ್ಕೆ ನೀಡಿದ ದಾನದ ಬಗ್ಗೆ ಉಲ್ಲೇಖಿಸುತ್ತದೆ. ಈ ಮಠದ ಆಡಳಿತದ ವ್ಯವಹಾರದಲ್ಲಿ ಅನ್ಯರು ತಲೆಹಾಕಬಾರದು ಇದರ ಜವಾಬ್ದಾರಿ ಮಠದ ಮುಖ್ಯಸ್ಥರಿಗೆ ಮಾತ್ರ ಸೇರಿರುತ್ತದೆ ಎಂದು ಶಾಸನ ತಿಳಿಸುತ್ತದೆ[೫೯].

ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಕ್ರಿ.ಶ. ೧೦೧೮ ರಿಂದ ೧೮ನೆಯ ಶತಮಾನದವರೆಗೆ ೩೧ ಧಾರ್ಮಿಕ ಶಾಸನಗಳು ಲಭ್ಯವಾಗಿದ್ದು, ಕಲ್ಯಾಣದ ಚಾಲುಕ್ಯರಿಂದ ಬಿಜಾಪುರ ಸುಲ್ತಾನರ ಕಾಲದವರೆಗೆ ಸಂಬಂಧಿಸಿವೆ. ಈ ಶಾಸನಗಳನ್ನು ಅವಲೋಕಿಸಿದಾಗ ದೇವಾಲಯದ ಸ್ಥಾಪನೆ, ಜೀರ್ಣೋದ್ಧಾರ, ಅಂಗಭೋಗ, ರಂಗಭೋಗ ಮತ್ತು ಪ್ರಸಾದ(ನೈವೇದ್ಯ)ಕ್ಕೆ ಬ್ರಾಹ್ಮಣರು ಅಥವಾ ಪುರೋಹಿತರ ಪಾದಗಳನ್ನು ತೊಳೆದು ರಾಜರು ಅಥವಾ ಸಾಮಂತರು ಇವರಿಗೆ ದಾನವನ್ನು ನೀಡಿರುವುದು ಕಂಡುಬಂದಿದೆ.

ದಾನ ನೀಡಿದ ಉದ್ದೇಶದ ಆಧಾರದ ಮೇಲೆ ದಾನಶಾಸನಗಳನ್ನು ಆಡಳಿತ, ಸಾಮಾಜಿಕ ದಾನಶಾಸನಗಳು ಎಂದು ವರ್ಗೀಕರಿಸಿದಾಗ ೫ ಆಡಳಿತ ದಾನಶಾಸನಗಳು, ೧೧ ಸಾಮಾಜಿಕ ದಾನಶಾಸನಗಳು, ೩೧ ಧಾರ್ಮಿಕ ದಾನಶಾಸನಗಳನ್ನೊಳಗೊಂಡಂತೆ ಒಟ್ಟು ೪೮ ದಾನಶಾಸನಗಳು ಲಭ್ಯವಾಗಿವೆ. ಈ ದಾನಶಾಸನಗಳನ್ನು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

೩.೨. ಶಾಸನಸಹಿತ ವೀರಗಲ್ಲುಗಳು

ಯಾವುದೇ ಹೋರಾಟದಲ್ಲಿ ಮಡಿದ ವೀರನ ಸ್ಮಾರಕವಾಗಿ ನೆಟ್ಟ ಕಲ್ಲಗಳನ್ನು ವೀರಗಲ್ಲುಗಳೆಂದು ಕರೆಯುತ್ತಾರೆ.[೬೦] ವೀರಗಲ್ಲುಗಳು ಬರಹ ಮತ್ತು ಶಾಸನ ಶಿಲ್ಪವನ್ನು ಹೊಂದಿರುತ್ತವೆ. ಶಾಸನ ಬರಹ ಮತ್ತು ಶಿಲ್ಪ ವೀರಗಲ್ಲು ಯಾವ ವೀರನ ಸ್ಮಾರಕವಾಗಿರುತ್ತದೆಯೋ ಆ ವೀರನ ಪರಾಕ್ರಮವನ್ನು ತಿಳಿಸುವ ಮುಖ್ಯ ಉದ್ದೇಶವಾಗಿರುತ್ತದೆ.[೬೧] ವೀರಗಲ್ಲುಗಳ ರಚನ ಕ್ರಮವು ದಾನ ಶಾಸನಗಳ ರಚನ ಕ್ರಮವು ಬಹುಮಟ್ಟಿಗೆ ದಾನ ಶಾಸನಗಳ ರಚನ ಕ್ರಮವನ್ನೇ ಅನುಸರಿಸುತ್ತದೆ.[೬೨] ವೀರಗಲ್ಲುಗಳನ್ನು ಹೋರಾಟದ ದೃಷ್ಟಿಯಿಂದ ಈ ಕೆಳಗಿನಂತೆ

* ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು
* ತುರುಗಾಳಗ ಅಂದರೆ ಗೋಗ್ರಹಣದಲ್ಲಿ ಮಾಡಿದ ವೀರರ ವೀರಗಲ್ಲುಗಳು
* ಬೇಟೆಗಳಲ್ಲಿ ಮಡಿದ ವೀರರ ವೀರಗಲ್ಲುಗಳು
* ಹೆಂಗಸರ ಮಾನಭಂಗ ಪ್ರಸಂಗಗಳಲ್ಲಿ, ಹೋರಾಡಿ ಮಡಿದ ವೀರರ ವೀರಗಲ್ಲು (ಪೆಣ್ಬ್ಯಯಲು)ಗಳು
* ಊರಳಿವಿನಲ್ಲಿ ಮಡಿದ ವೀರರ ವೀರಗಲ್ಲುಗಳು

* ಕಳ್ಳರು ಮತ್ತು ದಾರಿಗಳ್ಳರೊಡನೆ ಹೋರಾಡಿ ಮಾಡಿದ ವೀರ ವೀರಗಲ್ಲುಗಳೆಂದು ಅಧ್ಯಯನಕ್ಕೆ ಒಳಪಡಿಸಲಾಗಿದೆ.[೬೩]

ಶಾಸನೋಕ್ತ ವೀರಗಲ್ಲುಗಳಲ್ಲಿ ಶಾಸನಶಿಲ್ಪ ಮತ್ತು ಶಾಸನಪಾಠವನ್ನೊಳಗೊಂಡ ಶಾಸನೋಕ್ತ ವೀರಗಲ್ಲುಗಳು ಚನ್ನಗಿರಿಯಲ್ಲಿ ದೊರೆತಿದ್ದು, ವೀರಗಲ್ಲುಗಳನ್ನು ಅಧ್ಯಯನ ದೃಷ್ಟಿಯಿಂದ ಶಾಸನೋಕ್ತ ವೀರಗಲ್ಲಗಳು, ತುರುಗೋಳ್ ಶಾಸನಗಳೆಂದು ವರ್ಗೀಕರಿಸಿ ಅಧ್ಯಯನ ಮಾಡುವ್ವದು ಸೂಕ್ತ.

೩.೨.೧. ವೀರಗಲ್ಲುಗಳು

ರಾಜ್ಯ ವಿಸ್ತರಣೆ, ಸಂಪತ್ತಿನ ಆಕ್ರಮ ವ್ಯಕ್ತಿ ಮಾತ್ಸರ್ಯದಿಂದ ಅರಸರುಗಳ ಅಥವಾ ಅಧೀನ ಸೈನಿಕಾಧಿಕಾರಿಗಳು ಹೋರಾಟವನ್ನು ನಡೆಸುತ್ತಿದ್ದರು. ಸೈನಿಕರೇ ಮಹತ್ವವಾದ ಪಾತ್ರವನ್ನು ವಹಿಸುತ್ತಿದ್ದರು.[೬೪] ಹೋರಾಡಿ ಮಡಿದ ವೀರನ ಸೇವೆಯನ್ನು ಮೆಚ್ಚಿ ಅವನ ವೀರತನವನ್ನು ಹೊಗಳುವ ಶಾಸನಗಳನ್ನು ಅರಸ, ಅಧಿಕಾರಿಗಳು, ಊರಿನ ಒಡೆಯ(ಗೌಡ), ಜನರು ನಿರ್ಮಿಸುತ್ತಿದ್ದರು.

"ಜಿತೇನಲಭ್ಯತೇ ಲಕ್ಷ್ಮೀ ರ್ಮತೇನಾಪಿ ಸುರಾಂಗನಾ
ಕ್ಷಣವಿಧ್ವಂಸಿನೀ ಕಾಯೇ ಚಿಂತಾ ಮರಣೇರಣೇ"

ಅಂದರೆ ಒಂದು ಗೆಲ್ಲಬೇಕು, ಗೆದ್ದರೆ ರಾಜಲಕ್ಷ್ಮೀ ದೊರೆಯುತ್ತಾಳೆ. ಸೋತರೆ ಅಪ್ಸರೆಯರು ಒಲಿಯುತ್ತಾರೆ. ಯುದ್ಧ ಪ್ರವೃತ್ತನಾಗು ಎಂದು ಶ್ಲೋಕವು ವೀರನನ್ನು ಪ್ರೇರೇಪಿಸುತ್ತದೆ.[೬೫] ಈ ಶಾಸನದಲ್ಲಿ ಶಾಸನಗಳಲ್ಲಿ ಶಿಲ್ಪದ ಜೊತೆಯಲ್ಲಿ ಇರುವ ಅವನ ಶೌರ್ಯ ಗುಣದ ಪಠ್ಯವನ್ನು ಇಲ್ಲಿ ಅಧ್ಯಯನ ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಿರುವ ಶಾಸನೋಕ್ತ ವೀರಗಲ್ಲುಗಳನ್ನು ಇಲ್ಲಿ ದಾಖಲಿಸಿದೆ.

ಗ್ರಾಮ	: ತ್ಯಾವಣಿಗೆ
ಸ್ಥಳ	: ಕಲ್ಲೇಶ್ವರ ದೇವಾಲಯದ ಪೂರ್ವದಲ್ಲಿದೆ
ರಾಜವಂಶ	: ನೊಳಂಬರು
ರಾಜ	: ನನ್ನಿನೊಳಂಬ ಪಲ್ಲವ ಪೆರಮಾಡಿ
ಕಾಲ	: ೧೦೫೦
ಪ್ರಕಟಣೆ	: ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೮ನೇ ಶಾಸನ, ಪು.೪೨೭

ಬೆಳಗೌಡನ ಅಳಿಯ 'ನೆನಿಗೆಯ ಮಲ್ಲನು' ಕೆರೆಯನ್ನು ನಿರ್ಮಿಸಿ, ದೇವಾಲಯವನ್ನು ಕಟ್ಟಿಸಿ ಅದೇ ಸ್ಥಳದ ಭಾಗಕ್ಕೆ ೩೦೦ ಕಮ್ಮಗದ್ದೆಯ ಮೂರು ಮತ್ತರು ಅಳತೆಯ ಭೂಮಿಯನ್ನು ದಾನವಾಗಿ ಬಿಟ್ಟು ಇದರ ಜೊತೆಯಲ್ಲಿ ಶಾಂತಿಯನ್ನು ಸ್ಥಾಪಿಸಿರುತ್ತಾನೆ. ನೊಳಂಬ ದೊರೆಯ ಆಜ್ಞೆಯಂತೆ ಚೋಳರ

ವಿರುದ್ಧ ಯುದ್ಧ ಮಾಡಿ ಅವರ ಸೈನಿಕರನ್ನು ಕೊಂದು ತಾನು ಸ್ವರ್ಗಕ್ಕೆ ಹೋಗುತ್ತಾನೆ ಎಂಬ ವಿಷಯಗಳನ್ನ ಒಳಗೊಂಡಿದೆ.[೬೬]

ಗ್ರಾಮ : ತ್ಯಾವಣಿಗೆ

ಸ್ಥಳ : ಕಲ್ಲೇಶ್ವರ ದೇವಾಲಯದ ಆವರಣದಲ್ಲಿನ ಪಶ್ಚಿಮ ದಿಕ್ಕಿನ ೨ನೇ ವೀರಗಲ್ಲಿನಲ್ಲಿ

ರಾಜವಂಶ : ನೊಳಂಬ

ರಾಜ : ನನ್ನಿ ನೊಳಂಬ ಪಲ್ಲವ ಪೆರ್ಮಾಡಿ ದೇವ

ಕಾಲ : ಕ್ರಿ.ಶ. ೧೦೫೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೯ನೇ ಶಾಸನ, ಪು.೪೨೮

ತ್ರೈಲೋಕ್ಯಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ದೇವನು ಬೊಮ್ಮಕ್ಕನಹಳ್ಳಿಯ ಮೇಲೆ ದಾಳಿ ಮಾಡಿದನು[೬೭].

ಗ್ರಾಮ : ಬೆಂಕಿಕೆರೆ

ಸ್ಥಳ : ಗ್ರಾಮದ

ರಾಜವಂಶ : ಕಲ್ಯಾಣದ ಚಾಲುಕ್ಯರ

ರಾಜ : ಆರನೇ ವಿಕ್ರಮಾದಿತ್ಯ

ಕಾಲ : ೧೧೦೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೬೫ನೇ ಶಾಸನ, ಪು.೪೬೩

ಸ್ವಸ್ತಿ ಶ್ರೀಮತು ಶಕವರ್ಷ ಸಹಸ್ತ್ರ ವಿಕ್ರಮಸಂವತ್ಸರದ, ಚೈತ್ರ ಶುದ್ಧ ಅಸ್ಟಮಿ ಆದಿವಾರದಂದು ಬಕ್ಕಣ ಒಡೆಯರನ ಮಗ ಗಂಗುಸೆಲಾರ ಸೆಟ್ಟಿಹಳ್ಳಿ ಮೇಲೆ ಸೈನ್ಯ ಸಮೇತನಾಗಿ ದಾಳಿ ಮಾಡಿದನು. ಯೆರೇಪೆಮ್ಮನಾಯಕನ ಸಹೋದರ 'ಮೂವರ ರಾಯರ ಗಂಡನ ಮೈದುನ ಭಂಟರ ಭೋವ' ಪರನಾರಿಯ ಸಹೋದರ ನಾಗೇನಾಯಕನು 'ಗಂಗುಸೆಲಾರ'ನ ವಿರುದ್ಧ ಹೋರಾಡಿ ಗೆಲುವನ್ನು ಸಾಧಿಸುತ್ತಾನೆ. ಇದರ ಸ್ಮರಣೆಗಾಗಿ ಯೆರೆಪೆಮ್ಮನಾಯಕನು ತನ್ನ ಸಹೋದರನಾದ ಅಡಪದ ನಾಗೇನಾಯಕನಿಗೆ ಬೆಂಕಿಕೆರೆಯ ಮತ್ತರು ಕೊಡಗೆಯಾಗಿ ನೀಡಿದರು.[೬೮]

ಗ್ರಾಮ : ಬಿಲ್ಲಹಳ್ಳಿ

ಸ್ಥಳ : ಉತ್ತರ ಕಲ್ಲೇಶ್ವರ ದೇವಾಲಯದ ನವರಂಗದಲ್ಲಿ ೧ನೇ ವೀರಗಲ್ಲಿನಲ್ಲಿ

ಅರಸ : ವೀರನರಸಿಂಹ

ರಾಜವಂಶ : ಹೊಯ್ಸಳರು

ಕಾಲ : ಕ್ರಿ.ಶ. ೧೧೭೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೭ನೇ ಶಾಸನ, ಪು.೪೪೨

ಹೊಯ್ಸಳ ಪ್ರತಾಪ ಚಕ್ರವರ್ತಿ ವೀರನರಸಿಂಹದೇವ ವಿರೋಧಿ ಸಂವತ್ಸರದ 'ಬಹುಳದಶಮಿ ಬೃಹಸ್ಪತಿ' ವಾರದಲ್ಲಿ ಸುರಲೋಕ ಪ್ರಾಪ್ತನಾದನೆಂದಿದೆ. ಹೊಯ್ಸಳರ ರಾಜ ವೀರನರಸಿಂಹದೇವ ಸಾವನ್ನಪ್ಪಿದನೆಂದು ತಿಳಿಸಿದೆ. ಆದರೆ ಅವನು ಹೇಗೆ ಮತ್ತು ಎಲ್ಲಿ ಸಾವನ್ನಪ್ಪಿದನೆಂದು ಶಾಸನದಲ್ಲಿ ಇಲ್ಲ. ಕಾಲ ಮತ್ತು ಸಂವತ್ಸರವನ್ನು ತಿಳಿಸುತ್ತದೆ. ಇದರಿಂದಾಗಿ ಹೊಯ್ಸಳರ ಅರಸನೊಬ್ಬ ಸಾವನ್ನಪ್ಪಿದ ಸಂಗತಿಯನ್ನು ಪ್ರಸ್ತಾಪಿಸುವ ಚನ್ನಗಿರಿಯಲ್ಲಿ ಲಭ್ಯವಾದ ಏಕೈಕ ಶಾಸನ ಇದಾಗಿದೆ[೧೯].

ಗ್ರಾಮ : ಬಿಲ್ಲಹಳ್ಳಿ

ಸ್ಥಳ : ಉತ್ತರ ಕಲ್ಲೇಶ್ವರ ದೇವಾಲಯದ ನವರಂಗದಲ್ಲಿ ೧ನೇ ವೀರಗಲ್ಲಿನಲ್ಲಿ

ರಾಜವಂಶ : ಹೊಯ್ಸಳರು

ಅರಸ : ೨ನೇ ಬಲ್ಲಾಳ

ಕಾಲ : ಕ್ರಿ.ಶ. ೧೨೦೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೩೬ನೇ ಶಾಸನ, ಪು.೪೪೨

ಪಠ್ಯ ಮತ್ತು ಶಾಸನ ಶಿಲ್ಪವನ್ನು ಒಳಗೊಂಡಿರುವ ಶಾಸನೋಕ್ತ ವೀರಗಲ್ಲಾಗಿದ್ದು ಹೊಯ್ಸಳರ ವೀರಬಲ್ಲಾಳ ಆಳ್ವಿಕೆ ಮಾಡುತ್ತಿರುವಾಗ ಬಿಲ್ಲಹಳ್ಳಿಯ ಬಿಲ್ಲಗೌಡನ ಮಗ ಮಾದಿಗೌಡನು ಬೇಡರೊಡನೆ ಹೋರಾಟ ಮಾಡಿ ಸಾವನಪ್ಪುತ್ತದೆ.[೨೦] ಶಿಲ್ಪಿಯೂ ಈ ಪಠ್ಯದೊಂದಿಗೆ ಉಬ್ಬುಶಿಲ್ಪವನ್ನು ಮೂರು ಹಂತಗಳಲ್ಲಿ ಕಂಡರಿಸಿದ್ದಾನೆ. ಮೊದಲನೆಯ ಹಂತದಲ್ಲಿ ಮಾದಿಗೌಡನು ಮತ್ತು ಅವನ ಸಹಚರರು ಆಯುಧಗಳನ್ನು ಹಿಡಿದು ಬೇಡರೊಡನೆ ಹೋರಟ ಮಾಡುವ ದೃಶ್ಯವಿದೆ. ಎರಡನೆ ಹಂತದಲ್ಲಿ ಮಾದಿಗೌಡನನ್ನು ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಕರೆದೊಯ್ಯುತ್ತಿದ್ದರೆ, ಮೂರನೆ ಹಂತದಲ್ಲಿ ನಂದಿ, ಸೂರ್ಯ, ಚಂದ್ರನಿದ್ದು ಭಕ್ತಿಯಿಂದ ಕೈ ಮುಗಿಯುವ ಧ್ಯಾನ ಮಗ್ನನಾಗಿ ಶಿವಲಿಂಗದ ಮುಂದೆ ಕುಳಿತಿದ್ದಾನೆ.

ಗ್ರಾಮ : ನಲ್ಕುದರೆ

ಸ್ಥಳ : ಬ್ರಹ್ಮೇಶ್ವರ ದೇವಾಲಯದ ಆವರಣದಲ್ಲಿನ ಒಂದನೇ ವೀರಕಲ್ಲು

ರಾಜವಂಶ: ಯಾದವರು

ಅರಸ : ಎರಡನೇ ಸಿಂಘಣ

ಕಾಲ : ೧೨೪೨

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೫೪ನೇ ಶಾಸನ, ಪು.೪೫೫

ಸೋಮಯ್ಯನ ಮಗ ಬೊಮ್ಮೆಯ ನಾಯಕನು ಬೇಡರ ದುಗಿಸೆತ್ತಿಯನ್ನು ಕೊಂದು, ತಾನು ಸಹ 'ಹರಿಶರಣು' ಎಂದು ಸಂಭೋಧಿಸುತ್ತಾ ಸಾವನ್ನಪ್ಪುತ್ತಾನೆ.[೨೧] ಶಾಸನಶಿಲ್ಪ ಮೂರು ಹಂತದಲ್ಲಿದೆ. ಮೊದಲನೆ ಹಂತದಲ್ಲಿ ಬೊಮ್ಮೆಯ ನಾಯಕ ದುಗ್ಗಿಸೆತ್ತಿಯನ್ನು ವಿರುದ್ಧ ಹೋರಾಟ ಮಾಡುವ ದೃಶ್ಯ

ಮಣ್ಣಿನಲ್ಲಿ ಊತುಹೋಗಿದೆ. ಎರಡನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಕರೆದೊಯ್ಯುತ್ತಿದ್ದಾರೆ. ಮೂರನೇ ಹಂತದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾಳೆ ವೀರ ಧ್ಯಾನಮಗ್ನನಾಗಿ ಕೈ ಮುಗಿಯುವ ಕುಳಿತಿದ್ದಾರೆ.

ಗ್ರಾಮ : ಹಿರೇಕೋಗಿಲೂರು

ಸ್ಥಳ : ಕಲ್ಲೇಶ್ವರ ದೇವಾಲಯದ ಆವರಣದ ಪಶ್ಚಿಮ ದಿಕ್ಕಿನಲ್ಲಿ ೧ನೇ ವೀರಗಲ್ಲು.

ರಾಜವಂಶ : ಯಾದವರು

ಅರಸ : ವೀರ ರಾಮದೇವ

ಕಾಲ : ಕ್ರಿ.ಶ. ೧೨೮೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೨೪ನೇ ಶಾಸನ, ಪು.೪೩೬

ವೀರರಾಮದೇವನ ಮಂತ್ರಿ ಪೆಸನಿ ಹನುಮ ವೀರ ಚೌವುಂಡರಸನ ಕುಮಟದುರ್ಗದ ನಾಯಕರ ಮುಮ್ಮಡಿ ಸಿಂಗೇನಾಯಕನ ವಿರುದ್ಧ ದಾಳಿ ಮಾಡಿ ಸಾವನ್ನಪ್ಪುತ್ತಾನೆ.[೨] ಶಾಸನ ಶಿಲ್ಪವು ಮೂರು ಹಂತಗಳಲ್ಲಿದ್ದು, ಮೊದಲನೆ ಹಂತದಲ್ಲಿ ಚೌವುಂಡರಸನು ಕುದುರೆ ಏರಿ ಕೈಯಲ್ಲಿ ಖಡ್ಗ ನೀಡಿದು ಮುಮ್ಮಡಿಸಿಂಗೆ ನಾಯಕನ ಸೈನ್ಯದ ಮೇಲೆ ದಾಳಿ ಮಾಡಿರುತ್ತಾನೆ. ಎರಡನೇ ಹಂತದಲ್ಲಿ ಚೌವುಂಡರಸನನ್ನು ಅಪ್ಸರೆಯರು ಕರೆದುಯ್ಯುತ್ತಿದ್ದರೆ, ಮೂರನೆ ಹಂತದಲ್ಲಿ ಶಿವಲಿಂಗಕ್ಕೆ ಯತಿಯು ಪೂಜೆ ಸಲ್ಲಿಸುತ್ತಿದ್ದಾನೆ. ಚಾವುಂಡರಸನು ಭಕ್ತಿಯಿಂದ ಧ್ಯಾನ ಮಗ್ನನಾಗಿ ಕೈಮುಗಿಯುತ್ತ ಪದ್ಮಸಾನದಲ್ಲಿ ಕುಳಿತಿದ್ದಾನೆ.

ಗ್ರಾಮ : ಹಿರೇಕೋಗಿಲೂರು

ಸ್ಥಳ : ಕಲ್ಲೇಶ್ವರ ದೇವಾಲಯದ ಪಶ್ಚಿಮ ದಿಕ್ಕಿನ ೨ನೇವೀರಗಲ್ಲು

ರಾಜವಂಶ : ಯಾದವರು

ಅರಸ : ವೀರ ರಾಮದೇವ

ಕಾಲ : ೧೨೮೨

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೨೩ನೇ ಶಾಸನ, ಪು.೪೩೫

ಯಾದವ ನಾರಾಯಣ ಬಹುಭುಜಬಲ-ಪ್ರೌಢರ-ಪ್ರತಾಪ ಚಕ್ರವರ್ತಿ ವೀರ ರಾಮದೇವ ಆಳ್ವಿಕೆಯ ೧೪ನೇ ವರ್ಷ ಚೈತ್ರಭಾನು ಸಂವತ್ಸರದ ಭಾದ್ರಪದ ೧೦ನೇ ಆದಿವಾರದಲ್ಲಿ ಚಾವುಂಡರಸನ ಅಳಿಯನಾದ(ಮೈದುನ) ಗೋಪರಸನು ನಾಗವಿ-ಕಳಸಪುರದ ಮೇಲೆ ದಾಳಿ ಮಾಡಿ, ಹೋರಾಡಿ ಮರಣ ಹೊಂದುತ್ತಾನೆ. ಅಚಲನಾಥನಿಗೆ ನಮ್ಮ ಶರಣು, ವೀರಭದ್ರನಿಗೆ ನಮ್ಮ ಶರಣು ಎಂದು ಕೊನೆಯ ಸಾಲುಗಳು ಸ್ತುತಿಸುತ್ತವೆ. ಚಾವುಂಡರಸನ ಅಳಿಯನಾದ ಗೋಪರಸನು ನಾಗವಿ-

ಕಳಸಾಪುರದ ಮೇಲೆ ದಾಳಿ ಮಾಡಿ ಹೋರಾಡಿ ಸಾವನ್ನಪ್ಪುತ್ತಾನೆ. ಶಾಸನದ ಕೊನೆಯ ಸಾಲುಗಳು ಅಚಲನಾಥನಿಗೆ ಮತ್ತು ವೀರಭದ್ರನಿಗೆ ಶರಣ ಎಂದು ದಾಖಲಿಸಿದೆ.[೨೩] ಶಾಸನ ಶಿಲ್ಪವು ಮೂರು ಹಂತಗಳಲ್ಲಿದ್ದು ಗೋಪರಾಸನು ನಾಗವಿಕಳಸಪುರದ ಮೇಲೆ ಕುದರೆ ಏರಿ ಕೈಯಲ್ಲಿ ಖಡ್ಗವಿಡಿದು ತನ್ನ ಸೈನಿಕರೊಂದಿಗೆ ಎದುರಾಳಿಗಳ ಮೇಲೆ ದಾಳಿ ಮಾಡಿದ್ದಾನೆ. ಎರಡನೇ ಹಂತದಲ್ಲಿ ಗೋಪರಸನನ್ನು ಅಪ್ಸರೆಯರು ಕರೆದೊಯ್ಯುತ್ತಿದ್ದಾರೆ. ಮೂರನೇ ಹಂತದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಗೋಪರಸನು ಧ್ಯಾನ ಮಗ್ನನಾಗಿ ಕೈ ಮುಗಿಯುತ್ತಾ ಪದ್ಮಾಸನದಲ್ಲಿ ಕುಳಿತಿದ್ದಾನೆ. 'ಮೊದಲನೇ ಹಂತದಲ್ಲಿ ಗೋಪರಸನ ಸೇವಕರು ಛತ್ರಿ ಹಿಡಿದಿರುವುದರಿಂದ ಗೋಪರಸನು ನಾಗವಿ ಕಳಸಪುರವನ್ನು ಗೆದ್ದು ಸಾವನ್ನಪ್ಪಿದ್ದಾನೆ ಎಂದು ಗುರುತಿಸಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದ ಶಾಸನೋಕ್ತ ವೀರಗಲ್ಲುಗಳನ್ನು ಕ್ರೋಢಿಕರಿಸಿಕೊಂಡು ಪಟ್ಟಿ ಮಾಡಿ ಅವುಗಳಲ್ಲಿ ಕೆಲವನ್ನು ವಿಶ್ಲೇಷಿಸಿ ಉಳಿದವುಗಳನ್ನು ಪಟ್ಟಿಕೆಗಳಲ್ಲಿ ದಾಖಲಿಸಿದೆ.

೩.೨.೨. ತುರುಗೋಳ್ ಶಾಸನಗಳು

ಗೋವುಗಳು, ವೇದ ಪುರಾಣಗಳ ಕಾಲದಿಂದಲೂ ಪವಿತ್ರವಾಗಿದ್ದು, ಪೂಜ್ಯನೀಯ ಸಂಪತ್ತಿನ ಪ್ರತಿರೂಪವಾಗಿದ್ದವು. ಇವು ಸಂಪತ್ತಿನ ಸಂಕೇತವಾಗಿದ್ದರಿಂದ, ಗೋವುಗಳನ್ನು ಅಪಹರಿಸುತ್ತಿದ್ದರು. ವೇದಗಳ ಕಾಲದಲ್ಲಿ ಗೋವುಗಳ ಅಪಹರಣವನ್ನು ಗೋಗ್ರಹಣ ಎಂದು ಕರೆಯುತ್ತಿದ್ದರು.[೨೪] ಅಪಹರಿಸಿದ ಗೋವುಗಳ ರಕ್ಷಿಸಿ ಕರೆತಂದವರನ್ನು ಧೀರರೆಂದು ಕರೆಯುತ್ತಿದ್ದರು. ಪ್ರಾಚೀನ ಕಾಲದಲ್ಲಿ ರಾಜನು ಅಪಹರಿಸಿದ ಗೋವುಗಳನ್ನು ಕರೆತರಲು ಯುದ್ಧ ಮಾಡಿ, ಈ ಹೋರಾಟದಲ್ಲಿ ಜಯಶಾಲಿಯಾಗಿ ಗೋವುಗಳ ಕರೆತರುತ್ತಿದ್ದನು. ನಂತರದ ಕಾಲಘಟ್ಟಗಳಲ್ಲಿ ಒಂದು ಗ್ರಾಮಕ್ಕೆ ಗೋವುಗಳು ಹೋದ ಸಂದರ್ಭದಲ್ಲಿ ಅವುಗಳನ್ನು ಬಂಧಿಸುತ್ತಿದ್ದರು. ಆ ಗೋವುಗಳನ್ನು ಕರೆತರುವುದು ಆಯಾ ಗ್ರಾಮಗಳ ಯುವಕರ ವೀರರ ಕರ್ತವ್ಯವೆಂದು ಭಾವಿಸಿದ್ದರು. ಹಾಗೆ ಗೋವುಗಳಿಗಾಗಿ ಹೋರಾಟ ಮಾಡಿ ಸಾವನ್ನಪ್ಪುತ್ತಿದ್ದವರ ನೆನಪಿಗಾಗಿ ಸ್ಥಾಪಿಸಿದ ಸ್ಮಾರಕಗಳನ್ನು ತುರುಗೋಳ್ ಶಾಸನವೆನ್ನುವರು.[೨೫] ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಶಾಸನೋಕ್ತ ತುರುಗೋಳ್ ಶಾಸನಗಳು ಲಭ್ಯವಾಗಿವೆ. ದೊರಕಿರುವ ತುರುಗೋಳ್ ಶಾಸನಗಳು 'ತುರುಗಳ ಸಂರಕ್ಷಣೆಯ ಉದ್ದೇಶಕ್ಕೆ ಮಾಡಿದಂತವಾಗಿವೆ.'

ಗ್ರಾಮ	: ಕಾಶಿಪುರ
ಸ್ಥಳ	: ಗ್ರಾಮದ ಪಶ್ಚಿಮದ ಕಲ್ಲು ಬರುಜಿನ ಸಮೀಪ
ರಾಜವಂಶ	: ಹೊಯ್ಸಳರು
ಅರಸ	: ವೀರನರಸಿಂಹ ದೇವ
ಕಾಲ	: ಕ್ರಿ.ಶ. ೧೨೨೫
ಪ್ರಕಟಣೆ	: ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೦ನೇ ಶಾಸನ, ಪು.೪೪೫

ಹೊಯ್ಸಳರ ವೀರ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಹಿರಿಯ(ಊರ ಒಡೆಯ)ನ ಕಾಲುವೆಗೆ ಗೌಡಿಹಳ್ಳಿಯ ಗೋವುಗಳು ಬಂದಾಗ ಅವುಗಳನ್ನು ಕಟ್ಟಿ ಹಾಕುತ್ತಾರೆ. ಬಡಗಿ ಮಾಕೋಜನು ಗೋವುಗಳಿಗಾಗಿ ಕಾಳಗ ಮಾಡಿ ಸಾವನ್ನಪ್ಪುತ್ತಾನೆ. ಆಗ ಅವನಿಗೆ ಭೂದಾನವನ್ನು ನೀಡುತ್ತಾರೆ.[೭೬]

ಗ್ರಾಮ : ದೊಂಡ್ರಗಟ್ಟ

ಸ್ಥಳ : ಮಲ್ಲೇಶ್ವರ ದೇವಾಲಯದ ಪೂರ್ವದ ಹಳ್ಳದ ಬಳಿ ಸಮೀಪದಲ್ಲಿದೆ

ರಾಜವಂಶ : ಹೊಯ್ಸಳರು

ಅರಸ : ವೀರ ನರಸಿಂಹ ದೇವ

ಕಾಲ : ಕ್ರಿ.ಶ. ೧೨೩೯

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೫ನೇ ಶಾಸನ, ಪು.೪೪೮)

ವೀರ ನರಸಿಂಹನು ಹೊಯ್ಸಳ ಸಾಮ್ರಾಜ್ಯವನ್ನು ಆಳ್ವಿಕೆ ಮಾಡುವ ಸಂದರ್ಭದಲ್ಲಿ ಸೂಸಲಗೆರೆ ವಿತ್ತಿಯ ದೊಂಡ್ರಗಟ್ಟದ ಬೀರಗೌಡ (ಮಹಾಸಾಲಪ್ರಭು ಬೀರಗೌಡನ ಮಗ ಸಂಕನ ಗೌಡನ ಮಗ) ಮತ್ತು ಸಂಕಗೌಡ (ಮಲ್ಲಗೌಡನ ಮಗ) ಇವರಿಬ್ಬರು ಸರ್ವಜಿತ್ ಸಂವತ್ಸರದ ಶ್ರಾವಣಶುದ್ಧ ಹನ್ನೊಂದನೆ ಸೋಮವಾರ ತುರುಗಳ ತರಲು ಕಾಳಗ ಮಾಡಿ ಸಾವನ್ನಪ್ಪುತ್ತಾರೆ. ಸಂಕಗೌಡನಿಗೆ ಉಂಬಳಿಶಾಸನ ಕೆತ್ತಿಸಿ ಭೂದಾನವನ್ನು ನೀಡುತ್ತಾರೆ. ಹಾಗೆಯೇ ಬೀರಗೌಡನಿಗೆ ಭೂದಾನ ನೀಡಿದರು.[೭೭] ನಾಲ್ಕು ಹಂತದ ಶಾಸನ ಶಿಲ್ಪವನ್ನು ಹೊಂದಿದೆ. ಒಳಪದ ಶಿಲೆಯನ್ನು ಕೆತ್ತಲು ಬಳಸಿದ್ದಾರೆ. ಮೊದಲನೆ ಹಂತದಲ್ಲಿ ಸಂಕಗೌಡನು ಕೈಯಲ್ಲಿ ಬಿಲ್ಲು ಹಿಡಿದಿದ್ದಾನೆ. ಎದುರಾಳಿಗಳ ಹಿಂಭಾಗದಲ್ಲಿ ತುರುಗಳಿವೆ. ಅವರು ಬಿಲ್ಲುಗಳನ್ನು ಕೈಯಲ್ಲಿ ಹಿಡಿದಿದ್ದಾರೆ. ಎರಡನೆ ಹಂತದಲ್ಲಿ ಬೀರಗೌಡ ಮತ್ತು ಸಂಕಗೌಡ ತುರುಗಳನ್ನು ವಶಪಡಿಸಿಕೊಂಡು ಸಾವನ್ನಪ್ಪಿದ್ದಾರೆ. ಮೂರನೆ ಹಂತದಲ್ಲಿ ಅಪ್ಸರೆಯರು ಇವರಿಬ್ಬರನ್ನು ಪುಷ್ಪಕ ವಿಮಾನದಲ್ಲಿ ಕರೆದೊಯ್ಯುತ್ತಿದ್ದಾರೆ. ನಾಲ್ಕನೆ ಹಂತದಲ್ಲಿ ಶಿವಲಿಂಗಕ್ಕೆ ವೀರರು ಪದ್ಮಸನದಲ್ಲಿ ಕುಳಿತು ಭಕ್ತಿಯಿಂದ ಕೈ ಮುಗಿಯುತ್ತಿದ್ದಾರೆ.

ಗ್ರಾಮ : ನಲ್ಲುದರೆ

ಸ್ಥಳ : ಬ್ರಹ್ಮೇಶ್ವರ ದೇವಾಲಯದ ಹೊರಗಡೇ ನಿಲ್ಲಿಸಿದ ೨ನೇ ವೀರಗಲ್ಲು

ರಾಜವಂಶ : ಯಾದವರು

ಅರಸು : ರಾಮಚಂದ್ರದೇವ

ಕಾಲ : ಕ್ರಿ.ಶ. ೧೨೭೭

ಪ್ರಕಟಣೆ : (ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೫೪ನೇ ಶಾಸನ, ಪು.೪೫೫)

ನಲ್ಕುದರೆಯ ಹಿರಿಯ ಬೊಮ್ಮನ ಮಗ ನಾಗನಾಯಕನು ತುರುಕಾಳಗದಲ್ಲಿ ಸಾವನ್ನಪ್ಪುತ್ತಾನೆ. ಜಯದೇವ ಢಣನಾಯಕ ಮತ್ತು ಗ್ರಾಮದ ಸಮಸ್ತ ಜನರು ನಾಗನಾಯಕನ ಶೌರ್ಯವನ್ನು ಮೆಚ್ಚಿ ಭೂಮಿಯನ್ನು ದಾನ ನೀಡುತ್ತಾರೆ.[೭೮] ಕಪ್ಪು ಶಿಲೆ ಬಳಸಿ ಮೂರು ಹಂತದಲ್ಲಿ ಶಾಸನ ಶಿಲ್ಪ ಕೆತ್ತಿದ್ದಾರೆ. ಮೊದನಲನೆ ಹಂತದಲ್ಲಿ ನಾಗನಾಯಕನು ಕೈಯಲ್ಲಿ ಬಿಲ್ಲು ಬಾಣವಿಡಿದು ಎದುರಾಳಿಯ ಮೇಲೆ ದಾಳಿ ಮಾಡುತ್ತಿದ್ದಾನೆ. ಎದುರಾಳಿಯು ಕುದುರೆಯ ಮೇಲೆ ಕುಳಿತು ಕೈಯಲ್ಲಿ ಬಿಲ್ಲು ಹಿಡಿದಿದ್ದಾನೆ. ನಾಗನಾಯಕನು ಈ ಯುದ್ಧದಲ್ಲಿ ಮೃತನಾಗಿದ್ದಾನೆ. ಎರಡನೇ ಹಂತದಲ್ಲಿ ಅಪ್ಸರೆಯರು ಪುಷ್ಪಕವಿಮಾನದಲ್ಲಿ ಕರೆದೊಯ್ಯುತ್ತಿದ್ದಾರೆ. ಮೂರನೇ ಹಂತದಲ್ಲಿ ನಾಗನಾಯಕನು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಅವನ ಹಿಂದೆ ಒಬ್ಬರೂ ಸ್ತ್ರೀಯರು ನಿಂತಿದ್ದರೆ, ಅವನ ಪತ್ನಿಯರು ಸತಿಯಾಗಿರಬಹುದೆಂದು ಗುರುತಿಸಿದೆ.

ಗ್ರಾಮ	: ನಲ್ಕುದರೆ
ಸ್ಥಳ	: ಬ್ರಹ್ಮೇಶ್ವರ ದೇವಾಲಯದ ಆವರಣದಲ್ಲಿನ ೩ನೇ ವೀರಗಲ್ಲು
ರಾಜವಂಶ	: ಯಾದವರು
ಅರಸ	: ರಾಮಚಂದ್ರದೇವ
ಕಾಲ	: ಕ್ರಿ.ಶ. ೧೨೭೯
ಪ್ರಕಟಣೆ	: ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೫೫ನೇ ಶಾಸನ, ಪು.೪೫೪

ನಲ್ಕುದರೆಯ ಅಯ್ಯರ ಚವಗೌಡನ ಮಗ ಮಾರೆನಾಯಕನು ತುರುಕಾಳಗದಲ್ಲಿ ಸಾವನ್ನಪ್ಪುತ್ತಾನೆ. ಊರ ಒಡೆಯ ಜಯದೇವಢಣನಾಯಕ ಮತ್ತು ಸಮಸ್ತ ಗ್ರಾಮಸ್ತರು ಮಾರೆನಾಯಕನ ಶೌರ್ಯ ಮೆಚ್ಚಿ ಭೂಮಿಯನ್ನು ದಾನ ನೀಡಿದರು.[೭೯] ಕಪ್ಪು ಶಿಲೆ ಬಳಸಿ ನಾಲ್ಕು ಹಂತಗಳಲ್ಲಿ ಶಾಸನ ಶಿಲ್ಪವಿದೆ. ಮೊದಲನೆ ಹಂತದಲ್ಲಿ ತುರಗಳ ಮುಂಭಾಗದಲ್ಲಿ ಮಾರೆನಾಯಕನು ಕೈಯಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾನೆ. ಏಕಾಂಗಿಯಾಗಿ ಮೇಲೆ ಹೋರಾಟ ಮಾಡುತ್ತಿದ್ದಾನೆ. ಎರಡನೆ ಹಂತದಲ್ಲಿ ಯುದ್ಧದಲ್ಲಿ ಸಾವನ್ನಪ್ಪುತ್ತಾನೆ. ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ನಾಲ್ಕನೇ ಹಂತದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಾನೆ. ಮಾರೆನಾಯಕನು ಧ್ಯಾನಮಗ್ನನಾಗಿ ಭಕ್ತಿಯಿಂದ ಕೈ ಮುಗಿಯುತ್ತಾ ಪದ್ಮಸನಾದಲ್ಲಿ ಕುಳಿತಿದ್ದಾನೆ.

೩.೩. ಇತರೆ ಶಾಸನಗಳು

ದಾನಶಾಸನಗಳು, ಶಾಸನೋಕ್ತ ವೀರಗಲ್ಲುಗಳು ಮತ್ತು ಶಾಸನೋಕ್ತ ತುರುಗೋಳ್ ಶಾಸನಗಳನ್ನು ಹೊರತುಪಡಿಸಿದರೆ, ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದ ಶಾಸನಗಳನ್ನು ಕ್ರೋಡೀಕರಿಸಿಕೊಂಡು ಇತರೆ ಶಾಸನಗಳು ಎಂಬ ಶೀರ್ಷಿಕೆ ನೀಡಿ ವಿವರಿಸಿದೆ.

ಗ್ರಾಮ : ತ್ಯಾವಣಿಗೆ

ಸ್ಥಳ : ಕಲ್ಲೇಶ್ವರ ದೇವಾಲಯದ ಪೂರ್ವದಲ್ಲಿ

ರಾಜವಂಶ : ಕಲ್ಯಾಣದ ಚಾಲುಕ್ಯ

ರಾಜ : ಎರಡನೇ ತೈಲಪ

ಕಾಲ : ೯೯೨

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ–೨, ೭ನೇ ಶಾಸನ, ಪು.೪೨೭

ಅಹವಮಲ್ಲದೇವ ಎಂಬ ಬಿರುದನ್ನು ಹೊಂದಿರುವ ಕಲ್ಯಾಣದ ಚಾಲುಕ್ಯರ ಎರಡನೇ ತೈಲಪನು ಸಾಮ್ರಾಜ್ಯವನ್ನು ವಿಸ್ತರಿಸಿ ಆಳ್ವಿಕೆ ಮಾಡುತ್ತಿದ್ದಾನೆ. ಕಲ್ಯಾಣದ ಚಾಲುಕ್ಯರ ವಂಶಾವಳಿಯನ್ನು ವಿವರಿಸುತ್ತದೆ. ಇರುವರೆಗೂ ಚನ್ನಗಿರಿ ತಾಲ್ಲೂಕಿನಲ್ಲಿಯೇ ಲಭ್ಯವಾದ ಶಾಸನಗಳಲ್ಲಿಯೇ ಅತಿ ಪ್ರಾಚೀನ ಶಾಸನವಾಗಿದೆ.[೮೦]

ಗ್ರಾಮ : ಸಿದ್ದನ ಮಠ

ಸ್ಥಳ : ರಾಮೇಶ್ವರ ದೇವಾಲಯದ ಆವರಣದ ಹಿಂಬಾಗ ಶಾಸನವಾಗಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ಅರಸ : ತ್ರಿಭುವನಮಲ್ಲದೇವ

ಕಾಲ : ೧೦೮೦

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ–೨, ೧೯ನೇ ಶಾಸನ, ಪು.೪೩೨

ಶ್ರೀಮತ್ ತ್ರಿಭುವನ ಮಲ್ಲದೇವ ರಾಜ್ಯವನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತರಿಸಿ, ಕೊನಂಗಿಲು ಕೋಟೆಯನ್ನು ವಶಪಡಿಸಿಕೊಂಡು ಪ್ರವೇಶಿಸುತ್ತಾನೆ. ಇವನ ರಾಜ್ಯವು ಸೂರ್ಯ ಚಂದ್ರರಿರುವವರೆಗೆ ಶಾಶ್ವತವಾಗಿರಲಿ ಎಂದು ಶಾಸನವು ಆಶಿಸುತ್ತದೆ. ಶಾಸನದಲ್ಲಿ ಸಿದ್ಧನಮಠ ಎಂದು ದಾಖಲಿಸಿದೆ[೮೧].

ಗ್ರಾಮ : ಹಿರೇಉಡ

ಸ್ಥಳ : ದೊಡ್ಡಬಸವಯ್ಯನ ಜಮೀನಿನಲ್ಲಿದೆ

ರಾಜವಂಶ : ಉಚ್ಚಂಗಿ ಪಾಂಡ್ಯರು

ಅರಸ : ತ್ರಿಭುವನಮಲ್ಲ ಪಾಂಡ್ಯದೇವ

ಕಾಲ : ೧೦೮೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ–೨, ೩೩ನೇ ಶಾಸನ, ಪು.೪೪೧

ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯ (ತ್ರಿಭುವನಮಲ್ಲ) ಸಾಮ್ರಾಜ್ಯ ವಿಸ್ತರಿಸಿದಾಗ ರಾಜಿಗ ಚೋಳ ಕುಲೋತುಂಗ ಚೋಳ) ಅಪಜಯ (ತಟಸ್ಥತೆ) ಹೊಂದುತ್ತಾನೆ. ಆಗ 'ತ್ರಿಭುವನ ಮಲ್ಲಪಾಂಡ್ಯದೇವ 'ನೊಳಂಬವಾಡಿ ಮೂವತ್ತೆರಡು ಸಾವಿರವನ್ನು ಆಳ್ವಿಕೆ ಮಾಡುತ್ತಾನೆ.[೮೨]

ಗ್ರಾಮ : ತಾವರೆಕೆರೆ

ಸ್ಥಳ : ಹನುಮಂತ ದೇವಾಲಯದ ಮುಂಭಾಗದಲ್ಲಿ

ರಾಜವಂಶ : ವಿಜಯನಗರ

ಅರಸ : ಸದಾಶಿವರಾಯ

ಕಾಲ : ೧೫೪೫

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೭೫ನೇ ಶಾಸನ, ಪು.೪೭೨

ವಿಜಯನಗರದ ಸದಾಶಿವ ರಾಯರ ಅವರ ಅಧಿಕಾರಿ ರಾಮರಾಜ-ಒಡೆಯರು ಕ್ಷೌರಿಕರ (ಹಜಾಮರ) ಮೇಲೆ ವಿಧಿಸುವ ಕುಲತೆರಿಗೆಯನ್ನು, ಸ್ಥಳೀಯ ಕ್ಷೌರಿಕರ ಮೇಲೆ ವಿಶೇಷ ಹಬ್ಬ-ಹರಿದಿನಗಳ ಆಚರಣೆಯ ಸಂದರ್ಭದಲ್ಲಿ ಕುಲತೆರಿಗೆಯನ್ನು ವಿಧಿಸುತ್ತಾರೆಂದು ಶಾಸನವು ತಿಳಿಸುತ್ತದೆ[೮೩].

ಗ್ರಾಮ : ಚಿಕ್ಕಗಂಗೂರು

ಸ್ಥಳ : ಈಶ್ವರ ದೇವಾಲಯದ ಹಿಂಭಾಗದ ಸಿಲಿಯಪ್ಪನ ಗುಡಿಯಲ್ಲಿದೆ

ರಾಜವಂಶ : ವಿಜಯನಗರ

ಸಾಮಂತ ರಾಜವಂಶ : ಸಂತೆಬೆನ್ನೂರು ನಾಯಕರು

ಸಾಮಂತ ಅರಸ : ಪಿಲಪ್ಪ ನಾಯಕರು

ಕಾಲ : ೧೫೬೨

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೬೯ನೇ ಶಾಸನ, ಪು.೪೬೫

ವಿಜಯನಗರದ ಸದಶಿವರಯ ಆಳ್ವಿಕೆ ಮಾಡುತ್ತಿರುವಾಗ (ಅಳಿಯ ರಾಮರಾಯನ ಕಾಲದಲ್ಲಿ) ದುಮ್ಮಿ ಸೀಮೆಯನ್ನು ಅಯ್ಯನ ಮೂಲಕ ಒಡೆಯರಿಗೆ ಅಮರಕ್ಕೆ ಪಡೆದನು. ಅಯ್ಯನ ಮೂಲಕ ಒಡೆಯರು ಠಾಣಧಾರ ದಿಲ್‌ವರ ಒಡೆಯನು ರೈತರು ಮಕ್ಕಳಿಗೆ ಕಿರುಕುಳ ನೀಡುತ್ತಿರುತ್ತಾನೆ. ಆಗ ಸಂತೆಬೆನ್ನೂರಿನ ಪಿಲಪ್ಪನಾಯಕ (ಹನುಮ ನಾಯಕನ ಮಗ) ಮತ್ತು ಚಿಕ್ಕ ಗಂಗೂರಿನ ಗೌಡರು ಸೇರಿ ಠಾಣಧಾರ ದಿಲ್‌ವರನ ಅನುಚಿತವರ್ತನೆಯನ್ನು ಅಯ್ಯನ ಮಲಕ ಒಡೆಯರ್‌ಗೆ ಕಳಿಸುತ್ತಾರೆ. ಈ ಸಂಗತಿ ಠಾಣಧಾರ ದಿಲ್‌ವರ್ ಒಡೆಯನಿಗೆ ತಿಳಿದು ಚಿಕ್ಕಗಂಗೂರಿನ ಗೌಡನ ತಲೆಯನ್ನು ಕತ್ತರಿಸುತ್ತಾನೆ. ಸಮಗ್ರ ವರದಿಯನ್ನು ಪಡೆದ ಅಯ್ಯನ ಮಲುಕ ಒಡೆಯರ್ ತನ್ನ ಸೇವಕನದ ಚಿಮ್ಮನ ಒಡೆಯರ್‌ನ್ನನು ಪಿಲಪ್ಪ ನಾಯಕರ ಬಳಿ ಕಳುಹಿಸಿ ಅವರಿಗೆ ಮಾಹಿತಿಯನ್ನು ಒದಗಿಸಿ ಚಿಕ್ಕಗಂಗೂರಿನ ಗೌಡನ ಮಕ್ಕಳಿಗೆ ಗೌಡ ಹುದ್ದೆಯನ್ನು ನೆತ್ತರು ಕೊಡುಗೆಯಾಗಿ ನೀಡಬೇಕೆಂದು ತಿಳಿಸುತ್ತಾರೆ. ಅದರಂತೆ ಪಿಲಪ್ಪನಾಯಕ ನೀಡುತ್ತಾನೆ.[೮೪]

ಗ್ರಾಮ : ಹೊಸಹಳ್ಳಿ

ಸ್ಥಳ : ಬಡೇಸಾಬಿ ಕೆರೆಯ ಕಟ್ಟೆಯ ಮೇಲಿರುವ ಒಂದನೇ ಶಾಸನ

ರಾಜವಂಶ : ಬಿಜಾಪುರದ ಸುಲ್ತಾನರು

ರಾಜ : ಮಹಮದ್ - ಷಾ- ಇಬ್ರಾಹಿಂ

ಕಾಲ : ಕ್ರಿ.ಶ. ೧೬೫೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೨ನೇ ಶಾಸನ, ಪು.೪೪೬

ದಿವಾನರಾದ ಸುಲ್ತಾನ ಮಹಮದ್ ಬಾದಷಾಹ – ಖಾನ್ ಸಾಹೇಬನಾದಾಗ, ಬಡೆ-ಮಲಿಖ್‌ನ ಮಗನಾದ 'ಷೇಖ್‌ಮಲ್ಲಿಖ್' ಜನರ ಆಶಯದಂತೆ ಈ ಶಾಸನ ನಿಲ್ಲಿಸಿದ್ದಾನೆ. ಈ ಶಾಸನದಲ್ಲಿ ದಕ್ಷಿಣ ಬಸವಪಟ್ಟಣದ ಪಕ್ಕದಲ್ಲಿನ ಸೇಂದ್ರಕ ದೇಶವು ದಟ್ಟ ಅರಣ್ಯದಿಂದ ಆವರಿಸಿತ್ತು. ಕಳ್ಳಕಾಕರಿಂದ ಜನ ಭಯಭೀತರಾಗಿದ್ದರು. ಆದ್ದರಿಂದ ಅರಣ್ಯವನ್ನು ನಾಶಮಾಡಿ ವೊಲ್ಲಿಪುರ ಪಟ್ಟಣ ಕಟ್ಟಿದ, ಬೆಟ್ಟದ ಮೇಲೆ ಕೆರೆಯನ್ನು ನಿರ್ಮಿಸಿದನು. ನಂದನ ವರ್ಷದಲ್ಲಿ ಬಾದಷಾಹ ರೋಗಗ್ರಸ್ಥನಾದಾಗ ಅವನ ಪರವಾಗಿ ಪ್ರಾರ್ಥಿಸಿ 'ತಾವರೆಕೆರೆಗೆ' ಅಡಿಗಲ್ಲು ಹಾಕಿ ಕೆರೆ ನಿರ್ಮಿಸುತ್ತಾನೆ. ನೀರು ಹರಿಯುವ ಎತ್ತರದ ಪ್ರದೇಶದಲ್ಲಿ ಗಾಣದ ಕೈಗಾರಿಕೆ ಸ್ಥಾಪನೆ ಮಾಡಿದ. ನೀರಾವರಿಗೆ ಸಹಕಾರಿಯಾಯಿತು. ಬವಪಟ್ಟಣವು ಸಹ ಇದರ ವ್ಯಾಪ್ತಿಯ 'ರಾಯರೇಖೆಗೆ ಸೇರಿತು. ಕಾಶಿ ರಾಮೇಶ್ವರಕ್ಕೆ ಹೋಗುವ ಜನರು ಗಾಣದ ಕೈಗಾರಿಕೆಯಿಂದ ಎಣ್ಣೆ ತೆಗೆದುಕೊಂಡು ಹೋಗುತ್ತಿದ್ದರು. ರೈತ ಕುಟುಂಬಗಳಿಗೆ ಭೂಮಿಯನ್ನು ದಾನ ಮಾಡಿದರು. ಸೆಟ್ಟಿಗಳು ನಾಡಿಗರನ್ನು ಅವಲಂಬಿಸಿದ್ದರು. ಹಿಂದೂ ಮತ್ತು ಮುಸ್ಲಿಂರಿಗೆ ಒಳ್ಳೆಯದಾಗುತ್ತದೆ. ಇದರ ಕಾರ್ಯದ ಎಲ್ಲಾ ಕೀರ್ತಿಯು ಬಡೇಮಲ್ಲಿಖ್‌ಗೆ ಸಲ್ಲುತ್ತದೆ. ಈ ಕಾರ್ಯದಲ್ಲಿ ಭಾಗಿಯಾದ ಎಲ್ಲಾ ನೌಕರರಿಗೆ ಒಳ್ಳೆಯ ಶುಭಾಷಯಗಳು ಎಂದು ಶಾಸನವು ದಾಖಲಿಸಿದೆ[೮೫].

ಗ್ರಾಮ : ಹೊಸಹಳ್ಳಿ

ಸ್ಥಳ : ಬಡೇಸಾಬಿ ಕೆರೆಯ ಕಟ್ಟೆಯ ಮೇಲೆ ಇದ್ದ ೨ನೇ ಶಾಸನ.

ರಾಜವಂಶ : ಬಿಜಾಪುರದ ಸುಲ್ತಾನರು

ರಾಜ : ಇಬ್ರಾಹಿಂ-ಆದಿಲ್-ಷಾ

ಕಾಲ : ಕ್ರಿ.ಶ. ೧೬೫೩

ಪ್ರಕಟಣೆ : ಬಿ.ಎಲ್.ರೈಸ್; ಇ.ಸಿ.ಸಂ.೭, ಭಾಗ-೨, ೪೩ನೇ ಶಾಸನ, ಪು.೪೪೬

ಈ ಶಾಸನವು ಸಂಪೂರ್ಣವಾಗಿ ಪರ್ಷಿಯನ್ ಲಿಪಿ ಮತ್ತು ಭಾಷೆಯನ್ನು ಹೊಂದಿದೆ. ಅಲ್ ಮಹಮದ್ ಅಬುಬಾಕರ್, ಉಮರ್, ಉಸ್ಮಾನ್‌ಆಲಿ ಎಂಬುವ ಇಸ್ಲಾಂ ಧರ್ಮದ ಪ್ರವರ್ತಕರನ್ನು ಸ್ತುತಿಸುತ್ತಾ ಆರಂಭವಾಗಿದೆ. ಸುಲ್ತಾನ ಮಹಮದ್‌ನ ಮಗನಾದ ಇಬ್ರಾಹಿಂ ಆದಿಲ್

ಷಾ ಘಾಜಿಯು ಆಳ್ವಿಕೆ ಮಾಡುತ್ತಿರುವಾಗ ಸುಲ್ತಾನ ನಗರವನ್ನು ಮಹಾದಂಡನಾಯಕ, ಗೌರವಾನ್ವಿತ ಮಂತ್ರಿಯಾದ 'ಬಾರ್ಕಿಮಲ್ಲಿಖ್‌ನ' ಮಗನಾದ 'ಲಾಲ್‌ಖಾನ್‌ನ' ಮಗನಾದ 'ಷೇಖ್ –ಮಲ್ಲಿಖ್‌ನ–ಹವಾಲ್ದಾರ್‌ನಿಗೆ' ನೀಡಲಾಯಿತು. ಸುಲ್ತಾನನ ಆರೋಗ್ಯ ಸುಧಾರಿಸಲೆಂಬ ಷೇಖ್–ಮಲ್ಲಿಖ್–ಹವಾಲ್ದಾರ್ ಕೆರೆಯನ್ನು ಕಟ್ಟಿಸಿ ಅದಕ್ಕೆ ವಾಲಿಸುರ್‌ರ (ಸ್ನೇಹಿತನ ಸಂತೋಷ) ಕೆರೆ ಎಂಬ ಹೆಸರಿಟ್ಟ, ಶಾಸನ ನಿಲ್ಲಿಸಿ ತನ್ನ ಅಜ್ಜನಾದ ಬಾರ್ಕಿಮಲ್ಲಿಖ್‌ನನ್ನು ಸ್ಮರಿಸುತ್ತಾನೆ[೮೬].

ದಾನ ಶಾಸನಗಳು, ವೀರಗಲ್ಲು ಶಾಸನ ಹೊರತುಪಡಿಸಿ ಉಳಿದಂತಹ ಶಾಸನಗಳನ್ನು ಇತರೆ ಶಾಸನಗಳಲ್ಲಿ ಕ್ರೋಢಿಕರಿಸಿಕೊಂಡು ಅಧ್ಯಯನದ ದೃಷ್ಟಿಯಿಂದ ಕೆಲವು ಶಾಸನಗಳನ್ನು ವಿಶ್ಲೇಷಿಸಿ ಉಳಿದ ಶಾಸನಗಳನ್ನು ಪಟ್ಟಿಕೆಗಳಲ್ಲಿ ದಾಖಲಿಸಿದೆ.

೩.೪. ಸ್ಮಾರಕ ಶಿಲ್ಪಗಳು

ಶಾಸನ ಪಠ್ಯವನ್ನು ಹೊಂದಿರದೆ ಕಲ್ಲಿನ ಮೇಲಿನ ಉಬ್ಬು ಶಿಲ್ಪಗಳಾಗಿವೆ.[೮೭] ಇವುಗಳನ್ನು ಕೇವಲ ಮುಂಭಾಗದಿಂದ ನೋಡಬಹುದಾಗಿದೆ. ಇವು ಶಾಸನ ಪಠ್ಯದ ಸಂಪೂರ್ಣ ಚಿತ್ರವನ್ನು ಉಬ್ಬುಶಿಲ್ಪದ ಮೂಲಕ ವ್ಯಕ್ತಪಡಿಸುತ್ತದೆ. ಅಂತಹ ಶಾಸನಶಿಲ್ಪಗಳನ್ನು ಸ್ಮಾರಕಶಿಲ್ಪಗಳೆಂದು ಕರೆಯಬಹುದಾಗಿದೆ.

ಸ್ಮಾರಕ ಶಿಲ್ಪಗಳನ್ನು ಈ ರೀತಿ ವಿಂಗಡಿಸುವುದು ಸೂಕ್ತವಾಗಿದೆ.

* ವೀರಗಲ್ಲು ಶಿಲ್ಪಗಳು
* ಮಾಸ್ತಿ ಕಲ್ಲುಗಳು
* ನಿಷಧಿ ಕಲ್ಲುಗಳು
* ಇತರೇ ಸ್ಮಾರಕ ಶಿಲ್ಪಗಳು

ಎಂದು ವರ್ಗೀಕರಿಸಿ ಅಧ್ಯಯನ ಮಾಡಿಲಾಗಿದೆ.[೮೮]

ಚನ್ನಗಿರಿಯಲ್ಲಿ ಲಭ್ಯವಾದ ಸ್ಮಾರಕ ಶಿಲ್ಪಗಳು

೩.೪.೧. ಶಾಸನರಹಿತ ವೀರಗಲ್ಲುಗಳು

೩.೪.೨. ಮಾಸ್ತಿಕಲ್ಲುಗಳು ಅಥವಾ ಮಾಹಸತಿ ಕಲ್ಲುಗಳು

ವ್ಯಕ್ತಿಯು ವೀರ ಅಥವಾ ಪ್ರಾಣಿಯೊಂದಿಗೆ ಕಾದಾಡಿ ವೀರ ಮರಣವನ್ನು ಹೊಂದಿದ ಸಂಧರ್ಭದಲ್ಲಿ ಅವನ ಸ್ಮರಣೆಗಾಗಿ ಕಲ್ಲಿನ ಮೇಲೆ ಕೆತ್ತಿಸುವ ಉಬ್ಬು ಶಾಸನಶಿಲ್ಪಗಳೇ ಸ್ಮಾರಕಶಿಲ್ಪಗಳು ಎಂದು ಕರೆಯುತ್ತಾರೆ.[೮೯] ಹಾಗೆಯೇ ವೀರ ಸಾವನ್ನಪ್ಪಿದ ನಂತರ ಅವನ ಸತಿಯು ಸಹ ಸಹಗಮನ ಅಥವಾ ಅನುಗಮನ ಮಾಡಿಕೊಂಡು ಸಾವನ್ನಪ್ಪುತ್ತಾಳೆ. ಇಂತಹ ಆತ್ಮಬಲಿಕಲ್ಲುಗಳನ್ನು ಸ್ಮಾರಕ ಶಿಲ್ಪಗಳೆಂದು ಕರೆಯುತ್ತಾರೆ. ಉದಾಹರಣೆ ಮಹಾಸತಿಗಲ್ಲುಗಳು ಶಾಸನರಹಿತವಾಗಿರುತ್ತವೆ ಏಕೆಂದರೆ

ಅನಕ್ಷರಸ್ತರಿಗೆ ಅರ್ಥವಾಗಲೆಂದು ಇವುಗಳನ್ನು ರಚಿಸಿರುತ್ತಾರೆ. ಇಂತಹ ಸ್ಮಾರಕ ಶಿಲ್ಪಗಳನ್ನು ಜನಸಮುದಾಯಗಳು ದೈವಿಕವಾಗಿ ಆರಾಧನೆ ಮಾಡುತ್ತಾರೆ.

೩.೪.೧. ಶಾಸನರಹಿತ ವೀರಗಲ್ಲುಗಳು

ವೀರನು ಗ್ರಾಮದ ಹೆಣ್ಣಿನ ಪ್ರಾಣಿಗಳ ರಕ್ಷಣೆಗಾಗಿ ಮನುಷ್ಯರು ಅಥವಾ ಪ್ರಾಣಿಗಳೊಂದಿಗೆ ಹೋರಾಡಿ, ಕೊಂದ ಅಥವಾ ಅವರನ್ನು ತಡೆಹಿಡಿದು ವೀರಮರಣವನ್ನು ಹೊಂದಿರುವ ಸನ್ನಿವೇಶವನ್ನು ಕಲ್ಲುಗಳ ಮೇಲೆ ಶಾಸನರಹಿತವಾಗಿ ಕೆತ್ತಲ್ಪಟ್ಟಿರುತ್ತದೆ. ಉಬ್ಬುಶಿಲ್ಪಗಳೆ ವೀರಗಲ್ಲು ಶಾಸನಶಿಲ್ಪಗಳು. ಇವು ಮುಮ್ಮುಖವಾಗಿ ಮಾತ್ರ ಗೋಚರಿಸುತ್ತವೆ.

ಗ್ರಾಮ : ಬೊಮ್ಮನಹಳ್ಳಿ
ಸ್ಥಳ : ಹನುಮಂತ ದೇವಾಲಯದ ಆವರಣದಲ್ಲಿದೆ
ರಾಜವಂಶ : ಕಲ್ಯಾಣದ ಚಾಲುಕ್ಯರು
ಕಾಲ : ಹನ್ನೊಂದನೇ ಶತಮಾನ
ಬಳಸಿದ ಶಿಲೆ : ಕಪ್ಪುಶಿಲೆ
ಪ್ರಕಟಣೆ : ಅಪ್ರಕಟಿತ

ವೀರ ಎಡಗೈಯಲ್ಲಿ ಬಾಣವನ್ನು ಹಿಡಿದಿದ್ದು, ಬಲಗೈಯಲ್ಲಿ ಸೊಂಟಕ್ಕೆ ಕಟ್ಟಿಕೊಂಡಿರುವ ಖಡ್ಗದ ಮೇಲೆ ಹಿಡಿದಿದ್ದಾನೆ. ಬೆನ್ನಿನ ಹಿಂದೆ ಬಿಲ್ಲುಗಳಿವೆ, ವೀರನು ಯುದ್ಧ ಮಾಡುತ್ತಾ ಸಾವನ್ನಪ್ಪಿದ್ದಾನೆ ಎಂಬ ಸ್ಮರಣಾರ್ಥವಾಗಿ ವೀರಗಲ್ಲನ್ನು ನಿಲ್ಲಿಸಲಾಗಿದೆ. ಅವನು ತನ್ನ ತಲೆಯ ಎಡಭಾಗಕ್ಕೆ ಕೇಶವನ್ನು ಜೋಡಿಸಿ ತುರುಬು ಕಟ್ಟಿಕೊಂಡಿದ್ದಾನೆ. ಖಡ್ಗ ಮತ್ತು ಬಿಲ್ಲು ಬಾಣಗಳನ್ನು ಹೊಂದಿರುವುದರಿಂದ ಇವನು ಮಹಾನ್ ವೀರನೆಂದು ತಿಳಿಯುತ್ತದೆ.

ಗ್ರಾಮ : ತ್ಯಾವಣಿಗೆ
ಸ್ಥಳ : ಊರಿನ ಮದ್ಯಭಾಗದ ಹನುಮಂತ ದೇವಾಲಯದ ಸಮೀಪ
ರಾಜವಂಶ : ಹೊಯ್ಸಳರು
ಕಾಲ : ಹನ್ನೆರಡನೇ ಶತಮಾನ
ಬಳಸಿದ ಶಿಲೆ : ಬಳಪದ ಕಲ್ಲು
ಪ್ರಕಟಿತ : ಚನ್ನಗಿರಿ ತಾಲ್ಲೂಕಿನ ಪುರಾತತ್ವ ಅವಶೇಷಗಳು, ಪು.೫೩

ಕೆಳಗಿನ ಆರಂಭಿಕ ಪಟ್ಟಿಕಾ (ಹಂತದಲ್ಲಿ) ವೀರನು ಬಿಲ್ಲು ಬಾಣವನ್ನು ಹಿಡಿದಿದ್ದು, ಇವನ ಎದುರಾಳಿಯು ಕುದುರೆಯ ಮೇಲೆ ಖಡ್ಗವಿಡಿದಿದ್ದಾನೆ. ವೀರನು ಎದುರಾಳಿಯ ವಿರುದ್ಧ ಕಾದಾಡಿತ್ತಿರುವ ದೃಶ್ಯವಿದೆ. ಎರಡನೇ ಹಂತದಲ್ಲಿ (ಪಟ್ಟಿಕಾ) ವೀರನು ಸಾವನ್ನಪ್ಪಿದ್ದು ಅವನ

ಹೆಂಡತಿಯರೂ ಸತಿಸಹಗಮನ ಮಾಡಿದ್ದಾರೆ. ವೀರನು ಧ್ಯಾನಮಗ್ನನಾಗಿ ಕುಳಿತಿದ್ದಾನೆ. ಇಬ್ಬರೂ ಪತ್ನಿಯರು ಬಲಗೈಯನ್ನು ಮೇಲಕ್ಕೆ ಎತ್ತಿಕೊಂಡು ಅವನ ಪಕ್ಕದಲ್ಲಿ ನಿಂತಿರುವಂತಿದೆ. ಮೂರನೇ ಹಂತದಲ್ಲಿ ಮಧ್ಯದಲ್ಲಿ ಶಿವಲಿಂಗ, ಅದರ ಮೇಲ್ಭಾಗದ ಬಲಭಾಗದಲ್ಲಿ ಸೂರ್ಯ ಮತ್ತು ಎಡಭಾಗದಲ್ಲಿ ಚಂದ್ರ ಹಾಗೂ ಶಿವಲಿಂಗದ ಮುಂದೆ ಕುಳಿತಿರುವ ನಂದಿ ಶಿಲ್ಪವಿದೆ. ಶಿವಲಿಂಗದ ಬಲಭಾಗದ ಮುಂಭಾಗದಲ್ಲಿ ವೀರನ ಹೆಂಡತಿಯು ಶಿವನನ್ನು ಆರಾಧಿಸುತ್ತಿದ್ದಾಳೆ. ವೀರ ಅವಳ ಹಿಂಭಾಗದಲ್ಲಿ ಕುಳಿತು ಧ್ಯಾನಮಗ್ನನಾಗಿ ಕೈ ಮುಗಿಯುತ್ತಿದ್ದಾನೆ.

ಗ್ರಾಮ	: ಉಬ್ರಾಣಿ
ಸ್ಥಳ	: ಊರಿನ ಮಧ್ಯದಲ್ಲಿದೆ
ರಾಜವಂಶ	: ಕಲ್ಯಾಣದ ಚಾಲುಕ್ಯರು
ಕಾಲ	: ಹನ್ನೆರಡನೇ ಶತಮಾನ
ಬಳಸಿದ ಶಿಲೆ	: ಕಪ್ಪುಶಿಲೆ
ಪ್ರಕಟಣೆ	: ಅಪ್ರಕಟಿತ

ವೀರನು ಕುದುರೆಯ ಮೇಲೆ ಕುಳಿತುಕೊಂಡಿದ್ದಾನೆ. ಕಿವಿಗೆ ಓಲೆ ಧರಿಸಿದ್ದು, ಕೇಶವನ್ನು ಎಡಕ್ಕೆ ತುರುಬು ಕಟ್ಟಿಕೊಂಡು ಮುಖಕ್ಕೆ ಶಿರಸ್ತ್ರಾಣ ಧರಿಸಿದ್ದಾನೆ. ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದು, ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಬಲಭುಜದ ಮೇಲೆ ಇಟ್ಟುಕೊಂಡಿದ್ದಾನೆ. ವೀರನು ಯುದ್ಧ ಕವಚ ಧರಿಸಿದ್ದಾನೆ. ಕುದುರೆಯು ಅಲಂಕೃತಗೊಂಡಿದ್ದು, ಕುದುರೆಯ ಹಿಂಭಾಗದಲ್ಲಿ ಅಪ್ಸರೆ ಚಾಮರವನ್ನು ಬೀಸುತ್ತಿದ್ದಾಳೆ. ಕೆಳಭಾಗದಲ್ಲಿ ನಿಂತಿರುವ ಅಪ್ಸರೆಯು ಕೇಶವನ್ನು ಎಡಕ್ಕೆ ತುರುಬು ಕಟ್ಟಿಕೊಂಡು ಕಿವಿಗೆ ಓಲೆಯನ್ನು ಧರಿಸಿದ್ದಾಳೆ.

ಬಲಗೈಯಲ್ಲಿ ಸುರಪಾನದ ಬಟ್ಟಲನ್ನು ಹಿಡಿದುಕೊಂಡಿದ್ದು, ಎಡಗೈಯನ್ನು ಮೇಲಕ್ಕೆ ಎತ್ತಿಕೊಂಡಿದ್ದಾಳೆ. ಕುದುರೆಯ ಮುಂಭಾಗದಲ್ಲಿ ಸೈನಿಕನು ತಲೆಗೆ ಯುದ್ಧ ಶಿರಸ್ತ್ರಾಣ ಧರಿಸಿದ್ದಾನೆ. ಕೈಯಲ್ಲಿ ಈಟಿಯನ್ನು ಹಿಡಿದುಕೊಂಡು ಮುನ್ನಡೆಯುತ್ತಿದ್ದಾನೆ. ಕುದುರೆಯ ಎಡಭಾಗದಲ್ಲಿ ಸೈನಿಕನು ವೀರನಿಗೆ ಅಲಂಕೃತವಾದಂತಹ ಛತ್ರಿಯನ್ನು ಹಿಡಿದಿದ್ದಾನೆ.

ಈ ವೀರಗಲ್ಲನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದು ೧೨ನೇ ಶತಮಾನದ ಯುದ್ಧ ಸನ್ನಿವೇಶವನ್ನು ಮತ್ತು ಕುದುರೆದಳಕ್ಕೆ ಪ್ರಾಮುಖ್ಯತೆ ನೀಡಿದ್ದನ್ನು ತಿಳಿದುಬರುತ್ತದೆ. ಹಾಗೆಯೇ ವೀರನು ಧರಿಸಿದ ಶಿರಸ್ತ್ರಾಣ, ಯುದ್ಧ, ಕವಚ ಅವನ ಹಿಂಬಾಲಕರನ್ನು ನೋಡಿದಾಗ ವೀರನು ಆ ಪ್ರದೇಶದ ಪ್ರಮುಖ ಸಾಮಂತನಿರಬಹುದು. ಎಲ್ಲದಕ್ಕಿಂತ ಮುಖ್ಯವಾಗಿ ೧೨ನೇ ಶತಮಾನದಲ್ಲಿ ರಣರಂಗಕ್ಕೆ ಯೋಧರು ಯಾವ ರೀತಿ ಶಸ್ತ್ರ ಸನ್ನದ್ಧರಾಗಿ ಹೋಗುತ್ತಿದ್ದರೆಂದು ತಿಳಿಸುವ

ವೀರಗಲ್ಲುಗಳಲ್ಲಿ ಇದು ಒಂದಾಗಿದೆ. ಆ ಪ್ರದೇಶವನ್ನು ಗೆದ್ದು ವೀರನು ಸಾವನ್ನಪ್ಪಿದ್ದನೆಂದು ಈ ವೀರಗಲ್ಲು ಸೂಚಿಸುತ್ತದೆ. ಇಂತಹ ವೀರಗಲ್ಲು ಕರ್ನಾಟಕ ವೀರಗಲ್ಲು ಚರಿತ್ರೆಯಲ್ಲಿ ದೊರೆತಿರುವ ಬಹು ಅಪರೂಪದ ವೀರಗಲ್ಲಾಗಿದೆ. ಇದನ್ನು ಸ್ಥಳೀಯರು ಕೆಂಚವೀರ ಸ್ವಾಮಿಯೆಂದು ಆರಾಧನೆ ಮಾಡುತ್ತಾರೆ. ಟಿ. ಗಿರಿಜ ಮತ್ತು ಸುಮತೀಂದ್ರ ನಾಡಿಗ್‌ರವರು ತಮ್ಮ ಕೃತಿಗಳಲ್ಲಿ ಹೆಸರಿಸಿದ್ದಾರೆ.

ಗ್ರಾಮ	: ಚನ್ನಗಿರಿ
ಸ್ಥಳ	: ಕಲ್ಲೇಶ್ವರ ದೇವಾಲಯದ ಆವರಣದಲ್ಲಿ
ರಾಜವಂಶ	: ಹೊಯ್ಸಳರು
ಕಾಲ	: ಹನ್ನೆರಡನೇ ಶತಮಾನ
ಶಿಲೆ	: ಬಳಪದ ಕಲ್ಲು
ಪ್ರಕಟಣೆ	: ಮಂಜುನಾಯ್ಕ ಆರ್., ಚನ್ನಗಿರಿ ತಾಲ್ಲೂಕಿನ ಪ್ರಾಚ್ಯ ಅವಶೇಷಗಳು, ಪು.೪೯

ಮೊದಲನೇ ಹಂತದಲ್ಲಿ ವೀರನು ಎಡಗೈಯಲ್ಲಿ ಗುರಾಣಿಯನ್ನು ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ವೀರನ ಹಿಂಬಾಲಕರು ಸಹ ಈಟಿಯನ್ನು ಹಿಡಿದುಕೊಂಡು ಎದುರಾಳಿಗಳನ್ನು ನೋಡುತ್ತಿದ್ದರೆ ಎದುರಾಳಿಗಳು ಎಡಗೈಯಲ್ಲಿ ಗುರಾಣಿಯನ್ನು ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡಿದ್ದಾರೆ. ಈ ಚಿತ್ರವನ್ನು ನೋಡಿದಾಗ ಯುದ್ಧದಲ್ಲಿ ಸಾವನ್ನಪ್ಪಿದ್ದಾನೆ.

ಎರಡನೇ ಹಂತದಲ್ಲಿ ವೀರನು ಪುಷ್ಪಕ ವಿಮಾನದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದಾನೆ. ಅಪ್ಸರೆಯರು ಪುಷ್ಪಕವಿಮಾನದ ಎಡ ಮತ್ತು ಬಲಭಾಗದಲ್ಲಿ ನಿಂತಿದ್ದು ಅವನನ್ನು ಎತ್ತಿಕೊಂಡು ಹೋಗುತ್ತಿದ್ದರೆ ಅವರ ಮುಂಭಾಗದಲ್ಲಿ ಎಡ ಮತ್ತು ಬಲಭಾಗದಲ್ಲಿ ಕ್ರಮವಾಗಿ ಅಪ್ಸರೆಯರು ವೀರನಿಗೆ ಚಾಮರದಿಂದ ಗಾಳಿಯನ್ನು ಬೀಸುತ್ತಿದ್ದಾರೆ.

ಮೂರನೇ ಹಂತದಲ್ಲಿ ಶಿವಲಿಂಗವಿದ್ದು ಎಡ ಮತ್ತು ಬಲ ಭಾಗದಲ್ಲಿ ಸೂರ್ಯ, ಚಂದ್ರರಿದ್ದು ವೀರನು ಶಿವಲಿಂಗದ ಮುಂದೆ ಧ್ಯಾನಾಸಕ್ತನಾಗಿ ಪದ್ಮಾಸನದಲ್ಲಿ ಕುಳಿತಿರುವ ದೃಶ್ಯ ಅಳಿಸಿಹೋಗಿದೆ.

ಗ್ರಾಮ	: ಹಿರೇಮಳಲಿ
ಸ್ಥಳ	: ಈಶ್ವರ ದೇವಾಲಯದ ಆವರಣ
ರಾಜವಂಶ	: ಸೇವುಣರು
ಕಾಲ	: ಹದಿಮೂರನೇ ಶತಮಾನ
ಶಿಲೆ	: ಕಪ್ಪುಶಿಲೆ
ಪ್ರಕಟಣೆ	: ಅಪ್ರಕಟಿತ

ಮೊದಲನೇ ಹಂತದಲ್ಲಿ ಮಧ್ಯದಲ್ಲಿ ವೀರನು ಬಲಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಅವನ ಹಿಂದೆ ಹಿಂಬಾಲಕರು ಇದ್ದರೆ, ಇವರ ಹಿಂಭಾಗದಲ್ಲಿ ತುರುಗಳು ಮತ್ತು ಸ್ತ್ರೀಯರು ಇದ್ದಾರೆ. ಅಂದರೆ ವೀರನು ಗ್ರಾಮದ ತುರುಗಳ ಮತ್ತು ಸ್ತ್ರೀಯರ ರಕ್ಷಣೆಗಾಗಿ ಎದುರಾಳಿಗಳ ವಿರುದ್ಧ ಕಾದಾಡುತ್ತಿದ್ದಾನೆ. ಎದುರಾಳಿಗಳು ತುರುಗಳು ಮತ್ತು ಸ್ತ್ರೀಯರಿಗಾಗಿ ದಾಳಿ ಮಾಡಿದರೆ, ವೀರರು ಸಹ ಆಯುಧಗಳನ್ನು ಹೊಂದಿದ್ದು ವೀರನ ಮೇಲೆ ಎರಗಿದ್ದಾರೆ. ವೀರನು ಎದುರಾಳಿಗಳನ್ನು ಕೊಂದು ಮಹಿಳೆಯರನ್ನು, ತುರುಗಳನ್ನು ರಕ್ಷಿಸಿ ಸಾವನ್ನಪ್ಪಿದ್ದಾನೆ. ಇದೊಂದು ಊರಳಿವು ವೀರಗಲ್ಲಾಗಿದೆ. ಎರಡನೇ ಹಂತದಲ್ಲಿ ವೀರನು ಭಕ್ತಿಯಿಂದ ಧ್ಯಾನಮಗ್ನನಾಗಿ ಕುಳಿತಿದ್ದಾನೆ. ಎಡ ಮತ್ತು ಬಲಭಾಗದಲ್ಲಿ ಛಾಮರವನ್ನು ಬೀಸುತ್ತ ಪುಷ್ಪಕ ವಿಮಾನ ಹಿಡಿದುಕೊಂಡಿದ್ದಾರೆ. ಪುಷ್ಪಕ ವಿಮಾನವು ದೇವಾಲಯದ ಶಿಖರದ ಮಾದರಿಯನ್ನು ಹೊಂದಿದೆ. ವೀರನಿಗೆ ಮೇಲ್ಭಾಗದಿಂದ ಹೂವುಗಳನ್ನು ಅಪ್ಸರೆಯರು ಅರ್ಪಿಸುವಂತೆ ಚಿತ್ರಿಸಲಾಗಿದೆ. ಮೂರನೇ ಹಂತದಲ್ಲಿ ಮಧ್ಯದಲ್ಲಿ ಶಿವಲಿಂಗವಿದ್ದು ಅದರ ಮೇಲ್ಭಾಗದ ಬಲಭಾಗದಲ್ಲಿ ಸೂರ್ಯ ಮತ್ತು ಚಂದ್ರರಿದ್ದಾರೆ. ಶಿವಲಿಂಗದ ಮುಂದೆ ನಂದಿಯು ಅಲಂಕೃತಗೊಂಡಿದ್ದು ಭಕ್ತಿಯಿಂದ ಕುಳಿತುಕೊಂಡಿದೆ. ವೀರನು ಶಿವಲಿಂಗದ ಬಲಪಕ್ಕದಲ್ಲಿ ನಿಂತಿದ್ದು ಎಡಗೈಯಲ್ಲಿ ಗಂಟೆಯನ್ನು, ಬಲಗೈಯಲ್ಲಿ ಸಾಮ್ರಾಣಿಯನ್ನು (ಕರ್ಪೂರವನ್ನು) ಬೆಳಗುತ್ತ ಮಂಗಳಾರತಿಯನ್ನು ಮಾಡುತ್ತಿದ್ದಾನೆ. ಅವನ ಹಿಂದೆ ಮತ್ತೊಬ್ಬ ವೀರನು ಪದ್ಮಾಸನದಲ್ಲಿ ಕುಳಿತಿದ್ದು ಧ್ಯಾನಮಗ್ನನಾಗಿದ್ದಾನೆ.

ಗ್ರಾಮ	: ಹಿರೇ ಕೋಗಲೂರು
ಸ್ಥಳ	: ಸರ್ಕಾರಿ ಆಸ್ಪತ್ರೆಯ ಮುಂದಿನ ರಸ್ತೆಯ ಬಲಭಾಗದ ಎರಡು ವೀರಗಲ್ಲುಗಳಿವೆ
ರಾಜವಂಶ	: ವಿಜಯನಗರ
ಕಾಲ	: ಹದಿನಾರನೇ ಶತಮಾನ
ಶಿಲೆ	: ಕಣಶಿಲೆ

ಅದರಲ್ಲಿ ಒಂದನೇ ವೀರಗಲ್ಲಿನಲ್ಲಿ, ಎರಡು ಹಂತಗಳನ್ನು ಹೊಂದಿದ್ದು ಒಂದನೇ ಹಂತದಲ್ಲಿ ವೀರನು ಕುದುರೆಯನ್ನು ಏರಿ ಎಡಗೈಯಲ್ಲಿ ಕುದುರೆ ಲಗಾಮು ಹಿಡಿದಿದ್ದಾನೆ, ಬಲಗೈಲ್ಲಿ ಭರ್ಚಿಯನ್ನು ಹಿಡಿದಿದ್ದಾನೆ. ವೀರನು ಯುದ್ಧವನ್ನು ಮಾಡುತ್ತಾ ಮರಣಹೊಂದಿದ್ದಾನೆ. ಎರಡನೇ ಹಂತದಲ್ಲಿ ಮಧ್ಯದಲ್ಲಿ ಶಿವಲಿಂಗವಿದೆ. ಲಿಂಗದ ಮೇಲ್ಭಾಗದ ಬಲಗಡೆ ಸೂರ್ಯ, ಎಡಬದಿಯಲ್ಲಿ ಮೇಲ್ಭಾಗದಲ್ಲಿ ಚಂದ್ರನನ್ನು ಚಿತ್ರಿಸಲಾಗಿದೆ. ಲಿಂಗದ ಮುಂದೆ ನಂದಿ ಇದೆ.

ಎರಡನೇ ವೀರಗಲ್ಲು ಸಹ ಮೊದಲನೇ ವೀರಗಲ್ಲಿನ ಪಕ್ಕದಲ್ಲಿದ್ದು ಇದು ಸಹ ವಿಜಯನಗರದ ಕಾಲಕ್ಕೆ ಸೇರಿದ ಅವರ ಸಾಮಂತರಾದ ಸಂತೆಬೆನ್ನೂರಿನ ನಾಯಕರ ಕಾಲಕ್ಕೆ

ಸೇರಿದೆ. ಗ್ರಾನೈಟ್ ಕಲ್ಲನ್ನು ಬಳಸಿದ ಕೆತ್ತಿದ ಈ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು ಬಲಗೈಯಲ್ಲಿ ಬಾಣವನ್ನು ಹೊಂದಿದ್ದು, ಯುದ್ಧದಲ್ಲಿ ಮರಣವನ್ನು ಹೊಂದಿದ್ದಾನೆ.

ಗ್ರಾಮ : ಲಕ್ಷ್ಮೀಸಾಗರ

ಸ್ಥಳ : ಆಂಜನೇಯ ದೇವಾಲಯದ ಆವರಣದಲ್ಲಿದೆ

ರಾಜವಂಶ : ಸಂತೇಬೆನ್ನೂರು ನಾಯಕರು

ಕಾಲ : ಹದಿನೇಳನೇ ಶತಮಾನ

ಬಳಸಿದ ಶಿಲೆ : ಕಣಶಿಲೆ

ಪ್ರಕಟಣೆ : ಸಂತೆಬೆನ್ನೂರು ಸುಮ್ಮತೀಂದ್ರ ನಾಡಿಗ್, ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು, ಪು.೧೦೬

ವೀರನು ಬಲಗೈಯಲ್ಲಿ ಬಂದೂಕು ಹಿಡಿದಿದ್ದರೆ ಎಡಗೈಯಲ್ಲಿ ಬಂದೂಕಿನ ತುದಿಯಲ್ಲಿ ಕೈ ಹಾಕಿದ್ದಾನೆ. ಅವನ ಎದುರಾಳಿಯು ತಲೆಗೆ ಮುಸ್ಲೀಮರು ಧರಿಸುವಂತಹ ಟೋಪಿಯನ್ನು ಧರಿಸಿದ್ದು, ಕೊರಳಿನಲ್ಲಿ ಮಣಿಗಳ ಹಾರವನ್ನು ಧರಿಸಿದ್ದಾನೆ. ವೀರನು ಹೊಡೆದ ಬಂದೂಕಿನ ಗುಂಡು ಎದುರಾಳಿಯ ಎದೆಗೆ ಬಿದ್ದಿರುವುದರಿಂದ ಎದೆಯನ್ನು ಹಿಡಿದುಕೊಂಡಿದ್ದಾನೆ. ಕೈಯಲ್ಲಿದ್ದ ಖಡ್ಗವನ್ನು ನೆಲಕ್ಕೆ ಎಸೆಯುವಂತೆ ಚಿತ್ರಿಸಲಾಗಿದೆ. ಮತ್ತೊಬ್ಬ ಎದುರಾಳಿಯು ಟೋಪಿಯನ್ನು ಧರಿಸಿದ್ದು ಕೊರಳಿಗೆ ಹಾರವನ್ನು ಹಾಕಿಕೊಂಡಿದ್ದಾನೆ. ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡಿದ್ದಾನೆ. ಎಡಗೈಯಲ್ಲಿ ಸಿಡಿಮದ್ದು ಇದೆ. ವೀರನು ಹೀಗೆ ಸಾವನ್ನಪ್ಪಿದ ಬಗ್ಗೆ ಚಿತ್ರಿಸಲಾಗಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿರುವ 'ಏಕೈಕ ಬಂದೂಕುದಾರಿ ವೀರಗಲ್ಲು ಲಕ್ಷ್ಮಿಸಾಗರದಲ್ಲಿ ಕಂಡುಬಂದಿರುವುದು ವಿಶೇಷ.' ಬಂದೂಕನ್ನು ಹಿಡಿದ ವೀರನು ಸಂತೇಬೆನ್ನೂರಿನ ಅರಸನಾದ ಸೀತಾರಾಮಪ್ಪ ನಾಯಕ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

ಗ್ರಾಮ : ಸಿದ್ದನಮಠ

ಸ್ಥಳ : ಈಶ್ವರ ದೇವಾಲಯದ ಆವರಣದಲ್ಲಿನ ಮುಂಭಾಗದಲ್ಲಿದೆ

ರಾಜವಂಶ : ಸಂತೇಬೆನ್ನೂರು ನಾಯಕರು

ಕಾಲ : ಹದಿನಾರನೇ ಶತಮಾನ

ಬಳಸಿದ ಶಿಲೆ : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ವೀರ ಕೇಶವನು ಎಡಭಾಗಕ್ಕೆ ತುರುಬು ಕಟ್ಟಿಕೊಂಡಿದ್ದಾನೆ. ಬಲಗಡೆಯ ಸೊಂಟಕ್ಕೆ ಕಟ್ಟಿಕೊಂಡಿರುವ ಖಡ್ಗದ ಮೇಲೆ ಬಲಗೈ ಇದೆ. ಎಡಸೊಂಟದ ಮೇಲೆ ಎಡಗೈಯನ್ನು ಹಿಡಿದುಕೊಂಡು ಶೌರ್ಯ

ಗುಣದಿಂದ ನಿಂತಿದ್ದಾನೆ. ವೀರನು ಯುದ್ಧದಲ್ಲಿ ಹೋರಾಟ ಮಾಡಿ ಸಾವನ್ನಪ್ಪಿದ್ದಾನೆ. ಅವನ ಬಲಭಾಗದ ಕೆಳಗಡೆ ಅವನ ಹೆಂಡತಿಯ ಉಬ್ಬು ಶಿಲ್ಪವಿದೆ.

೩.೪.೨.. ಮಹಾಸತಿಗಲ್ಲುಗಳು

ಮಹಾಸತಿಗಲ್ಲುಗಳು ಅಥವಾ ಮಾಸ್ತಿಗಲ್ಲುಗಳು ಎಂದು ಕರೆಯುವ ಶಾಸನ ಶಿಲ್ಪಗಳು ಚನ್ನಗಿರಿ ತಾಲ್ಲೂಕಿನಲ್ಲಿ ಕಂಡುಬರುತ್ತದೆ. 'ಮಹಾಸತಿಗಲ್ಲುಗಳು ಎಂದರೆ ಸ್ತ್ರೀಯು ತನ್ನ ಪತಿ ಸಾವನ್ನಪ್ಪಿದಾಗ ಅವಳು ಸಹ ಚಿತೆಗೆ ಹಾರಿ ಸಾವನ್ನಪ್ಪುತ್ತಾಳೆ. ಸ್ತ್ರೀಯ ನೆನಪಿಗಾಗಿ ಶಾಸನ ಶಿಲ್ಪವನ್ನು ನೆಟ್ಟು ಅದನ್ನು ಪೂಜೆ ಸಲ್ಲಿಸುತ್ತಾರೆ. ಇದನ್ನೇ ಮಹಾಸತಿಗಲ್ಲುಗಳು ಎಂದು ಕರೆಯುತ್ತಾರೆ.[೧೦] ಸ್ತ್ರೀಯು ಸಾಯುವ ಸಂದರ್ಭದಲ್ಲಿ ಬಲಗೈಯನ್ನು ಮೇಲಕ್ಕೆ ಎತ್ತಿ ಎಲ್ಲರಿಗೂ ತೋರಿಸುತ್ತಾಳೆ. ಅವಳ ಎಡ ಕೈಯಲ್ಲಿ ನಿಂಬೆ ಹಣ್ಣು ಅಥವಾ ಮಾವಿನ ಹಣ್ಣು ಇರುತ್ತದೆ. ಚಿತೆಗೆ ಹಾರುವ ಮುನ್ನ ಅವಳು ಬಲಗೈಯ ಹಸ್ತವನ್ನು ಕುಂಕುಮ ನೀರಿನಲ್ಲಿ ಅದ್ದಿ, ನೀರಿನಿಂದ ಆವರಿಸಲ್ಪಟ್ಟ ಅವಳ ಅಂಗೈಯನ್ನು ಗೋಡೆಯ ಮೇಲೆ ಮೂಡಿಸಿ ಸಾವನ್ನಪ್ಪುತ್ತಾಳೆ.[೧೧]

ಮಹಾಸತಿಗಲ್ಲುಗಳಲ್ಲಿ ಕೆಳಗಿನ ಚಿತ್ರ ವೈವಿಧ್ಯತೆ ಕಂಡುಬರುತ್ತದೆ.

೧. ಒಕ್ಕೈ ಮಾಸ್ತಿಗಲ್ಲುಗಳು

೨. ಇಕ್ಕೈ ಮಾಸ್ತಿಗಲ್ಲುಗಳು

೩. ಸಹಗಮನ ಮಹಾಸತಿ ಕಲ್ಲುಗಳು (ವೀರ ಮಾಸ್ತಿಶಿಲ್ಪಗಳು)

೪. ಅನುಗಮನ ಮಹಾಸತಿಗಲ್ಲುಗಳು

ಎತ್ತಿದ ತೋಳುಗೈಯನ್ನು (ಕಂಬದ ಶಿಲ್ಪವನ್ನು) ಒಕ್ಕೈ ಮಾಸ್ತಿಗಲ್ಲುಗಳು ಎಂದು ಕರೆಯುತ್ತಾರೆ.[೧೨] ಎರಡು ತೋಳುಗೈಯನ್ನು ಎತ್ತಿದ್ದ ಕಂಬದ ಶಿಲ್ಪಗಳನ್ನು ಇಕ್ಕೈ ಮಾಸ್ತಿಗಲ್ಲುಗಳು ಎಂದು ಕರೆಯುತ್ತಾರೆ.[೧೩] ಒಕ್ಕೈ ಮತ್ತು ಇಕ್ಕೈ ಮಾಸ್ತಿಗಲ್ಲುಗಳು ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿಲ್ಲ. ಆದರೆ ಸಹಗಮನ ಮತ್ತು ಅನುಗಮನ ಮಾಸ್ತಿಗಲ್ಲುಗಳು ಕಂಡುಬಂದಿವೆ.

ಸಹಗಮನ ಮಾಸ್ತಿಶಿಲ್ಪಗಳು (ವೀರ ಮಾಸ್ತಿಶಿಲ್ಪಗಳು)

ಸತಿಯು ವೀರನೊಂದಿಗೆ ಚಿತೆಗೆ ಬಿದ್ದು ಸಾವನ್ನಪ್ಪುತ್ತಾಳೆ. ಇದನ್ನು ಸಹಗಮನ ಪದ್ಧತಿ ಕರೆಯುವರು. ಪೂರ್ಣ ಸತಿಯು ವೀರನೊಂದಿಗೆ ಮತ್ತು ಇತರರೊಂದಿಗೆ ಚಿತೆಗೆ ಬೀಳುತ್ತಾಳೆ. ಮಾಸ್ತಿಗಲ್ಲು ಕರ್ನಾಟಕದಲ್ಲಿ ಹೆಚ್ಚು ಕಂಡುಬಂದರೂ ಸಹ ಒಕ್ಕೈ ಮತ್ತು ಇಕ್ಕೈ ಮಾಸ್ತಿಗಲ್ಲುಗಳು ಚನ್ನಗಿರಿಯಲ್ಲಿ ಕಂಡುಬಂದಿಲ್ಲ. ಆದರೆ ವೀರಮಾಸ್ತಿಶಿಲ್ಪಗಳು ಮತ್ತು ಸತಿಯನ್ನು ಮಾತ್ರ ಒಳಗೊಂಡ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ. ಅವುಗಳೆಂದರೆ,

ಗ್ರಾಮ : ತ್ಯಾವಣಿಗಿ

ಸ್ಥಳ : ಹನುಮಂತ ದೇವಾಲಯದ ಆವರಣದ ಹುಣಸೆಮರದ ಬುಡದಲ್ಲಿದೆ ಬುಡದಲ್ಲಿದೆ

ರಾಜವಂಶ : ಹೊಯ್ಸಳರು

ಕಾಲ : ಹನ್ನೆರಡನೇ ಶತಮಾನ

ಶಿಲೆ : ಬಳಪದಕಲ್ಲು

ಪ್ರಕಟಣೆ : ಅಪ್ರಕಟಿತ

ವೀರನು ತನ್ನ ಬಲಗಡೆ ತುರುಬನ್ನು ಕಟ್ಟಿಕೊಂಡಿದ್ದಾನೆ. ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಿಂದ ಬಾಣವನ್ನು ಬಿಲ್ಲಿನಲ್ಲಿ ಸೇರಿಸಿ ಬಿಡುವಂತೆ ಚಿತ್ರಿಸಲಾಗಿದೆ. ಸ್ತ್ರೀಯು ವೀರನ ಬಲಭಾಗದಲ್ಲಿ ನಿಂತಿದ್ದಾಳೆ. ಸ್ತ್ರೀಯು ತನ್ನ ಕೇಶವನ್ನು ಹಿಂದಕ್ಕೆ ತುರುಬು ಕಟ್ಟಿಕೊಂಡು ಪಕ್ಷಿಗಳ ಗರಿಗಳಿಂದ ಅಲಂಕರಿಸಿಕೊಂಡಿದ್ದಾಳೆ. ಸೀರೆ, ರವಿಕೆ, ಕೈಗಡಗ, ತೋಳುಬಂಧಿಯನ್ನು ಹೊಂದಿದ್ದು, ತನ್ನ ಗಂಡನ ಸಾವಿನಿಂದ ತಾನೂ ಸತಿಯಾಗಿದ್ದಾಳೆ.

ಗ್ರಾಮ : ಹಿರೇಕೋಗಿಲೂರು

ಸ್ಥಳ : ಶುಶ್ರೂಕಿಯರ ಕ್ವಾಟ್ರಸ್ ಆವರಣದಲ್ಲಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ಕಾಲ : ಹನ್ನೆರಡನೇ ಶತಮಾನ

ಶಿಲೆ : ಕಪ್ಪುಶಿಲೆ

ಪ್ರಕಟಣೆ : ಮಂಜುನಾಯ್ಕ ಎಂ.ಆರ್.,ಪು.೬, ೨೦೧೬, ಪು.೫೮

ಸತಿಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿ, ಶಿಲ್ಪಿಯು ಕೆತ್ತಿದ್ದಾನೆ. ಸತಿಯು ತುರುಬನ್ನು ಕಟ್ಟಿಕೊಂಡಿದ್ದಾಳೆ. ಕೇದಿಗೆ ಗರಿಗಳನ್ನು ತುರುಬಿಗೆ ಸಿಕ್ಕಿಸಿಕೊಂಡಿದ್ದಾಳೆ. ಸತಿಯು ಧರಿಸಿದ ಸೀರೆಯು ಪಾದದ ಬಳಿ ವಿಶಾಲವಾಗಿ ಹರಡಿದ್ದು, ಹೆಚ್ಚು ನರಿಗೆಗಳಿಂದ ಕೂಡಿದೆ. ಸೊಂಟಕ್ಕೆ ಸುತ್ತಿರುವ ಸೀರೆಯು ಆರು ಮಡಿಕೆಗಳಿಂದ ಕೂಡಿದೆ. ಬಿಗಿದ ರವಿಕೆ, ಕೊರಳಿಗೆ ಮಣಿ ಸರ(ಸತಿಯು ಧರಿಸಿದ ಚಿನ್ನದ ಹಾರವು ಅವಳ ಕುಚಗಳ ನಡುವೆ ಇಳೆ ಬಿದ್ದಿದೆ) ಕೈಗಳಲ್ಲಿ ಬಳೆಗಳು, ತೋಳುಬಂಧಿಯನ್ನು ಧರಿಸಿದ್ದು, ಎಡಗೈಯಲ್ಲಿ ನಿಂಬೆಹಣ್ಣು ಹಿಡಿದಿದ್ದು, ಬಲಗೈಯನ್ನು ಮೇಲಕ್ಕೆ ಎತ್ತಿಕೊಂಡಿದ್ದಾಳೆ. ಅವಳ ಸೊಂಟದ ಪಕ್ಕದಲ್ಲಿ ವೀರನನ್ನು ಚಿತ್ರಿಸಲಾಗಿದೆ.

ಗ್ರಾಮ : ಹೆಬ್ಬಳಗೆರ

ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿದೆ

ರಾಜವಂಶ : ಹೊಯ್ಸಳರು

ಕಾಲ : ಹನ್ನೆರಡನೇ ಶತಮಾನ

ಶಿಲೆ : ಬಳಪದ ಕಲ್ಲು

ಪ್ರಕಟಣೆ : ಅಪ್ರಕಟಿತ

ಸತಿಯು ತುರುಬು ಕಟ್ಟಿಕೊಂಡು ಕೇದಿಗೆ ಗರಿಗಳನ್ನು ತುರುಬಿಗೆ ಸಿಕ್ಕಿಸಿಕೊಂಡಿದ್ದಾಳೆ. ಸೀರೆಯನ್ನು ಧರಿಸಿದ್ದು, ಪಾದಗಳ ಬಳಿ ವಿಶಾಲವಾಗಿ ಹರಡಿಕೊಂಡು, ನರಿಗೆಗಳನ್ನು ಹೆಚ್ಚಾಗಿದ್ದು, ಇಮ್ಮಡಿಯವರೆಗೆ ಮಾತ್ರ ಸೀರೆ ಕಟ್ಟಲಾಗಿದೆ. ಸೀರೆಯ ಸೆರಗು ನೆಲಕ್ಕೆ ಬೀಳುವಂತೆ ಚಿತ್ರಿಸಲಾಗಿದೆ. ಸೊಂಟಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದು, ಬಿಗಿದ ರವಿಕೆ, ಕಿವಿಗಳಲ್ಲಿ ಓಲೆ, ಕೊರಳಿನಲ್ಲಿ ಹಾರಗಳನ್ನು (ಅದರಲ್ಲೊಂದು ಹಾರ ಕುಚಗಳ ನಡುವಿನಿಂದ ಹೊಕ್ಕಳಿನ ಸಮೀಪದವರೆಗೂ ಇಳಿ ಬಿದ್ದಿದೆ.) ಕೈಗಳಲ್ಲಿ ಬಳೆಗಳು, ತೋಳಬಂಧಿ ಧರಿಸಿದ್ದಾಳೆ. ಬಲಗೈ ಮೇಲಕ್ಕೆ ಎತ್ತಿಕೊಂಡಿದ್ದಾಳೆ, ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಬಲ ಮತ್ತು ಎಡ ಹಿಂಭಾಗದಲ್ಲಿ ನವಿಲಿನ ಚಿತ್ರಗಳನ್ನು ಚಿತ್ರಿಸಲಾಗಿದೆ. ಇದು ಸ್ವರ್ಗಕ್ಕೆ ಹೋಗುವ ಶುಭ ಸಂಕೇತವಾಗಿದೆ. ಸತಿಯ ಬಲಭಾಗದ ಕೆಳಗೆ ವೀರನನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ವೀರನು ಯುದ್ಧಕ್ಕೆ ಹೋಗಿ ಸಾವನ್ನಪ್ಪಿದ್ದು, ಧ್ಯಾನಮಗ್ನನಾಗಿ ಪದ್ಮಾಸನದಲ್ಲಿ ಕುಳಿತುಕೊಂಡು ಕೈ ಮುಗಿಯುವಂತೆ ಚಿತ್ರಿಸಲಾಗಿದೆ.

ಗ್ರಾಮ : ಬೊಮ್ಮೇನಹಳ್ಳಿ

ಸ್ಥಳ : ಇತ್ತೀಚಿನ ಹನುಮಂತ ದೇವಾಲಯದ ಆವರಣದಲ್ಲಿದೆ ಒಂದನೇ ಮಾಸ್ತಿಗಲ್ಲು

ರಾಜವಂಶ : ಕಲ್ಯಾಣದ ಚಾಲುಕ್ಯರು

ಕಾಲ : ಹನ್ನೆರಡನೇ ಶತಮಾನ

ಶಿಲೆ : ಬಳಪದಶಿಲೆ

ಪ್ರಕಟಣೆ : ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪು.೧೪೫

ಮೂರು ಮಾಸ್ತಿಗಲ್ಲುಗಳು ಲಭ್ಯವಾಗಿದ್ದು ಮೊದಲೆರಡು ಮಾಸ್ತಿಗಲ್ಲುಗಳು ಒಂದೇ ರೀತಿಯಾಗಿದ್ದು, ಮೂರನೇ ಮಾಸ್ತಿಗಲ್ಲು ಭಿನ್ನವಾಗಿದೆ. ಬೊಮ್ಮೇನಹಳ್ಳಿಯ ಊರಿನ ಮಧ್ಯಭಾಗದಲ್ಲಿರುವ ಇತ್ತೀಚಿನ ಹನುಮಂತ ದೇವಾಲಯದ ಆವರಣದಲ್ಲಿ ಮೂರು ಮಾಸ್ತಿಗಲ್ಲುಗಳು ದೊರಕಿವೆ. ಒಂದನೇ ಮಾಸ್ತಿಗಲ್ಲು ಪೂರ್ಣಸತಿಶಿಲ್ಪ ಇತರರೊಂದಿಗಿನ ಮಾಸ್ತಿಗಲ್ಲಾಗಿದ್ದು, ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಸತಿಯು ಪ್ರಭಾವಳಿಯ ಮಧ್ಯದಲ್ಲಿ ನಿಂತ ಹಾಗೆ ಶಿಲ್ಪಿಯು ಕಂಡರಿಸಿದ್ದು, ಸತಿಯು ತುರುಬನ್ನು ಕಟ್ಟಿಕೊಂಡಿದ್ದು, ಕೇದಿಗೆ ಗರಿಗಳನ್ನು ತುರುಬಿಗೆ ಸಿಕ್ಕಿಸಿಕೊಂಡಿದ್ದಾಳೆ. ಕೊರಳಲ್ಲಿ ಹಾರಗಳಿವೆ (ಸತಿಯು ಧರಿಸಿದ ಹಾರವು ಹೊಕ್ಕಳಿನವರೆಗೂ ಇಳಿ ಬಿದ್ದಿದೆ). ಸತಿಯು ಧರಿಸಿದ ಸೀರೆಯು ಪಾದಗಳ ಬಳಿ ಅಗಲವಾಗಿದ್ದು, ನರಿಗೆಯನ್ನು ಹೊಂದಿದ್ದು, ಇಮ್ಮಡಿಯವರೆಗೂ ಮಾತ್ರ ಹರಡಿಕೊಂಡಿದೆ. ಸೊಂಟಕ್ಕೆ ನಾಲ್ಕು ನರಿಗೆಯನ್ನು ಹೊಂದಿದ ಬಟ್ಟೆಯನ್ನು ಕಟ್ಟಿಕೊಂಡಿದ್ದಾಳೆ. ಕೈಗಳಲ್ಲಿ ಬಳೆಗಳನ್ನು, ತೋಳುಗಳಲ್ಲಿ ತೋಳಬಂಧಿಗಳನ್ನು ಧರಿಸಿದ್ದಾಳೆ. ಎಡಗೈಯಲ್ಲಿ ನಿಂಬೆಹಣ್ಣನ್ನು ಹೊಂದಿದ್ದು, ಮೇಲಕ್ಕೆ ಕೈಯನ್ನು ಎತ್ತಿಕೊಂಡಿದ್ದಾಳೆ. ಬಲಕೈ ಕೆಳಗೆ ವೀರನು ಬಾಣವನ್ನು

ಹಿಡಿದುಕೊಂಡು ನಿಂತಿದ್ದಾನೆ. ಹಿಂಭಾಗದಲ್ಲಿ ಬಾಣಗಳಿದ್ದು, ವೀರನು ಯುದ್ಧದ ಭಂಗಿಯಲ್ಲಿ ನಿಂತಿದ್ದು, ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡಿರುವುದರಿಂದ ವೇಳವಾಳಿ ಇರಬಹುದು.[೯೪]

ಗ್ರಾಮ : ಬೊಮ್ಮೆನಹಳ್ಳಿ

ಸ್ಥಳ : ಇತ್ತೀಚಿನ ಹುನುಮಂತ ದೇವಾಲಯದ ಆವರಣದಲ್ಲಿ ೩ನೇ ಮಾಸ್ತಿಕಲ್ಲು

ರಾಜವಂಶ : ಕಲ್ಯಾಣದ ಚಾಲುಕ್ಯರು

ಕಾಲ : ಹನ್ನೆರಡನೇ ಶತಮಾನ

ಶಿಲೆ : ಒಳ ಶಾಸನಶಿಲೆ

ಪ್ರಕಟಣೆ : ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪು.೪೧೫

ಎರಡನೇ ಮಾಸ್ತಿಗಲ್ಲು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದ್ದು, ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿರಬಹುದಾಗಿದೆ. ಮೊದಲನೇ ಮಹಾಸತಿಕಲ್ಲುಗಳ ಲಕ್ಷಣಗಳನ್ನೇ ಇದು ಹೊಂದಿದೆ. ಮೂರನೇ ಮಾಸ್ತಿಗಲ್ಲು ಹನುಮಂತ ದೇವಾಲಯದ ಹಿಂಭಾಗದಲ್ಲಿ ದೊರೆತಿದ್ದು, ಸತಿಯು ಹಿಂದಕ್ಕೆ ತುರುಬನ್ನು ಕಟ್ಟಿಕೊಂಡು ಕೇದಿಗೆ ಗರಿಗಳನ್ನು ತುರುಬಿಗೆ ಸಿಕ್ಕಿಸಿಕೊಂಡಿದ್ದಾಳೆ. ನರಿಗೆಗಳಿರುವ ಸೀರೆಯನ್ನು ಧರಿಸಿದ್ದು, ಸೊಂಟಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದು, ಕೊರಳಲ್ಲಿ ಆಭರಣಗಳನ್ನು ಧರಿಸಿದ್ದಾಳೆ. ಅದರಲ್ಲಿನ ಒಂದು ಹಾರವು ಹೊಕ್ಕಳಿನವರೆಗೂ ಇಳಿ ಬಿದ್ದಿದೆ. ಸತಿಯು ಬಲಗೈಯನ್ನು ಸ್ವಲ್ಪ ಮಡಚಿ ಮೇಲಕ್ಕೆ ಎತ್ತಿಕೊಂಡಿದ್ದಾಳೆ. ಎಡಗೈಯನ್ನು ಕೆಳಗೆ ಬಿಟ್ಟುಕೊಂಡಿದ್ದು, ಎರಡೂ ಕೈಗಳಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿದ್ದು, ವೈಜಯಂತಿ ಮಾಲೆ ಧರಿಸಿದ್ದಾಳೆ. ಸತಿ ಬಲಗೈ ಕೆಳಗೆ ವೀರನನ್ನು ಕೆತ್ತಲಾಗಿದ್ದು, ಬಾಣವನ್ನು ಹಿಡಿದು ನಿಂತಿದ್ದಾನೆ. ಈ ಮಾಸ್ತಿಗಲ್ಲಿನ ವೈಶಿಷ್ಟ್ಯತೆಯೆಂದರೆ ಕೊರಳಿನಿಂದ ಮೊಳಕಾಲಿನವರೆಗೂ ಇಳಿ ಬಿದ್ದಿರುವಂತಹ ವೈಜಯಂತಿಯ ಮಾಲೆ ಮತ್ತು ಎರಡೂ ಕೈಗಳಲ್ಲಿ ಕಮಲದ ಹೂವನ್ನು ಹಿಡಿದಿರುವುದಾಗಿದೆ.[೯೫] ಚಿದಾನಂದ ಮೂರ್ತಿಯವರು ಇದನ್ನು ತಾನು ಕಂಡಂತಹ ಅತಿ ಸುಂದರವಾದ ಮಾಸ್ತಿಗಲ್ಲು ಶಿಲ್ಪ ಎಂದು ವರ್ಣಿಸಿದ್ದಾರೆ.[೯೬]

ಅನುಗಮನ ಮಾಸ್ತಿಗಲ್ಲುಗಳು

ವೀರನು ತನ್ನ ಮಡದಿಯನ್ನು ಗ್ರಾಮ ಅಥವಾ ಪಟ್ಟಣದಲ್ಲಿ ಬಿಟ್ಟು ಯುದ್ಧಕ್ಕೆ ಹೋಗಿ, ಇಲ್ಲವೇ ಕಾದಾಡಿ ಸಾವನ್ನಪ್ಪಿದಾಗ ವೀರನು ಮರಣಹೊಂದಿದ ವಿಷಯವನ್ನು ಅವನ ಹೆಂಡತಿಗೆ ತಲುಪುತ್ತದೆ. ಆಗ ವೀರನ ಮಡದಿಯು ಚಿತೆಗೆ ಬಿದ್ದು ಸಾವನ್ನಪ್ಪುತ್ತಾಳೆ. 'ಪತಿಯ ಮೃತ ದೇಹದೊಂದಿಗೆ ಸತಿಯಾಗದೆ ಪ್ರತ್ಯೇಕವಾಗಿ ಚಿತೆಗೆ ಬಿದ್ದು ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಅನುಗಮನ ಮಾಸ್ತಿಗಲ್ಲುಗಳೆಂದು ಕರೆಯುತ್ತಾರೆ.[೯೭] ಅವಳ ಸ್ಮರಣೆಗಾಗಿ ಮಾಸ್ತಿಗಲ್ಲುಗಳನ್ನು ನಿಲ್ಲಿಸಿ ಆರಾಧನೆ ಮಾಡುತ್ತಾರೆ. ಇವುಗಳನ್ನು ಅನುಗಮನ ಮಾಸ್ತಿಗಲ್ಲುಗಳೆಂದು ಕರೆಯಬಹುದಾಗಿದೆ. ಇಂತಹ ಅನುಗಮನ ಮಾಸ್ತಿಶಿಲ್ಪಗಳು ಚನ್ನಗಿರಿಯಲ್ಲಿ ಲಭ್ಯವಾಗಿವೆ. ಸತಿಯು ಗಂಡನೊಂದಿಗೆ

ಸಾವನ್ನೊಪ್ಪದೇ ಕೆಲವೊಮ್ಮೆ ಇತರ ಸತಿಯರೊಂದಿಗೆ ಅಂಚಿದರೆ ಸತಿ ಅಥವಾ ಸತಿಯರೊಂದಿಗೆ ಸಾವನ್ನಪ್ಪುವುದನ್ನು ಕಾಣಬಹುದಾಗಿದೆ. ಅಂತಹ ಮಹಾಸತಿಗಲ್ಲುಗಳು ಚನ್ನಗಿರಿಯಲ್ಲಿ ಲಭ್ಯವಾಗಿವೆ. ಅವುಗಳೆಂದರೆ

ಗ್ರಾಮ : ಹಿರೇಕೋಗಿಲೂರು

ಸ್ಥಳ : ಕೆರೆಯ ಏರಿಯ ಮೇಲೆ ಬೆಳ್ಳಿಗನೊಡು ಗ್ರಾಮದ ರಸ್ತೆಯ ಪಕ್ಕದಲ್ಲಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ಕಾಲ : ಹನ್ನೆರಡನೇ ಶತಮಾನ

ಬಳಸಿದ ಶಿಲೆ : ಕಪ್ಪುಶಿಲೆ

ಪ್ರಕಟಣೆ : ಮಂಜುನಾಯ್ಕ ಆರ್., ಚ.ಪು.೬, ೨೦೧೬, ಪು.೫೪

ಕರಿಯಮ್ಮನ ಗುಡಿಯ ಪಕ್ಕದಲ್ಲಿರುವ ಇದಕ್ಕೆ ಎಣ್ಣೆಯೆರೆದು ಕಿಮುಟ ಕಟ್ಟಿದ್ದಾರೆ. ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ.[೯೮] ಮಾಸ್ತಿಶಿಲ್ಪದಲ್ಲಿರುವ ಸತಿಯು ಬಹಳ ಸಣ್ಣದಾದ ನಡುವನ್ನು ಹೊಂದಿದ್ದು, ಕೊರಳ ತುಂಬಾ ಆಭರಣಗಳನ್ನು ಧರಿಸಿದ್ದು, ಅದರಲ್ಲೊಂದು ಹಾರವು ಕುಚಗಳ ನಡುವೆ ಇಳಿ ಬಿದ್ದಿದೆ. ಜಡೆಯನ್ನು ಕಟ್ಟಿಕೊಂಡಿದ್ದಾಳೆ. ತಲೆಯ ಹಿಂದಿನ ಕೇಶಕ್ಕೆ ಕೇದಿಗೆ ಗರಿಗಳನ್ನು ಸಿಕ್ಕಿಸಿಕೊಂಡಿದ್ದಾಳೆ. ಈ ಮಾಸ್ತಿಗಲ್ಲಿನ ವಿಶಿಷ್ಟತೆ ಎಂದರೆ 'ಮಾಸ್ತಿಗಲ್ಲಿನ ಹಿಂಭಾಗದಲ್ಲಿ ಸುಂದರವಾಗಿ ಸತಿಯ ದೇಹದ ಭಾಗವನ್ನು ಮತ್ತು ಅಲಂಕಾರವಾಗಿ ಉದ್ದನೆಯ ಜಡೆಯನ್ನು ಕೆತ್ತಲಾಗಿದೆ.' ಈ ಮಾಸ್ತಿಗಲ್ಲಿನ ಮೇಲೆ ಬರಹವಿದ್ದಿತ್ತು. ಪ್ರಸ್ತುತ ಅಳಿಸಿಹೋಗಿದೆ. ಸತಿಯು ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದುಕೊಂಡಿದ್ದು, ಬಲಗೈಯನ್ನು ಮೇಲಕ್ಕೆ ಎತ್ತಿಕೊಂಡಿದ್ದಾಳೆ. ಸತಿಯು ಸೀರೆಯನ್ನು ಮತ್ತು ರವಿಕೆಯನ್ನು ಧರಿಸಿದ್ದು, ಸತಿ ಧರಿಸಿದ ಸೀರೆಯು ಪಾದಗಳ ವರೆಗೂ ಇಳಿ ಬಿದ್ದಿದ್ದು, ಪಾದಗಳ ಬಳಿ ಅಗಲವಾಗಿದೆ. ಸೊಂಟಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದು, ಅದು ನರಿಗೆಗಳನ್ನು ಹೊಂದಿದೆ. ಮಹಾಸತಿ ಶಿಲ್ಪದ ಪಾದಗಳ ಎರಡೂ ಭಾಗಗಳಲ್ಲಿ ಕಂಡರಿಸಿ, ಅದರ ಮೇಲೆ ಕಂಕುಳಗಳ ಕಳಶವನ್ನು ಶಿಲ್ಪಿ ಕಂಡರಿಸಿದ್ದಾನೆ. 'ಮಹಾಸತಿ ಶಿಲ್ಪದ ಭುಜಗಳ ಕೆಳಗಿನ ನಡುವೆ ರಂಧ್ರಗಳನ್ನು ಮಾಡಿರುವಂಥದ್ದು ವಿಶೇಷವಾಗಿದೆ.' ಹಾರವನ್ನು ಹಾಕಲು ಈ ರೀತಿ ರಂಧ್ರಗಳನ್ನು ಮಾಡಿದ್ದಾರೆ.[೯೯]

ಗ್ರಾಮ : ಚಿರಡೋಣಿ

ಸ್ಥಳ : ಗ್ರಾಮದ ಉತ್ತರದಿಕ್ಕಿನಲ್ಲಿರುವ ಗದ್ದೆಯಲ್ಲಿ ಲಭ್ಯವಾಗಿದೆ

ರಾಜವಂಶ : ಕಲ್ಯಾಣದ ಚಾಲುಕ್ಯರು

ಕಾಲ : ಹನ್ನೆರಡನೇ ಶತಮಾನ

ಬಳಸಿದ ಶಿಲೆ : ಕಪ್ಪುಶಿಲೆ

ಪ್ರಕಟಣೆ : ಮಂಜುನಾಯ್ಕ ಆರ್., ಚನ್ನಗಿರಿ ತಾಲೂಕಿನ ಅವಶೇಷಗಳು, ಪು.೫೭

ಸತಿಯು ತುರುಬನ್ನು ಕಟ್ಟಿಕೊಂಡು, ಅದಕ್ಕೆ ಕೇದಿಗೆ ಗರಿಯನ್ನು ಸಿಕ್ಕಿಸಿಕೊಂಡಿದ್ದಾಳೆ. ಅದಕ್ಕೆ ಸೀರೆಯನ್ನು ಧರಿಸಿ, ಕೊರಳಿಗೆ ಆಭರಣಗಳನ್ನು ಧರಿಸಿದ್ದಾಳೆ. ಸುಂದರವಾದ ಮಣಿಗಳ ಹಾರ ಧರಿಸಿದ್ದು, ಬಲಗೈಯನ್ನು ಮೇಲಕ್ಕೆ ಎತ್ತಿದ್ದಾಳೆ. ಎಡಗೈಯನ್ನು ಕೆಳಗೆ ಬಿಟ್ಟುಕೊಂಡಿದ್ದಾಳೆ. ಸತಿಯ ಮುಖವು ಭಗ್ನಗೊಂಡಿದೆ.

ಗ್ರಾಮ : ನೀತಿಗೆರೆ

ಸ್ಥಳ : ಸಂತೆಬೆನ್ನೂರು ಮತ್ತು ರಾಷ್ಟ್ರೀಯ ಹೆದ್ದಾರಿ ೧೩ ಸೇರುವ ಗಾಮದ ರಸ್ತೆಯ ಬಲಭಾಗದಲ್ಲಿದೆ

ರಾಜವಂಶ : ಹೊಯ್ಸಳರು

ಕಾಲ : ಹದಿಮೂರನೇ ಶತಮಾನ

ಬಳಸಿದ ಶಿಲೆ : ಬಳಪದ ಕಲ್ಲು

ಪ್ರಕಟಣೆ : ಅಪ್ರಕಟಿತ

ಸತಿಯು ತುರುಬಿಗೆ ಕೇದಿಗೆ ಗರಿಗಳನ್ನು ಸೇರಿಸಿಕೊಂಡಿದ್ದಾಳೆ. ಸತಿಯು ಕಿವಿಗೆ ಓಲೆಗಳನ್ನು ಕೊರಳಿಗೆ ಆಭರಣಗಳು ರವಿಕೆ ಮತ್ತು ಸೀರೆಯನ್ನು ಧರಿಸಿದ್ದು ಸೀರೆಯು ನರಿಗೆಗಳಿಂದ ಕೂಡಿದ್ದು, ಪಾದಗಳ ಬಳಿ ಅಗಲವಾಗಿದೆ. ಸೊಂಟಕ್ಕೆ ನೆರಿಗೆಗಳಿಂದ ಕೂಡಿದ ಬಟ್ಟೆಯನ್ನು ಕಟ್ಟಿಕೊಂಡಿದ್ದಾಳೆ. ಇದೊಂದು ಮುರಿದು ಬಿದ್ದಿರುವ ಮಾಸ್ತಿಶಿಲ್ಪವಾಗಿದೆ.[೧೦೦]

ಗ್ರಾಮ : ಮಲಹಾಳು

ಸ್ಥಳ : ವೀರಭದ್ರ ದೇವಾಲಯದ ಆವರಣದಲ್ಲಿದೆ

ರಾಜವಂಶ : ಸಂತೇಬೆನ್ನೂರಿನ ನಾಯಕರು

ಕಾಲ : ಹದಿನಾರನೇ ಶತಮಾನ

ಬಳಸಿದ ಶಿಲೆ : ಕಪ್ಪು ಗ್ರಾನೈಟ್

ಪ್ರಕಟಣೆ : ಅಪ್ರಕಟಿತ

ಪ್ರಭಾವಳಿಯಿಂದ ಎದ್ದು ಬರುವಂತೆ ಕೆತ್ತಲಾಗಿದೆ. ಸತಿ ನೃತ್ಯ ಭಂಗಿಯಲ್ಲಿ(ಆಭಂಗಿ) ನಿಂತಿದ್ದಾಳೆ. ಕೇಶಾಲಂಕಾರದ ತುರುಬಿಗೆ ಕೇದಿಗೆ ಗರಿಗಳನ್ನು ಸಿಕ್ಕಿಸಿಕೊಂಡಿದ್ದು, ಕಿವಿಯಲ್ಲಿ ಮತ್ತು ಕೊರಳಲ್ಲಿ ಆಭರಣಗಳಿದ್ದು(ಹಲವಾರು ಮಣಿ ಸರಗಳು ಇವೆ), ಕಾಲುಗಳಿಗೆ ಗೆಜ್ಜೆಯನ್ನು ಕಟ್ಟಿಕೊಂಡಿದ್ದಾಳೆ. ಎರಡೂ ಕೈಗಳನ್ನು ಮೇಲಕ್ಕೆ ಎತ್ತಿಕೊಂಡಿದ್ದು, ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿದ್ದು, ಎಡಗೈಯಲ್ಲಿ ಮಾವಿನ ಹಣ್ಣನ್ನು ಹಿಡಿದಿದ್ದಾಳೆ. ಸತಿಯ ತಲೆಯ ಮೇಲ್ಭಾಗದ ಬಲ ಮತ್ತು ಎಡ ಭಾಗದಲ್ಲಿ ಗಿಳಿಗಳನ್ನು ಕೆತ್ತಲಾಗಿದೆ. ಇದು ಸತಿಯು ಸ್ವರ್ಗಕ್ಕೆ ಹೋಗುವ ಶುಭ ಸಂಕೇತಗಳನ್ನು ಸೂಚಿಸುತ್ತವೆ.

ಗ್ರಾಮ : ಉಪನಾಯಕನಹಳ್ಳಿ

ಸ್ಥಳ : ಇತ್ತೀಚಿನ ಕರಿಯಮ್ಮನ ದೇವಾಲಯದ ಆವರಣದಲ್ಲಿದೆ

ರಾಜವಂಶ : ಸಂತೇಬೆನ್ನೂರಿನ ನಾಯಕರ

ಕಾಲ : ಹದಿನಾರನೇ ಶತಮಾನ

ಬಳಸಿದ ಶಿಲೆ : ಬಿಳಿಯ ಗ್ರಾನೈಟ್

ಪ್ರಕಟಣೆ : ಸುಮತೀಂದ್ರ ನಾಡಿಗ್, ಇತಿಹಾಸ ದರ್ಶನ, ಸಂ.೨೩, ಪು.೧೧೬

ಸತಿಯು ಕಿವಿಗೆ ಓಲೆಗಳನ್ನು ಕೊರಳಿಗೆ ಹಾರಗಳನ್ನು, ಕೈಗೆ ಬಳೆಗಳನ್ನು, ತೋಳಬಂಧಿ ಬಿಗಿದ ಅಲಂಕೃತ ರವಿಕೆಯನ್ನು ಮತ್ತು ಪಾದಗಳವರೆಗೆ ಅಗಲವಾದ ಇಳಿ ಬಿದ್ದಿರುವ ನರಿಗೆಗಳನ್ನು ಹೊಂದಿರುವ ಸೀರೆಯನ್ನು ಧರಿಸಿದ್ದಾಳೆ. ತಲೆಗೆ ವಿಶೇಷವಾದ ಪೇಟವನ್ನು ಕಟ್ಟಿಕೊಂಡಿದ್ದಾಳೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಟ್ಟಲು ಅಥವಾ ತಟ್ಟೆ ಮೃತ್‌ಪಾತ್ರೆಯನ್ನು ಹಿಡಿದಿದ್ದಾಳೆ. ಎರಡೂ ಕೈಗಳನ್ನು ಮೇಲಕ್ಕೆ ಎತ್ತಿಕೊಂಡಿದ್ದಾಳೆ. ಬಲಗೈಯ ಖಡ್ಗದ ಹಿಂಭಾಗದಲ್ಲಿ ಆನೆಯ ಸೊಂಡಿಲಿನ ಮುಖ ಮತ್ತು ಸೊಂಡಿಲುಗಳನ್ನು ಒಳಗೊಂಡಂತೆ ಗಿಳಿಯ ಚಿತ್ರಗಳನ್ನು ಒಂದೇ ಉಬ್ಬುಶಿಲ್ಪದಲ್ಲಿ ಕಾಣುವಂತೆ ಪ್ರಭಾವಳಿ ಕೆತ್ತಿದ್ದಾರೆ. ಸತಿಯ ಮೇಲ್ಭಾಗದಲ್ಲಿ ಗಂಡಭೇರುಂಡ ಲಾಂಛನವನ್ನು ಕೆತ್ತಲಾಗಿದೆ. ಸತಿಯ ಬಲಗೈ ಕೆಳಗೆ ಇಳಿ ಬಿದ್ದ ಖಡ್ಗದ ನಡುವೆ ವೀರನನ್ನು ಚಿತ್ರಿಸಿದೆ. ವೀರನು ಬಲಿಷ್ಠವಾದ ದೇಹವನ್ನು ಹೊಂದಿದ್ದು, ತಲೆಗೆ ಪೇಟವನ್ನು ಧರಿಸಿದ್ದು, ಪದ್ಮಾಸನದಲ್ಲಿ ಕುಳಿತು ಧ್ಯಾನಮಗ್ನನಾಗಿದ್ದಾನೆ. ಸತಿಯ ಎಡ ಭಾಗದಲ್ಲಿ ಕುಂಭ ಕಳಸವನ್ನು ಕೆತ್ತಲಾಗಿದೆ. ಇದು ವಿಜಯದ ಸಂಕೇತವನ್ನು ವ್ಯಕ್ತಪಡಿಸುತ್ತದೆ.

ಚನ್ನಗಿರಿ ತಾಲ್ಲೂಕಿನ 'ಕೊಂಡದಹಳ್ಳಿ ಮತ್ತು ಚಿಕ್ಕುಡೇವು ಗ್ರಾಮಗಳಲ್ಲಿ' ಎರಡು ಮಾಸ್ತಿಯಮ್ಮನ ಗುಡಿಗಳಿವೆ. 'ಗಂಡ ಸತ್ತ ಮೇಲೆ ಸತಿಯು ಅಗ್ನಿಯಲ್ಲಿ(ಕೊಂಡ) ಬಿದ್ದು ಸಾವನ್ನಪ್ಪಿದ ಸ್ಥಳವನ್ನು ಕೊಂಡದಳ್ಳಿ ಎಂದು ಕರೆಯಲಾಗುತ್ತಿದೆ.' ಅಲ್ಲಿ ಕಟ್ಟಿಸಿದ ಗುಡಿಗೆ ಆರಾಧನೆ ಮಾಡುತ್ತಾರೆ. ಉಗಾದಿ ಹಬ್ಬದ ಬಳಿಕ ಜನರು ಜಾತ್ರೆಯನ್ನು ಮಾಡಿ ಹೊಲ ಉಳುವ ಕಾರ್ಯ ಆರಂಭಿಸುತ್ತಾರೆ. ಚಿಕ್ಕುಡೇವಿನಲ್ಲಿ ಕನ್ನಡಿ ಬಿಳಿ ನಿಂಬೆಹಣ್ಣು ಕತ್ತಿಗಳನ್ನು ಮನೆಯಲ್ಲಿಟ್ಟು ಆರಾಧನೆ ಮಾಡುತ್ತಾರೆ. ಮಾಸ್ತಮ್ಮನಿಗೆ ಚಿಕ್ಕ ಗುಡಿಯನ್ನು ಕಟ್ಟಿಸಿದ್ದಾರೆ.[೧೦೧]

೩.೫. ಗಡಿಕಲ್ಲುಗಳು

ಶೈವ, ವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯಗಳ ಪ್ರದೇಶಲ್ಲಿ ಗಡಿಕಲ್ಲು ಕಂಡುಬರುತ್ತವೆ. ಅಂತಹ ಕಲ್ಲುಗಳನ್ನೇ ಗಡಿಕಲ್ಲುಗಳೆಂದು ಕರೆಯುತ್ತಾರೆ.[೧೦೨] ಲಿಂಗ ಮುದ್ರೆಕಲ್ಲು ವಾಮನ ಮುದ್ರೆಕಲ್ಲು, ಸೀಮೆಗಲ್ಲು, ಮೇರೆಗಲ್ಲು, ಚತುಷ್ಕೋಣಶಿಲೆಗಳೆಂಬ ಹೆಸರುಗಳಿಂದ ಕರೆಯುತ್ತಾರೆ.[೧೦೩]

ಲಿಂಗ ಮುದ್ರೆಕಲ್ಲುಗಳನ್ನು ಶೈವ ಧರ್ಮೀಯರು ಬಳಸಿದ್ದಾರೆ. ಕಾರಣವೆಂದರೆ ಶೈವ ಧರ್ಮಕ್ಕೆ ಸೇರಿದ ದೇವಾಲಯಗಳ ವ್ಯಾಪ್ತಿಗೆ ಸೇರಿದ ಜಮೀನಿನ ಭೂ ಪ್ರದೇಶದಲ್ಲಿ ಇಂತಹ ಲಿಂಗ ಮುದ್ರೆ ಕಲ್ಲನ್ನು ನೆಡುತ್ತಿದ್ದರು. ಕಾರಣವೆನೆಂದರೆ ವ್ಯಾಜ್ಯೆಗಳು ಉದ್ಭವಿಸುತ್ತಿರಲಿಲ್ಲ.[೧೦೪] ಅಂತಹ ಲಿಂಗ ಮುದ್ರೆಕಲ್ಲುಗಳು ಚನ್ನಗಿರಿ ತಾಲ್ಲೂಕಿನ ನಲ್ಕುದರೆ, ಹಿರೇಕೋಗಿಲೂರು ಗ್ರಾಮಗಳಲ್ಲಿ ದೊರೆತಿವೆ. ನಲ್ಕುದರೆಯಲ್ಲಿ ಒಂದು ಲಿಂಗ ಮುದ್ರೆಕಲ್ಲು ದೊರೆತಿದೆ. ನಲ್ಕುದುರೆ ಬ್ರಹ್ಮೇಶ್ವರ ದೇವಾಲಯದ ಎಡ ಭಾಗದಿಂದ ಸುಮಾರು ಮೂರು ಮೀಟರ್ ಅಂತರದಲ್ಲಿ ಜಮೀನಿನಲ್ಲಿ ದೊರೆತಿದ್ದ ಗ್ರ್ಯಾನೈಟ್ ಕಲ್ಲಿನಲ್ಲಿ ಕೆತ್ತಲ್ಪಟ್ಟಿರುವ ಲಿಂಗ ಮುದ್ರೆಯ ಎಡಗಡೆ ಚಂದ್ರ, ಬಲಗಡೆ ಸೂರ್ಯನನ್ನು ಕೆತ್ತಲಾಗಿದೆ. ಈ ಲಿಂಗ ಮುದ್ರೆಕಲ್ಲು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ್ದಾಗಿದೆ. ಅಂದರೆ ನಲ್ಕುದರೆ ಬ್ರಹ್ಮೇಶ್ವರ ದೇವಾಲಯವು ವಿಜಯನಗರದ ಕಾಲದವರೆಗೆ ಬೆಳವಣಿಗೆ ಹೊಂದಿತ್ತು ಎಂದು ಈ ಲಿಂಗ ಮುದ್ರೆ ವ್ಯಕ್ತಪಡಿಸುತ್ತದೆ.

ಲಿಂಗಮುದ್ರೆ ಕಲ್ಲುಗಳು

ಹಿರೇಕೋಗಿಲೂರಿನಲ್ಲಿ ಎರಡು ಲಿಂಗ ಮುದ್ರೆಕಲ್ಲುಗಳು ದೊರೆತಿವೆ. ಹಿರೇಕೋಗಿಲೂರಿನ ಕೋಟೆಯ ಭಾಗದಲ್ಲಿನ ಮನೆಯ ನಳದ ಪಕ್ಕದಲ್ಲಿದೆ. ಇದನ್ನು ಬಳಪದಕಲ್ಲು ಬಳಸಿ ಕೆತ್ತಿದ್ದರೆ, ಸುಮಾರು ಎರಡುವರೆ ಅಡಿ ಕಲ್ಲಿನ ಮೇಲೆ ಕೆತ್ತಲ್ಪಟ್ಟಿದ್ದು, ಲಿಂಗಮುದ್ರೆಯ ಬಲಗಡೆ ಸೂರ್ಯ, ಎಡಗಡೆ ಚಂದ್ರ ಇದೆ. ನಡುವೆ ಲಿಂಗಮುದ್ರೆಯನ್ನು ಕೆತ್ತಲ್ಪಟ್ಟಿದ್ದು ಇದು ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿದ್ದು, ಈ ಲಿಂಗಮುದ್ರೆಕಲ್ಲು ಈಶ್ವರ ದೇವಾಲಯಕ್ಕೆ ಸಂಬಂಧಿಸಿದೆ. ಅಂದರೆ ಆ ಕಾಲಘಟ್ಟದಲ್ಲಿ ಇಲ್ಲಿಯವರೆಗೆ ದೇವಾಲಯದ ಜಮೀನಿನಲ್ಲಿದ್ದಿತೆಂದು ತಿಳಿದುಬರುತ್ತದೆ.

ಹಿರೇಕೋಗಿಲೂರಿನ ದೇವಾಲಯದ ಪ್ರಕಾರದ ಪಕ್ಕದಿಂದ ನೂರುಮೀಟರ್ ಅಂತರದಲ್ಲಿ ಒಂದು ಲಿಂಗ ಮುದ್ರೆಕಲ್ಲು ಸಿಕ್ಕಿದೆ. ಒಂದು ಮನೆಯ ಒಳಭಾಗದ ಗೂಡಿನಲ್ಲಿದೆ. ಇದನ್ನು ಕಪ್ಪುಶಿಲೆಯಲ್ಲಿ ಕೆತ್ತಲ್ಪಟ್ಟಿದ್ದು, ಲಿಂಗಮುದ್ರೆಕಲ್ಲಿನ ಬಲಭಾಗದಲ್ಲಿ ಸೂರ್ಯ, ಎಡ ಭಾಗದಲ್ಲಿ ಚಂದ್ರರಿದ್ದಾರೆ. ಇದು ಯಾದವರ ಸೇವುಣರ ಕಾಲಕ್ಕೆ ಸಂಬಂಧಿಸಿದೆ. ಅಂದರೆ ಯಾದವರ ಕಾಲದಲ್ಲಿ ಈಶ್ವರ ದೇವಾಲಯಕ್ಕೆ ಜಮೀನು ಈ ಲಿಂಗ ಮುದ್ರಿಸಿರುವ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದಿತೆಂದು ತಿಳಿದುಬರುತ್ತದೆ.

ಲಿಂಗ ಮುದ್ರೆಕಲ್ಲುಗಳಲ್ಲಿನ ಸೂರ್ಯ ಚಂದ್ರರು ಈ ಪ್ರದೇಶವು ಶೈವ ದೇವಾಲಯಕ್ಕೆ ಸೇರಿದ್ದು, ಈ ಸೂರ್ಯ ಚಂದ್ರರಿರುವತನಕ ಈ ಶಿವದೇವಾಲಯಕ್ಕೆ ಸೇರಲಿ ಎಂಬ ಉದ್ದೇಶದಿಂದ ಸೂರ್ಯ ಚಂದ್ರರನ್ನು ಲಿಂಗ ಮುದ್ರೆಯ ಮೇಲ್ಭಾಗದ ಕ್ರಮವಾಗಿ ಬಲ ಮತ್ತು ಎಡ ಭಾಗದಲ್ಲಿ ಕೆತ್ತಲ್ಪಡುತ್ತಿದ್ದರು.

ವಾಮನ ಮುದ್ರೆಕಲ್ಲು

ಒಂದು ಕೈಯಲ್ಲಿ ಕಮಂಡಲವನ್ನು ಮತ್ತೊಂದು ಕೈಯಲ್ಲಿ ಛತ್ರಿಯನ್ನು ಹಿಡಿದು ನಿಂತಿರುವ ಮುದ್ರೆಯೇ ವಾಮನ ಮುದ್ರೆಕಲ್ಲು.[೧೦೫] ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕೇವಲ ಒಂದೇ ಒಂದು ವಾಮನ ಮುದ್ರೆಕಲ್ಲು ಬೊಮ್ಮನಹಳ್ಳಿಯಲ್ಲಿ ದೊರೆತಿದೆ. ವಾಮನ ಕಲ್ಲು ವೈಷ್ಣವ ಧರ್ಮಕ್ಕೆ ಸೇರಿದ್ದಾಗಿದ್ದು, ವಾಮನ ಕಲ್ಲು ಇರುವ ಪ್ರದೇಶವು ವೈಷ್ಣವ ದೇವಾಲಯಕ್ಕೆ ಸೇರಿರುವುದರಿಂದ ಈ ಕಲ್ಲನ್ನು ನೆಡುತ್ತಾರೆ. ಇದನ್ನು ಬಳಪದ ಕಲ್ಲಿನಲ್ಲಿ ಕೆತ್ತಲಾಗಿದ್ದು, ಬೊಮ್ಮನಹಳ್ಳಿ ವಾಮನ(ಬ್ರಾಹ್ಮಣ ಪುರೋಹಿತ)ನು ಎಡಗೈಯಲ್ಲಿ ಛತ್ರಿಯನ್ನು ಬಲಗೈಯಲ್ಲಿ ಕಮಂಡಲ ಹಿಡಿದುಕೊಂಡಿದ್ದು ಕೊರಳಲ್ಲಿ ಯಜ್ಞೋಪವೀತವನ್ನು ಧರಿಸಿದ್ದು, ಮೈಮೇಲೆ ವಿಭೂತಿಯನ್ನು ಹಚ್ಚಿಕೊಂಡಿದ್ದು, ಬಲಗೈಯಲ್ಲಿನ ಛತ್ರಿಯನ್ನು ಮೇಲ್ಭಾಗಕ್ಕೆ ಎತ್ತಿಕೊಂಡಂತಿದೆ.

ಈ ವಾಮನ ಮುದ್ರೆಕಲ್ಲನ್ನು ಬಳಪದ ಕಲ್ಲಿನಲ್ಲಿ ಕೆತ್ತಿದ್ದಾರೆ. ಇದು ಹೊಯ್ಸಳರ ಕಾಲಕ್ಕೆ ಸೇರಿದ್ದಾಗಿದೆ. ಆದರೆ ಇಲ್ಲಿ ವೈಷ್ಣವ ದೇವಾಲಯಕ್ಕೆ ಸೇರಿದ ಯಾವ ದೇವಾಲಯವಿಲ್ಲ. ಈ ಪ್ರಸ್ತುತ ಶೈವ ಧರ್ಮೀಯರು ಇಲ್ಲಿದ್ದಾರೆ. ಈ ಗ್ರಾಮದಲ್ಲಿ ವೈಷ್ಣವರು ಯಾರು ಇಲ್ಲ. ಅಂದರೆ ೧೨ನೇ ಶತಮಾನದ ಆರಂಭದಲ್ಲಿ ಇಲ್ಲಿ ವೈಷ್ಣವರು ನೆಲೆಸಿದ್ದರು. ನಂತರ ಅವರು ಈ ಭಾಗವನ್ನು ತೊರೆದ ನಂತರ ತೊರೆದಾಗ ಶೈವರು ಬಂದು ನೆಲೆಸಿದರು ಎಂಬುದು ಈ ವಾಮನ ಮುದ್ರೆ ಕಲ್ಲಿನಿಂದ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಈ ಅಧ್ಯಯನದಲ್ಲಿ ಶಾಸನದ ವೈವಿಧ್ಯತೆಯನ್ನು ವಿಶ್ಲೇಷಿಸಿದೆ. ಶಾಸನಗಳನ್ನು ದಾನ ಶಾಸನಗಳು, ವೀರಗಲ್ಲು ಶಾಸನ, ಇತರೆ ಶಾಸನವೆಂದು ವಿಂಗಡಿಸಿ ಮಾಹಿತಿಯನ್ನು ವಿವರಣೆ ನೀಡಿದೆ. ಹಾಗೆಯೇ ದಾನ ಶಾಸನಗಳನ್ನು ಆಡಳಿತ, ಸಾಮಾಜಿಕ, ಧಾರ್ಮಿಕದ ಉದ್ದೇಶಕ್ಕೆ ಒತ್ತು ನೀಡಿದ ದಾನ ಶಾಸನಗಳನ್ನು ಕ್ರೋಡಿಕರಿಸಿಕೊಂಡು ಪ್ರತ್ಯೇಕವಾಗಿ ಅಧ್ಯಯನ ಮಾಡಿ ಪಟ್ಟಿಕೆಗಳಲ್ಲಿ ಶಾಸನಗಳ ದಾಖಲೆ ಒದಗಿಸಿ ಶಾಸನಗಳನ್ನು ವಿವರಿಸಿದೆ. ಶಾಸನಸಹಿತ ವೀರಗಲ್ಲುಗಳು, ತುರುಗೋಳ್ ಶಾಸನಗಳನ್ನು ವಿಶ್ಲೇಷಿಸಿ, ಸ್ಮಾರಕಗಳಾದ ಶಾಸನರಹಿತ ವೀರಗಲ್ಲುಗಳ ಮಾಹಿತಿಯನ್ನು ಒದಗಿಸಲಾಗಿದೆ. ಮಹಾಸತಿಗಲ್ಲುಗಳನ್ನು ಸಹಗಮನ ಮತ್ತು ಅನುಗಮನ ಎಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಹಾಗೆಯೇ ಗಡಿಕಲ್ಲುಗಳಾದ ಲಿಂಗಮುದ್ರೆ ಮತ್ತು ವಾಮನ ಮುದ್ರೆ ಕಲ್ಲುಗಳ ಮಾಹಿತಿ ಒದಗಿಸಿದೆ.

ಕೊನೆ ಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ (ಪ್ರ.ಸಂ.): ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೯, ಪು. ೭೨೧.

೨. ಅದೇ,

೩. ಅದೇ,

೪. ಆರ್. ಶಾಮಶಾಸ್ತ್ರಿ, ಕೌಟಿಲ್ಯ ಅರ್ಥಶಾಸ್ತ್ರ, ಬೆಂಗಳೂರು, ಗವರ್ನ್‌ಮೆಂಟ್ ಪ್ರೆಸ್, ೧೯೧೫, ಪು.೧೦

೫. ಚಿದಾನಂದಮೂರ್ತಿ ಎಂ; ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ(ಕ್ರಿ.ಶ.೪೫೦–೧೧೫೦) ಸಪ್ನ ಬುಕ್‌ಹೌಸ್, ಬೆಂಗಳೂರು, ೧೯೬೬, ಪು.೧೪

೬. ಅದೇ, ಪು.೧೫

೭. ಶಿವಪ್ಪ ಜಿ. ಅರಿವು, ಸಮಗ್ರ ಕರ್ನಾಟಕ ಇತಿಹಾಸ (ಪ್ರಾರಂಭದಿಂದ ಕ್ರಿ.ಶ. ೨೦೧೪ ವರೆಗೆ ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, ೨೦೧೪, ಪು. ೩೬.

೮. ಪೂರ್ವೋಕ್ತ (ಕನ್ನಡ ವಿಷಯ ವಿಶ್ವಕೋಶ) ಪು. ೭೨೨.

೯. ಶೇಷಶಾಸ್ತ್ರಿ ಆರ್., ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೫, ಪು. ೨

೧೦. ಅದೇ ಪುಟ. ೬

೧೧. ಅದೇ ಪುಟ. ೭

೧೨. ರೈಸ್ ಬಿ.ಎಲ್., ಎಫಿಗ್ರಾಫಿಯಾ ಕರ್ನಾಟಕ, ಸಂ–೭, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು, ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್, ಗವರ್ನಮೆಂಟ್ ಬುಕ್ ಬೆಂಗಳೂರು, ೧೯೦೨, ಪು. ೪೨೮.(ಹಳೆಯ ಆವೃತ್ತಿ)

೧೩. ಅದೇ ಪು. ೪೫೮.

೧೪. ಅದೇ ಪು. ೪೬೪.

೧೫. ಅದೇ ಪು. ೪೬೫.

೧೬. ಅದೇ ಪು. ೪೫೦.

೧೭. ಅದೇ ಪು. ೪೪೩.

೧೮. ಅದೇ ಪು. ೪೭೧.

೧೯. ಅದೇ ಪು. ೪೨೬.

೨೦. ಅದೇ ಪು. ೪೩೩.

೨೧. ಅದೇ ಪು. ೪೩೬.

೨೨. ಅದೇ ಪು. ೪೪೬.

೨೩. ಅದೇ ಪು. ೪೪೨.

೨೪. ಅದೇ ಪು. ೪೩೬.

೨೫. ಅದೇ ಪು. ೪೪೮.

೨೬. ಅದೇ ಪು. ೪೩೯.

೨೭. ಅದೇ ಪು.

೨೮. ಅನ್ಯುಮಲ್ ರಿಪೋರ್ಟ್ ಆಫ್ ದಿ ೧೯೩೫ ಮೈಸೂರು ಆರ್ಕಿಯೋಲಾಜಿಕಲ್ ಡಿಪಾರ್ಟ್‌ಮೆಂಟ್, ಮೈಸೂರು ವಿಶ್ವವಿದ್ಯಾಲಯ, ೧೯೩೬, ಸರ್ಕಾರಿ ಮುದ್ರಣಾಲಯ, ಬೆಂಗಳುರು, ೧೯೦೨, ಪು. ೧೧೧.

೨೯. ರಾಜಶೇಖರಪ್ಪ ಬಿ. ಹಿರೇಕೋಗಲೂರಿನ ಅಪ್ರಕಟಿತ ಶಾಸನಗಳು ಇತಿಹಾಸ ದರ್ಶನ ಸಂ. ೧೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೨, ಪುಟ. ೫೨.

೩೦. ಅದೇ ಪು. ೫೩.

೩೧. ಬಿ.ಲೂಯಿಸ್ ರೈಸ್, ಪೂರ್ವೋಕ್ತ. ಪು. ೪೧೦.

೩೨. ಅದೇ ಪು. ೪೩೧.

೩೩. ಅದೇ ಪು. ೪೩೦.

೩೪. ಪೂರ್ವೋಕ್ತ (ಸಂತೆಬೆನ್ನೂರು ಸುಮತೀಂದ್ರ ನಾಡಿಗ್ ಇತಿಹಾಸದರ್ಶನ ಸಂ. ೧೭/೨೦೦೨) ಪು. ೬೦.

೩೫. ಅದೇ ಪು. ೫೯.

೩೬. ಬಿ.ಎಲ್. ರೈಸ್, ಪೂರ್ವೋಕ್ತ ಪು. ೪೫೬.

೩೭. ಅದೇ ಪು. ೪೫೫.

೩೮. ಅದೇ ಪು. ೪೪೪.

೩೯. ಅದೇ ಪು. ೪೬೮.

೪೦. ಪೂರ್ವೋಕ್ತ (ಸಂತೆಬೆನ್ನೂರು ಸುಮತೀಂದ್ರನಾಥನ ಇತಿಹಾದರ್ಶನ ಸಂ. ೨೩ / ೨೦೦೮) ಪು. ೫೮.

೪೧. ಪೂರ್ವೋಕ್ತ (ಸಂತೆಬೆನ್ನೂರು ಸುಮತೀಂದ್ರನಾಥನ್ ಇತಿಹಾಸ ದರ್ಶನ ಸಂ. ೧೯/ ೨೦೦೪, ಪು. ೭೦.

೪೨. ಬಿ.ಲೂಯಿಸ್ ರೈಸ್ : ಪೂರ್ವೋಕ್ತ ಪು. ೪೬೦.

೪೩. ಅದೇ ಪು. ೪೨೮.

೪೪. ಅದೇ ಪು. ೪೭೦.

೪೫. ಅದೇ ಪು. ೪೫೧.

೪೬. ಅದೇ ಪು. ೪೨೬.

೪೭. ಅದೇ ಪು. ೪೩೪.

೪೮. ಅದೇ ಪು. ೪೨೫.

೪೯. ಅದೇ ಪು. ೪೩೦.

೫೦. ಅದೇ ಪು. ೪೩೭.

೫೧. ಅದೇ ಪು. ೪೭೦.

೫೨. ಅದೇ ಪು. ೪೩೦.

೫೩. ಅದೇ ಪು. ೪೩೬.

೫೪. ಅದೇ ಪು. ೪೪೯.

೫೫. ಅದೇ ಪು. ೪೪೯.

೫೬. ಅದೇ ಪು. ೪೫೦.

೫೭. ಅದೇ ಪು. ೪೩೨.

೫೮. ಎಂ.ಎ.ಆರ್-೧೯೩೫, ಪೂರ್ವೋಕ್ತ ಪು. ೧೧೨

೫೯. ಅದೇ ಪು. ೧೧೩.

೬೦. ಶೇಷಶಾಸ್ತ್ರಿ ಆರ್., ಪೂರ್ವೋಕ್ತ, ಪು. ೧೬.

೬೧. ಅದೇ ಪು.

೬೨. ಅದೇ ಪು.

೬೩. ಅದೇ ಪು. ೨೧.

೬೪. ಅದೇ ಪು. ೨೧.

೬೫. ಅದೇ ಪು. ೨೦

೬೬. ಬಿ.ಲೂಯಿಸ್ ರೈಸ್, ಪೂರ್ವೋಕ್ತ ಪು. ೪೨೭.

೬೭. ಅದೇ ಪು. ೨೮.

೬೮. ಅದೇ ಪು. ೬೩.

೬೯. ಅದೇ ಪು. ೪೪೨.

೭೦. ಅದೇ ಪು.

೭೧. ಅದೇ ಪು. ೪೫೫.

೭೨. ಅದೇ ಪು. ೪೩೬.

೭೩. ಅದೇ ಪು. ೪೩೫.

೭೪. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೧೯೬

೭೫. ಶೇಷಶಾಸ್ತ್ರಿ ಕೆ.: ಪೂರ್ವೋಕ್ತ ಪು. ೨೨.

೭೬. ಬಿ.ಲೂಯಿಸ್ ರೈಸ್ : ಪೂರ್ವೋಕ್ತ, ಪು. ೪೪೫.

೭೭. ಅದೇ ಪು. ೪೪೮.

೭೮. ಅದೇ ಪು. ೪೫೫.

೭೯. ಅದೇ ಪು. ೪೫೪.

೮೦. ಅದೇ ಪು. ೪೨೭.

೮೧. ಅದೇ ಪು. ೪೩೨.

೮೨. ಅದೇ ಪು. ೪೪೧.

೮೩. ಅದೇ ಪು. ೪೭೨.

೮೪. ಅದೇ ಪು. ೪೬೫.

೮೫. ಅದೇ ಪು. ೪೪೬.

೮೬. ಅದೇ ಪು.

೮೭. ಡಿ.ವಿ.ಪರಮಶಿವಮೂರ್ತಿ, ಕನ್ನಡ ಶಾಸನಶಿಲ್ಪ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮, ಪು.೮

೮೮. ಅದೇ ಪು.

೮೯. ಅದೇ ಪು.

೯೦. ಅದೇ ಪು.

೯೧. ಅದೇ ಪು.

೯೨. ಶೇಷಶಾಸ್ತ್ರಿ ಆರ್. : ಪೂರ್ವೋಕ್ತ ಪು. ೫೬.

೯೩. ಅದೇ ಪು.

೯೪. ಡಿ.ವಿ.ಪರಮಶಿವಮೂರ್ತಿ, ಪೂರ್ವೋಕ್ತ, ಪು.೧೪೫

೯೫. ಅದೇ, ಪು.೧೪೫

೯೬. ಅದೇ, ಪು.೧೮೦

೯೭. ಕಲಬುರ್ಗಿ ಎಂ.ಎಂ. ಸಮಾಧಿ ಬಲಿದಾನ-ವೀರಮರಣ ಸ್ಮಾರಕಗಳು, ಪು.೨೭

೯೮. ಚಿದಾನಂದ ಮೂರ್ತಿ, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪು.೩೩

೯೯. ಚಿದಾನಂದ ಮೂರ್ತಿ, ಪೂರ್ವೋಕ್ತ, ಪು.೩೪

೧೦೦. ಡಿ.ವಿ.ಪರಮಶಿವಮೂರ್ತಿ, ಪೂರ್ವೋಕ್ತ, ಪು.೧೮೧

೧೦೧. ಚಿದಾನಂದ ಮೂರ್ತಿ, ಪೂರ್ವೋಕ್ತ ಪು.೩೪

೧೦೨. ಶೇಷಶಾಸ್ತ್ರಿ ಕೆ., ಪೂರ್ವೋಕ್ತ, ಪು.೪೨.

೧೦೩. ಅದೇ, ಪು.೪೨

೧೦೪. ಅದೇ, ಪು.೪೨

೧೦೫. ಅದೇ, ಪು.೪೨

ಆಡಳಿತ ದಾನಶಾಸನಗಳು

ಕ್ರ.ಸಂ.	ಕಾಲ	ಸಂತತಿ	ರಾಜ	ಸಾಮಂತ	ಸಾಮಾನ್ಯ	ಪಡೆದವರು	ದಾನ	ಸ್ಥಳ	ಪ್ರಕಟಣೆ
೧	೧೩೯೪	ವಿಜಯನಗರ ಸಾಮ್ರಾಜ್ಯ	೨ನೇ ಹರಿಹರ	–	–	ನರಸಿಂಹಭಟ್ಟ	ಜ್ಯೋತಿಷ್ಯ ಆಚರಣೆ	ತ್ಯಾವಣಿಗೆ	ಇ.ಸಿ.–೭ ೧೩ನೇ ಶಾಸನ
೨	೧೫೬೫	ವಿಜಯನಗರ ಸಾಮ್ರಾಜ್ಯ	ವೀರರಾಮದೇವ	ಕೆಂಗಪ್ಪನಾಯಕ	–	ಲಿಂಗಣ್ಣಭಟ್ಟ	ಉಚ್ಚಂಗಿ ಪೇಟೆ ಸೀಮೆ	ಚನ್ನಗಿರಿ	ಇ.ಸಿ.–೭ ೬೨ನೇ ಶಾಸನ
೩	೧೫೬೫	ಸಂತೆಬೆನ್ನೂರು ನಾಯಕರು	ವೀರರಾಮದೇವ	ಕೆಂಗಪ್ಪನಾಯಕ	–	ದೊಂಬರ ಕೆಂಗಪ್ಪ	ಊರನ್ನು ದಾನ	ಗೊಪ್ಪೇನಹಳ್ಳಿ	ಇ.ಸಿ.–೭ ೬೭ನೇ ಶಾಸನ
೪	೧೫೭೭	ಸಂತೆಬೆನ್ನೂರು ನಾಯಕರು	ವೀರರಾಮದೇವ	ಹೊದಿಗೆರೆಸೀಮೆ ಬೆಂಕಿಪುರ ನಾಡಿಗಾರ್ ಮಲ್ಲಪ್ಪ	–	ರಂಗಪ್ಪ	ಉಂಬಳಿ ಗ್ರಾಮ	ಲಕ್ಷ್ಮೀಸಾಗರ	ಇ.ಸಿ.–೭ ೭೧ನೇ ಶಾಸನ
೫	೧೭೫೮	ಸಂತೆಬೆನ್ನೂರು ನಾಯಕರು	ಸರ್ಜಾಕೃಷ್ಣಪ್ಪ ನಾಯಕ	ಬಸವಪಟ್ಟಣದ ಸಾಗರ್ ಪೇಟೆ ಸೆಟ್ಟಿ ಮಾಲಿಂಗಪ್ಪ	–	–	ಉಂಬಳಿ	ಉಡುವ	ಇ.ಸಿ.–೭ ೫೧ನೇ ಶಾಸನ

ಸಾಮಾಜಿಕ ದಾನಶಾಸನಗಳು

ಕ್ರ.ಸಂ.	ಸಂತತಿ	ಕಾಲ	ರಾಜ	ಸಾಮಂತ	ಸಾಮಾನ್ಯ	ಪಡೆದವರು	ದಾನ	ಸ್ಥಳ	ಪ್ರಕಟಣೆ
೧.	ಕಲ್ಯಾಣದ ಚಾಲುಕ್ಯರು	೧೧೪೯	ಜಗದೇಕಮಲ್ಲ	–	ಇಡುವರಿಯರಸ	–	ಭೂದಾನ	ಅಸ್ತಾಪುರ	ಇ.ಸಿ.–೭ ೩೮ನೇ ಶಾಸನ
೨.	ಹೊಯ್ಸಳ	೧೧೬೮	೧ನೇ ನರಸಿಂಹ	–	ಕಾರಿಗನೂರು ರೈತರು	–	ಭೂದಾನ	ತಾವರೆಕೆರೆ	ಇ.ಸಿ.–೭ ೭೪ನೇ ಶಾಸನ
೩.	ಯಾದವರು	೧೨೬೩	ಸಂಗಣ	–	–	ಪೂಜಾರಿ ಕಲ್ಲಿದೇವ	೨೨ ಆಡುಗಳು	ಕಾರಿಗನೂರು	ಇ.ಸಿ.–೭ ೫ನೇ ಶಾಸನ
೪.	ಯಾದವರು	೧೨೬೮	ಸಿಂಗಣ	ಚಿತ್ತರಾಜ	–	–	ಭೂದಾನ	ಹಿರೇಕೋಗಿಲೂರು	ಇ.ಸಿ.–೭ ೨೧ನೇ ಶಾಸನ
೫.	ಸೇವಬೋವ	೧೪೯೫	ವೀರರಾಮದೇವ	ಸೇವಬೋವ ಮತ್ತು ವೀರಚಬೋವ				ಹಿರೇಕೋಗಿಲೂರು	ಇಸಿ–೭ ೨೬ನೇ ಶಾಸನ
೬.	ಸಂತೆಬೆನ್ನೂರು ನಾಯಕರು	೧೬೦೧	ಮುಮ್ಮಡಿ ಹನುಮಪ್ಪ ನಾಯಕ	–	–	ನಿಂಗಣ್ಣ ಭಟ್ಟ	ಭೂದಾನ	ಹೊಸಹಳ್ಳಿ	ಇ.ಸಿ.–೭ ೪೨ನೇ ಶಾಸನ
೭.	ಸಂತೆಬೆನ್ನೂರು ನಾಯಕರು	೧೬೨೫	ಹನಮಪ್ಪ ನಾಯಕ			ಭಟ್ಟರ ವೆಂಕಟಯ್ಯ	ಅಗ್ರಹಾರ	ಮಂಟರುಗಟ್ಟ	ಇಸಿ–೭ ೩೫ನೇ ಶಾಸನ
೮.	ಸಂತೆಬೆನ್ನೂರು ನಾಯಕರು	೧೬೭೫	ಹಿರಿಯ ತಿಮ್ಮಣ್ಣ ನಾಯಕ	–	–	–	ಚಿಕ್ಕಕೋಗಿಲೂರು	ಚಿಕ್ಕಕೋಗಿಲೂರು	ಇ.ಸಿ.–೭ ೨೭ನೇ ಶಾಸನ
೯.	ಸಂತೆಬೆನ್ನೂರು ನಾಯಕರು	೧೬೭೯	–	ಬಸವಪಟ್ಟಣದ ಸುಬೇಧರ್ ಲಿಂಗಪ್ಪ	–	–	ಹೀರೆಮಾಡಳು ಹಳ್ಳಿಯನ್ನು	ಸಂತೆಬೆನ್ನೂರು	ಇ.ಸಿ.–೭ ೪೬ನೇ ಶಾಸನ
೧೦.	ನವಾಬ ಸುಲ್ತಾನರು ಸಂತೆಬೆನ್ನೂರು ನಾಯಕರು	೧೬ನೇ ಶತಮಾನ	–	ಬಡಗಿ ಲಿಂಗಪ್ಪ	–	–	ಬೊಮ್ಮನಹಳ್ಳಿ	ಸಂತೆಬೆನ್ನೂರು	ಇ.ಸಿ.–೭ ೩೦ನೇ ಶಾಸನ
೧೧.	ಸಂತೆಬೆನ್ನೂರು ನಾಯಕರು		ಚಿಕ್ಕಣ್ಣನಾಯಕ	ಮುದ್ದಯ್ಯ			ಭೂದಾನ	ಬೊಮ್ಮನಹಳ್ಳಿ	ಇ.ಸಿ.–೭ ೨೯ನೇ ಶಾಸನ

ಧಾರ್ಮಿಕ ದಾನಶಾಸನಗಳು

ಕ್ರಸಂ.	ಕಾಲ	ಸಂತತಿ	ರಾಜ	ಸಾಮಂತ	ಸಾಮಂತರಾಜ	ಸಾಮಾನ್ಯ	ಪಡೆದವರು	ದಾನ	ಸ್ಥಳ	ಪ್ರಕಟಣೆ
೧	೧೦೧೮	ಕಲ್ಯಾಣದ ಚಾಲುಕ್ಯರು	ಒಂದನೇ ಜಗದೇಕಮಲ್ಲ	–		–	–	ಒಣ ಭೂಮಿಯನ್ನು ಶಿವಾಲಯಕ್ಕೆ	ಹಿರೇಉಡ	ಎಂ.ಎ.ಆರ್. ೧೯೩೫-೩೫ನೇ ಶಾಸನ
೨	೧೦೪೭	ಕಲ್ಯಾಣದ ಚಾಲುಕ್ಯರು	ತ್ರೈಲೋಕ್ಯ ಮಲ್ಲನನ್ನಿ ನೊಳಂಬಪಲ್ಲವ ಪೆರ್ಮಾಡಿ	ನೊಳಂಬರು	ತ್ರೈಲೋಕ್ಯ ನನ್ನಿನೊಳಂಬ ಪಲ್ಲವ ಪೆರಮಾಡಿ			ದೇವರಿಗೆ ದಾನ ನೀಡುತ್ತಾರೆ	ಹಿರೇಕೋಗಲೂರು	ಇತಿಹಾಸ ದರ್ಶನ, ಸಂ.೧೭ ೩೨ನೇ ಶಾಸನ
೩	೧೦೫೦	ಕಲ್ಯಾಣದ ಚಾಲುಕ್ಯರು	ಒಂದನೇ ಸೋಮೇಶ್ವರ	ಸಿಂಗಚತ್ತರಸ				ದೇವಾಲಯ ನಿರ್ಮಾಣಕ್ಕಾಗಿ	ಕಗ್ಗತ್ತೂರು	ಇ.ಸಿ.–೭ ೩೨ನೇ ಶಾಸನ
೪	೧೦೬೩	ಕಲ್ಯಾಣದ ಚಾಲುಕ್ಯರು	ತ್ರೈಲೋಕ್ಯ ಮಲ್ಲದೇವ	ಉಚ್ಚಂಗಿ ಪಾಂಡ್ಯರ	ಸಾಮಂತ ಮಾಚಾಗಾವುಂಡ		ಸಂಕಲೇಶ್ವರ ಪಾಂಡಿತ ದೇವರಮಠಕ್ಕೆ	ಗಾಣದ ಕೈಗಾರಿಕೆ ಭೂಮಿಯನ್ನು	ಮೆದಕೆರೆ	ಇ.ಸಿ.–೭ ೧೮ನೇ ಶಾಸನ
೫	೧೧೨೦	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲ	ಇರುಗಮಯ್ಯ				ಹನುಮಂತ ದೇವರಿಗೆ ಕಟುಪಂಜರ	ಮೆದಕೆರೆ	ಇ.ಸಿ.–೭ ೧೭ನೇ ಶಾಸನ
೬	೧೧೨೧	ಉಚ್ಚಂಗಿ ಪಾಂಡ್ಯರು	ಇರುಕ್ಕವೇಲ್ (ಪಲಿಂದಪಾಂಡ್ಯ)		ಮಾಚಗಾವುಂಡ		ಮಾಳೇಶ್ವರ ದೇವಾಲಯ	ಭೂಧಾನ	ಮೆದಕೆರೆ	ಇತಿಹಾಸ ದರ್ಶನ ಸಂ. ೧೭
೭	೧೧೨೨	ಕಲ್ಯಾಣದ ಚಾಲುಕ್ಯರು	೬ನೇ ವಿಕ್ರಮಾದಿತ್ಯ	ತ್ರಿಭೂವನಮಲ್ಲ ರಾಯಪಾಂಡ್ಯ		ಜ್ಞಾನಪಂಡಿತರ		ಭೂಧಾನ	ದೊಡ್ಡ ಅಬ್ಬಿಗೆರೆ	ಇತಿಹಾಸ ದರ್ಶನ ಸಂ. ೧೭
೮	೧೧೨೫	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲ ಪಾಚಿಡ್ಯದೇವ	ಇರುಗಮಯ್ಯ				ಭೂಮಿ	ಚನ್ನಗಿರಿ	ಇ.ಸಿ.–೭ ೬೧ನೇ ಶಾಸನ
೯	೧೧೪೨	ಕಲ್ಯಾಣದ ಚಾಲುಕ್ಯರು	ಜಗದೇಕಮಲ್ಲ	ನಾಗಣ್ಣ				ಭೂಮಿ	ಚನ್ನಗಿರಿ	ಇ.ಸಿ.–೭ ೬೦ನೇ ಶಾಸನ

೧೦	೧೧೪೯	ಕಲ್ಯಾಣದ ಚಾಲುಕ್ಯರು	೨ನೇ ಜಗದೇಕಮಲ್ಲ	ಉಚ್ಚಂಗಿ ಪಾಂಡ್ಯರ	ವೀರಪಾಂಡ್ಯ			ಭೂದಾನ	ಅಪ್ಪನಾಹಳ್ಳಿ	ಇ.ಸಿ.–೭ ೩೯ನೇ ಶಾಸನ
೧೧	೧೧೮೦	ಹೊಯ್ಸಳರು	ವೀರಬಲ್ಲಾಳ	ಅಸಂದಿ ಗಂಗರು	ನರಸಿಂಹ ದೇವ		ಕರಿಯಗುರು	ಭೂಧಾನ	ಕಲ್ಕೆರೆ	ಇ.ಸಿ.–೭ ೭೩ನೇ ಶಾಸನ
೧೨	೧೧೯೦	ಹೊಯ್ಸಳರು	೨ನೇ ಬಲ್ಲಾಳ				ಬೊಂತೆಯ ವಾನರಾಸಿ ಗುರುಗಳು	ಅಷ್ಟಗ್ರಾಮಗಳ ದತ್ತಿ	ಸೂಳೆಕೆರೆ	ಇತಿಹಾಸ ದರ್ಶನ ಸಂ. ೧೯
೧೩	೧೧೯೮	ಹೊಯ್ಸಳರು	೨ನೇ ಬಲ್ಲಾಳ		ನಾಡಗಾವುಂಡ, ಮಾಚಗಾವುಂಡ ಸಾಮಂತಬಲ್ಲಾಳ		ಹೆಗ್ಗುಂದಲಯ ಬಲ್ಲೇಶ್ವರ	ಭೂಧಾನ	ಬಸಪುರ	ಇತಿಹಾಸ ದರ್ಶನ ಸಂ. ೧೯
೧೪	೧೨೧೪	ಹೊಯ್ಸಳ	ಏರೆಯಂಗ				ಸಕಲಚಾರ್ಯ	ಛತ್ರನಿರ್ವಹಣೆ	ಅಲಕನಾಳು	ಇ.ಸಿ.–೭ ೬೪ನೇ ಶಾಸನ
೧೫	೧೨೨೦	ಹೊಯ್ಸಳ	ವೀರಬಲ್ಲಾಳ				ಕಲ್ಲೇಶ್ವರ ದೇವಾಲಯ	ಭೂಧಾನ	ಕಾರಿಗನೂರು	ಇ.ಸಿ.–೭ ೬ನೇ ಶಾಸನ
೧೬	೧೨೨೧	ಹೊಯ್ಸಳರು	೨ನೇ ಬಲ್ಲಾಳ	ಅಸಂದಿಗಂಗರು	ವೈಜರಸ ದೇವ	ಕನುಹಗೌಡ	ಸೋಮೇಶ್ವರ ಗುರುಗಳ ಪಾದಗಳನ್ನ ತೊಳೆದು ದೇವಾಲಯಕ್ಕೆ	ಭೂದಾನ	ಕಲ್ಕೆರೆ	ಇ.ಸಿ.–೭ ೭೩ನೇ ಶಾಸನ
೧೭	೧೨೩೩	ಹೊಯ್ಸಳರು	ವೀರನರಸಿಂಹದೇವ				ವಮಋಷಿ ಪಂಡಿತರು	ಬ್ರಹ್ಮೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ	ನಲ್ಲುದರೆ	ಇ.ಸಿ.–೭ ೫೨ನೇ ಶಾಸನ
೧೮	೧೨೬೫	ಸೇವುಣರು	ಮಹಾರಾಜ ಮಹದೇವ				ಶೈವ ದೇವಾಲಯ	ಭೂದಾನ	ಕತ್ತಲಗೆರೆ	ಇ.ಸಿ.–೭ ೪ನೇ ಶಾಸನ

೧೯	೧೨೬೮	ಸೇವುಣರು	ಸಿಂಗಣ				ಶಂಭುದೇವಗೆ(ಈಶ್ವರ ದೇವಾಲಯಕ್ಕೆ)	ಭೂಧಾನ	ಹಿರೇಕೋಗಿಲೂರು	ಇ.ಸಿ.–೭ ೨೧ನೇ ಶಾಸನ
೨೦	೧೨೭೭	ಸೇವುಣರು	ರಾಮಚಂದ್ರ				ರಾಜಗುರು ರೇಣುಕಾಚಾರ್ಯ ಹರಿಹರ ದೇವಾಲಯಕ್ಕೆ	ಭೂದಾನ	ಹಳೇಕತ್ತಲಗೆರೆ	ಇ.ಸಿ.–೭ ೨ನೇ ಶಾಸನ
೨೧	೧೩ನೇ ಶತಮಾನ	ಹೊಯ್ಸಳರು	೨ನೇ ನರಸಿಂಹ			ತಣಿಗೆರೆಗೌಡ ದೇವಾಲಯಕ್ಕೆ		ಭೂದಾನ	ತಣಿಗೆರೆ	ಇ.ಸಿ.–೭ ೧೬ನೇ ಶಾಸನ
೨೨	೧೪೦೪	ವಿಜಯನಗರ	೨ನೇ ಹರಿಹರ	ಸಂತೆಬೆನ್ನೂರು ನಾಯಕರು (ದುಮ್ಮಿ ಪಾಳೆಗಾರರು)	ಶ್ರೀ ರಂಗನಾಥ ನಾಯಕ		ವೀರಭದ್ರ ದೇವಾಲಯ	ಭೂದಾನ	ನಿತಿಗೆರೆ	ಇ.ಸಿ.–೭ ೨೮ನೇ ಶಾಸನ
೨೩	೧೪೩೨	ವಿಜಯನಗರ	೨ನೇ ದೇವರಾಯ	ಹೆಗ್ಗಡೆ ಒಬಳನಾಯಕ			ಹನುಮಂತ ದೇವಾಲಯ	ಭೂದಾನ	ಕಲ್ಕೆರೆ	ಇ.ಸಿ.–೭ ೭೩ನೇ ಶಾಸನ
೨೪	೧೬ನೇ ಶತಮಾನ	ಸಂತೆಬೆನ್ನೂರು ನಾಯಕರು	ನಿಚುದಗುಡಿ ಹನುಮಪ್ಪ ನಾಯಕ	ತಣಿಗೆರೆ ನಾಯಕರು			ಕೊಗುಂಡೆ ಬಸವ ದೇವರಿಗೆ	ಭೂದಾನ	ತಣಿಗೆರೆ	ಇ.ಸಿ.–೭ ೧೪ನೇ ಶಾಸನ
೨೫	೧೬೧೦	ಸಂತೆಬೆನ್ನೂರು ನಾಯಕರು	ಹನುಮಪ್ಪ ನಾಯಕ				ಸಿದ್ಧಲಿಂಗಮಠ	ಭೂದಾನ	ಹಿರೇಕೋಗಿಲೂರು	ಇ.ಸಿ.–೭ ೨೫ನೇ ಶಾಸನ
೨೬	೧೬೧೫	ಸಂತೆಬೆನ್ನೂರು ನಾಯಕರು	ಹನುಮಪ್ಪ ನಾಯಕ					ಗೋವು ಬಂಗಾರ ಭೂಮಿ	ಹಿರೇಮಾಡಳು	ಇ.ಸಿ.–೭ ೪೭ನೇ ಶಾಸನ
೨೭	೧೬೧೬	ಸಂತೆಬೆನ್ನೂರು ನಾಯಕರು	ಹನುಮಪ್ಪ ನಾಯಕ					ಗೋವು ಬಂಗಾರ ಭೂಮಿ	ಹಿರೇಮಾಡಳು	ಇ.ಸಿ.–೭ ೪೮ನೇ ಶಾಸನ

೨೮	೧೬೧೬	ಸಂತೆಬೆನ್ನೂರು ನಾಯಕರು	ಹನುಮಪ್ಪ ನಾಯಕ					ಗೋವು ಬಂಗಾರ ಭೂಮಿ	ಹಿರೇಮಾಡಳ	ಇ.ಸಿ.–೭ ೪೯ನೇ ಶಾಸನ
೨೯	೧೬೮೯	ಚಿತ್ರದುರ್ಗದ ಪಾಳೇಗಾರರು	ಕರಿಯಪ್ಪ ನಾಯಕ	ಬೊಮ್ಮನಾಯಕ				ಗ್ರಾಮದಾನ	ಮೊರಡಿ	ಇ.ಸಿ.–೭ ೩೦ನೇ ಶಾಸನ
೩೦	೧೭ನೇ ಶತಮಾನ					ನರಿಗೌಡ	ಶಿವದೇವಾಲಯದ ಪೂಜೆಗೆ	ಭೂದಾನ	ಮಂಗೇನಹಳ್ಳಿ	ಎಂ.ಎ.ಆರ್. ೧೯೩೫
೩೧	೧೮ನೇ ಶತಮಾನ						ಮಠ	ಭೂದಾನ	ಹಿರೇಕೋಗಲೂರು	ಎಂ.ಎ.ಆರ್. ೧೯೩೫

ಶಾಸನ ಸಹಿತ ವೀರಗಲ್ಲುಗಳು

ಕ್ರಸಂ.	ಕಾಲ	ಸಂತತಿ	ರಾಜ	ಸಾಮಂತ	ಸಾಮಾನ್ಯ	ವಿರುದ್ಧ	ಶಾಸನದ ಸ್ಥಳ	ಪ್ರಕಟಣೆ
೧.	೧೦೫೦	ನೊಳಂಬ	ನನ್ನಿನೊಳಂಬ ಪಲ್ಲವ ಪೆರಮಾಡಿ			ಬೊಮ್ಮಕನಹಳ್ಳಿ	ತ್ಯಾವಣಿಗೆ	ಇ.ಸಿ.–೭ ೮ನೇ ಶಾಸನ
೨.	೧೦೫೦	ನೊಳಂಬ	–	ನೆನಿಗೆಯಮಲ್ಲ		ಚೋಳರ	ತ್ಯಾವಣಿಗೆ	ಇ.ಸಿ.–೭ ನೇ ಶಾಸನ
೩.	೧೧೦೦	ಹೊಯ್ಸಳ	ವೀರಬಲ್ಲಾಳ		ನಾಗೇನಾಯಕ	ಗಂಗನ ವಿರುದ್ಧ	ಬೆಂಕಿಕೆರೆ	ಇ.ಸಿ.–೭ ೬೫ನೇ ಶಾಸನ
೪.	೧೨೦೦	ಹೊಯ್ಸಳರು	ವೀರನರಸಿಂಹದೇವ	ಮಾದಿಗೌಡ		ಬೇಡರ	ಬಲ್ಲಿಹಳ್ಳಿ	ಇ.ಸಿ.–೭ ೩೭ನೇ ಶಾಸನ
೫.	೧೨೪೨	ಸೇವುಣರು	೨ನೇ ಸಿಂಗಣ		ಬೊಮ್ಮನಾಯಕ	ದುಗಿಸೆತ್ತಿ		ಇ.ಸಿ.೭, ೫೪ನೇ ಶಾಸನ
೬.	೧೧೭೦	ಹೊಯ್ಸಳರು	ವೀರರಾಮದೇವ			ಮುಮ್ಮಡಿ ಸಿಂಗೇನಾಯಕ	ಬಿಲ್ಲಹಳ್ಳಿ	ಇ.ಸಿ.–೭ ೩೬ನೇ ಶಾಸನ
೭.	೧೨೮೦	ಯಾದವರು	ವೀರರಾಮದೇವ		ವೀರಚೌಡರು	ನಾಗವಿ ಕಳಸಪುರ	ಹಿರೇ ಕೋಗಿಲೂರು	ಇ.ಸಿ.–೭ ೨೪ನೇ ಶಾಸನ
೮.	೧೨೮೨	ಯಾದವರು	ವೀರರಾಮದೇವ		ಗೋಪರಸ		ಹಿರೇಕೋಗಿಲೂರು	ಇ.ಸಿ.–೭ ೨೩ನೇ ಶಾಸನ

೯.	೧೩ನೇ ಶತಮಾನ	ಯಾದವರು	ಮಾರಪ್ಪ ಉನ್ನತ ದರ್ಜೆ ಸಾಮಂತ				ಸಂತೆ ಬೆನ್ನೂರು	ಎಂ.ಎ.ಆರ್. ೩೭ನೇ ಶಾಸನ, ೧೯೩೫
೧೦.	೧೪ನೇ ಶತಮಾನ	ಯಾದವರು	ವೀರರಾಮದೇವ		ವಂದೇರಸ	ಮುಮ್ಮಡಿ ಸಿಂಗೇನಾಯಕ	ಹಿರೇ ಕೋಗಿಲೂರು	ಎಂ.ಎ.ಆರ್. ೩೯ನೇ ಶಾಸನ, ೧೯೩೫
೧೧.					ಸಂಕಣ್ಣ ಮತ್ತು ಬೊಮ್ಮನಾಯಕ	ಮಾರ್ತಂಡ ನಾಯಕ	ಹಿರೇಮಳಲಿ	ಇ.ಸಿ.–೭ ೫೭ನೇ ಶಾಸನ
೧೨.					ಕ್ಷಯದೇವ	ಅನಗವಾಡಿ	ಚನ್ನಗಿರಿ	ಇ.ಸಿ.–೭ ೫೯ನೇ ಶಾಸನ

ತುಱುಗೋಳ್ ಶಾಸನಗಳು

ಕ್ರಸಂ.	ಕಾಲ	ಸಂತತಿ	ರಾಜ	ಸಾಮಂತ	ಸಾಮಾನ್ಯ	ವಿರುದ್ಧ ಹೋರಾಟ	ಯುದ್ಧಕ್ಕೆ ಕಾರಣ	ಪ್ರಕಟಣೆ ಮತ್ತು ಸ್ಥಳ
೧.	೧೨೨೫	ಹೊಯ್ಸಳ	ನರಸಿಂಹದೇವ	–	ಹದಲಕೆರೆಹರಿಯ ಊರ ಒಡೆಯ	ಬಡಗಿ ಮಾಕೋಜ	ಕಾಲುವೆಗೆ ಗೌಡಿಹಳ್ಳಿಯ ಗೋವುಗಳು ಬಂದಿದ್ದಾಗ	ಇ.ಸಿ.–೭೪೦, ಕಾಶೀಪುರ
೨.	೧೨೨೯	ಹೊಯ್ಸಳ	ನರಸಿಂಹದೇವ	–		–	ಗೋವುಗಳಿಗಾಗಿ	ಇ.ಸಿ.–೪೫, ಸೂಸಲಗೆರೆ (ಅಸ್ತಪನಹಳ್ಳಿ
೩.	೧೨೭೭	ಸೇವುಣ	ರಾಮಚಂದ್ರ ದೇವ	–	ನಾಗನಾಯಕ	–	ತುರುಕಾಳಗದಲ್ಲಿ ಸಾವನ್ನಪ್ಪುತ್ತಾನೆ	ಇ.ಸಿ.–೭೫೪, ನಲ್ಕುದರೆ
೪.	೧೨೭೯	ಸೇವುಣ	ರಾಮಚಂದ್ರ ದೇವ	–	ಮಾರೆನಾಯಕ	–	ತುರುಕಾಳಗದಲ್ಲಿ ಸಾವನ್ನಪ್ಪಿಸಿದ್ದರಿಂದ	ಇ.ಸಿ.–೭೫೫, ನಲ್ಕುದರೆ


ಇತರೆ ಶಾಸನಗಳು

ಕ್ರಸಂ.	ಕಾಲ	ಸಚಿತತಿ	ರಾಜ	ಸಾಮಂತ	ಸಾಧನೆ	ಸ್ಥಳ	ಪ್ರಕಟಣೆ
೧	೯೯೨	ಕಲ್ಯಾಣದ ಚಾಲುಕ್ಯರು	೨ನೇ ತೈಲಪ		ಚಾಲುಕ್ಯ ವಂಶದ ಉಗಮದ ಬಗ್ಗೆ ವಿವರಿಸಿದೆ	ತ್ಯಾವಣಗೆ	ಇ.ಸಿ.–೭ ೭ನೇ ಶಾಸನ
೨	೧೦೮೦	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲ		ಸಾಮ್ರಾಜ್ಯದ ವಿಸ್ತರಣೆ ಕೊನಿಂಗಿಲ ಕೋಟೆ	ಶಿದ್ಧರಮಠ	ಇ.ಸಿ.–೭ ೧೯ನೇ ಶಾಸನ
೩	೧೦೮೩	ಕಲ್ಯಾಣದ ಚಾಲುಕ್ಯರು	ತ್ರಿಭುವನಮಲ್ಲ		ತ್ರಿಭುವನಮಲ್ಲನ ದಿಗ್ವಿಜಯಗಳು	ಹಿರೇಉಡ	ಇ.ಸಿ.–೭ ೩೩ನೇ ಶಾಸನ
೪	೧೧೨೦	ಉಚ್ಚಂಗಿ ಪಾಂಡ್ಯರು	ಕಾಮದೇವ			ಹಳೇಕತ್ತಲಗೆರೆ	ಇ.ಸಿ.–೭ ೪ನೇ ಶಾಸನ
೫	೧೫೪೫	ವಿಜಯನಗರ	ಸದಾಶಿವ			ತಾವರಕೆರೆ	ಇ.ಸಿ.–೭ ೭೫ನೇ ಶಾಸನ
೬	೧೫೬೨	ವಿಜಯನಗರ ಸಾಮ್ರಾಜ್ಯ	ಸದಾಶಿವ	ಸಂತೆಬೆನ್ನೂರು ನಾಯಕರ ಪಿಲಪ್ಪ ನಾಯಕ	ಚಿಕ್ಕಗಂಗೂರಿನ ವೃತ್ತರು ಗೌಡಿಗೆಯನ್ನ ಗೌಡ್ಯನ ಮಗನಿಗೆ ನೀಡುವ್ವದು	ಚಿಕ್ಕಗಂಗೂರು	ಇ.ಸಿ.–೭ ೬೯ನೇ ಶಾಸನ
೭	೧೬೫೩	ಬಿಜಾಪುರದ ಸುಲ್ತಾನರು	ಇಬ್ರಾಹಿಂ ಆದಿಲಶಾಹ್	ಬಾರ್ಕಿ ಮಾಲಿಕ್ (ಮಂತ್ರಿ)	ಶೇಖ್ ಅಲಿ ಹವಾಲ್ದಾರ ಕೆರೆಯನ್ನ ಕಟ್ಟಿಸಿದ	ಹೊಸಹಳ್ಳಿ	ಇ.ಸಿ.–೭ ೪೨ನೇ ಶಾಸನ
೮	೧೬೫೩	ಬಿಜಾಪುರದ ಸುಲ್ತಾನರು	ಇಬ್ರಾಹಿಂ ಆದಿಲಶಾಹ್	ಬಾರ್ಕಿ ಮಾಲಿಕ್ (ಮಂತ್ರಿ)	ಶೇಖ್‌ಮಲಿಕನ್ ಹವಾಲ್ದಾರ ಕೆರೆಯನ್ನು ಕಟ್ಟಿಸಿದ	ಹೊಸಹಳ್ಳಿ	ಇ.ಸಿ.–೭ ೪೩ನೇ ಶಾಸನ
೯		ಸಂತೆಬೆನ್ನೂರು ನಾಯಕರು	ಸೀತರಾಮಪ್ಪ ನಾಯಕ			ಲಕ್ಷ್ಮಿ ಸಾಗರ	ಇ.ಸಿ.–೭ ೭೦ನೇ ಶಾಸನ

ಕ್ರ.ಸಂ.	ಸ್ಥಳ	ವಿಷಯ	ಪ್ರಕಟಣೆ
೧೦	ಮಸಳಿಕೆರೆ	ಬಡಿಗೆ ಮಾಡಿದ ಕಾರ್ಯಕ್ಕೆ ದಾನ ಪಡೆಯುತ್ತಾನೆ	ಇ.ಸಿ.–೭, ೭೯ನೇ ಶಾಸನ
೧೧	ಸಂತೆಬೆನ್ನೂರು	ಸಿರಿ ನಾಯಕರು ಮಠಕ್ಕೆ ಭೂಮಿಯನ್ನು ದಾನ ನೀಡುತ್ತಾರೆ.	ಇ.ಸಿ.–೭, ೧೧ನೇ ಶಾಸನ
೧೨	ಸಂತೆಬೆನ್ನೂರು	ಸಪೇಕಾರ ಸಟವಾದಿ ನಾವಿಹ ವಿಸಾಕರ	ಇ.ಸಿ.–೭, ೧೨ನೇ ಶಾಸನ
೧೩	ತಣಿಗೆರೆ	ವಡ್ಡನ ಹಾಲ್ಯೆಯಾನವರಿಗೆ ಮಠವನ್ನು ನೀಡಿದ ಬಗ್ಗೆ ತಿಳಿಸಿದೆ.	ಇ.ಸಿ.–೭, ೧೫ನೇ ಶಾಸನ
೧೪	ಗೊಲ್ಲರಹಳ್ಳಿ	ತಿರುಮಲವಂಜ ಮೂಲಿ ಕೃಷ್ಣಾಮಚಾರ್ಯದು ಗೊಲ್ಲರಹಳ್ಳಿ	ಇ.ಸಿ.–೭, ೩೧ನೇ ಶಾಸನ
೧೫	ಹಿರೇಮಾಡಳ	ಚನ್ನಪ್ಪಗೌಡನ ಮನವಿ ಮೆರೆಗೆ ಮಠಕ್ಕೆ ಕಲ್ಲುಹಾಕಿದ ಬಗ್ಗೆ ತಿಳಿಸುತ್ತದೆ.(ಸ್ಥಾಪನೆ)	ಇ.ಸಿ.–೭, ೫೦ನೇ ಶಾಸನ
೧೬	ಇಟಗಿ	ಶುಯಿಟಗೆಯ ತೋಜನ ಮಕ್ಕಳು ಸೋವರ ಸಾವಿಗ ಮಹಾನೋಡನೆ ಹೋರಾಡಿ ಸಾವನ್ನಪ್ಪಿದ ಎಂಬುದು ಉಲ್ಲೇಖಿಸಿದೆ.	ಇ.ಸಿ.–೭, ೫೬ನೇ ಶಾಸನ
೧೭	ಅಣ್ಣಾಪುರ	ಮಹಾಂತ ಮಠದ ಭಕ್ತನು ಅಣ್ಣಾಪುರದ ಒಡೆಯನಾಗುತ್ತಾನೆ	ಇ.ಸಿ.–೭, ೬೩ನೇ ಶಾಸನ
೧೮	ದೊಣ್ಣೇಹಳ್ಳಿ	ಉಡನ ಮಗನಿಗೆ ಚಂದ್ರಯ್ಯನ ಭೂದಾನ ನೀಡಿದ ಬಗ್ಗೆ ತಿಳಿಸಿದೆ.	ಇ.ಸಿ.–೭, ೬೮ನೇ ಶಾಸನ
೧೯	ಬಸವಪಟ್ಟಣ	ನರಸಪ್ಪ ದೇವಾಲಯಕ್ಕೆ ನಿತ್ಯ ಸೇವೆಯನ್ನು ಮಾಡುತ್ತಿದ್ದ ಎಂದು ದಾಖಲಿಸಿದೆ	ಎಂ.ಎ.ಆರ್. ೧೯೩೫, ೪೧ನೇ ಶಾಸನ
೨೦	ಬಸವ ಪಟ್ಟಣ	ಮೈಸೂರು ವೆಂಕಟಭಟ್ಟರ ಪ್ರತಿಷ್ಠೆ	ಎಂ.ಎ.ಆರ್. ೧೯೩೫ ೪೨ನೇ ಶಾಸನ
೨೧.	ನಲ್ಲುದುರೆ	ವಿರಕ್ತಮಠ (ವಿರಧಮಠ)	ಎಂ.ಎ.ಆರ್. ೧೯೩೫ ೪೫ನೇ ಶಾಸನ
೨೨	ನಲ್ಲುದುರೆ ಬ್ರಹ್ಮೇಶ್ವರ ದೇವಾಲಯದ ಲಾಲಟದಲ್ಲಿ	ಲೋಕಕೆರೆಯ ದಾರಿಯಿಂದ ಮೂಡಮಕ್ಕೆ ಕಂಬ ೨೦	ಎಂ.ಎ.ಆರ್. ೧೯೩೫ ೧೪ನೇ ಶಾಸನ

ಕ್ರಸಂ.	ಶಾಸನಗಳ ವೈವಿಧ್ಯತೆ	ಸಂಖ್ಯೆ
1	ಅಡಳಿತ ದಾನಶಾಸನಗಳು	5
2	ಸಾಮಾಜಿಕ ದಾನಶಾಸನಗಳು	11
3	ಧಾರ್ಮಿಕ ದಾನಶಾಸನಗಳು	31
4	ಶಾಸನ ಸಹಿತ ವೀರಗಲ್ಲುಗಳು	10
5	ತುಳುಗೋಳ್ ಶಾಸನಗಳು	4
6	ಇತರೆ ಶಾಸನಗಳು	18
7	ನಶಿಸಿಹೋಗಿರುವ ಶಾಸನಗಳು	21
8	ಅಪ್ರಕಟಿತ	3
	ಒಟ್ಟು ಶಾಸನಗಳು	**103**

ಲಂಬಚಿತ್ರ 1. ಶಾಸನಗಳ ವೈವಿಧ್ಯತೆ





ಶಾಸನ ರಹಿತ ವೀರಗಲ್ಲುಗಳು

ಕ್ರ.ಸಂ.	ಕಾಲಮಾನ	ಗ್ರಾಮ	ಸ್ಥಳ	ರಾಜಸಂತತಿ	ಬಳಸಿದ ಶಿಲೆ	ಪ್ರಕಟಣೆ
೧	೧೧ನೇ ಶತಮಾನ	ಕಲ್ಯಾಣದ ಚಾಲುಕ್ಯ	ಕೆರೆಯ ಏರಿಯಮೇಲೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೨	೧೨ನೇ ಶತಮಾನ	ಬೋಮ್ಮನಹಳ್ಳಿ	ಹನುಮಂತ ದೇವಾಲಯ ಆವರಣ	ಕಲ್ಯಾಣದ ಚಾಲುಕ್ಯರು	ಕಪ್ಪು	ಪ್ರಕಟಿತ
೩	೧೨ನೇ ಶತಮಾನ	ತ್ಯಾವಣಿಗೆ	ಊರಿನ ಮಧ್ಯದ ಹನುಮಂತ ದೇವಾಲಯದ ಪಕ್ಕದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೪	೧೨ನೇ ಶತಮಾನ	ಹೆಬ್ಬಳಗೆರೆ	ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೫	೧೨ನೇ ಶತಮಾನ	ತಾವರಕೆರೆ	ಕಲ್ಲೇಶ್ವರ ದೇವಾಲಯದ ಆವರಣದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೬	೧೨ನೇ ಶತಮಾನ	ಉಬ್ರಾಣಿ	ಊರಿನ ಮಧ್ಯದಲ್ಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಪ್ರಕಟಿತ
೭	೧೨ನೇ ಶತಮಾನ	ಚನ್ನಗಿರಿ	ಕಲ್ಲೇಶ್ವರ ದೇವಾಲಯದ ಆವರಣದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೮	೧೨ನೇ ಶತಮಾನ	ಚನ್ನಗಿರಿ	ಕಲ್ಲುಮಠದ ಕಲ್ಲೇಶ್ವರ ದೇವಾಲಯದ ಆವರಣದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೯	೧೨ನೇ ಶತಮಾನ	ಹಿರೇಮಳಲಿ	ಈಶ್ವರ ದೇವಾಲಯದ ಆವರಣದಲ್ಲಿದೆ.	ಸೇವುಣರು	ಕಪ್ಪು	ಅಪ್ರಕಟಿತ
೧೦	೧೨ನೇ ಶತಮಾನ	ಕತ್ತಲಗೆರೆ	ಈಶ್ವರ ದೇವಾಲಯದ ಆವರಣ	ಹೊಯ್ಸಳ	ಬಳಪ	ಅಪ್ರಕಟಿತ
೧೧	೧೨ನೇ ಶತಮಾನ	ಕಂಸಾಗರ	ಬರಮಪ್ಪನ ದೇವಾಲಯದ ಆವರಣ	ಕಲ್ಯಾಣದ	ಕಪ್ಪು	ಅಪ್ರಕಟಿತ
೧೨	೧೨ನೇ ಶತಮಾನ	ದಾಗಿನಕಟ್ಟೆ	ಪ್ರಾಥಮಿಕಶಾಲೆಯ ಆವರಣ	ಹೊಯ್ಸಳ	ಬಳಪ	ಅಪ್ರಕಟಿತ
೧೩	೧೨ನೇ ಶತಮಾನ	ಗುಡ್ಡದ ಬೆನಕನಹಳ್ಳಿ	ಬೆಟ್ಟದ ಮೇಲೆ	ಹೊಯ್ಸಳ	ಬಳಪ	ಅಪ್ರಕಟಿತ
೧೪	೧೨ನೇ ಶತಮಾನ	ಮಾವಿನಕಟ್ಟೆ	ಅರಣ್ಯದ ಮಧ್ಯಭಾಗದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೧೫	೧೨ನೇ ಶತಮಾನ	ಗೋಪಿನಹಳ್ಳಿ	ಗ್ರಾಮದ ದ್ವಾರದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೧೬	೧೨ನೇ ಶತಮಾನ	ಬೆಟ್ಟದ ಕಡೂರು	ಗ್ರಾಮದ ಕೊನೆಯ ಭಾಗದ ಹೊಲ	ಹೊಯ್ಸಳ	ಬಳಪ	ಅಪ್ರಕಟಿತ

೧೭	೧೨ನೇ ಶತಮಾನ	ಬೆಟ್ಟದ ಕಡೂರು	ಹುಣಸೆಮರದ ಕೆಳಗೆ	ಹೊಯ್ಸಳ	ಬಳಪ	ಅಪ್ರಕಟಿತ
೧೮	೧೨ನೇ ಶತಮಾನ	ಕೊರಟಗೆರೆ	ಗ್ರಾಮದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೧೯	೧೨ನೇ ಶತಮಾನ	ನುಗ್ಗೇನಹಳ್ಳಿ	ಗ್ರಾಮದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೨೦	೧೨ನೇ ಶತಮಾನ	ನುಗ್ಗೇನಹಳ್ಳಿ	ಗ್ರಾಮದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೨೧	೧೨ನೇ ಶತಮಾನ	ದೊಂಡರಗಟ್ಟ	ಗ್ರಾಮದ ಹೊರಭಾಗದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೨೨	೧೨ನೇ ಶತಮಾನ	ಚಿಕ್ಕಗಂಗೂರು	ಗ್ರಾಮದ ಹೊರಭಾಗದಲ್ಲಿ	ಹೊಯ್ಸಳ	ಬಳಪ	ಅಪ್ರಕಟಿತ
೨೩	೧೫ನೇ ಶತಮಾನ	ಹಿರೇಕೋಗಿಲೂರು	ಸರ್ಕಾರಿ ಆಸ್ಪತ್ರೆ ಮುಂದಿನ ಕಣದಲ್ಲಿದೆ.	ವಿಜಯನಗರ	ಕಣಶಿಲೆ	ಅಪ್ರಕಟಿತ
೨೪	೧೫ನೇ ಶತಮಾನ	ಹಿರೇಕೋಗಿಲೂರು	ಒಂದನೇ ವೀರಗಲ್ಲು ಶಾಸನ ಶಿಲ್ಪದ ಪಕ್ಕದಲ್ಲಿದೆ	ವಿಜಯನಗರ	ಕಣಶಿಲೆ	ಅಪ್ರಕಟಿತ
೨೫	೧೬ನೇ ಶತಮಾನ	ಮಲಹಾಳು	ವೀರಭದ್ರ ದೇವಾಲಯ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಪ್ಪು ಕಣಶಿಲೆ	ಅಪ್ರಕಟಿತ
೨೬	೧೬ನೇ ಶತಮಾನ	ಮಲಹಾಳು	ಆಂಜನೇಯ ದೇವಾಲಯದ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಪ್ಪು ಕಣಶಿಲೆ	ಅಪ್ರಕಟಿತ
೨೭	೧೬ನೇ ಶತಮಾನ	ದಾಗಿನಕಟ್ಟೆ	ಸರ್ಕಾರಿ ಪ್ರಾಥಮಿಕ ಶಾಲೆಯ ಸಮೀಪದ ಗದ್ದೆಯಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಣಶಿಲೆ	ಪ್ರಕಟಿತ
೨೮	೧೬ನೇ ಶತಮಾನ	ಲಕ್ಷ್ಮಿಸಾಗರ	ಆಂಜನೇಯ ದೇವಾಲಯದ ಆವರಣದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಣಶಿಲೆ	ಪ್ರಕಟಿತ
೨೯	೧೬ನೇ ಶತಮಾನ	ಶಿದ್ಧರಮಟ	ಈಶ್ವರ ದೇವಾಲಯದ ಆವರಣದ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಣಶಿಲೆ	ಅಪ್ರಕಟಿತ


ಮಹಾಸತಿಗಲ್ಲುಗಳು

ಕ್ರಸಂ.	ಮಹಾಸತಿಗಲ್ಲು ಶಾಸನ ಶಿಲ್ಪಗಳ ವಿಧ	ಕಾಲಮಾನ	ಗ್ರಾಮ	ಸ್ಥಳ	ರಾಜಸಂತತಿ	ಬಳಸಿದ ಶಿಲೆ	ಪ್ರಕಟಣೆ
೧	ಸಹಗಮನ ಮಾಸ್ತಿಶಿಲ್ಪ	೧೧ ನೇ ಶತಮಾನ	ಗುಡ್ಡದ ಬೆನಕನಹಳ್ಳಿ	ಬೆಟ್ಟದ ಮೇಲಿನ ಹೊಲ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೨	ಸಹಗಮನ ಮಾಸ್ತಿಶಿಲ್ಪ	೧೧ ನೇ ಶತಮಾನ	ದಾಗಿನಕಟ್ಟೆ	ಶಾಲೆಯ ಪಕ್ಕದಲ್ಲಿ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೩	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ತ್ಯಾವಣಗೆ	ಹನುಮಂತ ದೇವಾಲಯ ಆವರಣದ ಹುಣಸೆ ಮರದ ಪಕ್ಕದಲ್ಲಿದೆ.	ಹೊಯ್ಸಳರು	ಬಳಪ	ಅಪ್ರಕಟಿತ
೪	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ತ್ಯಾವಣಗೆ	ಒಂದನೇ ವೀರಗಲ್ಲು ಶಾಸನ ಶಿಲ್ಪದ ಪಕ್ಕದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೫	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ದಾಗಿನಕಟ್ಟೆ	ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೬	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಹಿರೇಕೋಗಲೂರು	ಶ್ರೂಶಕಿಯರ ಕ್ವಾಟರ್ಸ್ ಆವರಣದಲ್ಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೭	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಹೆಬ್ಬಳಗೆರೆ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿದೆ	ಹೊಯ್ಸಳರು	ಬಳಪ	ಅಪ್ರಕಟಿತ
೮	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಬೋಮ್ಮನಹಳಿ	ಇತ್ತೀಚಿನ ಹನುಮಂತ ದೇವಾಲಯದ ಆವರಣದಲ್ಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಪ್ರಕಟಿತ
೯	ಸಹಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಮೆದಕೆರೆ	ಊರಿನ ಮಧ್ಯದ ರಸ್ತೆಯಲ್ಲಿದೆ.	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೧೦	ಸಹಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಉಪ್ಪನಾಯಕನಹಳ್ಳಿ	ಇತ್ತೀಚಿನ ಕರಿಯಮ್ಮ ದೇವಾಲಯದ ಆವರಣದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಬಿಳಿ ಕಣಶಿಲೆ	ಪ್ರಕಟಿತ
೧೧	ಸಹಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಮಲಹಾಳು	ವೀರಭದ್ರ ದೇವಾಲಯದ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಪ್ಪು ಕಣಶಿಲೆ	ಅಪ್ರಕಟಿತ
೧೨	ಸಹಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಚಿಕ್ಕಗಂಗೂರು	ಊರಿನ ಮಧ್ಯದ ರಸ್ತೆಯಲ್ಲಿದೆ.	ಸಂತೆಬೆನ್ನೂರಿನ ನಾಯಕರು	ಕಣಶಿಲೆ	ಅಪ್ರಕಟಿತ
೧೩	ಸಹಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಸೂಳೆಕೆರೆ	ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಣಶಿಲೆ	ಪ್ರಕಟಿತ
೧೪	ಅನುಗಮನ ಮಾಸ್ತಿಶಿಲ್ಪ	೧೧ನೇ ಶತಮಾನ	ಕತ್ತಲಗೆರೆ	ಈಶ್ವರ ದೇವಾಲಯದ ಆವರಣ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೧೫	ಅನುಗಮನ ಮಾಸ್ತಿಶಿಲ್ಪ	೧೧ನೇ ಶತಮಾನ	ದೋಣಿಹಳ್ಳಿ	ಪಟೇಲರ ಹೊಲದಲ್ಲಿ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ

೧೬	ಅನುಗಮನ ಮಾಸ್ತಿಶಿಲ್ಪ	೧೧ನೇ ಶತಮಾನ	ಮುದಿಗೆರೆ	ಕೆರೆಯ ಏರಿಯ ಮೇಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೧೭	ಅನುಗಮನ ಮಾಸ್ತಿಶಿಲ್ಪ	೧೧ನೇ ಶತಮಾನ	ಹಿರೇಉಡ	ಕೊಂಡದಳ್ಳಿ ರಸ್ತೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೧೮	ಅನುಗಮನ ಮಾಸ್ತಿಶಿಲ್ಪ	೧೧ನೇ ಶತಮಾನ	ನುಗ್ಗೇನಹಳ್ಳಿ	ಗ್ರಾಮದಲ್ಲಿ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೧೯	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಹಿರೇಕೋಗಲೂರು	ಕೆರೆಯ ಏರಿಯ ಮೇಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಪ್ರಕಟಿತ
೨೦	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಚಿರಡೋಣಿ	ಊರಿನ ಉತ್ತರ ದಿಕ್ಕಿನಲ್ಲಿರುವ ಗದ್ದೆಯಲ್ಲಿ ಲಭ್ಯವಾತದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಪ್ರಕಟಿತ
೨೧	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಕತ್ತಲಗೆರೆ	ಕತ್ತಲಗೆರೆ ಮತ್ತು ಚಿರದೋಣಿ ರಸ್ತೆಯ ಮಧ್ಯೆದಲ್ಲಿದೆ	ಹೊಯ್ಸಳರು	ಬಳಪ	ಪ್ರಕಟಿತ
೨೨	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಗುರುರಾಜಪುರ	ಊರಿನ ಹೊರಭಾಗದ ಆರಂಭದ ಸ್ಥಳದಲ್ಲಿದೆ.	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೨೩	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಕಲ್ಕೆರೆ	ಗ್ರಾಮದ ಮಧ್ಯದಲ್ಲಿದೆ	ಕಲ್ಯಾಣದ ಚಾಲುಕ್ಯರು	ಕಪ್ಪು	ಅಪ್ರಕಟಿತ
೨೪	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ನೀತಿಗೆರೆ	ಸಂತೆಬೆನ್ನೂರು ಮತ್ತು ರಾಷ್ಟ್ರೀಯ ಹೆದ್ದಾರಿ ೧೩ನ್ನ ಹಾದುಹೋಗುವ ರಸ್ತೆಯ ಪ್ರಾರಂಭಿಕ ಸ್ಥಳದಲ್ಲಿದೆ.	ಹೊಯ್ಸಳರು	ಬಳಪ	ಅಪ್ರಕಟಿತ
೨೫	ಅನುಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಮಲಹಾಳು	ವೀರಭದ್ರ ದೇವಾಲಯದ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಪ್ಪು ಕಣಶಿಲೆ	ಅಪ್ರಕಟಿತ
೨೬	ಅನುಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಮಲಹಾಳು	ವೀರಭದ್ರ ದೇವಾಲಯದ ಮುಂಭಾಗದಲ್ಲಿದೆ	ಸಂತೆಬೆನ್ನೂರಿನ ನಾಯಕರು	ಕಪ್ಪು ಕಣಶಿಲೆ	ಅಪ್ರಕಟಿತ
೨೭	ಅನುಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಉಪ್ಪನಾಯಕನಹಳ್ಳಿ	ಇತ್ತೀಚಿನ ಕರಿಯಮ್ಮ ದೇವಾಲಯದ ಆವರಣ.	ಸಂತೆಬೆನ್ನೂರಿನ ನಾಯಕರು	ಬಿಳಿ ಕಣಶಿಲೆ	ಪ್ರಕಟಿತ
೨೮	ಅನುಗಮನ ಮಾಸ್ತಿಶಿಲ್ಪ	೧೬ನೇ ಶತಮಾನ	ಉಪನಾಯಕನಹಳ್ಳಿ	ಇತ್ತೀಚಿನ ಕರಿಯಮ್ಮ ದೇವಾಲಯದ ಆವರಣದಲ್ಲಿರುವ ಎರಡನೇ ಕಲ್ಲು	ಸಂತೆಬೆನ್ನೂರಿನ ನಾಯಕರು	ಬಿಳಿಗ್ರಾನೈಟ್	ಪ್ರಕಟಿತ
೨೯	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ವಡ್ನಾಳು	ಊರಿನ ಮುಖ್ಯರಸ್ತೆಯ ಮಧ್ಯದಲ್ಲಿದೆ.	ಯಾದವರ	ಕಪ್ಪು	ಅಪ್ರಕಟಿತ
೨೩	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಬೊಮ್ಮನಹಳ್ಳಿ	ಇತ್ತೀನ ಹನುಮಂತ ದೇವಾಲಯದ ಆವರಣದಲ್ಲಿ	ಕಲ್ಯಾಣದ ಚಾಲುಕ್ಯ	ಕಪ್ಪು	ಪ್ರಕಟಿತ
೩೧	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಬೊಮ್ಮನಹಳ್ಳಿ	ಇತ್ತೀನ ಹನುಮಂತ ದೇವಾಲಯದ ಆವರಣದಲ್ಲಿ	ಕಲ್ಯಾಣದ ಚಾಲುಕ್ಯ	ಕಪ್ಪು	ಪ್ರಕಟಿತ
೩೨	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಬೊಮ್ಮನಹಳ್ಳಿ	ಇತ್ತೀನ ಹನುಮಂತ ದೇವಾಲಯದ ಆವರಣದಲ್ಲಿ	ಕಲ್ಯಾಣದ ಚಾಲುಕ್ಯ	ಕಪ್ಪು	ಪ್ರಕಟಿತ
೩೩	ಅನುಗಮನ ಮಾಸ್ತಿಶಿಲ್ಪ	೧೨ನೇ ಶತಮಾನ	ಜೋಳದಹಾಳ	ಅರಣ್ಯದ ಮಧ್ಯದಲ್ಲಿ	ಹೊಯ್ಸಳರು	ಬಳಪ	ಅಪ್ರಕಟಿತ

ಕ್ರಸಂ.	ಸ್ಮಾರಕ ಶಿಲ್ಪಗಳು	ಸಂಖ್ಯೆ
1	ಮಹಾಸತಿಗಲ್ಲುಗಳು	33
2	ಶಾಸನ ರಹಿತ ವೀರಗಲ್ಲು	29
	ಒಟ್ಟು ಸ್ಮಾರಕ ಶಿಲ್ಪಗಳು	**62**

ಲಂಬಚಿತ್ರ 2. ಸ್ಮಾರಕ ಶಿಲ್ಪಗಳ ವೈವಿಧ್ಯತೆ





ಅಧ್ಯಾಯ : ನಾಲ್ಕು

ಸ್ಮಾರಕಗಳು

೪.೧. ದೇವಾಲಯಗಳು

೪.೧.೧. ಶೈವ ದೇವಾಲಯಗಳು

೪.೧.೨. ವೈಷ್ಣವ ದೇವಾಲಯಗಳು

೪.೧.೩. ಶಾಕ್ತ ದೇವಾಲಯಗಳು

೪.೨. ಲೌಕಿಕ ಸ್ಮಾರಕಗಳು

೪.೩. ರಕ್ಷಣಾ ಸ್ಮಾರಕಗಳು

೪.೪. ಇತರೆ ಸ್ಮಾರಕಗಳು

ಅಧ್ಯಾಯ : ನಾಲ್ಕು

ಸ್ಮಾರಕಗಳು

ಐತಿಹಾಸಿಕವಾಗಿ ನಿರ್ಮಿತವಾದ ಕಟ್ಟಡ ಅವಶೇಷಗಳನ್ನೇ ಸ್ಮಾರಕಗಳೆಂದು ಕರೆಯುತ್ತಾರೆ. ಶಾಸನಗಳು, ನಾಣ್ಯಗಳು, ಉತ್ಖನನ, ಹಸ್ತಪ್ರತಿಗಳಂತೆಯೇ ಸ್ಮಾರಕಗಳು ಪುರಾತತ್ವ ಆಕರಗಳ ಒಂದು ಭಾಗವಾಗಿವೆ.[೧] ಇತಿಹಾಸವು ಕ್ರಮಬದ್ಧವಾಗಿ ಅಧ್ಯಯನವಾಗಬೇಕಾದರೆ ಸ್ಮಾರಕಗಳು ಮಹತ್ವದ ಪಾತ್ರವಹಿಸುತ್ತದೆ. ರಾಜರು, ಸಾಮಂತರು, ಸಾಮಾನ್ಯರು, ಲೌಕಿಕ ಸ್ಮಾರಕ ಮತ್ತು ಅಲೌಕಿಕ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಲೌಕಿಕ ಸ್ಮಾರಕಗಳೆಂದರೆ ಮಾನವನ ಹಿತವನ್ನು ಬಯಸುವ ಕಟ್ಟಡಗಳಾಗಿವೆ. ಅರಮನೆ, ಕೋಟೆ-ಕೊತ್ತಲ, ಕೆರೆ, ಬಾವಿ, ಹೊಂಡಗಳು, ಪುಷ್ಕರಣೆಗಳು ಲೌಕಿಕ ಸ್ಮಾರಕಕ್ಕೆ ನಿದರ್ಶನವಾಗಿವೆ. ಅಲೌಕಿಕ ಸ್ಮಾರಕಗಳೆಂದರೆ ಪಾರಮಾರ್ಥಿಕ ಕಟ್ಟಡಗಳು. ಸ್ತೂಪ, ಬಸದಿ, ಮಸೀದಿ, ಚರ್ಚ್ ದೇವಾಲಯಗಳು ಅಲೌಕಿಕ ಸ್ಮಾರಕಗಳ ಎಲ್ಲೆಯಲ್ಲಿ ಬರುತ್ತವೆ.

ಸಾಂಚಿಯ ಸ್ತೂಪ, ಭೂಮರದ ಶಿವದೇವಾಲಯ, ದೇವಘಡದ ದಶಾವತಾರ ದೇವಾಲಯ, ತಂಜಾವೂರಿನ ಬೃಹದೇಶ್ವರ, ಕಂಚಿಯ ವರದರಾಜ, ಎಲ್ಲೋರದ ಕೈಲಾಸನಾಥ ದೇವಾಲಯಗಳು, ಅಶೋಕನ ಅರಮನೆ ಅವಶೇಷ, ಸುದರ್ಶನಕೆರೆ, ಕುತುಬ್ ಮಿನಾರ್, ಅಲಯಿದರ್ವಾಜಾ, ಬುಲಂದ್ ದರ್ವಾಜಾ, ತಾಜ್‌ಮಹಲ್ ದೆಹಲಿಯ ಮೋತಿಮಸೀದಿ ಸಿರಿಕೋಟೆಗಳು ಭಾರತದ ಸ್ಮಾರಕಗಳಾಗಿವೆ.

ಹಾಗೆಯೇ ಬಾದಾಮಿಯ ಗುಹಾಂತರ ದೇವಾಲಯಗಳು, ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯ, ಐಹೊಳೆಯ ದುರ್ಗಾದೇವಾಲಯ, ತಲಕಾಡಿನ ಕೀರ್ತಿನಾರಾಯಣ ದೇವಾಲಯ, ಬೇಲೂರಿನ ಚನ್ನಕೇಶವ ದೇವಾಲಯ, ಇಟಗಿಯ ಮಲ್ಲಿಕಾರ್ಜುನ ದೇವಾಲಯ, ಹಂಪೆಯ ವಿರೂಪಾಕ್ಷ ದೇವಾಲಯ, ಹಜಾರ ರಾಮಸ್ವಾಮಿ ದೇವಾಲಯ, ವಿಜಯವಿಠಲ ದೇವಾಲಯಗಳು, ಚಂದ್ರವಳ್ಳಿಕೆರೆ, ಕಮಲಾಪುರದ ಕೆರೆ, ಚಿತ್ರದುರ್ಗದ ಕೋಟೆಯೊಳಗಿನ ಹೊಂಡಗಳು, ಸಂತೆಹೊಂಡ, ಹಂಪೆಯ ಪುಷ್ಕರಣಿ, ಕನಕಗಿರಿಯ ಪುಷ್ಕರಣಿಗಳು ಇವೆಲ್ಲವೂ ಇತಿಹಾಸ ಕಟ್ಟಲು ಸಹಾಯಕವಾಗಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿನ ದೇವಾಲಯಗಳು, ಮೂರ್ತಿಶಿಲ್ಪಗಳು, ಕೆರೆ, ಬಾವಿ, ಹೊಂಡ, ಪುಷ್ಕರಣಿ, ಕೋಟೆ-ಕೊತ್ತಲ, ಅರಮನೆ ಅವಶೇಷ ಇತರೆ ಸ್ಮಾರಕಗಳಾದ ಬಸವಪಟ್ಟಣದ ರಾಣಿಯರ ಸ್ನಾನದ ಕಲ್ಲು, ಹಿರೇಮಳಲಿಯ ಹೊಯ್ಸಳರ ಲಾಂಛನ, ಮಲಹಾಳಿನ ಕಬ್ಬಿಣದ ಭರ್ಜಿಗಳು, ಹೊದಿಗೆರೆ ಷಾಹಜಿಬೊನ್ಸ್ಲೆ ಸಮಾಧಿ ಸ್ಮಾರಕಗಳು

ಲಭ್ಯವಿದ್ದು ಇವುಗಳ ವಸ್ತು, ವಾಸ್ತು ನಿರ್ಮಿಸಲು ಕಾರಣವಾದ ಇತಿಹಾಸವನ್ನು ಅಧ್ಯಯನ ಮಾಡುವುದರ ಮೂಲಕ ಚನ್ನಗಿರಿಯ ಇತಿಹಾಸ ನಿರ್ಮಿಸುವ ಪ್ರಯತ್ನ ನಡೆಸಿದೆ.

೪.೧. ದೇವಾಲಯಗಳು

'ಪ್ರಾಸಾದಾದೀನಿ ವಾಸ್ತೂನಿ ವಸ್ತುತ್ವಾದ್ ವಸ್ತು ಸಂಶ್ರಯಾತ್' ಎಂದು ಅಮರಕೋಶದ ಸೂಚನೆಯಂತೆ ವಸ್ತುವಿನಿಂದ ರಚಿತವಾದ ವಾಸ ಮಾಡಲು ಆಧಾರವಾಗಿರುವ ವಾಸ್ತುವಿನ ಮೇಲೆ ನಿರ್ಮಿತವಾದ ಕಟ್ಟಡಗಳೇ ವಾಸ್ತು ರಚನೆ ಎಂದು ಕರೆಯುತ್ತಾರೆ. ವಾಸ್ತು ರಚನೆಯು ಮಾನವನ ಬುದ್ಧಿಯ ಬೆಳವಣಿಗೆಯಿಂದ ನಿಖರವಾಗಿ ನಿರ್ಮಿಸುವ ಸಾಧನವಾಗಿದೆ.[೨] ದೇವಾಲಯ ಸಂಸ್ಕೃತ ಪದ ಇದರಲ್ಲಿ ಎರಡು ಶಬ್ದಗಳಿವೆ. ದೇವ ಮತ್ತು ಆಲಯ ಅಂದರೆ ದೇವರ ಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ನೆಲೆಸಿರುವ ಸ್ಥಾನ ಎಂದರ್ಥ.[೩] ವಾಸ್ತು ಎಂದರೆ ಕಟ್ಟಡ, ಮನುಷ್ಯ ವಾಸಿಸಲು ಯೋಗ್ಯವಾದ ಕಟ್ಟಡ ಅದೇ ರೀತಿ ದೇವರು ಇರುವುದಕ್ಕೋಸ್ಕರ ನಿರ್ಮಿಸಿದ ರಚನೆಯೇ ದೇವಾಲಯ. ಮನೆ ಮತ್ತು ದೇವಾಲಯ ಇವೆರಡು ವಾಸ್ತು ರಚನೆಯೇ ಆಗಿದೆ. ವಾಸ್ತು ಎಂದರೆ ಕಟ್ಟಡ ಹೀಗೆ ಇರಬೇಕೆಂದಿದೆ.[೪] ದೇವಾಲಯವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲವಿರುವ ಒಂದು ತಾಣ.[೫] ದೇವಾಲಯ ಎಂದರೆ ಕಟ್ಟಡವಷ್ಟೆ ಅಲ್ಲ ಅದೊಂದು ಸಂಕೇತ, ದೈವತ್ವದ ಕಲ್ಪನೆಯಾಗಿದೆ.[೬] ವಿಶಾಲ ದೃಷ್ಟಿಕೋನದಲ್ಲಿ ಅವಲೋಕಿಸಿದರೆ ಮನುಷ್ಯರ ಜೀವನಕ್ಕೆ ಅವಶ್ಯವಾದ ಯಾವುದೇ ರಚನೆ ಕೂಡ ವಾಸ್ತು ರಚನೆಯಾಗಿರುತ್ತದೆ.[೭] ಮನೆ, ಕೆರೆ, ಸೇತುವೆ, ಕೋಟೆ, ದೇವಾಲಯ ಎಲ್ಲಾ ರಚನೆಗಳೂ ವಾಸ್ತು ಶಿಲ್ಪ ಎಂದು ಕರೆಯುತ್ತಾರೆ.[೮] ಪ್ರಸಾದ ಭವನ, ಹಮ್ಯಕ, ಸೌಧ, ನಿಕೇತನ, ವಿಮಾನ, ಮಂದಿರ ಮೊದಲಾದ ಪದಗಳನ್ನು ದೇವಾಲಯದ ಪರ್ಯಾಯವಾಗಿ ಬಳಸುತ್ತಾರೆ.[೯] ಸಾಮಾನ್ಯವಾಗಿ 'ಪ್ರಸಾದ' ಪದವು ಉತ್ತರ ಭಾರತದ ದೇವಾಲಯಗಳಿಗೂ 'ವಿಮಾನ' ಪದವನ್ನು ದಕ್ಷಿಣ ಭಾರತದ ದೇವಾಲಯಗಳಿಗೆ ಬಳಸುತ್ತಾರೆ.[೧೦]

ದೇವಾಲಯಗಳ ಉಗಮ ಮತ್ತು ಬೆಳವಣಿಗೆ

ಶಿಲಾಯುಗದಲ್ಲಿ ಮಾನವ ಪ್ರಕೃತಿಯ ಬದಲಾವಣೆಯನ್ನು ಅರಿತು ತನ್ನ ರಕ್ಷಣೆಗಾಗಿ ನೈಸರ್ಗಿಕ ಗುಹೆಗಳಲ್ಲಿ ವಾಸಿಸಲು ಪ್ರಾರಂಭಿಸಿದನು[೧೧]. ಅನಂತರ ಪ್ರತ್ಯೇಕ ವಾಸ ತಾಣಗಳನ್ನು ನಿರ್ಮಿಸಲು ಆರಂಭಿಸಿದನು. ಈ ಪರಿಕಲ್ಪನೆಯೇ ದೇವಾಲಯಗಳ ನಿರ್ಮಾಣಕ್ಕೆ ದಾರಿಯಾಯಿತು.[೧೨]

ಕ್ರಿ.ಪೂ. ೩ನೇ ಶತಮಾನದಲ್ಲಿ ಬುದ್ಧನ ಅವಶೇಷಗಳಿಂದ ನಿರ್ಮಿತವಾದ ಸ್ತೂಪಗಳು ಮೊದಲ ಆರಾಧನಾ ಕೇಂದ್ರಗಳು. ಸಾಂಚಿ, ಸಾರನಾಥ, ಅಮರಾವತಿ, ಮಥುರಾ, ಬುದ್ಧಗಯಗಳಲ್ಲಿ ಸ್ಥಾಪನೆ ಮಾಡಿದರು.[೧೩] ಕ್ರಿ.ಪೂ.೨ನೆಯ ಶತಮಾನದಲ್ಲಿ

ಹೆಲಿಯೋಡೋರಸ್‌ನು ವೈಷ್ಣವ ಪರಂಪರೆಯ ವಾಸುದೇವ ದೇವಾಲಯದ ಮುಂಭಾಗದಲ್ಲಿ ಪ್ರತಿಷ್ಠಾಪಿಸಿದ ಗರುಢಸ್ತಂಭವು ದೇವಾಲಯಗಳಿಗೆ ಸಂಬಂಧಿಸಿದ ಅತೀ ಪ್ರಾಚೀನ ರಚನೆಯಾಗಿದೆ.[೧೪]

ಜೈನಧರ್ಮ, ಹಿಂದೂಧರ್ಮದ ಆರಾಧನ ಆಲಯಗಳ ರಚನೆ ಪ್ರಾರಂಭವಾಯಿತು. ಆದರೆ ಕ್ರಿ.ಶ. ೭ ರಿಂದ ೮ನೆಯ ಶತಮಾನದಲ್ಲಿ ದೇವಾಲಯಗಳ ರಚನಾಕ್ರಮದಲ್ಲಿ ಸ್ಪಷ್ಟತೆ ಮೂಡಲಾರಂಭಿಸಿತು. ಇದನ್ನು ಪ್ರಭುದ್ಧ ಹಂತವೆಂದು ಕರೆಯುತ್ತಾರೆ.[೧೫] ದೇವಾಲಯಗಳನ್ನು ಮರ, ಇಟ್ಟಿಗೆ, ಕಲ್ಲು ಬಳಸಿ ಕಟ್ಟುತ್ತಾರೆ. ಆರಂಭದಲ್ಲಿ ಮರ, ಇಟ್ಟಿಗೆ ಬಳಸಿ ಕಟ್ಟಿದ ದೇವಾಲಯಗಳು ಬಹುಬೇಗ ನಶಿಸಿ ಹೋದವು. ಆದ್ದರಿಂದ ಕಲ್ಲನ್ನು ಬಳಸಿದಾಗ ದೇವಾಲಯ ನಿರ್ಮಿಸಲು ಪ್ರಾರಂಭಿಸಿದಾಗ ಬಹುಕಾಲ ಶಾಶ್ವತವಾಗಿ ಉಳಿಯಬಲ್ಲವೆಂದು ಅರಿತಾಗ, ಕಲ್ಲಿನ ದೇವಲಯಗಳೇ ಶ್ರೇಷ್ಠವೆಂಬ ಮನವರಿಕೆಯಾದ್ದರಿಂದ ದೇವಾಲಯಗಳ ರಚನೆಗೆ ಮಾಧ್ಯಮವಾಗಿ ಬೆಳೆಸಿದೆ.[೧೬]

ವಾಸ್ತು ಕೃತಿಗಳು

ದೇವಾಲಯಗಳು ಸಮುದಾಯದ ಪ್ರತೀಕ. ಆದ್ದರಿಂದ ನಿಯಮಬದ್ಧವಾಗಿ ಕಟ್ಟಬೇಕು. ಎಲ್ಲಿ ಕಟ್ಟಬೇಕು, ಹೇಗೆ ಕಟ್ಟಬೇಕು, ಯಾವ ವಿಧಿಗಳಿಗೆ ನಿಷೇಧಗಳಿರಬೇಕೆಂದು ಹೇಳುವ ಶಾಸ್ತ್ರವೇ ರಚನೆಯಾಯಿತು. ಅದುವೇ ವಾಸ್ತುಶಿಲ್ಪಶಾಸ್ತ್ರದ ಆರವತ್ತನಾಲ್ಕು ಕಲೆಗಳಲ್ಲಿ ಒಂದಾಗಿದೆ.[೧೭] ದೇವಾಲಯದ ವಾಸ್ತು ರಚನೆಗೆ ಸಂಬಂಧಿಸಿದ ಗ್ರಂಥಗಳೆಂದರೆ ವೈದಿಕ, ಬೌದ್ಧ, ಜೈನ ಸಾಹಿತ್ಯ ಪುರಾಣಗಳು, ಆಗಮ ಸಾಹಿತ್ಯ ಕೃತಿಗಳಲ್ಲಿ ವಾಸ್ತುಶಿಲ್ಪಶಾಸ್ತ್ರದ ವಿಷಯವನ್ನು ಪ್ರಸ್ತಾಪಿಸಲಾಗಿದೆ.[೧೮] ಭುವನಪ್ರದೀಪನ ಅಪರಾಜಿತಪೃಚ್ಛಾ, ವಿಶ್ವಕರ್ಮನ ವಿಶ್ವಕರ್ಮಪ್ರಕಾಶ, ಮೂರನೇ ಸೋಮೇಶ್ವರನ ಮನಸೋಲ್ಲಾಸ, ಮಯಮತ, ಮಾನಸಾರ, ತಂತ್ರಸಮುಚ್ಛಯ, ಕೌಶಲ್ಯಶಿಲ್ಪ, ವಿಮನಾರ್ಚನಕಲ್ಪ, ಪದ್ಮಸಂಹಿತಾ, ಪ್ರಯೋಗ ಮಂಜರಿ, ವಾಸ್ತುವಿದ್ಯಾ, ಶಿಲ್ಪರತ್ನ ಜಿನಾಲಯದ ರೂಪ ರೇಷೆಗಳನ್ನು ವಿವರಿಸುವ ಕೃತಿಗಳಾಗಿವೆ.[೧೭]

ದೇವಾಲಯಗಳ ಪ್ರಭೇಧಗಳು

ಭಾರತ ದೇಶದಲ್ಲಿ ದೇವಾಲಯಗಳ ರಚನೆ ವೈವಿಧ್ಯಮವಾಗಿ ಬೆಳೆಯಲು ಪ್ರಾದೇಶಿಕ ಭಿನ್ನತೆ ಪರಸ್ಪರ ಪ್ರಭಾವ, ಪ್ರಾಕೃತಿಕ ಪರಿಸರ, ಶಿಲೆಗಳ ಅನುಕೂಲ, ಪ್ರಬಲವಾಗುತ್ತಿದ್ದ ಧರ್ಮಗಳು, ಜನರ ಅಭಿರುಚಿ, ರಾಜಮಹಾರಾಜರ ಪ್ರೋತ್ಸಾಹ, ಕಟ್ಟಡದ ಅವಶ್ಯಕತೆ, ಶಿಲ್ಪಗಳ ಮನೋಧರ್ಮ ಮತ್ತು ಕೈಚಳಕ ಕಾರಣಗಳಿಂದ ಸ್ಥಳೀಯ ಪ್ರಬೇಧಗಳು ಹುಟ್ಟಿಕೊಂಡವು.[೨೦] ತತ್ಪರಿಣಾಮವಾಗಿ ವಿಭಿನ್ನ ಶೈಲಿಯ ದೇವಾಲಯಗಳು ಕಾಣುತ್ತೇವೆ. ವಾಸ್ತುಪುರಾಣದ

ಶೈಲಿಗಳಲ್ಲಿ ನಾಗರ(ಔತ್ತರೇಯ), ದ್ರಾವಿಡ(ದಾಕ್ಷಿಣಾತ್ಯ) ಹಾಗೂ ವೇಸರ(ಔತ್ತರೇಯ ದ್ರಾವಿಡ) ಶೈಲಿಯ ಮೂರು ಪ್ರಧಾನ ಶೈಲಿಗಳು ದೇವಾಲಯಗಳ ಪ್ರಭೇದಗಳಾಗಿವೆ.[೨೧]

ದ್ರಾವಿಡ ಶೈಲಿ

ದಕ್ಷಿಣ ಭಾರತದ ಶೈಲಿಯನ್ನು ದಾಕ್ಷಿಣಾತ್ಯಶೈಲಿ ಎಂದು ಕರೆಯುತ್ತಾರೆ. ಅಜಿತಾಗಮ, ಕಾಮಿಗಾಮಗಳಲ್ಲಿ ಈ ಶೈಲಿಯ ಪ್ರಸ್ತಾಪವಿದೆ. ಅಜಿತಾಗಮ ಕೃತಿಯಲ್ಲಿ ಕಂಠದಿಂದ ಮೇಲಕ್ಕೆ ಅಷ್ಟಾಶ್ಯವಾಗಿರುವುದೇ ದ್ರಾವಿಡಶೈಲಿ ಎಂದು ಹೇಳಿದೆ.[೨೨] ತೀರ್ಥ ಪ್ರಾಧಾನ್ಯಕ್ಕಿಂತ ದೇವಾಲಯ ಪ್ರಾಧಾನ್ಯತೆ ಪಡೆದಿದ್ದು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ಥೂಪಿ ಊರ್ಧ್ವಮುಖ ಆರು ಭಾಗಗಳನ್ನು ಹೊಂದಿರುವುದರಿಂದ. ಇವನ್ನು ಷಡ್ವಗಳ ದೇವಾಲಯಗಳೆನ್ನುವರು. ದೇವಾಲಯ ರಚನೆಯಲ್ಲಿ ಮೂಲದಿಂದ ಸ್ಥೂಪಿಯವರೆಗೆ ಆರು ಅಥವಾ ಎಂಟು ಕೋನಗಳಿರುತ್ತವೆ.[೨೩] ಗರ್ಭಗೃಹದ ಮೇಲೆ ಹೋದಂತೆ ಶಿಖರವು ಸಮತಲವಾಗಿ ಚಿಕ್ಕದಾಗುತ್ತ ಮಧ್ಯದಲ್ಲಿ ಅಂತಸ್ತುಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಅಂತಸ್ತನ್ನು ಪ್ರತ್ಯೇಕಿಸುವ ದುಂಡುಕಪೋತ ಮತ್ತು ಮೇಲಂತಸ್ತುಗಳ ಸುತ್ತಲೂ ಇಕ್ಕಟ್ಟಾದ ತೆರೆದ ಅಂಕಣಗಳು ಈ ಶೈಲಿಯ ದೇವಾಲಯಗಳ ಪ್ರಮುಖ ಲಕ್ಷಣಗಳಾಗಿವೆ.[೨೪]

ನಾಗರಶೈಲಿ

ಈ ರೀತಿಯ ದೇವಾಲಯಗಳನ್ನು ಉತ್ತರ ಭಾರತದಲ್ಲಿ ಕಾಣುತ್ತೇವೆ. ಇದನ್ನು 'ಔತ್ತರೇಯ ಶೈಲಿ' ಎನ್ನುವರು. ಅಧಿಷ್ಠಾನದಿಂದ ಸ್ಥೂಪಿಯವರೆಗೆ ಚತುರಸ್ರವಾಗಿ (ಚೌಕೋನ)ವಾಗಿರುವುದೇ ನಾಗರಶೈಲಿ ಎಂದು ಅಜಿತಾಗಮ ಕೃತಿಯಲ್ಲಿ ವಿವರಿಸಿದೆ.[೨೫] ಪೀಠ, ಜಂಘಾ, ಶೃಂಗ, ಅಮಲಕ, ಕಳಶ ಪ್ರಮುಖ ಭಾಗಗಳಾಗಿವೆ.[೨೬] ಕೆಳಗಿನಿಂದ ಶಿಖರದ ಮೂಲೆಯಲ್ಲಿ ಹಂತ ಹಂತವಾಗಿ ಮುಂದುವರೆಯುವ ಕೂಟದಂತ ರಚನೆ(ಭೂಮಿಕಾಂಡ) ಇರುತ್ತದೆ. ವಿಮಾನದ ಮೇಲ್ಭಾಗದ ಶಿಖರದ ಕೇಂದ್ರ ಬಿಂದುವಿನತ್ತ ಬಾಗಿದಂತಿರುವ ಚತುರಸ್ರವಾದ ಲಂಬವಿನ್ಯಾಸಗಳಿರುತ್ತವೆ. ಶಿಖರದ ತುದಿಯಲ್ಲಿ ಚಪ್ಪಟೆ, ವೃತ್ತಕಾರ ಮತ್ತು ಅಂಚುಗಳನ್ನು ಅರೆಗೋಳಕಾರದಲ್ಲಿ ಕಂಡರಿಸಿದ ಆಮಲಕವಿರುತ್ತದೆ. ಅದರ ಮೇಲೆ ಕಳಶವಿರುತ್ತದೆ. ಶಿಖರವು ನಾಲ್ಕು ಮೂರ್ತಿಗಳಲ್ಲಿ ಚಿಕ್ಕದಾಗುತ್ತ ಹೋಗುತ್ತದೆ. ಕೆಳಗಿನಿಂದ ಮೇಲಕ್ಕೆ ಬಾಗಿದ ರೀತಿ ಇರುವುದರಿಂದ ಇದನ್ನು ರೇಖಾನಗರವೆಂದು ಕರೆಯುತ್ತಾರೆ.[೨೭]

ವೇಸರಶೈಲಿ

ಔತ್ತರೇಯ ದ್ರಾವಿಡ ಎಂದು ವೇಸರ ಶೈಲಿಯನ್ನು ಕರೆಯುತ್ತಾರೆ. ವೇಸರ ಪದವು ಸಂಸ್ಕೃತ ಬಂದಿದ್ದು, ವೇಸರ ಎಂದರೆ 'ಹೇಸರಗತ್ತೆ' ಅಥವಾ ಮಿಶ್ರತಳಿಯ 'ಪ್ರಾಣಿ' ಎಂದು. ಅಂದರೆ ಇದೊಂದು ಮಿಶ್ರ ಶೈಲಿ ಎಂಬಂತೆ ಅರ್ಥ ನೀಡಲಾಗುತ್ತದೆ.[೨೮] ನಾಗರ ಮತ್ತು ದ್ರಾವಿಡಶೈಲಿಗಳ ಮಿಶ್ರಣವೇ ವೇಸರಶೈಲಿ. ಅಜಿತಾಗಮ ಕೃತಿಯಲ್ಲಿ ಕಂಠದಿಂದ ಮೇಲಕ್ಕೆ ವೃತ್ತಕಾರವಾಗಿರುವುದೇ ವೇಸರಶೈಲಿ.[೨೯] ಇದು ವಿಂಧ್ಯಪರ್ವತದಿಂದ ಕೃಷ್ಣನದಿಯವರೆಗೆ ಹರಡಿಕೊಂಡಿರುವುದೇ ವೇಸರಶೈಲಿ.[೩೦] ಕಂಠ ಮತ್ತು ಶಿಖರ ಭಾಗ ವೃತ್ತಕಾರವಾಗಿರುತ್ತದೆ.

ಈ ಪ್ರಧಾನ ಶೈಲಿಗಳೊಂದಿಗೆ ಕಳಿಂಗ, ಕರ್ನಾಟ ದ್ರಾವಿಡ, ಕದಂಬನಾಗರ ಭೂಮಿಜ, ಫಾಂಸನಾ, ಸರ್ವತೋಭದ್ರ ಶೈಲಿಗಳಿವೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಸ್ಮಾರಕಗಳಲ್ಲಿ ಒಂದಾದ ದೇವಾಲಯಗಳು ಕಂಡುಬಂದಿವೆ. ಅವುಗಳನ್ನು ಧಾರ್ಮಿಕವಾಗಿ ವರ್ಗೀಕರಿಸಿಕೊಂಡು, ವಾಸ್ತುವನ್ನು ವಿಶ್ಲೇಷಿಸುವದರ ಮೂಲಕ ಅವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ.

೪.೧.೧. ಶೈವ ದೇವಾಲಯಗಳು

ಸಿಂಧೂ ನಾಗರಿಕತೆಯ ನೆಲೆಗಳಲ್ಲಿ ದೊರೆತ ಪಶುಪತಿಯ ಮುದ್ರೆಗಳು ಶಿವನ ರೂಪವೆಂದು, ವೈದಿಕ ಸಾಹಿತ್ಯದಲ್ಲಿ ಪ್ರಸ್ತಾಪಿಸಿರುವ ರುದ್ರ ಪಶುಪತಿ, ಶಿವ, ವೃಷಭ, ಮೀಢ್ವ, ಕಪರ್ದಿನ್ ನಾಮಪದಗಳು, ಮಹಾಕಾವ್ಯಗಳು, ಪುರಾಣಗಳಲ್ಲಿ ದಾಖಲಿಸಿರುವ ವಿಚಾರಗಳಿಂದ ಶೈವಧರ್ಮದ ಪ್ರಾಚೀನತೆಯನ್ನು ಗುರುತಿಸಿದೆ.[೩೧] ಶಾತವಾಹನ, ಚುಟು, ಇಕ್ಷ್ವಾಕು, ಅರಸು ಮನೆತನಗಳ ಕಾಲವಾದಿಯಲ್ಲಿ ಈ ಧರ್ಮದ ಧಾರ್ಮಿಕ ನಿರ್ಮಾಣಗಳು ಗೋಚರಿಸುತ್ತವೆ.[೩೨]

ಕ್ರಿ.ಶ. ೩ನೇ ಶತಮಾನಕ್ಕೆ ಸಂಬಂಧಿಸಿದ ನರಗುಂದ ತಾಲ್ಲೂಕಿನ ಶಿವನ ಮತ್ತು ಶಿಕಾರಿಪುರ ತಾಲ್ಲೂಕಿನ ಶಾಸನೋಕ್ತ ಶಿವ ದೇವಾಲಯಗಳ ಉಲ್ಲೇಖಗಳೇ ಅತ್ಯಂತ ಪ್ರಾಚೀನ ಶೈವಧರ್ಮದ ಆಕರಗಳಾಗಿವೆ.[೩೩] ಅನಂತರ ಕರ್ನಾಟಕದ ರಾಜವಂಶಗಳಾದ ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳ, ವಿಜಯನಗರ, ಪಾಳೇಗಾರರು, ಮೈಸೂರಿನ ಒಡೆಯರು ಮತ್ತು ಅವರ ಸಾಮಂತ ಮನೆತನಗಳು ಶೈವ ಧರ್ಮಕ್ಕೆ ಆಶ್ರಯ ಮತ್ತು ಪ್ರೋತ್ಸಾಹ ನೀಡಿದ್ದರಿಂದ ಶೈವಧರ್ಮದ ದೇವಾಲಯಗಳು ಕಂಡಬಂದವು.

ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಕ್ರಿ.ಶ. ೧೦ನೇ ಶತಮಾನದಿಂದ ೧೮ನೇ ಶತಮಾನದವರೆಗೆ ೨೯ ಶೈವ ದೇವಾಲಯಗಳು ಕಂಡುಬಂದಿವೆ. ಅವುಗಳ ವಾಸ್ತು ಶೈಲಿಯನ್ನು ಅವಲೋಕನ ಮಾಡಲಾಗಿದೆ.

ಈಶ್ವರ ದೇವಾಲಯ

ಗ್ರಾಮ : ಕತ್ತಲಗೆರೆ

ಸ್ಥಳ : ಆಂಜನೇಯಸ್ವಾಮಿ ದೇವಾಲಯದ ಸಮೀಪದಲ್ಲಿದೆ

ಕಾಲ : ಕ್ರಿ.ಶ.೧೦ನೇ ಶತಮಾನ

ಶೈಲಿ : ಕಲ್ಯಾಣದ ಚಾಲುಕ್ಯರು

ವಸ್ತು : ಕಪ್ಪು ಕಲ್ಲು

ಪ್ರಕಟಣೆ : ಓಬಳೇಶಪ್ಪ ಎಂ.ಆರ್. ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ, ಪು.೫೧

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು, ಮುಖ್ಯದ್ವಾರ ಬಾಗಿಲು ದಕ್ಷಿಣದಿಕ್ಕಿಗೆ ಅಭಿಮುಖವಾಗಿದೆ. ದೇವಾಲಯವು ಏಕರೂಪ ನಿರಂದರ ಮಾದರಿಯ ದೇವಾಲಯವಾಗಿದೆ.

ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಭಾವಣಿಯ ಮೇಲೆ ವಿತಾನವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳ, ಅದರ ಗೋಡೆಗಳಲ್ಲಿ ಎರಡು ಕೋಷ್ಠಗಳಿವೆ. ಮತ್ತು ಷಣ್ಮುಖರ ಮೂರ್ತಿಶಿಲ್ಪಗಳಿವೆ. ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ಲತಾ ಮತ್ತು ವಜ್ರಕಾರದ ಪಟ್ಟಿಕೆಗಳನ್ನು ಹೊಂದಿದೆ. ಸ್ತಂಭಪಟ್ಟಿಕೆಯ ಕೆಳಭಾಗದಲ್ಲಿ ಪಂಚದೇವತೆಗಳನ್ನು ಪ್ರತಿನಿಧಿಸುವ, ತ್ರಿಶೂಲ, ಡಮರುಗವನ್ನು ಹಿಡಿದಿರುವ ಚಿಕ್ಕಚಿಕ್ಕ ಮೂರ್ತಿಶಿಲ್ಪಗಳಿವೆ. ಬಾಗಿಲವಾಡದ ಎಡ ಮತ್ತು ಬಲಭಾಗದಲ್ಲಿ ಜಾಲಂದ್ರವನ್ನು ಕಾಣಬಹುದಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವನ್ನು ಕಂಡರಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿಂದ ನಿರ್ಮಿತವಾದ ನಂದಿಮಂಟಪವಿದೆ. ನವರಂಗದ ಮಧ್ಯಭಾಗದ ಭಾವಣಿಯಲ್ಲಿನ ಭುವನೇಶ್ವರಿಯು ಅಷ್ಟಾಕೋನಕಾರದಲ್ಲಿ ಎಂಟು ಚಿಕ್ಕ–ಚಿಕ್ಕ ಪದ್ಮಗಳಿದ್ದು, ಪದ್ಮದಲ್ಲಿ ದೊಡ್ಡ ಪದ್ಮವು ಐದು ಸುತ್ತನ್ನು ಹೊಂದಿದ್ದು, ಮೊದಲನೇ ಸುತ್ತಿನಲ್ಲಿ ೨೪ ದಳಗಳನ್ನು ಹೊಂದಿದ್ದು, ಒಳ ಹೋದಂತೆ ಚಿಕ್ಕದಾಗುತ್ತಾ ಹೋಗಿ ಮೊಗ್ಗಿನಂತೆ ಕಾಣಿಸುತ್ತದೆ. ಇದನ್ನು 'ಪದ್ಮಶಿಲಾ ವಿತಾನ' ವೆಂದು ಕರೆಯುವರು. ಚಿಕ್ಕ ಪದ್ಮಗಳು ಮೂರು ಸುರುಳಿಯನ್ನು ಹೊಂದಿದ್ದು, ಹೊರ ಸುರುಳಿಯು ೧೬ ದಳಗಳನ್ನು ಹೊಂದಿದೆ. ನವರಂಗದಲ್ಲಿ ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ. ಕಂಬಗಳ ಪೀಠವು ಚೌಕಾಕಾರವಾಗಿದ್ದು, ದಂಡವು ವೃತ್ತಾಕಾರದ

ಮಾಲಾದಾಕಾರವಾಗಿದೆ. ದಂಡಾಗ್ರವು ಚೌಕಾಕಾರವಾಗಿದೆ. ಸಾಧಾರಣ ಭೋದಿಗೆಯನ್ನು ಹೊಂದಿದೆ. ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಹೊಂದಿದೆ. ಆದರೆ ಶಿಖರವು ನಾಶವಾಗಿದೆ. ಅದಿಷ್ಠಾನವು ಉಪಾನ, ಜಗತಿ, ಕಂಸ, ಕಂಠಪಟ್ಟಿಕೆಗಳಿಂದ ಕೂಡಿದ್ದು, ತ್ರಿಪಟ್ಟಕುಮುದ, ಕಪೋತಗಳ ಪಟ್ಟಿಕೆಗಳಿಂದ ಅಲಂಕೃತಗೊಂಡಿದೆ. ಹಾಗೂ ಸರಳ ಭಿತ್ತಿಯನ್ನು ಹೊಂದಿದ್ದು ಪ್ರಸ್ತಾರವು ಸಮತಟ್ಟಾಗಿದೆ.

ಈಶ್ವರ ದೇವಾಲಯ

ಗ್ರಾಮ : ಮಸಣಿಕೆರೆ

ಸ್ಥಳ : ಗ್ರಾಮದ ಮಧ್ಯ ಭಾಗದಲ್ಲಿದೆ

ಕಾಲ : ಕ್ರಿ.ಶ. ೧೧ನೇ ಶತಮಾನ

ಶೈಲಿ : ಹೊಯ್ಸಳರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಯ ದೇವಾಲಯಗಳು(ಪ್ರಾಚೀನ ಮತ್ತು ಮಧ್ಯಯುಗೀನ), ಪು.೮೦

ಈ ದೇವಾಲಯವು ತ್ರಿಕೂಟಾಚಲವಾಗಿದ್ದು, ಮೂರು ಗರ್ಭಗೃಹಗಳು, ಮೂರು ಅಂತರಾಳ ಅವುಗಳಿಗೆ ಹೊಂದಿಕೊಂಡಂತೆ ನವರಂಗ ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ. ಪಶ್ಚಿಮದ ಗರ್ಭಗೃಹವು ಮುಖ್ಯ ಗರ್ಭಗೃಹವಾಗಿದ್ದು, ಶಿವಲಿಂಗವನ್ನು ಹೊಂದಿದ್ದು, ಭಾವಣಿಯಲ್ಲಿ ವಿತಾನವಿದೆ. ಅದಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ದ್ವಾರದ ಬಾಗಿಲವಾಡವು ಸರಳವಾಗಿದ್ದು, ಲಲಾಟ ಬಿಂಬದಲ್ಲಿ ಯಾವುದೇ ಶಿಲ್ಪವಿಲ್ಲ. ಉತ್ತರದ ಗರ್ಭಗುಡಿಯಲ್ಲಿ ಕೇಶವನ ಮೂರ್ತಿಶಿಲ್ಪವಿದೆ. ಅದರ ಪಕ್ಕದಲ್ಲಿಯೇ ನಾಗಶಿಲ್ಪಗಳಿವೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು ದ್ವಾರವು ಸರಳವಾಗಿದೆ. ಪೂರ್ವದ ಗರ್ಭಗುಡಿಯಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಅದರ ದ್ವಾರವನ್ನು ಇತ್ತೀಚೆಗೆ ಕಲ್ಲಿನಿಂದ ಮುಚ್ಚಲ್ಪಟ್ಟಿದೆ. ನವರಂಗದಲ್ಲಿ ನಾಲ್ಕು ಕಂಬಗಳಿಂದ ನಿರ್ಮಿಸಿದ ನಂದಿಮಂಟಪವಿದೆ. ನವರಂಗದ ಮಧ್ಯಭಾಗದ ಭಾವಣಿಯಲ್ಲಿ ಭುವನೇಶ್ವರಿಯಲ್ಲಿ ಚೌಕಾಕಾರದ ಪಟ್ಟಿಕೆಯಲ್ಲಿ ಅಷ್ಟಾದಿಕ್ಪಾಲಕರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದ್ದು ಅವುಗಳ ಮಧ್ಯದಲ್ಲಿ ತಾಂಡವೇಶ್ವರ(ಶಿವನನ್ನು ನೃತ್ಯ ಭಂಗಿಯಲ್ಲಿ) ಕಂಡರಿಸಲಾಗಿದೆ. ಅದರ ಮೇಲಿನ ಪಟ್ಟಿಕೆಯ ಉತ್ತರ ಭಾಗದಲ್ಲಿ ಸುರ, ಅಸುರರು ಸಮುದ್ರ ಮಂಥನಗೈಯುತ್ತಿರುವಂತೆ ಮತ್ತು ದಕ್ಷಿಣ ಭಾಗದಲ್ಲಿ ವಿಷ್ಣು ಕಾಳಿಂಗಮರ್ಧನ ಮಾಡುವಂತೆ,

ಪಶ್ಚಿಮಭಾಗದಲ್ಲಿ ವಾದ್ಯಹಿಡಿದವರನ್ನು ಕೆತ್ತಲ್ಪಟ್ಟಿರುವುದು ವಿಶೇಷವಾಗಿದೆ. ಈ ಶಿಲ್ಪಗಳ ಮೇಲಿನ ಎಂಟು ಕೋನಗಳಲ್ಲಿ ಕೀರ್ತಿಮುಖ ಹಾಗೂ ಅಲ್ಲಲ್ಲಿ ಪುಷ್ಪಗಳನ್ನು ಕಂಡರಿಸಲಾಗಿದೆ.

ಸ್ತಂಭಗಳನ್ನು ಗ್ರಾನೈಟ್‌ಕಲ್ಲು ಬಳಸಿ ಕೆತ್ತಲ್ಪಟ್ಟಿರುವ ನಾಲ್ಕು ಕಂಬಗಳಿವೆ. ಅವುಗಳು ಪೀಠಭಾಗದಲ್ಲಿ ಆಯಾತಾಕಾರವಾಗಿದ್ದು, ಪಾದದ ಬಳಿ ಚೌಕಾಕಾರವಾಗಿದ್ದು, ದಂಡದ ಭಾಗವು ಆಯಾತಾಕಾರವನ್ನು ಮತ್ತು ವೃತ್ತಕಾರವನ್ನು ಹೊಂದಿದೆ. ದಂಡಾಗ್ರವು, ಕಲಶ, ತಾಟಿಕಾ, ಘಟ, ಮಂಡಿ, ಫಲಕ, ವೀರಕಂಠವನ್ನು ಹೊಂದಿದೆ. ಭೋದಿಗೆಯು ಸರಳ ಮಾದರಿಯಲ್ಲಿದೆ. ದೇವಾಲಯದ ಮುಖ್ಯ ಪ್ರವೇಶದ್ವಾರವು ರತ್ನ, ಪುಷ್ಪ, ಸ್ತಂಭವೆಂಬ ತ್ರಿಶಾಖೆಗಳಿಂದ ಅಲಂಕೃತಗೊಂಡಿದೆ. ಶೈವ ದ್ವಾರಪಾಲಕರು ದ್ವಿಬುಜಾದಾರಿಯಾಗಿದ್ದು, ತ್ರಿಶೂಲ, ಡಮರುಗ, ಗದೆ ಹಿಡಿದು ನಿಂತಿದ್ದಾರೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಪ್ರವೇಶಕ್ಕೆ ಸೋಪಾನಗಳ ವ್ಯವಸ್ಥೆಯಿದೆ. ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಹೊಂದಿದ್ದು, ಶಿಖರವು ನಾಶವಾಗಿದೆ. ಅದಿಷ್ಠಾನವು ಸರಳವಾಗಿದೆ. ಭಿತ್ತಿಯನ್ನು ಇತ್ತೀಚಿನ ದಿನಗಳಲ್ಲಿ ನವಿಕರಿಸಿದ್ದಾರೆ. ಪ್ರಸ್ತಾರವು ಸಮತಟ್ಟಾಗಿದೆ.

ಕೆತೇಶ್ವರ ದೇವಾಲಯ/ ಕಲ್ಲೇಶ್ವರ ದೇವಾಲಯ

ಗ್ರಾಮ	:	ಚನ್ನಗಿರಿ
ಸ್ಥಳ	:	ಬಸ್ ನಿಲ್ದಾಣದಿಂದ ಪಶ್ಚಿಮ ದಿಕ್ಕಿನಲ್ಲಿದೆ
ಕಾಲ	:	ಕ್ರಿ.ಶ ೧೧೪೨
ಶೈಲಿ	:	ಕಲ್ಯಾಣದ ಚಾಲುಕ್ಯರು
ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಎಂ. ಎ. ಆರ್. ವರದಿ ೧೯೩೭, ಪು.೫೪

ಈ ದೇವಾಲಯಕ್ಕೆ ಕೆತೇಶ್ವರ ಅಥವಾ ಕಲ್ಲೇಶ್ವರ ಎಂಬ ಹೆಸರಿದೆ.[೩೪] ಸ್ಥಳೀಯರು ಚನ್ನಕೇಶವ, ಬಸವಣ್ಣ ಮತ್ತು ಕಲ್ಲೇಶ್ವರ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಇದು ತ್ರಿಕೂಟಶೈಲಿ ದೇವಾಲಯವಾಗಿದ್ದು, ಮೂರು ಗರ್ಭಗೃಹಕ್ಕೆ ಹೊಂದಿಕೊಂಡಂತೆ ಒಂದೊಂದು ನವರಂಗವಿದೆ. ದ್ವಾರಬಾಗಿಲು ದಕ್ಷಿಣಕ್ಕೆ ಅಭಿಮುಖ ಮುಖ್ಯ ಗರ್ಭಗೃಹವು ಚೌಕಕಾರವಾಗಿದ್ದು, ಕೇಶವನ ಮೂರ್ತಿಶಿಲ್ಪವನ್ನು ಹೊಂದಿದೆ. ಮೇಲ್ಭಾವಣಿಯು ವಿತಾನದಿಂದ ಅಲಂಕೃತವಾಗಿದ್ದು, ಗರ್ಭಗೃಹ ದ್ವಾರಬಾಗಿಲು ಸಾಧಾರಣವಾಗಿದೆ. ಪೂರ್ವದ ಗರ್ಭಗೃಹವು ಚೌಕಕಾರವಾಗಿದ್ದು, ಯಾವುದೇ ಮೂರ್ತಿಶಿಲ್ಪ ಹೊಂದಿಲ್ಲ. ಮೇಲ್ಭಾವಣಿಯು ವಿತಾನವಿದ್ದು, ದ್ವಾರಬಾಗಿಲು ಸಾಧಾರಣ ಅಲಂಕೃತವನ್ನು ಹೊಂದಿದೆ. ಪಶ್ಚಿಮದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಚೌಕಕಾಕರವಾಗಿದೆ. ಗರ್ಭಗೃಹದ ಮೇಲ್ಭಾವಣಿಯು ವಿತಾನವನ್ನು ಹೊಂದಿದ್ದು, ದ್ವಾರಬಾಗಿಲು

ಪುಷ್ಪಸ್ತಂಭ ಶಾಖೆಗಳಿಂದ ಅಲಂಕೃತಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಲಕ್ಷ್ಮೀಯು ಕಿರೀಟಧಾರಿಯಾಗಿದ್ದು ಎರಡು ಕರಗಳಲ್ಲಿ ಕಮಲವನ್ನು ಹಿಡಿದುಕೊಂಡು, ಕಮಲದ ಮೇಲೆ ಆಸೀನಳಾಗಿದ್ದಾಳೆ. ಅವಳ ಎಡ ಮತ್ತು ಬಲಭಾಗದಲ್ಲಿ ಆನೆಗಳು ನೀರಿನಿಂದ ಅಭಿಷೇಕ ಮಾಡುವಂತೆ ಕಂಡರಿಸಲಾಗಿದೆ. ಗರ್ಭಗೃಹವು ತೆರೆದ ಅಂತರಾಳವನ್ನು ಹೊಂದಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು ಕಪ್ಪುಕಲ್ಲು ಬಳಸಿ ಕೆತ್ತಿದ್ದಾರೆ. ಮೇಲ್ಭಾಗದ ಮಧ್ಯದ ಛಾವಣಿಯಲ್ಲಿ ಭುವನೇಶ್ವರಿಯು ಚೌಕಕಾರವಾಗಿದ್ದು ಅರಳಿದ ಪದ್ಮದ ಅಲಂಕಾರವನ್ನು ಹೊಂದಿದೆ. ಕಂಬಗಳು ತಿರುಗಣಿ ಯಂತ್ರದ ಸಹಾಯದಿಂದ ನಿರ್ಮಿಸಿದವುಗಳಾಗಿದ್ದು, ಕಂಬವು ಪೀಠ, ದಂಡ, ದಂಡಾಗ್ರಗಳನ್ನು ಹೊಂದಿದೆ. ಪೀಠಭಾಗವು ಚೌಕಾಕಾರವಾಗಿದ್ದು, ದಂಡ ಭಾಗವು ಅನೇಕ ಬಳೆಗಳಿಂದ ಕೂಡಿದ್ದು, ಮಧ್ಯದಲ್ಲಿ ಘಂಟಾಕಾರವಿದೆ. ದಂಡದ ಮೇಲ್ಭಾಗದಲ್ಲಿ ಮಾಲಂಕಾರವಿದೆ. ದಂಡಾಗ್ರವು ತೆಳುವಾದ ಕುಂಭ ಮತ್ತು ಫಲಕಗಳಿಂದ ಅಲಂಕೃತಗೊಂಡಿದ್ದು ತರಂಗ ಮಾದರಿ ಭೋದಿಗೆ ಇದೆ. ಈ ಕಂಬದ ಶೈಲಿಯನ್ನು 'ಶ್ರೀಕಾರ ಸ್ತಂಭ' ಎಂದು ಲಕ್ಷಣಗಳ ಆಧಾರದ ಮೇಲೆ ಗುರುತಿಸಲಾಗಿದೆ.

ದೇವಾಲಯದ ಊರ್ಧ್ವಮುಖ(ಬಾಹ್ಯ ಭಾಗವು) ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಮಾತ್ರ ಹೊಂದಿದ್ದು ಮೇಲ್ಛಾವಣಿಯ ಮೇಲಿನ ಶಿಖರವು ನಾಶವಾಗಿದೆ.[೩೫] ಅದಿಷ್ಠಾನವು ಉಪಾನ, ಜಗತಿ, ಚೂಪದ ಕುಮುದ ಮತ್ತು ಕಪೋತ ಭಾಗಗಳನ್ನು ಒಳಗೊಂಡಿದೆ. ಭಿತ್ತಿಯು ಆರು ಕುಡ್ಯಸ್ತಂಭಗಳನ್ನು ಹೊಂದಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದ್ದು ಅದರ ಮೇಲ್ಭಾಗವು ದಂಡಪಟ್ಟಿಕೆಯಿಂದ ಅಲಂಕೃತಗೊಂಡಿದ್ದು ಪ್ರಸ್ತಾರವು ಸಮತಟ್ಟಗಿದೆ. ಈ ದೇವಾಲಯವು ಭಿತ್ತಿಯಲ್ಲಿ ಆರು ಕುಡ್ಯಸ್ತಂಭಗಳನ್ನು ಹೊಂದಿದೆ. ಈ ಕುಡ್ಯಸ್ತಂಭಗಳ ರಚನೆಗೆ ಕಾರಣವೆಂದರೆ ಭಿತ್ತಿಯ ಏಕತಾನತೆಯನ್ನು ಹೋಗಲಾಡಿಸಲು ದೇವಾಲಯದ ಭಾರವನ್ನು ಹೊರಲು ನಿಯೋಜಿತ ಅಂತರದಲ್ಲಿ ಸ್ತಂಭಗಳಿರುತ್ತವೆ. ಹೀಗೆ ಭಿತ್ತಿಯಲ್ಲಿ(ಕುಡ್ಯ) ಇರುವ ಉಬ್ಬುಕಂಬಗಳಿಗೆ ಕುಡ್ಯಸ್ತಂಭಗಳೆಂದು ಕರೆಯುತ್ತಾರೆ. ಇವು ದೇವಾಲಯದ ಒಳಗಿನ ಕಂಬಗಳಂತೆ ಪೂರ್ಣರೂಪದಲ್ಲಿ ಕಾಣುವುದಿಲ್ಲ. ಸ್ತಂಭದ ಅರ್ಧಭಾಗ ಮಾತ್ರ ಭಿತ್ತಿಯಿಂದ ಹೊರಕಾಣುವಂತೆ ಅದರ ಅಲಂಕರಣೆಯೂ ಪೂರ್ಣಸ್ತಂಭದಂತೇ ಇರುವುದು. ಸ್ತಂಭಗಳು ಚೌಕಾಕಾರವಾಗಿದ್ದು ಭಿತ್ತಿಯ ಮೇಲ್ಭಾಗದಲ್ಲಿ ವಿರೂಪಗೊಂಡಿವೆ. ಮೂರು ಗರ್ಭಗೃಹ ಭಿತ್ತಿಯು ಕುಡ್ಯಸ್ತಂಭಗಳನ್ನು ಹೊಂದಿರುವುದು ವಿಶೇಷವಾಗಿದೆ. ಪ್ರಸ್ತುತ ದೇವಾಲಯದ ಗೋಡೆಯನ್ನು ನವೀಕರಣ ಮಾಡಿದ್ದಾರೆ. ಮರದ ಬಾಗಿಲನ್ನು ಅಳವಡಿಸಿದ್ದು, ನೆಲಕ್ಕೆ ಸಿಮೆಂಟ್ ಗಾರೆಯನ್ನು ಹಾಕಿದ್ದಾರೆ.[೩೬]

ಈಶ್ವರ ಅಥವಾ ಕಲ್ಲುಮಠ ದೇವಾಲಯ

ಗ್ರಾಮ	:	ಚನ್ನಗಿರಿ
ಸ್ಥಳ	:	ನಗರದ ಹೊರಭಾಗದ ರಾ.ಹೆ.೧೩ ಚನ್ನಗಿರಿಯಿಂದ ಚಿತ್ರದುರ್ಗದ ಮಾರ್ಗದ ಎಡಭಾಗದಲ್ಲಿದೆ.
ಕಾಲ	:	ಕ್ರಿ.ಶ.೧೨ನೇ ಶತಮಾನ
ಶೈಲಿ	:	ಕಲ್ಯಾಣದ ಚಾಲುಕ್ಯರು
ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಎಂ. ಎ. ಆರ್. ವರದಿ ೧೯೩೭, ಪು.೫೫

ಕೇತೇಶ್ವರ ದೇವಾಲಯ ರೀತಿಯಲ್ಲಿ ಕಲ್ಲುಮಠದ ದೇವಾಲಯವನ್ನು ನಿರ್ಮಿಸಿದ್ದಾರೆ.[೩೭] ಈ ದೇವಾಲಯವನ್ನು ಸ್ಥಳೀಯರು ಕಲ್ಲುಮಠ ಅಥವಾ ಕಲ್ಲೇಶ್ವರ ದೇವಾಲಯ ಎಂದು ಕರೆಯುತ್ತಾರೆ. ತ್ರಿಕೂಟ ಶೈಲಿಯಿರುವ ದೇವಾಲಯವು ಮೂರು ಗರ್ಭಗೃಹ, ಅಂತರಾಳ ಅದಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ದ್ವಾರಬಾಗಿಲು ದಕ್ಷಿಣಕ್ಕೆ ಅಭಿಮುಖವಾಗಿದೆ. ಮುಖ್ಯ ಗರ್ಭಗೃಹ ಮತ್ತು ಪೂರ್ವ ಗರ್ಭಗೃಹಗಳು ಚೌಕಾಕಾರವಾಗಿದ್ದು ಯಾವುದೇ ಮೂರ್ತಿಶಿಲ್ಪವನ್ನು ಹೊಂದಿಲ್ಲ. ತೆರೆದ ಅಂತರಾಳವನ್ನು ಹೊಂದಿದ್ದು, ದ್ವಾರವು ಸಾಧಾರಣವಾಗಿದೆ. ಆದರೆ ಪಶ್ಚಿಮದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ದ್ವಾರವು ತ್ರಿಶಾಖೆ ಹೊಂದಿದ್ದು ಅವುಗಳಲ್ಲಿ ಲತಾಸುರುಳಿ, ಸ್ತಂಭಶಾಖೆಗಳು ಕಂಡುಬರುತ್ತವೆ. ತೆರೆದ ಅಂತರಾಳವನ್ನು ಹೊಂದಿದೆ. ಮುಂಭಾಗದಲ್ಲಿ ನವರಂಗವಿದ್ದು, ನಾಲ್ಕು ಕಂಬಗಳಿವೆ. ಮಧ್ಯಭಾಗದಲ್ಲಿ ನಂದಿ ಮೂರ್ತಿಶಿಲ್ಪವಿದೆ. ಅದರ ಮೇಲ್ಭಾಗದ ಭಾವಣಿಯಲ್ಲಿ ಭುವನೇಶ್ವರಿಯು ಚೌಕಾಕಾರವಾಗಿದ್ದು ಅರಳಿದ ಪದ್ಮದ ಅಲಂಕಾರವಿದೆ.

ನವರಂಗದಲ್ಲಿನ ಕಂಬಗಳನ್ನು ಕಪ್ಪುಕಲ್ಲು ಬಳಸಿ, ತಿರುಗಣಿ ಯಂತ್ರದ ಸಹಾಯದಿಂದ ನಿರ್ಮಿಸಿದ್ದು ಅವು 'ಶ್ರೀಕಾರ ಸ್ತಂಭಗಳ' ಮಾದರಿಯಲ್ಲಿವೆ. ಪೀಠವು ಆಯತಕಾರ, ಪಾದವು ಚೌಕಾಕಾರವಾಗಿದ್ದು ದಂಡಭಾಗದಲ್ಲಿ ಅನೇಕ ಬಳೆಗಳ ಮಾದರಿಯ ಮೇಲೆ ಮಾಲೆ ಅಲಂಕಾರವಿದೆ. ದಂಡಾಗ್ರಾವು ತೆಳುವಾದ ಕುಂಭ ಮತ್ತು ಫಲಕಗಳಿಂದ ಅಲಂಕೃತಗೊಂಡಿದೆ. ತರಂಗ ಮಾದರಿಯ ಭೋದಿಗೆಯನ್ನು ಹೊಂದಿದೆ.

ದೇವಾಲಯದ ಬಾಹ್ಯ ಭಾಗವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಮಾತ್ರ ಹೊಂದಿದೆ. ಶಿಖರವು ನಾಶವಾಗಿದೆ. ಅದಿಷ್ಠಾನವು ಉಪಾನ, ಜಗತಿ, ಚೂಪಾದಕುಮುದ ಮತ್ತು ಕಪೋತಗಳನ್ನೊಳಗೊಂಡಿದೆ. ಭಿತ್ತಿಯು ಕುಡ್ಯಸ್ತಂಭಗಳಿಂದ ಅಲಂಕೃತಗೊಂಡಿದೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದ್ದು ಅದರ ಮೇಲೆ ದಂತಪಟ್ಟಿಕವಿದೆ. ಹಾಗಾಗಿ ಪ್ರಸ್ತುತ ದೇವಾಲಯದ

ಪ್ರಸ್ತಾರವು ಸಮತಟ್ಟಾಗಿದೆ ದೇವಾಲಯದ ಹಿಂಭಾಗ ಮಣ್ಣಿನಿಂದ ಅವೃತ್ತವಾಗಿದ್ದು ಪ್ರಸ್ತುತ ಮಣ್ಣನ್ನು ತೆಗೆಯಲಾಗಿದೆ. ಇದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ದೇವಾಲಯವಾಗಿದೆ.[೩೮]

ಈಶ್ವರ ದೇವಾಲಯ

ಗ್ರಾಮ : ತಾವರೆಕೆರೆ

ಸ್ಥಳ : ಬಸಾಪುರಕ್ಕೆ ತೆರಳುವ ಮಾರ್ಗದ ಮಧ್ಯದಲ್ಲಿದೆ

ಕಾಲ : ಕ್ರಿ.ಶ.೧೨ನೇ ಶತಮಾನ

ಶೈಲಿ : ಹೊಯ್ಸಳ

ವಸ್ತು : ಬಳಪದ ಕಲ್ಲು

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ನಂದಿಮಂಟಪವನ್ನು ಹೊಂದಿದೆ. ದಕ್ಷಿಣಕ್ಕೆ ಅಭಿಮುಖವಾದ ಮುಖ್ಯದ್ವಾರವಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದಿತು. ವಿತಾನದಲ್ಲಿ ಅರಳಿದ ಪದ್ಮವಿದೆ. ಅಂತರಾಳದಲ್ಲಿ ಯಾವುದೇ ಶಿಲ್ಪವಿಲ್ಲ. ದ್ವಾರವು ಸರಳ ಬಾಗಿಲವಾಡ ಮತ್ತು ಲಲಾಟದಲ್ಲಿ ಗಜಲಕ್ಷ್ಮೀಯಿದೆ. ನವರಂಗದಲ್ಲಿ ನಂದಿಮಂಟಪವು ನಾಲ್ಕು ಸ್ತಂಭಗಳಿಂದ ನಿರ್ಮಿಸಲ್ಪಟ್ಟಿದೆ. ಸ್ತಂಭಗಳು ವಿಷ್ಣುಕಾಂತ ಸ್ತಂಭ ಮಾದರಿಯಲ್ಲಿದೆ. ಪೀಠವು ಆಯಾತಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ದ್ವಾರವು ಎಂಟು ಮುಖ ಉಬ್ಬು-ತಗ್ಗುಗಳಿಂದ ಕತ್ತರಿಸಲ್ಪಟ್ಟಿದೆ. ದಂಡಾಗ್ರವು ಚೌಕಾಕಾರವಾಗಿದೆ. ಭುವನೇಶ್ವರಿಯಲ್ಲಿ ಅರಳಿದ ಪದ್ಮದ ಅಲಂಕರಣವಿದೆ. ಮುಖ್ಯದ್ವಾರವು ಸರಳ ಬಾಗಿಲವಾಡವಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪದಿಂದ ಅಲಂಕರಣಗೊಂಡಿದೆ.

ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರವನ್ನು ಹೊಂದಿದೆ. ಆದರೆ ಈಗ ಯಾವುದೇ ಭಾಗಗಳಿಲ್ಲದೆ ವಿನಾಶವಾಗಿದೆ. ಪ್ರಸ್ತುತ ದೇವಾಲಯವು ಪಾಳು ಬಿದ್ದಿದೆ. ಗರ್ಭಗೃಹ, ಅಂತರಾಳ ನವರಂಗವು ಸಹ ನಾಶವಾಗಿದೆ. ಆದರೆ ಅವುಗಳ ಸ್ತಂಭಗಳು ಮತ್ತು ದೇವಾಲಯದ ಅವಶೇಷಗಳು ಲಭ್ಯವಾಗಿವೆ.

ಬೇಳೇಶ್ವರ ದೇವಾಲಯ

ಗ್ರಾಮ : ಕಲ್ಕೆರೆ

ಸ್ಥಳ : ಉಬ್ರಾಣಿ ಹೋಬಾಳಿಯ ಕಲ್ಕೆರೆ ಬೇಜಾರಕ್ ಗ್ರಾಮದ ಸಮೀಪ

ಕಾಲ : ಕ್ರಿ.ಶ ೧೨೨೧

ಶೈಲಿ : ಹೊಯ್ಸಳರ

ವಸ್ತು : ಬಳಪದ ಕಲ್ಲು

ಪ್ರಕಟಣೆ : ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಯ ದೇವಾಲಯಗಳು(ಪ್ರಾಚೀನ ಮತ್ತು ಮಧ್ಯಯುಗೀನ), ಪು.೧೨೦

ಹೊಯ್ಸಳರ ಸಾಮಂತರಾದ ಆಸಂದಿಗಂಗರು ಈ ದೇವಾಲಯವನ್ನು ನಿರ್ಮಿಸಿದರು. ಕಂಗಗೌಡನು ಶಿವಲಿಂಗವನ್ನು ಪ್ರತಿಷ್ಠಾಪಿಸಿದನು. ಸ್ಥಳೀಯ ಸಮಸ್ತ ಗೌಡರು ರಂಗಭೋಗ, ಅಂಗಭೋಗ, ನೈವೇದ್ಯಕ್ಕಾಗಿ ದೇವಾಲಯಕ್ಕೆ ದಾನ ನೀಡಿದರು. ದೇವಾಲಯವು ದ್ವಿಕೂಟಚಾಲ ಮಾದರಿಯಲ್ಲಿದ್ದು, ಎರಡು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ನವರಂಗವಿದೆ. ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗವಿದೆ. ಛಾವಣಿಯಲ್ಲಿ ವಿತಾನವಿದೆ. ದ್ವಾರವು ರತ್ನಸ್ತಂಭ ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ನವರಂಗದ ಉತ್ತರದ ಗರ್ಭಗೃಹದಲ್ಲಿ ಮೂರ್ತಿಶಿಲ್ಪವು ಇರುವುದಿಲ್ಲ. ದ್ವಾರವು ಸರಳವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳ ಮಧ್ಯ ನಂದಿ ಮೂರ್ತಿಶಿಲ್ಪವಿದೆ(ನಂದಿ ಮಂಟಪವಿದೆ). ಕಂಬಗಳನ್ನು ಕಪ್ಪುಶಿಲೆ ಬಳಸಿ ತಿರುಗಣಿ ಸಹಾಯದಿಂದ ಕೆತ್ತಲ್ಪಟ್ಟಿದ್ದು ಅವು ಶ್ರೀಕಾರಸ್ತಂಭ ಮಾದರಿಯಲ್ಲಿದೆ. ಕಂಬದ ಪೀಠವು ಚೌಕಾಕಾರವಾಗಿದ್ದು, ದಂಡಭಾಗವು ವೃತ್ತಕಾರದ ಬಳೆಯ ಅಲಂಕಾರವನ್ನು ಹೊಂದಿದೆ. ದಂಡಾಗ್ರಾವು ಕುಂಭ ಮತ್ತು ಫಲಕಗಳಿಂದ ಅಲಂಕೃತಗೊಂಡಿದೆ. ಬೊದಿಗೆಯು ತರಂಗ ಮಾದರಿಯಲ್ಲಿದ್ದು, ನಾಲ್ಕು ಮೂಲೆಗಳಲ್ಲಿ ಕಮಲದ ಮೊಗ್ಗು ಮುಗುಚಿದ ರೀತಿಯ ಅಲಂಕಾರವಿದೆ. ನವರಂಗದ ಮಧ್ಯದ ಛಾವಣಿಯಲ್ಲಿ ಭುವನೇಶ್ವರಿಯಲ್ಲಿ ಅರಳಿದ ಕಮಲದ ಮಧ್ಯದಿಂದ ಮೊಗ್ಗು ಇಳಿಬಿದ್ದಿರುವ ರೀತಿಯಲ್ಲಿ ಕೆತ್ತಲಾಗಿದ್ದು ಮುಖ ಮಂಟಪದ ಒಳಭಾಗದ ನಾಲ್ಕು ದಿಕ್ಕಿನಲ್ಲಿ ಕಕ್ಷಾಸನಾಗಳಿದ್ದು, ಆರು ಸಾಧಾರಣ ಕಂಬಗಳಿಂದ ಕೂಡಿದೆ. ಮುಖಮಂಟಪಕ್ಕೆ ಪ್ರವೇಶಿಸಲು ದಕ್ಷಿಣಭಾಗದಲ್ಲಿ ಸೋಪಾನಗಳು ಹಾಗೂ ಹಸ್ತ–ಹಸ್ತಿ ಫಲಕಗಳ ವ್ಯವಸ್ಥೆಯಿದೆ.

ದೇವಾಲಯದ ಊರ್ಧ್ವಮುಖ ಕ್ರಮವು ಅದಿಷ್ಠಾನ ಭಿತ್ತಿ ಮತ್ತು ಪ್ರಾಸ್ತಾರವನ್ನು ಮಾತ್ರ ಹೊಂದಿದ್ದು, ಶಿಖರವು ಸಂಪೂರ್ಣವಾಗಿ ನಾಶವಾಗಿದೆ. ಅದಿಷ್ಠಾನವು ಉಪನ, ಪದ್ಮ, ಕಂಠ, ಕಪೋತ ಭಾಗಗಳಿಂದ ಕೂಡಿದ್ದು, ಭಿತ್ತಿಯು ಸರಳವಾಗಿದ್ದು, ಮೇಲ್ಭಾಗದಲ್ಲಿ ಮುಗುಚಿದ ಕಪೋತವಿದ್ದು ಪ್ರಸ್ತಾರವು ಸಮತಟ್ಟಾಗಿದೆ. ಪ್ರಸ್ತುತ ಊರ್ದ್ವಮೂಖ ಭಿತ್ತಿಯು ನಶಿಸಿಹೋಗಿದೆ.

ಕಲ್ಲೇಶ್ವರ

ಗ್ರಾಮ	:	ಕಲ್ಕೆರೆ
ಸ್ಥಳ	:	ಉಬ್ರಾಣಿ ಹೋಬಾಳಿಯ ಕಲ್ಕೆರೆ ಬೇಜಾರಕ್ ಗ್ರಾಮದ ಸಮೀಪದಲ್ಲಿದೆ
ಕಾಲ	:	ಕ್ರಿ.ಶ. ೧೨ನೇ ಶತಮಾನ
ಶೈಲಿ	:	ಕಲ್ಯಾಣದ ಚಾಲುಕ್ಯರು
ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಓಬಳೇಶಪ್ಪ ಎಂ.ಆರ್. ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ, ಪು.೫೫

ಈ ದೇವಾಲಯವು ತ್ರಿಕೂಟಾಚಲದಲ್ಲಿದ್ದು ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ನವರಂಗವಿದ್ದು, ನಿರಂದ ಮಾದರಿಯಲ್ಲಿರುವ ದೇವಾಲಯದ ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ. ಪಶ್ಚಿಮಕ್ಕಿರುವ ಮುಖ್ಯಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಗರ್ಭಗೃಹದ ದ್ವಾರವು ಬಾಗಿಲವಾಡ ಅದರ ಪಕ್ಕದಲ್ಲಿ ಜಾಲಂಧಾರಗಳನ್ನು ಹೊಂದಿವೆ. ನವರಂಗದಲ್ಲಿ ನಾಲ್ಕುಕಂಬಗಳು, ಸರಳ ಮಿಶ್ರ ಪದ್ಮಕಾಂಡ ಕಂಬಗಳಾಗಿವೆ. ನವರಂಗದ ಮಧ್ಯದ ಭಾವಣಿಯಲ್ಲಿ ವಿತಾನವಿರದೇ ಕಲ್ಲಿನಿಂದ ಆವೃತವಾಗಿದೆ. ದೇವಾಲಯದ ಹಿಂಭಾಗವು ಮಣ್ಣಿನ ರಾಶಿಯಿಂದ ಆವೃತ್ತವಾಗಿರುವುದರಿಂದ ಊರ್ಧ್ವಮುಖದ ಭಾಗಗಳನ್ನು ಗುರುತಿಸಲು ಸಾಧ್ಯವಾಗಿಲ್ಲ.

ಕಲ್ಲೇಶ್ವರ ಅಥವಾ ತ್ರೈಪುರುಷ ದೇವಾಲಯ

ಗ್ರಾಮ	:	ನಲ್ಲುದರೆ
ಸ್ಥಳ	:	ಗ್ರಾಮದ ಪಶ್ಚಿಮಕ್ಕಿರುವ ಹೊಲದಲ್ಲಿದೆ
ಕಾಲ	:	ಕ್ರಿ.ಶ. ೧೨ನೇ ಶತಮಾನ
ಶೈಲಿ	:	ಹೊಯ್ಸಳರು
ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಓಬಳೇಶಪ್ಪ ಎಂ.ಆರ್. ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ, ಪು.೪೮

ಕಲ್ಲೇಶ್ವರ ಅಥವಾ ತ್ರೈಪುರುಷ ದೇವಾಲಯವನ್ನು ಹೊಯ್ಸಳರು ನಿರ್ಮಿಸಿದ್ದಾರೆ. ಗರ್ಭಗೃಹ, ಅಂತರಾಳ, ನವರಂಗವನ್ನು, ಹೊಂದಿದ್ದು ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿರುವ ನಿರಂಧರ ಮಾದರಿ ದೇವಾಲಯವಾಗಿದೆ. ಚೌಕಾಕಾರದ ಗರ್ಭಗೃಹವು ಶಿವಲಿಂಗವನ್ನು ಹೊಂದಿದ್ದು ಭಾವಣಿಯ ಮೇಲ್ಭಾಗದಲ್ಲಿ ವಿತಾನವಿದೆ. ತೆರೆದ ಅಂತರಾಳವಿದೆ. ಗರ್ಭಗೃಹದ ಪ್ರವೇಶದ್ವಾರದ ಎರಡು ಬದಿಗಳಲ್ಲಿ ಭೈರವನ ಮೂರ್ತಿಶಿಲ್ಪಗಳಿವೆ. ಬಾಗಿಲವಾಡವು ನಕ್ಷತ್ರಾಕಾರದ ಚಾಲಂಧ್ರಗಳನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳ ಮಧ್ಯೆ ನಂದಿ ಮೂರ್ತಿಶಿಲ್ಪವಿದೆ(ನಂದಿ ಮಂಟಪವಿದೆ). ನವರಂಗದ ಮಧ್ಯದ ಭಾವಣಿಯಲ್ಲಿ ಭುವನೇಶ್ವರಿಯು ಪದ್ಮದಳಗಳನ್ನು ವೃತ್ತಾಕಾರದಲ್ಲಿ ಜೋಡಿಸಿದಂತ್ತಿದ್ದು, ಅರಳಿದ ಮೊಗ್ಗಿನ ರೀತಿಯಲ್ಲಿರುವ ಪದ್ಮಮಂಡಲ ವಿತಾನವಾಗಿದೆ. ನಂದಿ ಮೂರ್ತಿಶಿಲ್ಪದ ಪೀಠದ ಮುಂಭಾಗದ ಗೂಡಿನಲ್ಲಿ ಗರುಡನ ಮೂರ್ತಿಶಿಲ್ಪವಿದೆ. ಕಂಬಗಳು ವಿಷ್ಣುಕಾಂತ ಮಿಶ್ರಕ ಸ್ತಂಭ ಮಾದರಿಯಲ್ಲಿವೆ. ಮುಖ್ಯದ್ವಾರವು ನಾಲ್ಕು ಅಡಿಯಷ್ಟು ಎತ್ತರವನ್ನು ಹೊಂದಿದೆ. ದೇವಾಲಯದ ಊರ್ಧ್ವಮುಖದ ಭಾಗವು ಸಂಪೂರ್ಣ ಮಣ್ಣಿನಿಂದ ಮುಚ್ಚಲ್ಪಟ್ಟಿದೆ. ಸ್ವಲ್ಪ ದೂರದಿಂದ ನೋಡಿದರೇ ಮಣ್ಣಿನ ಗುಡ್ಡೆಯ ರೀತಿಯಲ್ಲಿ ಗೋಚರಿಸುತ್ತದೆ. ಶಿಖರವು

ನಾಶವಾಗಿದೆ. ಕಂಬಗಳ ಪೀಠವು ಚೌಕಾಕಾರವಾಗಿದ್ದು, ದಂಡಾಗ್ರವು ವೃತ್ತಾಕಾರದ ಕುಂಭವನ್ನು ಹೊಂದಿದೆ.

ಬ್ರಹ್ಮೇಶ್ವರ ದೇವಾಲಯ

ಗ್ರಾಮ : ನಲ್ಕುದರೆ

ಸ್ಥಳ : ಗ್ರಾಮದ ರಸ್ತೆಯ ಪೂರ್ವಭಾಗದಲ್ಲಿ

ಕಾಲ : ಕ್ರಿ.ಶ. ೧೨ನೇ ಶತಮಾನ

ಶೈಲಿ : ಹೊಯ್ಸಳರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಎಂ. ಎ. ಆರ್. ವರದಿ, ೧೯೩೭, ಪು.೧೧೬

ಈ ದೇವಾಲಯವು ತಿರ್ಯಙ್ಮುಖ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವಂತಹ ನಿರಂದರ ಮಾದರಿ ದೇವಾಲಯವಾಗಿದೆ. ಚೌಕಾಕಾರದ ಗರ್ಭಗೃಹವು ಶಿವಲಿಂಗವನ್ನು ಹೊಂದಿದ್ದು, ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಬಾಗಿಲವಾಡವು ಎಡ ಮತ್ತು ಬಲ ಭಾಗದಲ್ಲಿ ನಕ್ಷತ್ರಾಕಾರದ ಜಾಲಂಧರವನ್ನು ಹೊಂದಿದೆ. ಲಲಾಟದಲ್ಲಿ ಚೌಕಾಕಾರದ ಚಿಕ್ಕ ಶಾಸನವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿಂದ ರಚಿತವಾದ ನಂದಿಮಂಟಪವಿದೆ. ಕಂಬಗಳ ಪೀಠವು ಚೌಕಾಕಾರವಾಗಿದ್ದು, ದಂಡಭಾಗವು ಚೌಕದ ನಂತರ ಪಾಲಿಕೆಗಳ ರೀತಿಯಲ್ಲಿ ಕಂಡರಿಸಿ ಅನಂತರ ಪಾಲಿಕೆ, ನಂತರ ಚೌಕ ಮುಖ ಅದರ ಮೇಲ್ಭಾಗದಲ್ಲಿ ದಂಡಾಗ್ರವು ಬಳೆಯಾಕಾರ, ಕುಂಭ, ವೃತ್ತವೇದಿ ಸರಳಭೋದಿಗೆಗಳಿವೆ.

ನವರಂಗದ ಮೇಲ್ಭಾಗದ ಮಧ್ಯದ ಭಾವಣಿಯಲ್ಲಿ ಅಷ್ಟವಿತಾನಗಳಿವೆ. ಅವುಗಳೆಲ್ಲವು ಮುಗುಚಿದ ಪದ್ಮರಾಶಿಯನ್ನು ಹೊಂದಿರುವುದು ವಿಶೇಷವಾಗಿದೆ. ಇವುಗಳ ನಡುವೆಯಿರುವ ಭುವನೇಶ್ವರಿಯು ದೊಡ್ಡ ಕಮಲವು ಐದು ಸುತ್ತುಗಳನ್ನು ಹೊಂದಿದ್ದು, ಹೊರಸುತ್ತಿನಲ್ಲಿ ೨೪ ದಳಗಳನ್ನು ಹೊಂದಿದ್ದು ಒಳಭಾಗಕ್ಕೆ ಹೋದಂತೆ ಚಿಕ್ಕದಾಗುತ್ತ ಹೋಗಿ ಮಧ್ಯದಲ್ಲಿ ಮೊಗ್ಗಿನಂತೆ ಹೊರಚಾಚಿರುವ 'ಪದ್ಮಶಿಲಾವಿತಾನವನ್ನು' ಹೊಂದಿದೆ. ಈ ದೇವಾಲಯದ ಬಲಗೋಡೆಗೆ ಹೊಯ್ಸಳರ ಒಂದನೇ ನರಸಿಂಹನ ಕಾಲಕ್ಕೆ ಸೇರಿದ ಶಾಸನವನ್ನು ನಿಲ್ಲಿಸಲ್ಪಟ್ಟಿದ್ದು, ಈ ಶಾಸನವು ದೇವಾಲಯದ ಜೀರ್ಣೋದ್ಧಾರದ ಬಗ್ಗೆ ಮಾಹಿತಿ ಒದಗಿಸುತ್ತದೆ. ದೇವಾಲಯದ ಊರ್ಧ್ವಮುಖದ ಭಿತ್ತಿ ಸಂಪೂರ್ಣವಾಗಿ ನಶಿಸಿ ಹೋಗಿದ್ದು, ಶಿಖರವು ನಾಶವಾಗಿದೆ. ಪ್ರಸ್ತುತ ಊರ್ಧ್ವಮೂಖದ ಭಿತ್ತಿ ಮತ್ತು ಶಿಖರವನ್ನು ನವೀಕರಿಸಿದ್ದಾರೆ.

ಶ್ರೀ ಬಲ್ಲೇಶ್ವರ ಅಥವಾ ಜಲ್ಲೇಶ್ವರ ದೇವಾಲಯ

ಗ್ರಾಮ : ಅಲಕನಾಳು

ಸ್ಥಳ : ಗ್ರಾಮದ ದಕ್ಷಿಣದ ದಿಕ್ಕಿನಲ್ಲಿದೆ

ಕಾಲ : ಕ್ರಿ.ಶ. ೧೨ನೇ ಶತಮಾನ

ಶೈಲಿ : ಹೊಯ್ಸಳ

ವಸ್ತು : ಬಳಪದ ಕಲ್ಲು

ಪ್ರಕಟಣೆ : ಓಬಳೇಶಪ್ಪ ಎಂ.ಆರ್. ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ – ಅಪ್ರಕಟಿತ ಎಂ.ಫಿಲ್. ಪ್ರಬಂಧ, ೨೦೦೯, ಪು.೬೯

ಈ ದೇವಾಲಯವು ತಿರ್ಯಙ್ಮುಖ ಗರ್ಭಗೃಹ ಅಂತರಾಳ, ನವರಂಗ, ನಂದಿಮಂಟಪ ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲ್ಛಾವಣಿಯಲ್ಲಿ ವಿತಾನವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳದ ಗೋಡೆಗಳಲ್ಲಿ ಎರಡು ಕೋಷ್ಟಗಳಿದ್ದು ಗಣೇಶ ಮತ್ತು ಹರಿಹರ ಮೂರ್ತಿ ಶಿಲ್ಪಗಳಿವೆ. ದ್ವಾರದ ಬಾಗಿಲವಾಡವು ಪಂಚಶಾಖೆಗಳಿಂದ ಕೂಡಿದ್ದು ಲತಾತೋರಣ ಮತ್ತು ಸ್ತಂಭ ಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಸ್ತಂಭಗಳುಳ್ಳ ನಂದಿಮಂಟಪವಿದೆ. ಕಂಬಗಳು ರುದ್ರಕಾಂಡ ಸ್ತಂಭಗಳ ಶೈಲಿಯನ್ನು ಹೊಂದಿವೆ. ಕಂಬದ ಪೀಠವು ಚೌಕಾಕಾರವಾಗಿದ್ದು, ದಂಡದಲ್ಲಿ ಅಷ್ಟಚೌಕಾಕಾರದ ರೀತಿಯಲ್ಲಿದೆ. ದಂಡಾಗ್ರವು ವೃತ್ತ, ಕುಂಬ ಮತ್ತು ಮಾಲ ಅಲಂಕಾರಗಳಿಂದ ಕೂಡಿದೆ. ನವರಂಗದ ಮಧ್ಯದ ಮೇಲ್ಛಾವಣಿಯಲ್ಲಿ ಭುವನೇಶ್ವರಿಯಲ್ಲಿ ಅಷ್ಟಕೋನಾಕಾರದಲ್ಲಿ ಕತ್ತರಿಸಲ್ಪಟ್ಟಿದ್ದು ಅದರ ನಡುವೆ ಪದ್ಮ ಅಲಂಕರಣವಿದೆ. ನವರಂಗದ ಪಶ್ಚಿಮ ಗೋಡೆಯ ಕೋಷ್ಟದಲ್ಲಿ ಕೇಶವನ ಮೂರ್ತಿಶಿಲ್ಪವಿದೆ.

ದೇವಾಲಯದ ಊರ್ಧ್ವಮುಖವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ ಶಿಖರವನ್ನು ಹೊಂದಿವೆ. ಅಧಿಷ್ಠಾನವು ಮಣ್ಣಿನಲ್ಲಿ ಊತುಹೋಗಿದೆ. ಭಿತ್ತಿಯು ಸರಳವಾದ ಮಾದರಿಯಲ್ಲಿದೆ. ಶಿಖರವು ಏರುವಿನ್ಯಾಸದಲ್ಲಿ ಚಿಕ್ಕದಾಗುತ್ತ ಹೋಗಿ ಶಿಖರದ ಮೇಲ್ಭಾಗದಲ್ಲಿ ದಂಡಾಕಾರದ ಆಮ್ಲಕವಿದೆ.

ಈಶ್ವರ ದೇವಾಲಯ ಅಥವಾ ಕಲ್ಲೇಶ್ವರ ದೇವಾಲಯ

ಗ್ರಾಮ : ಹಿರೇಕೋಗಿಲೂರು

ಸ್ಥಳ : ಗ್ರಾಮದ ಮಧ್ಯ ಭಾಗದಲ್ಲಿದೆ.

ಕಾಲ : ಕ್ರಿ.ಶ. ೧೨೬೮

ಶೈಲಿ : ಸೇವಣರು

ವಸ್ತು : ಕಣಶಿಲೆ

ಪ್ರಕಟಣೆ : ಬಿ. ಸುರೇಶ, ಚಿತ್ರದುರ್ಗ–ದಾವಣಗೆರೆ ದೇವಾಲಯಗಳು, ಪು.೧೮೭

ಇದೊಂದು ಶಾಸನೋಕ್ತ ದೇವಾಲಯವಾಗಿದ್ದು, ಸೇವಣರ ಚತ್ತರಸರ, ರಾಜರಸರ ಕಾಲದಲ್ಲಿ ಕೋಗಿಲೂರು ಬಲ್ಲೇಶ್ವರ ದೇವರ ದೂಪ-ದೀಪ ನೈವೇದ್ಯಕ್ಕಾಗಿ ಚತ್ತರಸ ಪಟ್ಟದ ರಾಜಕುಮಾರ ಚಾವುಂಡರಸನು ಕ್ರಿ.ಶ. ೧೨೬೮ ರಲ್ಲಿ ಭೂದತ್ತಿ ನೀಡಿದ ಬಗ್ಗೆ ಉಲ್ಲೇಖಿತವಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದ್ದು ಪೂರ್ವಕ್ಕೆ ಅಭಿಮುಖವಾದ ದ್ವಾರಬಾಗಿಲನ್ನು ಹೊಂದಿದೆ. ಪಶ್ಚಿಮದಿಕ್ಕಿನ ಚೌಕಾಕಾರವಾದ ಮುಖ್ಯ ಗರ್ಭಗೃಹವು ಯಾವುದೇ ಮೂರ್ತಿಶಿಲ್ಪವನ್ನು ಹೊಂದಿಲ್ಲ. ಅಂತರಾಳವಿದ್ದು ಸರಳ ಬಾಗಿಲವಾಡವಿದೆ. ದಕ್ಷಿಣದ ಗರ್ಭಗೃಹದಲ್ಲಿ ಗಣೇಶನ ಮೂರ್ತಿಶಿಲ್ಪವಿದೆ. ಉತ್ತರ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಭಾವಣಿಯ ಮೇಲ್ಭಾಗದಲ್ಲಿ ವಿತಾನವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಬಾಗಿಲವಾಡವು ರತ್ನಶಾಖೆ, ಲತಾಸುರಳಿ, ಸ್ತಂಭಶಾಖೆ, ಪದ್ಮಶಾಖೆಗಳೆಂಬ ಪಂಚಶಾಖೆಗಳಿಂದ ಅಲಂಕೃತವಾಗಿದೆ. ಬಾಗಿಲವಾಡ ಬಲ ಮತ್ತು ಎಡಭಾಗದಲ್ಲಿ ಜಾಲಂದರಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀಯನ್ನು ಕಂಡರಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿಂದ ನಿರ್ಮಿತವಾದ ನಂದಿಮಂಟಪವಿದೆ. ನವರಂಗದ ಮಧ್ಯ ಭಾವಣಿಯಲ್ಲಿ ಭುವನೇಶ್ವರಿಯಲ್ಲಿ ಅರಳಿದ ಪದ್ಮದ ಅಲಂಕಾರವಿದೆ. ನವರಂಗದ ಕಂಬಗಳನ್ನು ಬಳಪದ ಕಲ್ಲಿನಿಂದ ತಿರುಗಣಿ ಯಂತ್ರದ ಸಹಾಯದಿಂದ ನಿರ್ಮಿಸಿದ್ದಾರೆ. ಕಂಬಗಳ ಪೀಠಭಾಗವು ಚೌಕಾಕಾರವಾಗಿದೆ. ದಂಡದ ಭಾಗವು ವೃತ್ತಕಾರವಾದ ಬಳೆಗಳಿಂದ ಆವೃತ್ತವಾಗಿದೆ. ದಂಡಾಗ್ರ ಭಾಗವು ಚೌಕ ಕುಂಭ ಬಳೆಗಳ ಮಾಲಂಕಾರವನ್ನು ಹೊಂದಿದೆ. ತರಂಗ ಮಾದರಿಯ ಭೋದಿಗೆಯನ್ನು ಕಂಡರಿಸಲಾಗಿದೆ. ಮುಖ್ಯದ್ವಾರವು ಪಂಚಶಾಖೆಗಳಿಂದ ಕೂಡಿದ್ದು ದ್ವಾರಪಾಲಕರು ಮತ್ತು ಗಂಗ ಯಮುನೆಯರ ಶಿಲ್ಪವನ್ನು ಕೆತ್ತಲ್ಪಟ್ಟಿದೆ. ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಹೊಂದಿದೆ. ಆದರೆ ಶಿಖರವು ನಾಶವಾಗಿದೆ. ಅದಿಷ್ಠಾನವು ಉಪನ, ಜಗತಿ, ಪದ್ಮಗಳ ಮತ್ತು ಕಪೋತ ಭಾಗಗಳನ್ನು ಒಳಗೊಂಡಿದ್ದು, ಭಿತ್ತಿಯು ಸರಳವಾಗಿದ್ದು ಮಧ್ಯದಲ್ಲಿ ಎರಡು ಚಾಚು ಪಟ್ಟಿಕೆಗಳ ಪ್ರಸ್ತಾರವು ಸಮತಟ್ಟಾಗಿದೆ. ದ್ವಾರವನ್ನು ಪ್ರವೇಶಿಸಲು ಸೋಪಾನಗಳಿದ್ದು ಅದರ ಎಡ ಮತ್ತು ಬಲಭಾಗದಲ್ಲಿ ಹಸ್ತ-ಹಸ್ತಿಯಿದೆ.

ಈಶ್ವರ ದೇವಾಲಯ

ಗ್ರಾಮ : ಹಿರೇಮಳಲಿ

ಸ್ಥಳ : ಗ್ರಾಮದ ಉತ್ತರ ಭಾಗಕ್ಕೆ

ಕಾಲ : ಕ್ರಿ.ಶ. ೧೨ನೇ ಶತಮಾನ

ಶೈಲಿ : ಕಲ್ಯಾಣದ ಚಾಲುಕ್ಯರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಮಂಜು ನಾಯ್ಕ ಆರ್., ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ೨೦೧೬, ಪು.೬೮

ಈ ದೇವಾಲಯವು ಶಾಸನೋಕ್ತ ದೇವಾಲಯವಾಗಿದ್ದು, ಸ್ಥಳೀಯರು ಈಶ್ವರ, ಕಲ್ಲೇಶ್ವರ ಎಂಬ ಹೆಸರುಗಳಿಂದ ಕರೆಯುತ್ತಾರೆ. ತ್ರಿಕೂಟ ಶೈಲಿಯಲ್ಲಿರುವ ದೇವಾಲಯವು ಮೂರು ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತೆ ಒಂದು ನವರಂಗ ಮುಖ್ಯದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ.

ಚೌಕಾಕಾರದ ಪಶ್ಚಿಮದ ಗರ್ಭಗೃಹವು ಮುಖ್ಯಗರ್ಭಗೃಹವಾಗಿದ್ದು, ಶಿವಲಿಂಗವನ್ನು ಹೊಂದಿದೆ. ಅಂತರಾಳದಲ್ಲಿ ನಂದಿ ಮೂರ್ತಿಶಿಲ್ಪವಿದೆ. ಬಾಗಿಲವಾಡವು ಆರುಪಟ್ಟಿಕೆಗಳನ್ನು ಹೊಂದಿದ್ದು ಸರಳ ಮಾದರಿಯಲ್ಲಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಉತ್ತರ ಗರ್ಭಗೃಹದಲ್ಲಿ ನಂದಿಮೂರ್ತಿ ಶಿಲ್ಪವಿದೆ. ಪೂರ್ವಗರ್ಭಗೃಹದಲ್ಲಿ ಶಿವಲಿಂಗ ಮತ್ತು ನಂದಿ ಮೂರ್ತಿಶಿಲ್ಪವಿದೆ. ಬಾಗಿಲವಾಡವು ಸರಳವಾಗಿದ್ದು ಲಲಾಟದಲ್ಲಿ ಯಾವುದೇ ಶಿಲ್ಪವಿರುವುದಿಲ್ಲ. ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು, ಅವುಗಳ ಪೀಠವು ಚೌಕಾಕಾರವಾಗಿದ್ದು ದಂಡಾಗ್ರವು ಹದಿನಾರು ಮುಖದಲ್ಲಿ ಚೌಕಾವೃತ್ತಕಾರವಾಗಿ ಮೂರುಹಂತದಲ್ಲಿ ಕಂಡರಿಸಲಾಗಿದ್ದು, ಅದರ ಮೇಲ್ಭಾಗ ಚೌಕಾಕಾರವಾಗಿದೆ. ದಂಡಾಗ್ರವು, ನಾಸಿ, ಕುಂಭ ಮಾದರಿಯ ತೆಳುವಾದ ಫಲಕ, ಹಾರಿಕಾ, ವೃತ್ತವೇತ್ರ ಅದರ ಮೇಲೆ ಭೋದಿಗೆ ಇದೆ. ನವರಂಗದ ಮಧ್ಯದ ಮೇಲ್ಛಾವಣಿಯಲ್ಲಿನ ಭುವನೇಶ್ವರಿಯು ಅಷ್ಟಾಕೋನಕಾರದ ನಡುವೆ ಪದ್ಮದ ಅಲಂಕರಣವಿದೆ. ಮುಖ್ಯದ್ವಾರದ ಮುಂಭಾಗದಲ್ಲಿ ಎರಡು ಕಂಬಗಳ ಮುಖಮಂಟಪವಿದೆ. ಸೋಪಾನಗಳ ವ್ಯವಸ್ಥೆ ಇದೆ. ದೇವಾಲಯದ ಊರ್ಧ್ವಮುಖವು ಅದಿಷ್ಟಾನ, ಭಿತ್ತಿ, ಪ್ರಸ್ತಾರವಿದ್ದು, ಶಿಖರವು ನಾಶವಾಗಿದೆ. ಅದಿಷ್ಠಾನವು ಮಣ್ಣಿನಲ್ಲಿ ಹೂತು ಹೋಗಿದೆ. ಭಿತ್ತಿಯು ಸರಳವಾಗಿದ್ದು ಪ್ರಸ್ತಾರವು ಸಮತಟ್ಟಾಗಿದೆ.

ಬೆಟ್ಟದ ಮಲ್ಲೇಶ್ವರ ದೇವಾಲಯ

ಗ್ರಾಮ : ತ್ಯಾವಣಿಗಿ

ಸ್ಥಳ : ಗ್ರಾಮದ ಮಧ್ಯಭಾಗದಲ್ಲಿದೆ.

ಕಾಲ : ಕ್ರಿ.ಶ. ೧೨ನೇ ಶತಮಾನ

ಶೈಲಿ : ಕಲ್ಯಾಣದ ಚಾಲುಕ್ಯರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಮಂಜು ನಾಯ್ಕ ಆರ್., ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೭೨

ಈ ದೇವಾಲಯವು ಗರ್ಭಗೃಹ ಅಂತರಾಳ ತೆರೆದ ನವರಂಗವನ್ನು ಹೊಂದಿದೆ. ದ್ವಾರಬಾಗಿಲು ಮತ್ತು ನವರಂಗದ ಗೋಡೆಗಳು ನಶಿಸಿಹೋಗಿದ್ದು, ತೆರೆದ ಮಂಟಪದ ರೀತಿಯಲ್ಲಿ ಕಂಡುಬರುತ್ತದೆ.

ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ, ಅಂತರಾಳವಿದೆ. ಸರಳ ಬಾಗಿಲವಾಡವನ್ನು ಹೊಂದಿದ್ದು, ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ನವರಂಗವು ವಿಷ್ಣುಕಾಂತಸ್ತಂಭ ಮಾದರಿಯಲ್ಲಿವೆ. ಪೀಠವು ಚೌಕಾಕಾರವಾಗಿದ್ದು, ದಂಡವು ವೃತ್ತ, ೧೬ ಮುಖಗಳ ಚೌಕಕಾರದ ಉಬ್ಬು ರಚನೆ ಹೊಂದಿದ್ದು ನಂತರ ವೃತ್ತಕಾರದ ರಚನೆ, ಅದರ ಮೇಲ್ಭಾಗದ ಚೌಕಾಕಾರದ ರಚನೆಯನ್ನು ಕಾಣಬಹುದು. ದಂಡಾಗ್ರವು ನಾಸಿ, ಕುಂಭಫಲಕ, ಹಾರಿಕಾ, ವೃತ್ತವೇತ್ರ, ಭೋದಿಗೆಯನ್ನು ಕಂಡರಿಸಲಾಗಿದೆ. ಭೋದಿಗೆಯು ಸರಳ ಮಾದರಿಯಲ್ಲಿದೆ. ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ ಶಿಖರವನ್ನು ಹೊಂದಿದೆ. ಆದರೆ ಪ್ರಸ್ತುತ ಸರಳ ಅದಿಷ್ಟಾನವನ್ನು ಕಂಡುಬರುತ್ತದೆ.. ಭಿತ್ತಿ ಪ್ರಸ್ತಾರ, ಶಿಖರವು ಕಾಲದ ಹೊಡೆತಕ್ಕೆ ಸಿಕ್ಕಿ ನಶಿಸಿಹೋಗಿವೆ.

ಈಶ್ವರ ದೇವಾಲಯ

ಗ್ರಾಮ	:	ಮುದಿಗೆರೆ
ಸ್ಥಳ	:	ಮುದಿಗೆರೆ – ತಿಮ್ಲಾಪುರ ಗ್ರಾಮದ ನಡುವಿನ ಕೆರೆಕೋಡಿಯ ಬಳಿ
ಕಾಲ	:	ಕ್ರಿ.ಶ. ೧೨ನೇ ಶತಮಾನ
ಶೈಲಿ	:	ಕಲ್ಯಾಣದ ಚಾಲುಕ್ಯರು
ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ೨೦೧೬, ಪು.೭೦

ಈ ದೇವಾಲಯವು ಏಕಕೂಟ ಶೈಲಿ, ನಿರಂದರ ಮಾದರಿಯ ದೇವಾಲಯವಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹೊಂದಿದ್ದು, ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅಂತರಾಳವನ್ನು ಹೊಂದಿದೆ. ಅಂತರಾಳದ ಬಾಗಿಲವಾಡ ಮೂರು ಶಾಖೆಗಳನ್ನು ಹೊಂದಿದೆ. ಅದರ ಎಡ ಮತ್ತು ಬಲಭಾಗದಲ್ಲಿ ಚೌಕಾಕಾರದ ಜಾಲಂದರವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅವುಗಳ ಪಾದ ಭಾಗದಲ್ಲಿ ಚೌಕಮುಖ, ಅದರ ಮೇಲ್ಭಾಗದ ದಂಡಭಾಗದಲ್ಲಿ ಅಷ್ಟಮುಖ ಚೌಕಾಕಾರವಿದೆ. ದಂಡಾಗ್ರದಲ್ಲಿ ಚೌಕ ಮುಖ ಆಕಾರ ಭೋದಿಗೆಯವರೆಗಿದೆ. ಈ ಸ್ತಂಭಗಳನ್ನು ಮಿಶ್ರಕ ಸ್ತಂಭ ಎಂದು ಕರೆಯುತ್ತಾರೆ. ನವರಂಗದ ಮಧ್ಯದ ಛಾವಣಿಯಲ್ಲಿ ಅಷ್ಟಾಕೋನಕಾರದ ರಚನೆಯಲ್ಲಿ

ಭುವನೇಶ್ವರಿಯ ಪದ್ಮಲಂಕಾರವಿದೆ. ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರವನ್ನು ಹೊಂದಿದೆ. ಆದರೆ ಶಿಖರವು ನಾಶವಾಗಿದೆ. ಅದಿಷ್ಠಾನ, ಭಿತ್ತಿ, ಪ್ರಸ್ತಾರವು ಮಣ್ಣಿನಲ್ಲಿ ಹೂತುಹೋಗಿ ಹಿಂಭಾಗವು ದಿಬ್ಬದಾಕಾರವಾಗಿ ಕಾಣುತ್ತದೆ.

ಶ್ರೀ ಮಧುಕೇಶ್ವರ ದೇವಾಲಯ ಅಥವಾ ಮಲ್ಲೇಶ್ವರ ದೇವಾಲಯ

ಗ್ರಾಮ : ಮೆದಕೆರೆ

ಸ್ಥಳ : ಗ್ರಾಮದ ಹೊರಭಾಗದ ಗದ್ದೆಯಲ್ಲಿದೆ.

ಕಾಲ : ಕ್ರಿ.ಶ. ೧೨ನೇ ಶತಮಾನ

ಶೈಲಿ : ಕಲ್ಯಾಣದ ಚಾಲುಕ್ಯರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಓಬಳೇಶಪ್ಪ ಎಂ.ಆರ್., ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಒಂದು ಅಧ್ಯಯನ, ಪು.೫೮

ಈ ದೇವಾಲಯವು ತ್ರಿಕೂಟಾಚಲ ದೇವಾಲಯವಾಗಿದ್ದು, ಮೂರು ಗರ್ಭಗೃಹ, ಮುಖ್ಯಗರ್ಭಗೃಹವು ಅಂತರಾಳ, ನವರಂಗವಿದ್ದು, ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ.

ಚೌಕಾಕಾರದ ಪಶ್ಚಿಮಗರ್ಭಗೃಹವು ಶಿವಲಿಂಗವನ್ನು ಹೊಂದಿದ್ದು ವಿತಾನದಲ್ಲಿ ಅರಳಿದ ಪದ್ಮವಿದೆ. ಅಂತರಾಳದ ಬಲಗೋಡೆಯಲ್ಲಿ ಚಿಕ್ಕ ಮೂರ್ತಿಶಿಲ್ಪಗಳಿವೆ. ಬಾಗಿಲವಾಡವು ರತ್ನ, ಲತಾ, ಸ್ತಂಭ ಶಾಖೆಗಳಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಅಂತರಾಳದ ಮುಂಭಾಗದಲ್ಲಿ ನಂದಿ ಮೂರ್ತಿಶಿಲ್ಪವಿದೆ. ಪೂರ್ವದ ಗರ್ಭಗುಡಿ ಚೌಕಾಕಾರವಾಗಿದ್ದು ಯಾವುದೇ ಶಿಲ್ಪವಿಲ್ಲ, ಉತ್ತರ ಗರ್ಭಗುಡಿ ಸರಳವಾಗಿದೆ. ನವರಂಗವು ಬಳಪದಕಲ್ಲನ್ನು ಬಳಸಿ ತಿರುಗಣಿ ಯಂತ್ರದಿಂದ ನಿರ್ಮಿಸಿದ ನಾಲ್ಕು ಕಂಬಗಳಿಂದ ನಿಲ್ಲಿಸಲ್ಪಟ್ಟಿದೆ. ಪೀಠವು ಆಯಾತಾಕಾರವಾಗಿದ್ದು, ಪಾದವು ಚೌಕಾಕಾರವಾಗಿದ್ದು, ದಂಡವು, ಪದ್ಮಬಂಧ ಅದರ ಮೇಲೆ ಮಾಲಾಸ್ಥಾನದ ಅಲಂಕರಣವಿದೆ. ದಂಡಾಗ್ರವು ಕಲಶ, ತಾಟಿಕಾ, ಘಟ, ಮಂಡಿ, ಫಲಕಗಳನ್ನು ಹೊಂದಿದೆ. ಭೋದಿಗೆಯು ಸರಳವಾಗಿದೆ. ನವರಂಗದ ಮಧ್ಯದ ಛಾವಣಿಯಲ್ಲಿ ಭುವನೇಶ್ವರಿಯು ಅರಳಿದ ಪದ್ಮದ ಅಲಂಕರಣವಿದೆ. ಪ್ರವೇಶದ್ವಾರದ ಬಾಗಿಲವಾಡವು ಸರಳವಾಗಿದೆ. ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ಸೋಪಾನದ ವ್ಯವಸ್ಥೆಯಿದೆ. ನವರಂಗದಲ್ಲಿ ಗಣೇಶ, ನಾಗಶಿಲ್ಪಗಳಿವೆ. ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಹೊಂದಿದ್ದು, ಶಿಖರವು ನಾಶವಾಗಿದೆ. ಅದಿಷ್ಠಾನ ಮತ್ತು ಭಿತ್ತಿಯು ಸರಳವಾಗಿದೆ. ಪ್ರಸ್ತುತ ದೇವಾಲಯವು ನಾಶವಾಗಿದೆ.

ಶ್ರೀರಾಮೇಶ್ವರ ದೇವಾಲಯ

ಗ್ರಾಮ : ಸಿದ್ಧರ ಮಠ

ಸ್ಥಳ : ಗ್ರಾಮದ ಮುಖ್ಯರಸ್ತೆಯ ಎಡಭಾಗದಲ್ಲಿದೆ.

ಕಾಲ : ಕ್ರಿ.ಶ. ೧೪ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಏಕಕೂಟವಾಗಿದೆ. ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದ್ದು, ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ವಿತಾನದಲ್ಲಿ ಅರಳಿದ ಪದ್ಮವಿದ್ದು ಗರ್ಭಗೃಹವು ಸರಳ ಬಾಗಿಲವಾಡದಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಗರ್ಭಗೃಹದ ಮುಂಭಾಗದಲ್ಲಿ ನಂದಿ ಮೂರ್ತಿಶಿಲ್ಪವಿದೆ. ನವರಂಗವನ್ನು ಕಪ್ಪುಕಲ್ಲನ್ನು ಬಳಸಿ ತಿರುಗಣಿಯಂತ್ರದ ಸಹಾಯದಿಂದ ರಚಿಸಿದ ನಾಲ್ಕು ಕಂಬಗಳಿಂದ ನೃತ್ಯಮಂಟಪದ ವೇದಿಕೆಯನ್ನು ನಿರ್ಮಿಸಲಾಗಿದೆ. ಮೇಲ್ಚಾವಣಿಯ ಭುವನೇಶ್ವರಿಯು ಅಷ್ಟಾಕೋನಾಕಾರದಲ್ಲಿ ಕಲ್ಲಿನ ರಚನೆಯಿಂದ ಕಂಡರಿಸಲಾಗಿದೆ. ಕಂಬಳ ಪೀಠವು ಆಯಾತಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ದಂಡವು ಬಳೆಗಳ ವೃತ್ತಗಳನ್ನೊಳಗೊಂಡಿದೆ. ದಂಡವು ಪದ್ಮ, ಘಟ, ಕುಂಭದ ರಚನೆಗಳನ್ನು ಹೊಂದಿದ ಪದ್ಮಬಂಧ ಮಾದರಿಯ ಸ್ತಂಭಗಳಾಗಿವೆ. ನವರಂಗದ ಎಡಭಾಗದಲ್ಲಿ ಚಿಕ್ಕ ಪ್ರವೇಶ ದ್ವಾರವಿದ್ದು, ಸರಳ ಬಾಗಿಲವಾಡ, ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ಸೋಪಾನಗಳ ವ್ಯವಸ್ಥೆಯಿದೆ. ಅದರ ಅಕ್ಕ-ಪಕ್ಕ ಹಸ್ತ-ಹಸ್ತಿಗಳಿವೆ. ನವರಂಗದ ಮುಖ್ಯ ಪ್ರವೇಶದ್ವಾರವು ಬಾಗಿಲವಾಡವು ಸರಳವಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಮುಖಮಂಟಪವು ಎರಡು ಸರಳ ಕಂಬಗಳನ್ನು ಹೊಂದಿದೆ. ಸೋಪಾನಗಳ ವ್ಯವಸ್ಥೆ ಇದೆ. ಇತ್ತೀಚೆಗೆ ಮುಖಮಂಟಪದ ಸುತ್ತ ಪ್ರಕಾರವನ್ನು ನಿರ್ಮಿಸಿ, ಕಟಂಜನದ ವ್ಯವಸ್ಥೆ ಮಾಡಲಾಗಿದೆ.

ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಗ್ರೀವ, ಶಿಖರ, ಕಳಶ ಹೊಂದಿದೆ. ಅದಿಷ್ಠಾನವು ಸರಳವಾಗಿದೆ. ಭಿತ್ತಿಯು ಕಲ್ಲಿನಿಂದ ನಿರ್ಮಿಸಲಾಗಿದ್ದು ಸರಳವಾಗಿದೆ. ಪ್ರಸ್ತಾರವು ಸಮತಟ್ಟಾಗಿದೆ. ಶಿಖರವು ಸ್ಥೂಪಿಯನ್ನು ಹೊಂದಿದೆ. ಕಲ್ಯಾಣದ ಚಾಲುಕ್ಯರು ಬಳಪದ ಕಲ್ಲು ಬಳಸಿ ಕಟ್ಟಿಸಿದ್ದ ದೇವಾಲಯವನ್ನು ವಿಜಯನಗರ ಕಾಲದಲ್ಲಿ ಈ ದೇವಾಲಯವನ್ನು ಗ್ರಾನೈಟ್ ಕಲ್ಲಿನಿಂದ ನವೀಕರಿಸಿದ್ದಾರೆ. ಇದಕ್ಕೆ ನವರಂಗ, ಮುಖಮಂಟಪ, ಭಿತ್ತಿ, ಶಿಖರಗಳು ಸಾಕ್ಷಿಯಾಗಿವೆ. ಆರಂಭದಲ್ಲಿ ಇದೊಂದು ಜೈನ ಬಸದಿಯಾಗಿತ್ತೆಂದು ಅಲ್ಲಿ ಲಭ್ಯವಾದ

ಕುರುವುಗಳಿಂದ ಗ್ರಹಿಸಬಹುದು. ಆನಂತರದ ಕಾಲಘಟ್ಟದಲ್ಲಿ ಶೈವ ದೇವಾಲಯವಾಗಿ ಮಾರ್ಪಡಿಸಿದ್ದಾರೆ.

ಕಲ್ಲೇಶ್ವರ ದೇವಾಲಯ

ಗ್ರಾಮ : ತ್ಯಾವಣಿಗಿ

ಸ್ಥಳ : ಊರಿನ ಹೊರಭಾಗದ ಹಳ್ಳದ ದಿಬ್ಬದ ಮೇಲಿದೆ

ಕಾಲ : ಕ್ರಿ.ಶ. ೧೪ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಿತ : ಅಪ್ರಕಟಿತ

ಈ ದೇವಾಲಯವು ಗರ್ಭಗೃಹ, ನವರಂಗ, ಪೂರ್ವಕ್ಕೆ ಅಭಿಮುಖವಾದ ಪ್ರವೇಶ ದ್ವಾರವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಸರಳ ಬಾಗಿಲವಾಡವಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ನವರಂಗದಲ್ಲಿ ಬಳಪದ ಕಲ್ಲಿನ ನಾಲ್ಕು ಕಂಬಗಳಿಂದ ನಿರ್ಮಿತವಾದ ನಂದಿಮಂಟಪವಿದೆ. ಕಂಬಗಳ ಪೀಠವು ಆಯಾತಾಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ದಂಡವು ೧೬ ಮುಖಗಳಾಗಿ ಕತ್ತರಿಸಲ್ಪಪಟ್ಟಿದ್ದು ಉಬ್ಬು, ತಗ್ಗುಗಳನ್ನು ಹೊಂದಿದೆ. ದಂಡವು ಚೌಕಾಕಾರವಾಗಿದೆ. ಈ ರೀತಿಯ ಕಂಬಗಳನ್ನು 'ರುದ್ರಕಾಂತ ಸ್ತಂಭ'ಗಳೆಂದು ಕರೆಯುವರು. ನವರಂಗದ ಮೇಲ್ಭಾಗದಲ್ಲಿ ಅರಳಿದ ಪದ್ಮದ ಅಲಂಕರಣವಿದೆ. ಪ್ರವೇಶದ್ವಾರವು ಸರಳ ಬಾಗಿಲವಾಡ, ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪಯನ್ನು ಹೊಂದಿದೆ. ದೇವಾಲಯವು ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಗ್ರೀವ, ಕಳಶವನ್ನು ಹೊಂದಿದ್ದು, ಅದಿಷ್ಠಾನ, ಭಿತ್ತಿ ಸರಳವಾಗಿದ್ದು, ಸಮತಟ್ಟಾದ ವಿಮಾನವಿದೆ. ಆದರೆ ಪ್ರಸ್ತುತ ದೇವಾಲಯದ ಊರ್ಧ್ವಮುಖವನ್ನು ನವೀಕರಿಸಲಾಗಿದೆ. ಕಲ್ಯಾಣದ ಚಾಲುಕ್ಯರ ಕಾಲದ ಈ ದೇವಾಲಯವು ಸಂಪೂರ್ಣವಾಗಿ ವಿನಾಶದ ಅಂಚಿನಲ್ಲಿದ್ದರಿಂದ ೧೪ನೇ ಶತಮಾನದ ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ ಈ ದೇವಾಲಯವು ನವೀಕರಣಗೊಂಡಿದ್ದಿತ್ತು. ಪ್ರಸ್ತುತ ಸಂಪೂರ್ಣವಾಗಿ ನವೀಕರಿಸಲಾಗಿದೆ. ದೇವಾಲಯದ ಆವರಣದಲ್ಲಿ ಪ್ರಾಚೀನ ಅವಶೇಷಗಳು ಲಭ್ಯವಾಗಿವೆ.

ಮಲ್ಲಿಕಾರ್ಜುನ ದೇವಾಲಯ

ಗ್ರಾಮ : ಮಾವಿನ ಹೊಳೆ

ಸ್ಥಳ : ಗ್ರಾಮದ ಮಹಾರುದ್ರಸ್ವಾಮಿ ದೇವಾಲಯದ ಪ್ರಾಂಗಣದಲ್ಲಿದೆ.

ಕಾಲ : ಕ್ರಿ.ಶ. ೧೫ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್., ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೫

ಈ ದೇವಾಲಯವು ಏಕಕೂಟ ಶೈಲಿಯಲ್ಲಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು, ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಛಾವಣಿಯಲ್ಲಿ ವಿತಾನವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಬಾಗಿಲವಾಡವು ಮೂರು ಶಾಖೆಗಳನ್ನು ಹೊಂದಿದ್ದು, ಸರಳವಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳನ್ನು ಕಣಶಿಲೆ ಬಳಸಿ ಕೆತ್ತಲ್ಪಟ್ಟಿದ್ದು, ಪೀಠಭಾಗವು ಆಯಾತಕಾರವಿದೆ. ದಂಡಭಾಗವು ಚೌಕಾಕಾರದಲ್ಲಿದ್ದು ಅದರ ಮೇಲ್ಭಾಗವು ಷಷ್ಠಿ ಮುಖಗಳಿಂದ ಕತ್ತರಿಸಲ್ಪಟ್ಟಿದೆ. ದಂಡಾಗ್ರವು ಚೌಕಾಕಾರವನ್ನು ಹೊಂದಿರುವ ಸರಳ ಮಿಶ್ರಕ ಸ್ತಂಭ ಮಾದರಿಯಲ್ಲಿದೆ. ನವರಂಗದ ಮಧ್ಯದ ಛಾವಣಿಯಲ್ಲಿ ಅಷ್ಟಾಕೋನಾಕಾರದ ರಚನೆಯನ್ನು ರಚಿಸಿದ್ದು ಅದರ ಮಧ್ಯದಲ್ಲಿನ ಭುವನೇಶ್ವರಿಯು ಅರಳಿದ ಪದ್ಮದ ಅಲಂಕಾರವನ್ನು ಹೊಂದಿದೆ. ಊರ್ಧ್ವಮುಖವು ಸರಳ ಅದಿಷ್ಠಾನ, ಸರಳಭಿತ್ತಿ, ಸಮತಟ್ಟಾದ ಪ್ರಸ್ತಾರವನ್ನು ಹೊಂದಿದ್ದು ಶಿಖರವು ನಾಶವಾಗಿದೆ. ಪ್ರಸ್ತುತ ದೇವಾಲಯದ ಶಿಖರವು ಇತ್ತೀಚೆಗೆ ನಿರ್ಮಿಸಲ್ಪಟ್ಟಿದೆ.

ತಾವರಕೆರೆ ನೀಲಕಂಠೇಶ್ವರ ದೇವಾಲಯ

ಗ್ರಾಮ : ತಾವರೆಕೆರೆ

ಸ್ಥಳ : ಸರ್ಕಾರಿ ಪ್ರಾಥಮಿಕ ಶಾಲೆಯ ಬಲಗಡೆಗೆಯಿದೆ.

ಕಾಲ : ಕ್ರಿ.ಶ. ೧೪ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಗರ್ಭಗೃಹ ನವರಂಗ ನಂದಿಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಸರಳ ಬಾಗಿಲವಾಡ, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದ್ದು, ನವರಂಗದಲ್ಲಿ ನಂದಿಮಂಟಪವು ನಾಲ್ಕು ಕಂಬಗಳಿಂದ ನಿರ್ಮಿಸಲ್ಪಟ್ಟಿದೆ. ಒಂದು ಕಂಬದಲ್ಲಿ ಶಾಸನವಿದೆ. ಪೀಠವು ಆಯಾತಾಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ದಂಡವು ಅಷ್ಟಮುಖದಲ್ಲಿ ಕತ್ತರಿಸಲ್ಪಟ್ಟಿದೆ. ದಂಡಾಗ್ರವು ನಾಲ್ಕು ಮುಖವನ್ನು ನಂತರ ವೃತ್ತಕಾರವಾಗಿ ಕತ್ತರಿಸಲ್ಪಟ್ಟಿದೆ. ಇದನ್ನು 'ಸರಳ ವಿಷ್ಣುಕಾಂತ ಸ್ತಂಭ ಮಾದರಿ' ಸ್ತಂಭಗಳೆನ್ನುವರು. ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಗ್ರೀವ, ಕಳಶವನ್ನು ಹೊಂದಿದ್ದು ಪ್ರಸ್ತುತ ದೇವಾಲಯವು ಸಂಪೂರ್ಣವಾಗಿ ವಿನಾಶವಾಗಿದೆ. ಆದ್ದರಿಂದ ಗ್ರಾಮಸ್ಥರು ನವೀಕರಿಸಿದ್ದಾರೆ. ಈ ದೇವಾಲಯದ ಆವರಣದಲ್ಲಿ ಪ್ರಾಚೀನ ಕುರುಹುಗಳು ದೊರೆತಿವೆ.

ಚನ್ನಗಿರಿಯ ಬಸವಣ್ಣ ದೇವಾಲಯ

ಗ್ರಾಮ	:	ಚನ್ನಗಿರಿ
ಸ್ಥಳ	:	ಚನ್ನಗಿರಿ ಟೌನಿನ ಹೆಲಿಪ್ಯಾಡ್‌ನ ಪೂರ್ವಕ್ಕೆ (ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ ಪೂರ್ವದ ಖಾಲಿ ನಿವೇಶದಲ್ಲಿದೆ
ಕಾಲ	:	೧೫ನೇ ಶತಮಾನ
ಶೈಲಿ	:	ವಿಜಯನಗರ
ವಸ್ತು	:	ಕಣಶಿಲೆ
ಪ್ರಕಟಣೆ	:	ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೦

ಈ ದೇವಾಲಯವು ಗರ್ಭಗೃಹ, ತೆರೆದ ಮಂಟಪಗಳ ನವರಂಗ, ದಕ್ಷಿಣ ಅಭಿಮುಖಕ್ಕೆ ಗರ್ಭಗೃಹ ದ್ವಾರವಿದೆ. ಆಯಾತಾಕಾರದ ಗರ್ಭಗೃಹ ಹೊಂದಿದ್ದು, ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ, ವಿತಾನವಿದೆ. ಬಾಗಿಲವಾಡವು ಕಟುಪಂಜರ, ಲತಾಬಳ್ಳಿ, ಸ್ತಂಭಶಾಖೆಗಳಿಂದ ಅಲಂಕೃತಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ. ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪದ ಬದಲು ಬಸವಣ್ಣನ ಶಿಲ್ಪವಿರುವುದು ವಿಶೇಷವಾಗಿದೆ. ತೆರೆದ ಮಂಟಪದಲ್ಲಿ ನಾಲ್ಕು ಸ್ತಂಭಗಳಿವೆ. ಕಂಬಗಳ ಪೀಠವು ಆಯಾತಾಕಾರವಾಗಿದ್ದು, ಪಾದವು ಚೌಕಾಕಾರವಾಗಿದೆ. ದಂಡಾಗ್ರವು ಅಷ್ಟಚೌಕಮುಖಗಳ ಆಕಾರದಲ್ಲಿ ಕೆತ್ತಲಾಗಿದ್ದು, ದಂಡ ಭಾಗದಲ್ಲಿ ಚೌಕಾಕಾರವಾಗಿದೆ. ಇದು ಮಿಶ್ರಕಸ್ತಂಭ ಮಾದರಿಯ ಲಕ್ಷಣವನ್ನು ಹೊಂದಿದೆ. ನವರಂಗದ(ತೆರೆದ ಮಂಟಪದ ಪೂರ್ವದ ಗೋಡೆಯ ನಶಿಸಿಹೋಗಿದೆ) ಮಧ್ಯದ ಭಾವಣಿಯಲ್ಲಿ

ಭುವನೇಶ್ವರಿಯ ಶಿಲ್ಪಕ್ಕೆ ಸರಳವಾದ ಅರಳಿದ ಪದ್ಮದ ಅಲಂಕರಣವಿದೆ. ದೇವಾಲಯಕ್ಕೆ ಪ್ರವೇಶಿಸಲು ಸೋಪಾನಗಳ ವ್ಯವಸ್ಥೆಯಿದೆ.

ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ ಹೊಂದಿದ್ದು ಶಿಖರ ನಾಶವಾಗಿದೆ. ಅದಿಷ್ಠಾನ ಮತ್ತು ಭಿತ್ತಿಯು ಸರಳವಾಗಿದ್ದು, ಕಲ್ಲುಗಳನ್ನು ಜೋಡಿಸುವುದರ ಮೂಲಕ ರಚಿಸಿದ್ದಾರೆ. ಪ್ರಸ್ತಾರವು ಸಮತಟ್ಟವಾದ ಛಾವಣಿಯನ್ನು ಹೊಂದಿದೆ.

ಸೋಮೇಶ್ವರ ದೇವಾಲಯ

ಗ್ರಾಮ : ಅಸ್ತಾಪನಹಳ್ಳಿ

ಸ್ಥಳ : ಗ್ರಾಮದ ಪೂರ್ವ ದಿಕ್ಕಿನಲ್ಲಿದೆ

ಕಾಲ : ಕ್ರಿ.ಶ. ೧೬ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಬಳಪದ ಕಲ್ಲು

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೨

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದ್ದು, ಪ್ರವೇಶದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಛಾವಣಿಯಲ್ಲಿ ವಿತಾನವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಅಂತರಾಳದಲ್ಲಿ ನಂದಿ ಮೂರ್ತಿಶಿಲ್ಪವಿದೆ. ತ್ರಿಶಾಖೆಗಳಾದ ರತ್ನ, ಲತಾ, ಸ್ತಂಭ ಶಾಖೆಗಳಿಂದ ಅಲಂಕೃತಗೊಂಡಿದ್ದು ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ನವರಂಗದಲ್ಲಿ ಸ್ತಂಭಗಳನ್ನು ಕಪ್ಪುಶಿಲೆಯಿಂದ ರಚಿಸಿದ್ದಾರೆ. ಸರಳ ಮಿಶ್ರಕ ಸ್ತಂಭ ಮಾದರಿಯಲ್ಲಿ ಸ್ತಂಭಗಳಿವೆ. ಪೀಠವು ಆಯಾತ, ಪಾದ, ಚೌಕ, ದಂಡಾವು ಅಷ್ಟಮುಖವಿದ್ದು, ದಂಡಾಗ್ರವು ಕಲಶ, ತಟಿಕಾ, ಘಟ, ಮಂಡಿ ಫಲಕವನ್ನು ಹೊಂದಿದ್ದು ಸರಳ ಭೋದಿಗೆ ಇದೆ. ನವರಂಗದಲ್ಲಿನ ಮಧ್ಯದ ಛಾವಣಿಯಲ್ಲಿನ ಭುವನೇಶ್ವರಿಯಲ್ಲಿ ಅರಳಿದ ಪದ್ಮದ ಅಲಂಕರಣವಿದೆ.

ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರವನ್ನು ಹೊಂದಿದ್ದು ಶಿಖರ ಕಳಶ, ಸ್ತೂಪಿ ಇದೆ. ಅದಿಷ್ಠಾನವು ಸರಳವಾಗಿದೆ, ಭಿತ್ತಿಯು ಕುಡ್ಯಸ್ತಂಭಗಳಿಂದ ಅಲಂಕೃತಗೊಂಡಿದೆ. ಭಿತ್ತಿಯ ಮೇಲ್ಭಾಗದಲ್ಲಿನ ಪ್ರಸ್ತಾರವು ಸಮತಟ್ಟಾಗಿದೆ. ಶಿಖರವು ಆಮ್ಲಕ ಹೊಂದಿದ್ದು ಕಳಶವಿದೆ. ನವರಂಗದಲ್ಲಿ ಶಾಸನ ಮತ್ತು ನಾಗ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗದ ಹಿಂಭಾಗದಲ್ಲಿ ಮೂರ್ತಿಶಿಲ್ಪಗಳಿವೆ.

ಸಿದ್ದೇಶ್ವರ ದೇವಾಲಯ

ಗ್ರಾಮ : ಶಾಂತಿಸಾಗರ(ಸೂಳೆಕೆರೆ)

ಸ್ಥಳ : ಉತ್ತರ ಭಾಗದಲ್ಲಿರುವ ಬೆಟ್ಟದ ಮೇಲಿದೆ.

ಕಾಲ : ಕ್ರಿ.ಶ ೧೪೮೬-೧೫೪೬

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಎಂ. ಎ. ಆರ್. ವರದಿ, ಪು.೫೭

ಈ ದೇವಾಲಯದ ಆವರಣದಲ್ಲಿರುವ ಶಾಸನವು ಸು ಕ್ರಿ.ಶ. ೧೪೮೬-೧೫೪೬ರ ದೇವಾಲಯದ ಸ್ಥಾಪನೆಯಾದ ಬಗ್ಗೆ ವಿವರಣೆ ನೀಡುತ್ತದೆ.[೩೯] ಪ್ರಸ್ತುತ ದೇವಾಲಯದ ವಾಸ್ತುಶೈಲಿಯ ಆಧಾರದ ಮೇಲೆ ಕೆಳದಿ ಅರಸರ ಕಾಲದ ವಾಸ್ತು ರಚನಾ ವಿಧಾನದಿಂದ ರಚನೆಗೊಂಡಿದೆ ಎನ್ನುವುದು ಹಲವು ವಿದ್ವಾಂಸರ ಅಭಿಪ್ರಾಯ. ಆದರೆ ದೇವಾಲಯದ ನವರಂಗದಲ್ಲಿರುವ ನಾಲ್ಕು ಕಂಬಗಳ ಶೈಲಿ, ದೀಪಸ್ತಂಭ ಮತ್ತು ಪ್ರಕಾರದ ಗೋಡೆ ನಿರ್ಮಾಣಕ್ಕೆ ಬಳಸಿರುವ ಕಣಶಿಲೆ ಮೊದಲಾದವು ವಿಜಯನಗರದ ಕಾಲದ ವಾಸ್ತು ಲಕ್ಷಣಗಳಿಂದ ಪ್ರಭಾವಿತಗೊಂಡಿದೆ ಎಂಬ ಸಂಗತಿ ಗೋಚರಿಸುತ್ತದೆ. ಹಾಗಾಗಿ ಇದು ವಿಜಯನಗರದ ಕಾಲದೆಂದು ದತ್ತಿಬಿಟ್ಟ ವಿಚಾರವನ್ನು ಪ್ರಸ್ತಾಪಿಸಿರುವುದರಿಂದ ವಿಜಯನಗರ ಕಾಲಕ್ಕೆ ಸೇರಿದೆಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ನಂದಿಮಂಟಪ, ಮುಖಮಂಟಪವನ್ನು ಹೊಂದಿದ್ದು, ಪ್ರವೇಶದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ವಿತಾನದಲ್ಲಿ ಮುಗುಚಿದ ಪದ್ಮದ ಅಲಂಕರಣವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಅದರಲ್ಲಿ ಎರಡು ದೇವಕೋಷ್ಠಗಳಿವೆ. ಒಂದನೇ ಕೋಷ್ಠದಲ್ಲಿ ಕುದುರೆಯ ಮೇಲೆ ಆಸೀನರಾದ ಸ್ತ್ರೀ-ಪುರುಷರ ಮೂರ್ತಿಶಿಲ್ಪಗಳು, ಎರಡನೆಯದರಲ್ಲಿ ಕೇಶವನ ಮೂರ್ತಿಶಿಲ್ಪವಿದೆ. ವಿತಾನದಲ್ಲಿ ಪದ್ಮದ ಅಲಂಕಾರಣವಿದೆ. ಬಾಗಿಲವಾಡವು ಸರಳವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ.

ನವರಂಗವು ಆರು ಸ್ತಂಭಗಳಿಂದ ಕೂಡಿರುವುದು ವಿಶೇಷವಾಗಿದೆ. ಅಂತರಾಳದ ಮುಂಭಾಗದ ಕಂಬಗಳು ಪದ್ಮಕಾಂತ ಕಂಬಗಳಾಗಿವೆ. ನವರಂಗದ ಮಧ್ಯದಲ್ಲಿರುವ ನಾಲ್ಕು ಕಂಬಗಳ ಸಹಾಯದಿಂದ ನಂದಿಮಂಟಪ ನಿರ್ಮಿಸಿದ್ದಾರೆ. ಆ ಕಂಬಗಳ ಪೀಠವು ಆಯಾತಾಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ಅದರ ಮೇಲ್ಭಾಗದ ದಂಡವು

ಮೂವತ್ತೆರಡು ಕೋನಗಳಲ್ಲಿ ಚೌಕ ಮಾದರಿಯಲ್ಲಿ ಕತ್ತರಿಸಲಾಗಿದೆ. ಅದರ ಮೇಲ್ಭಾಗ ಮತ್ತೆ ಚೌಕಾಕಾರದ ಮಾದರಿಯಲ್ಲಿದೆ. ದಂಡಾಗ್ರವು ಕಲಶ, ತಾಟಿಕಾ, ಘಟ, ಮಂಡಿ, ಫಲಕವನ್ನು ಹೊಂದಿದೆ. ಈ ಸ್ತಂಭಗಳ ಲಕ್ಷಣಗಳು ಸ್ತಂಭ ಮಾದರಿಯಾಗಿದೆ. ಸ್ತಂಭದ ಕಲಶ ಭಾಗದಲ್ಲಿ ಗಣೇಶ, ಕಾರ್ತೀಕೇಯ, ವರಾಹಿ, ನೃತ್ಯಸ್ತ್ರೀಯರ ಉಬ್ಬುಶಿಲ್ಪಗಳಿವೆ. ನವರಂಗದ ಭುವನೇಶ್ವರಿಯು ಅರಳಿದ ಪದ್ಮದ ಅಲಂಕರಣವಿದೆ. ನವರಂಗದ ಪೂರ್ವದಿಕ್ಕಿನ ಮಧ್ಯದಲ್ಲಿನ ಮುಖ್ಯ ಪ್ರವೇಶದ್ವಾರವು ಅನೇಕ ಶಾಖೆಗಳಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಮುಂಭಾಗದಲ್ಲಿ ಚಿಕ್ಕ ಮಂಟಪವಿದ್ದು, ಎರಡು ಭಾಗದಲ್ಲಿ ಕಕ್ಷಾಸನವಿದೆ. ಮುಖಮಂಟಪದ ಎಡ ಭಾಗದಲ್ಲಿ ಚಿಕ್ಕ ಜಗತಿಯನ್ನು ನಿರ್ಮಿಸಿದ್ದು, ಮುಖಮಂಟಪದ ಎರಡು ಕಂಬಗಳ ಘಟ ಮತ್ತು ಫಲಕ ಭಾಗಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಅಲ್ಲಿನ 'ಭೋದಿಗೆ ಪುಷ್ಪಗಳಿಂದ ಅಲಂಕೃತಗೊಂಡಿರುವುದಕ್ಕೆ ಪುಷ್ಪಭೋದಿಗೆ ಎನ್ನಬಹುದು'. ಕಕ್ಷಾಸನದ ಎರಡೂ ಭಾಗದ ಹೊರಭಿತ್ತಿಯಲ್ಲಿ ಆನೆ, ಸಿಂಹ, ವ್ಯಾಳ, ಹಂಸ ಮತ್ತು ಮಿಥುನ ಶಿಲ್ಪಗಳಿವೆ.

ನವರಂಗದ ಉತ್ತರದಿಕ್ಕಿನ ಚಿಕ್ಕ ಪ್ರವೇಶದ್ವಾರವು ಸ್ತಂಭ ಶಾಖೆಯಿಂದ ಕೂಡಿದೆ. ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ಉತ್ತರ ಭಾಗದಲ್ಲಿ ನಾಟ್ಯಶಿವ ಹಾಗೂ ಆತನ ಬದಿಯಲ್ಲಿ ಅಂಜಲಿಮುದ್ರೆಯಲ್ಲಿರುವ ಭಕ್ತರ ಶಿಲ್ಪಗಳನ್ನು ಕಂಡರಿಸಲಾಗಿದೆ.

ದಕ್ಷಿಣ ಪ್ರವೇಶದ್ವಾರವು ಸಹ ಇದೇ ರೀತಿ ಅಲಂಕೃತವಾಗಿದೆ. ಆದರೆ ಉತ್ತರಾಂಗ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪಗಳ ಅಲಂಕರಣೆ ಕಂಡುಬರುವುದಿಲ್ಲ. ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಸ್ಥೂಪಿ, ಸುಖಾನಸಿಯನ್ನು ಹೊಂದಿದೆ. ಅದಿಷ್ಠಾನವು ಉಪಾನ, ಪದ್ಮ, ಕುಮುದಗಳಿಂದ ಕೂಡಿದೆ. ಇಲ್ಲಿ ಹೆಚ್ಚಿನ ಅಲಂಕರಣಗಳೇನೂ ಕಂಡುಬರುವುದಿಲ್ಲ. ಭಿತ್ತಿಯು ಸರಳವಾಗಿದೆ. ಕಪೋತವಿದ್ದು, ಪ್ರಸ್ತಾರವು ಸಮತಟ್ಟಾಗಿದೆ. ಪ್ರಸ್ತಾರದ ಮೇಲಿನ ಶಿಖರವು ಕದಂಬ ನಾಗರ(ಫಾಂಸಾನ) ಶೈಲಿಯಲ್ಲಿದೆ. ಶಿಖರದ ಮೇಲಿನ ಸ್ಥೂಪಿಯಲ್ಲಿ ಕಳಶವಿದೆ. ಶಿಖರದ ಮುಂಭಾಗದಲ್ಲಿ ಸುಖನಾಸಿ(ಶುಖನಾಸಿ) ಇದೆ.

ಮುಖ್ಯ ಪ್ರವೇಶದ್ವಾರದ ಮುಂಭಾಗದಲ್ಲಿ ಸುಮಾರು ಇಪ್ಪತ್ತು ಅಡಿ ಎತ್ತರದ ದೀಪಸ್ತಂಭವಿದೆ. ಅದರಲ್ಲಿ ಕೈಮುಗಿದು ನಿಂತಿರುವ ಭಕ್ತನೋರ್ವನ ಶಿಲ್ಪವಿದೆ. ದೇವಾಲಯದ ಸುತ್ತಲು ಪ್ರಕಾರವಿದೆ. ಪ್ರಕಾರದ ವಾಯುವ್ಯ ಮೂಲೆಯಲ್ಲಿ ಶಾಂತಮ್ಮನ ಚಿಕ್ಕ ದೇವಾಲಯವಿದೆ. ಪ್ರಕಾರಕ್ಕೆ ದಕ್ಷಿಣದಿಂದ ಪ್ರವೇಶದ್ವಾರವನ್ನು ಕಲ್ಪಿಸಿದೆ.

ವಿರೂಪಾಕ್ಷೇಶ್ವರ ದೇವಾಲಯ

ಗ್ರಾಮ : ಬಸವಪಟ್ಟಣ

ಸ್ಥಳ : ಗ್ರಾಮದ ಮಧ್ಯದ ಹೊಸಕೆರೆಯಲ್ಲಿದೆ

ಕಾಲ : ಕ್ರಿ.ಶ. ೧೬ನೇ ಶತಮಾನ

ಶೈಲಿ : ಸಂತೆಬೆನ್ನೂರು ನಾಯಕರು

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೧

ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹ, ನವರಂಗವಿರದೆ ತೆರದಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಪಕ್ಕದಲ್ಲಿ ತೋರಣಶಾಖೆಗಳಿವೆ. ರತ್ನ, ಸ್ತಂಭ ಮೂರು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ನವರಂಗದ ಬದಲು ಇರುವ ತೆರೆದಮಂಟಪವಿದೆ. ಅದರ ಅಕ್ಕ-ಪಕ್ಕದಲ್ಲಿ ಪ್ರಕಾರವಿದೆ. ಮುಂಭಾಗದಲ್ಲಿ ತೆರೆದ ಮಂಟಪದ ರೀತಿ ಕಾಣುತ್ತದೆ. ಅಲ್ಲಿ ಎರಡು ಸ್ತಂಭಗಳಿವೆ. ಅವುಗಳು ಪೀಠಭಾಗದಲ್ಲಿ ಆಯಾತಾಕಾರವಿದೆ. ಪಾದವು ಚೌಕಾಕಾರವಾಗಿದೆ, ದಂಡವು ಸಹ ನಾಲ್ಕು ಮೂಲೆಗಳಲ್ಲಿ ಕತ್ತರಿಸಲ್ಪಟ್ಟಿದೆ. ದಂಡಾಗ್ರವು ಚೌಕಾಕಾರವಾಗಿದ್ದು, ಘಟ, ವೇದಿವಸ್ತ್ರ, ಫಲಕಗಳನ್ನು ಕಂಡರಿಸಲಾಗಿದೆ. ಲಕ್ಷಣಗಳಲ್ಲಿ ವಿಷ್ಣುಕಾಂತ ಮಿಶ್ರಕಸ್ತಂಭ ಮಾದರಿಯಾಗಿದೆ. ದೇವಾಲಯವನ್ನು ಪ್ರವೇಶಿಸಲು ಸೋಪಾನಗಳಿವೆ. ಅದರ ಅಕ್ಕ-ಪಕ್ಕದಲ್ಲಿ ಹಸ್ತಿ-ಹಸ್ತಾ ಫಲಕಗಳಿವೆ. ದೇವಾಲಯದ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರವನ್ನು ಹೊಂದಿದೆ. ಶಿಖರವು ನಾಶವಾಗಿದೆ. ಅದಿಷ್ಠಾನ, ಭಿತ್ತಿಯು ಸರಳವಾಗಿದೆ, ಪ್ರಸ್ತಾರವು ಸಮತಟ್ಟಾಗಿದೆ.

ಮಾದೇಶ್ವರ ಅಥವಾ ಈಶ್ವರ ದೇವಾಲಯ

ಗ್ರಾಮ : ಬೆಳಲಗೆರೆ

ಸ್ಥಳ : ಗ್ರಾಮದ ಪಶ್ಚಿಮ ಗದ್ದೆಯಲ್ಲಿದೆ.

ಕಾಲ : ಕ್ರಿ.ಶ. ೧೭ನೇ ಶತಮಾನ

ಶೈಲಿ : ಸಂತೆಬೆನ್ನೂರು ನಾಯಕರು

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ೨೦೧೬, ಪು.೮೬

ಈ ದೇವಾಲಯವು ಏಕಕೂಟಾಚಲವಾಗಿದ್ದು, ಗರ್ಭಗೃಹ, ನವರಂಗ, ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲವಾಡವು ಸರಳವಾಗಿದ್ದು, ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ, ನವರಂಗದಲ್ಲಿ ನಾಲ್ಕು ಕಂಬಗಳಿಂದ ರಚಿತವಾದ ನಂದಿಮಂಟಪವಿದೆ.

ನವರಂಗದಲ್ಲಿರುವ ಸ್ತಂಭಗಳ ಪೀಠವು ಆಯಾತಾಕಾರವಾಗಿದ್ದು, ಪಾದವು ಚೌಕಾಕಾರವಾಗಿದೆ. ದಂಡದಲ್ಲಿ ಆರು ಪಟ್ಟಿಕೆಗಳಾಗಿ ಕತ್ತರಿಸಲ್ಪಟ್ಟಿದೆ. ದಂಡಾಗ್ರದಲ್ಲಿ(ಕಂಬ) ಘಟ, ವಸ್ತ್ರವೇದಿ, ಫಲಕ ಭಾಗಗಳನ್ನು ಕಾಣಬಹುದಾಗಿದ್ದು ಇದು 'ವಿಷ್ಣುಕಾಂತ ಮಿಶ್ರಕಸ್ತಂಭ' ಮಾದರಿಯಾಗಿದೆ. ಮುಖ್ಯದ್ವಾರವು ಸರಳ ಬಾಗಿಲವಾಡ ಹೊಂದಿದೆ. ಮುಖಮಂಟಪವು ಎರಡುಕಂಬಗಳನ್ನು ಹೊಂದಿದೆ. ಸೋಪಾನಗಳ ವ್ಯವಸ್ಥೆಯಿದೆ. ನವರಂಗದ ಮಧ್ಯದ ಅಷ್ಟಾಕೋನದಲ್ಲಿ ಕತ್ತರಿಸಲ್ಪಟ್ಟ ಭಾವಣಿಯ ಮಧ್ಯದ ಭುವನೇಶ್ವರಿಯಲ್ಲಿ ಅರಳಿದ ಪದ್ಮವಿದೆ. ದೇವಾಲಯ ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರವನ್ನು ಹೊಂದಿತ್ತು. ಆದರೆ ಶಿಖರವು ನಾಶವಾಗಿದೆ. ಆದರೆ ಅದಿಷ್ಠಾನ, ಭಿತ್ತಿ, ಪ್ರಸ್ತಾರವು ಮಣ್ಣಿನಿಂದ ಮುಚ್ಚಲ್ಪಟ್ಟಿದ್ದು, ಊರ್ಧ್ವಮುಖವು ಮಣ್ಣಿನ ಗುಡ್ಡೆಯಾಕಾರದ ರೀತಿ ಕಾಣುತ್ತದೆ.

ಈಶ್ವರ ದೇವಾಲಯ

ಗ್ರಾಮ : ದೊಡ್ಡಅಬ್ಬಿಗೆರೆ

ಸ್ಥಳ : ಊರಿನ ಒಳಗೆ ಹೋಗುವ ರಸ್ತೆಯ ಎಡಭಾಗದಲ್ಲಿದೆ.

ಕಾಲ : ಕ್ರಿ.ಶ. ೧೪ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವು ತೆರದ ಮಂಟಪವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಅಂತರಾಳವಿದ್ದು ಯಾವುದೇ ಶಿಲ್ಪವಿಲ್ಲ. ಸರಳವಾದ ಬಾಗಿಲವಾಡ, ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪದಿಂದ ಅಲಂಕರಣೆಗೊಂಡಿದೆ. ನವರಂಗದಲ್ಲಿ ನಂದಿಮೂರ್ತಿ ಶಿಲ್ಪವಿದೆ. ನವರಂಗವು ತೆರೆದ ಮಂಟಪದ ರೀತಿಯಲ್ಲಿದೆ ನವರಂಗವನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ.

ಅದಿಷ್ಠಾನ, ಭಿತ್ತಿ, ಪ್ರಸ್ತಾರ, ಗ್ರೀವ, ಶಿಖರ, ಕಳಶವು ನಾಶವಾಗಿದೆ. ಇತ್ತೀಚೆಗೆ ಈ ಭಾಗಗಳನ್ನು ನವೀಕರಿಸಿದ್ದಾರೆ. ಕಲ್ಯಾಣದ ಚಾಲುಕ್ಯರ ಸಾಮಾಂತರಾದ ನೊಳಂಬರ ಕಾಲದಲ್ಲಿ

ಬಳಪದ ಕಲ್ಲಿನಿಂದ ದೇವಾಲಯ ನಿರ್ಮಿಸಿದರು. ೧೪ನೇ ಶತಮಾನದಲ್ಲಿ ದೇವಾಲಯವು ವಿನಾಶದ ಸ್ಥಿತಿಯಲ್ಲಿದ್ದರಿಂದ ಅದನ್ನು ವಿಜಯನಗರದ ಕಾಲದಲ್ಲಿ ನವೀಕರಿಸಲಾಯಿತು. ಇತ್ತೀಚೆಗೆ ದೇವಾಲಯವು ಬೀಳುವ ಸ್ಥಿತಿಗೆ ಬಂದರಿಂದ ಸ್ಥಳೀಯ ಗ್ರಾಮಸ್ಥರು ನವೀಕರಿಸಿದ್ದಾರೆ.

ಈಶ್ವರ ದೇವಾಲಯ

ಗ್ರಾಮ : ನಾಗೇನಹಳ್ಳಿ

ಸ್ಥಳ : ಊರಿನ ಮಧ್ಯಭಾಗ(ಸಂತೆಬೆನ್ನೂರಿನ ಕಡೆಗೆ ಹಾದು ಹೋಗುವ ಹೆದ್ದಾರಿ ಬಲಗಡೆ)ದಲ್ಲಿದೆ

ಕಾಲ : ೧೬ನೇ ಶತಮಾನ

ಶೈಲಿ : ವಿಜಯನಗರೋತ್ತರ (ಸಂತೆಬೆನ್ನೂರು ನಾಯಕರು)

ವಸ್ತು : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಏಕಕೂಟಾಚಲವಾಗಿದ್ದು ಗರ್ಭಗೃಹ, ನವರಂಗ ಮತ್ತು ದಕ್ಷಿಣಕ್ಕೆ ಅಭಿಮುಖವಾದ ನವರಂಗ, ಪ್ರವೇಶದ್ವಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದಕ್ಕೆ ಹೊಂದಿಕೊಂಡಂತೆ ನವರಂಗವು ತೆರೆದ ಮಂಟಪದಂತಿದ್ದು, ಅದರ ಎಡ ಮತ್ತು ಬಲಭಾಗದಲ್ಲಿ ಪ್ರಕಾರವಿದೆ. ಸರಳ ಮಾದರಿಯ ಕಂಬಗಳು ಮತ್ತು ಭೋದಿಗೆಯನ್ನು ಹೊಂದಿದೆ. ಊರ್ಧ್ವಮುಖವು ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಗ್ರೀವ ಮತ್ತು ಶಿಖರ ಕಳಶವನ್ನು ಹೊಂದಿದೆ. ಅಧಿಷ್ಠಾನವು ಸರಳವಾಗಿದೆ. ಭಿತ್ತಿಯು ಕಲ್ಲುಗಳ ಜೋಡಣೆಯಿಂದ ನಿರ್ಮಿಸಲ್ಪಟ್ಟಿದೆ. ಪ್ರಸ್ತಾರ ಸಮತಟ್ಟಾಗಿದ್ದು ಶಿಖರವು ಫಂಸಾನ(ಕದಂಬ ನಾಗರ) ಶೈಲಿಯಲ್ಲಿದೆ. ಸ್ಥೂಪಿ ಮತ್ತು ಕಳಶವನ್ನು ಹೊಂದಿದೆ.

ಗುಡ್ಡದ ಮಲ್ಲೇಶ್ವರ ದೇವಾಲಯ

ಗ್ರಾಮ : ಮೊರಡಿ

ಸ್ಥಳ : ಮೊರಡಿಯ ಸಮೀಪದ ಗುಡ್ಡ(ಬೆಟ್ಟ)ದ ಮೇಲಿದೆ.

ಕಾಲ : ಕ್ರಿ.ಶ. ೧೬ನೇ ಶತಮಾನ

ಶೈಲಿ : ಸಂತೆಬೆನ್ನೂರಿನ ನಾಯಕರು

ವಸ್ತು : ಕಣಶಿಲೆ

ಪ್ರಕಟಣೆ : ಟಿ. ಗಿರಿಜಾ: ದಾವಣಗೆರೆ ಇದು ನಮ್ಮ ಜಿಲ್ಲೆ, ೨೦೦೧, ಪು.೫೦೮

ಈ ದೇವಾಲಯವು ಗರ್ಭಗೃಹ, ನವರಂಗವನ್ನು ಹೊಂದಿದ್ದು, ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗವಿದೆ. ಬಾಗಿಲವಾಡವು

ಸರಳವಾಗಿದೆ. ನವರಂಗದಲ್ಲಿ ನಂದಿಮಂಟಪವಿದೆ, ಕಂಬಗಳು ಮತ್ತು ಭೋದಿಗೆಯು ಸರಳ ಮಾದರಿಯಲ್ಲಿವೆ. ಮುಖ್ಯ ಪ್ರವೇಶದ್ವಾರಕ್ಕೆ ಸೋಪಾನದ ವ್ಯವಸ್ಥೆ ಇದೆ. ಊರ್ಧ್ವಮುಖವು ಸರಳ ಅದಿಷ್ಠಾನ, ಭಿತ್ತಿ, ಪ್ರಸ್ತಾರ ಸಮತಟ್ಟಾಗಿದ್ದು, ಶಿಖರವು ನಾಶವಾಗಿದೆ. ಈ ದೇವಾಲಯವನ್ನು ಪ್ರಸ್ತುತ ನವೀಕರಿಸಿದ್ದಾರೆ.

ವೀರಭದ್ರ ದೇವಾಲಯ

ಗ್ರಾಮ : ನೀತಿಗೆರೆ

ಸ್ಥಳ : ಊರಿನ ಮಧ್ಯಭಾಗದಲ್ಲಿದೆ.

ಕಾಲ : ಕ್ರಿ.ಶ. ೧೫ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ದೇವಾಲಯವು ಗರ್ಭಗೃಹ, ನವರಂಗ ಮತ್ತು ದೀಪಸ್ತಂಭವನ್ನು ಹೊಂದಿರುವ ಶಾಸನೋಕ್ತ ದೇವಾಲಯವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ನವರಂಗದಲ್ಲಿ ಸರಳ ಮಾದರಿಯ ಸ್ತಂಭಗಳಿವೆ. ಎಡಭಾಗದ ಗೋಡೆಗೆ ಶಾಸನವನ್ನು ನಿಲ್ಲಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭವಿದೆ. ಪ್ರಸ್ತುತ ದೇವಾಲಯವನ್ನು ಸಂಪೂರ್ಣವಾಗಿ ನವೀಕರಿಸಿದ್ದಾರೆ. ಆದ್ದರಿಂದ ಊರ್ಧ್ವಮುಖ ಭಾಗಗಳನ್ನು ಗುರುತಿಸಲು ಸಾಧ್ಯವಿಲ್ಲ.[೮೦]

ಭೈರವೇಶ್ವರ ದೇವಾಲಯ

ಗ್ರಾಮ : ಅಲಕನಾಳು

ಸ್ಥಳ : ಕಲ್ಲೇಶ್ವರ ದೇವಾಲಯದ ಆವರಣದಲ್ಲಿದೆ.

ಕಾಲ : ಕ್ರಿ.ಶ. ೧೩ನೇ ಶತಮಾನ

ಶೈಲಿ : ಹೊಯ್ಸಳ

ವಸ್ತು : ಬಳಪದ ಕಲ್ಲು

ಪ್ರಕಟಣೆ : ಓಬಳೇಶಪ್ಪ ಎಂ.ಆರ್. ಚನ್ನಗಿರಿ ತಾಲ್ಲೂಕಿನ ದೇವಲಯಗಳ ಒಂದು ಅಧ್ಯಯನ, ಪು.೬೮

ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದೆ. ಚೌಕಾಕಾರದ ತಲಾ ವಿನ್ಯಾಸದ ಗರ್ಭಗೃಹದಲ್ಲಿ ಕಾಲಭೈರವನ ಮೂರ್ತಿಶಿಲ್ಪವಿದೆ. ಊರ್ಧ್ವಮುಖ ಭಾಗದಲ್ಲಿ ಅದಿಷ್ಠಾನ, ಭಿತ್ತಿ

ಸರಳವಾಗಿದ್ದು, ಪ್ರಸ್ತಾರವು ಸಮತಟ್ಟಾಗಿದೆ. ಶಿಖರವು ನಶಿಸಿ ಹೋಗಿದೆ. ಪ್ರಸ್ತುತ ದೇವಾಲಯವನ್ನು ನವೀಕರಿಸಿದ್ದಾರೆ.

೪.೧.೨. ವೈಷ್ಣವ ದೇವಾಲಯಗಳು

ವೈದಿಕ ಸಾಹಿತ್ಯದಲ್ಲಿ ವಿಷ್ಣುವಿನ ಆರಾಧನೆ ಸಂಘ ಯುಗದಲ್ಲಿ ವೈಷ್ಣವ ಆಳ್ವಿಕೆ ಪಂಥ ಗುಪ್ತರ ಕಾಲದಲ್ಲಿನ ದಶಾವತಾರ ದೇವಾಲಯ ಆರಾಧನೆಯು ಕಂಡುಬಂದಿತು.[೪೧] ಕರ್ನಾಟಕದ ರಾಜಮನೆತನಗಳು ವೈಷ್ಣವ ಪಂಥದ ಆರಾಧಕರಾದರು. ಇದರಿಂದ ವೈಷ್ಣವ ದೇವಾಲಯಗಳು ಬೆಳೆದು ಬಂದವು. ಪ್ರಸ್ತುತ ಅಧ್ಯಯನ ಚನ್ನಗಿರಿ ಪರಿಸರದಲ್ಲಿನ ಐದು ವೈಷ್ಣವ ದೇವಾಲಯಗಳ ವಾಸ್ತುವನ್ನು ವಿವರಿಸಿದೆ.

ಕೇಶವ ದೇವಾಲಯ

ಗ್ರಾಮ : ನಲ್ಲೂರು

ಸ್ಥಳ : ಊರಿನ ಮಧ್ಯದಲ್ಲಿದೆ.

ಕಾಲ : ೧೨ನೇ ಶತಮಾನ

ಶೈಲಿ : ಹೊಯ್ಸಳರು

ವಸ್ತು : ಬಳಪದ ಕಲ್ಲು

ಪ್ರಕಟಣೆ : ಅಪ್ರಕಟಿತ

ಈ ದೇವಾಲಯವು ಗರ್ಭಗೃಹ, ನವರಂಗ ಮತ್ತು ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಕೇಶವನ ಮೂರ್ತಿಶಿಲ್ಪವಿದೆ, ಸರಳ ಬಾಗಿಲವಾಡ ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ನವರಂಗವನ್ನು ಸಂಪೂರ್ಣವಾಗಿ ನವೀಕರಿಸಲಾಗಿದೆ. ಪ್ರಸ್ತುತ ಅದಿಷ್ಠಾನ, ಭಿತ್ತಿ, ಪ್ರಸ್ತಾರ ಇತ್ತೀಚಿಗೆ ನಿರ್ಮಿಸಿದ್ದಾರೆ. ಪ್ರಸ್ತುತ ದೇವಾಲಯವನ್ನು ಸಂಪೂರ್ಣವಾಗಿ ನವೀಕರಿಸಿದ್ದಾರೆ.

ಶ್ರೀ ರಂಗನಾಥಸ್ವಾಮಿ ದೇವಾಲಯ

ಗ್ರಾಮ : ದೇವರಹಳ್ಳಿ

ಸ್ಥಳ : ಗ್ರಾಮದ ಮುಖ್ಯ ರಸ್ತೆಯ ಬಳಿಯಿರುವ ಬೆಟ್ಟದ ಮೇಲಿದೆ.

ಕಾಲ : ೧೫ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಎಂ.ಎ. ಆರ್. ೧೯೩೭, ಪು.೧೦೯

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ತೆರೆದ ಮುಖಮಂಟಪವನ್ನು ಒಳಗೊಂಡಿದ್ದು, ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗದ ಆಕಾರದ ಶ್ರೀರಂಗನಾಥನ ಮೂರ್ತಿಶಿಲ್ಪವಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಬಾಗಿಲವಾಡವು ಸರಳವಾಗಿದೆ. ಲಲಾಟದಲ್ಲಿ ಗರುಡನ ಶಿಲ್ಪವನ್ನು ಕೆತ್ತಲಾಗಿದೆ. ಕಂಬಗಳು ಸರಳ ಮಾದರಿಯ ರುದ್ರಕಾಂತಸ್ತಂಭ ಮಾದರಿಯಲ್ಲಿವೆ. ಭೋದಿಗೆಯು ಪುಷ್ಪಗಳಿಂದ ಅಲಂಕೃತಗೊಂಡಿರುವ ಪುಷ್ಪಮಾದರಿ ಭೋದಿಗೆಯಾಗಿದೆ. ಭುವನೇಶ್ವರಿಯಲ್ಲಿ ಮೊಗುಚಿದಪದ್ಮದ ಅಲಂಕರಣವಿದೆ. ಮುಖಮಂಟಪದಲ್ಲಿ ಸರಳ ಮಾದರಿ ಕಂಬಗಳಿವೆ. ಇದರ ಮುಂಭಾಗದಲ್ಲಿ ಗರುಡನ ಮೂರ್ತಿಶಿಲ್ಪವಿದ್ದು, ಅದರ ಹಿಂಭಾಗದಲ್ಲಿ ಗರುಡಸ್ತಂಭವಿದೆ.

ಬೇಟೆ ರಂಗನಾಥಸ್ವಾಮಿ ದೇವಾಲಯ

ಗ್ರಾಮ : ಚನ್ನಗಿರಿ

ಸ್ಥಳ : ಚನ್ನಗಿರಿ ಪಟ್ಟಣದ ಮಧ್ಯದಲ್ಲಿರುವ ಕೋಟೆಯಲ್ಲಿದೆ.

ಕಾಲ : ೧೫ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ: ಎಂ.ಎ.ಆರ್. ೧೯೩೭, ಪು.೧೦೨

ಈ ದೇವಾಲಯವು ಗರ್ಭಗೃಹ, ನವರಂಗವನ್ನು ಹೊಂದಿದ್ದು, ಪ್ರವೇಶದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಬೇಟೆ ಶ್ರೀರಂಗನಾಥಸ್ವಾಮಿಯ ಶಿಲ್ಪವಿದ್ದು, ಗರ್ಭಗೃಹದ ಬಾಗಿಲವಾಡವು ತ್ರಿಶಾಖೆಗಳಿಂದ ಕೂಡಿದ್ದು, ಲಲಾಟದಲ್ಲಿ ಗಣೇಶನ ಶಿಲ್ಪವಿದೆ. ಜಯ ವಿಜಯ ದ್ವಾರಪಾಲಕರು ನಿಂತಿದ್ದಾರೆ. ಚೌಕಾಕಾರವಾದ ಭುವನೇಶ್ವರಿಯಲ್ಲಿ ಅರಳಿದ ಪದ್ಮವು ಎರಡು ಸುತ್ತಿನ ದಳಗಳಿಂದ ಕೂಡಿದ್ದು, ಮೊದಲನೇ ಸುತ್ತಿನಲ್ಲಿ ೨೯ ದಳಗಳಿವೆ. ಎರಡನೇ ಸುತ್ತಿನಲ್ಲಿ ೩೭ ದಳಗಳನ್ನು ಹೊಂದಿದೆ. ಮುಖ್ಯ ಪ್ರವೇಶದ್ವಾರವು ಸರಳವಾಗಿದ್ದು ಅದರ ಮುಂಭಾಗದಲ್ಲಿ ೮ ಅಡಿ ಎತ್ತರದ ಗರುಡ ಸ್ತಂಭವಿದೆ. ಊರ್ಧ್ವಮುಖವು ಸರಳ ಅದಿಷ್ಠಾನ, ಭಿತ್ತಿ ಹೊಂದಿದ್ದು, ಪ್ರಸ್ತಾರ ಸಮತಟ್ಟಾಗಿದೆ. ಶಿಖರವನ್ನು ನವೀಕರಿಸಲಾಗಿದೆ. ಈ ದೇವಾಲಯವನ್ನು ಬೇಟೆ ಶ್ರೀರಂಗನಾಥಸ್ವಾಮಿ ಅಥವಾ ಕೋಟೆ ರಂಗನಾಥಸ್ವಾಮಿ ದೇವಾಲಯವೆಂದು ಕರೆಯುವರು.

ರಂಗನಾಥಸ್ವಾಮಿ ದೇವಾಲಯ

ಗ್ರಾಮ : ದಾಗಿನಕಟ್ಟೆ

ಸ್ಥಳ : ಗ್ರಾಮದ ಮಧ್ಯದಲ್ಲಿದೆ.

ಕಾಲ : ೧೫ನೇ ಶತಮಾನ

ಶೈಲಿ : ವಿಜಯನಗರ

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೯

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪವನ್ನು ಹೊಂದಿದ್ದು, ಮುಖ್ಯ ಗರ್ಭಗೃಹವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ರಂಗನಾಥಸ್ವಾಮಿಯ ಮೂರ್ತಿಶಿಲ್ಪವಿದೆ, ಅದಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಬಾಗಿಲವಾಡವು ತ್ರಿಶಾಖೆಗಳಿಂದ ಕೂಡಿದ್ದು, ಲಲಾಟದಲ್ಲಿ ಗರುಡಶಿಲ್ಪವಿದೆ. ಬಾಗಿಲಿನ ಕೆಳಭಾಗದಲ್ಲಿ ಜಯ-ವಿಜಯ ದ್ವಾರಪಾಲಕರು ನಿಂತಿದ್ದಾರೆ. ನವರಂಗವು ನಾಲ್ಕುಕಂಬಗಳಿಂದ ನಿರ್ಮಿತವಾಗಿದ್ದು, ಕಂಬಗಳು ಸರಳಮಿಶ್ರಿತ ರುದ್ರಕಾಂತಸ್ತಂಭ ಮಾದರಿಗೆ ಸೇರಿದವಾಗಿದ್ದು, ನವರಂಗದ ಮೇಲ್ಚಾವಣಿಯಲ್ಲಿ ಭುವನೇಶ್ವರಿಯು ಅರಳಿದ ಪದ್ಮದ ಅಲಂಕರಣವಿದೆ. ಮುಖಮಂಟಪವು ಸರಳಕಂಬಗಳಿಂದ ನಿರ್ಮಿತವಾಗಿದೆ. ಊರ್ಧ್ವಮುಖವು ಅದಿಷ್ಠಾನವು ಸರಳವಾಗಿದೆ, ಭಿತ್ತಿಯು ಕುಡ್ಯಸ್ತಂಭ ಮಾದರಿಯಲ್ಲಿದೆ, ಪ್ರಸ್ತಾರವು ಸಮತಟ್ಟಾಗಿದೆ, ಶಿಖರವನ್ನು ಇತ್ತೀಚೆಗೆ ನವೀಕರಿಸಲಾಗಿದೆ.

ಆಂಜನೇಯ ದೇವಾಲಯ

ಗ್ರಾಮ : ಚಿಕ್ಕಕೋಗಿಲೂರು

ಸ್ಥಳ : ಗ್ರಾಮದ ಮಧ್ಯದಲ್ಲಿದೆ.

ಕಾಲ : ೧೬೭೫

ಶೈಲಿ : ಚಿತ್ರದುರ್ಗದ ಪಾಳೇಗಾರರ (ವಿಜಯನಗರೋತ್ತರ)

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೮೯-೯೦

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪವನ್ನು ಹೊಂದಿದೆ ಮತ್ತು ಮುಖ್ಯ ಪ್ರವೇಶದ್ವಾರವು ದಕ್ಷಿಣಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಆಂಜನೇಯನ ಮೂರ್ತಿಶಿಲ್ಪವಿದೆ. ಬಾಗಿಲವಾಡವು ತ್ರಿಶಾಖೆಯನ್ನು ಹೊಂದಿದ್ದು, ಲಲಾಟದಲ್ಲಿ ಯಾವುದೇ ಶಿಲ್ಪವಿಲ್ಲ. ನವರಂಗವು ನಾಲ್ಕು ಸ್ತಂಭಗಳಿಂದ ರಚಿತವಾಗಿದ್ದು, ಅವು ಸರಳ ಮಿಶ್ರಿತಸ್ತಂಭ ಮಾದರಿಯ ಕಂಬಗಳ ಪೀಠಭಾಗವು ಆಯಾತಾಕಾರವಾಗಿದ್ದು, ಪಾದ ಚೌಕಾಕಾರವಾಗಿದ್ದು, ನರಸಿಂಹ, ವರಹ ಗರುಡ ಶಿಲ್ಪಗಳನ್ನು ಹೊಂದಿದೆ. ದಂಡವು ಅಷ್ಟಾಕೋನಕಾರದ ನೀಳವಾದ ಪಟ್ಟಿಕೆಯನ್ನು ಹೊಂದಿದ್ದು ಚೌಕಾಕಾರವಾಗಿದೆ. ದಂಡಾಗ್ರವು ವೃತ್ತಕಾರದ ಕುಂಭ, ಫಲಕ ಮತ್ತು ಸರಳಭೋದಿಗೆ ಹೊಂದಿದೆ. ನಕ್ಷತ್ರಕಾರದ ಭುವನೇಶ್ವರಿಯಲ್ಲಿ ಅರಳಿದ ಪದ್ಮದ ಅಲಂಕರಣವಿದೆ. ಮುಖ್ಯ ಪ್ರವೇಶದ್ವಾರವು ಸರಳವಾಗಿದೆ. ಮುಖಮಂಟಪವು ಸರಳ ಕಂಬಗಳಿಂದ ರಚಿತವಾಗಿದೆ. ಸೋಪಾನದ ವ್ಯವಸ್ಥೆಯಿದೆ. ಊರ್ಧ್ವ ಮುಖದಲ್ಲಿ ಅದಿಷ್ಠಾನ, ಭಿತ್ತಿಯು ಸರಳವಾಗಿದೆ. ಪ್ರಸ್ತಾರವು ಸಮತಟ್ಟಾಗಿದೆ. ಶಿಖರವನ್ನು ಇತ್ತೀಚೆಗೆ ನವೀಕರಿಸಿದ್ದಾರೆ. ೩೧ ಶೈವ, ೫ ವೈಷ್ಣವ, ೨ ಶಾಕ್ತ ದೇವಾಲಯಗಳು ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾಗಿವೆ. ಧಾರ್ಮಿಕವಾಗಿ ವರ್ಗೀಕರಿಸಿ ವಾಸ್ತುವನ್ನು ವಿಶ್ಲೇಷಿಸಲಾಗಿದೆ.

೪.೧.೩. ಶಾಕ್ತ ದೇವಾಲಯಗಳು

ಸಿಂಧೂ ನಾಗರಿಕತೆಯ ಜನರು 'ಮಾತೃ' ದೇವತೆಯ ಪ್ರಧಾನ ಆರಾಧಕರು.[೪೨] ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಅರಸು ಮನೆತನಗಳ ಆಶ್ರಯ ಮತ್ತು ಪ್ರೋತ್ಸಾಹದಿಂದ ಶಾಸ್ತ್ರ ಪರಂಪರೆ ಬೆಳೆದುಬಂದಿದೆ. ಅಧ್ಯಯನ ಕ್ಷೇತ್ರದ ಪರಿಸರದಲ್ಲಿ ೩ ಶಾಕ್ತ ದೇವಾಲಯಗಳು ಲಭ್ಯವಾಗಿದೆ. ಅವುಗಳ ವಾಸ್ತುವನ್ನು ಈ ಕೆಳಗಿನಂತೆ ವಿವರಿಸಿದೆ.

ಪಾರ್ವತಿ ದೇವಾಲಯ

ಗ್ರಾಮ	:	ಸೂಳೆಕೆರೆ
ಸ್ಥಳ	:	ಸಿದ್ದೇಶ್ವರ ದೇವಾಲಯದ ಹಿಂಭಾಗಕ್ಕೆ.
ಕಾಲ	:	ಕ್ರಿ.ಶ. ೧೫ನೇ ಶತಮಾನ
ಶೈಲಿ	:	ವಿಜಯನಗರ
ವಸ್ತು	:	ಕಣಶಿಲೆ
ಪ್ರಕಟಣೆ	:	ಎಂ. ಎ. ಆರ್. ೧೯೩೭, ಪು.೧೦೬

ಸ್ಥಳೀಯರು ಶಾಂತವ್ವ ಅಥವಾ ಶಾಂತಲಾ ಪರಮೇಶ್ವರಿ ಎಂದು ಕರೆಯುತ್ತಾರೆ. ಈ ದೇವಾಲಯವು ಗರ್ಭಗೃಹ, ಮುಖಮಂಟಪವಿದ್ದು, ಮುಖ್ಯದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹದಲ್ಲಿ ಪಾರ್ವತಿಯ ಮೂರ್ತಿಶಿಲ್ಪವಿದೆ. ವಿತಾನದಲ್ಲಿ

ಅರಳಿದ ಪದ್ಮವಿದೆ, ಬಾಗಿಲವಾಡವು ಸರಳವಾಗಿದೆ. ಮುಖಮಂಟಪವು ಎರಡು ಕಂಬಗಳಿಂದ ನಿರ್ಮಿತವಾಗಿದೆ. ಕಂಬಗಳು ಸರಳವಾಗಿದ್ದು ಪೀಠಭಾಗವು ಆಯಾತಾಕಾರವಾಗಿದೆ. ಪಾದವು ಚೌಕಾಕಾರವಾಗಿದೆ. ಅದರಲ್ಲಿ ಹಸು, ಆನೆ, ಹಂಸ, ಗಣೇಶ, ನಂದಿ ಮೊದಲಾದ ಶಿಲ್ಪಗಳನ್ನು ಆಕರ್ಷಕವಾಗಿ ಕೆತ್ತಿಸಲಾಗಿದೆ. ಊರ್ಧ್ವಮುಖವು ಅದಿಷ್ಠಾನ, ಭಿತ್ತಿ, ಪ್ರಸ್ತಾರ ಮತ್ತು ಶಿಖರವನ್ನು ಹೊಂದಿದೆ. ಅದಿಷ್ಠಾನವು ಉಪಾನ, ಪದ್ಮ, ಕುಮುದಗಳಿಂದ ಕೂಡಿದೆ. ಕುಮುದವು ವೃತ್ತಕಾರವಾಗಿದ್ದು, ಬಳೆಯಕಾರದ ಅಲಂಕಾರವಿದೆ. ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲಿನ ಕಪೋತವು ಸುತ್ತಲೂ ಮುಂದೆ ಚಾಚಿಕೊಂಡು ಕೆಳಗಡೆ ಬಾಗಿದ ರೀತಿಯಲ್ಲಿ ಸರಳವಾಗಿದೆ. ಶಿಖರವು ಆಮ್ಲಕವನ್ನು ಹೊಂದಿದ್ದು, ಸ್ಥೂಪವಿದೆ.

ದುರ್ಗಾಂಬಿಕಾ ದೇವಾಲಯ

ಗ್ರಾಮ : ಬಸವಪಟ್ಟಣ

ಸ್ಥಳ : ಬೆಟ್ಟದ ಮೇಲಿದೆ.

ಕಾಲ : ಕ್ರಿ.ಶ. ೧೬ನೇ ಶತಮಾನ

ಶೈಲಿ : ವಿಜಯನಗರೋತ್ತರ

ವಸ್ತು : ಕಣಶಿಲೆ

ಪ್ರಕಟಣೆ : ಮಂಜು ನಾಯ್ಕ ಆರ್.: ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು, ಪು.೯೦-೯೨

ಈ ದೇವಾಲಯವು ಗರ್ಭಗೃಹ, ಅಂತರಾಳ, ಕಂಬಗಳ ಪಡಸಾಲೆ ಮತ್ತು ಕಂಬಗಳಿಂದ ಕೂಡಿದ ಪ್ರವೇಶ ಮಂಟಪವನ್ನು ಹೊಂದಿದ್ದು, ಪ್ರವೇಶದ್ವಾರವು ಪೂರ್ವಕ್ಕೆ ಅಭಿಮುಖವಾಗಿದೆ. ಆಯಾತಾಕಾರದ ಗರ್ಭಗೃಹದಲ್ಲಿ ದುರ್ಗಾಂಬಿಕಾ ಮೂರ್ತಿಶಿಲ್ಪವಿದೆ. ನವರಂಗವು ತೆರೆದ ಹಜಾರವಿದ್ದು, ಅದಕ್ಕೆ ಹೊಂದಿಕೊಂಡಂತೆ ಮುಖಮಂಟಪವಿದೆ. ಕಂಬಗಳು ಸರಳಮಾದರಿಯ ರುದ್ರಕಾಂತಸ್ತಂಭ ಮಾದರಿಯಲ್ಲಿವೆ. ಊರ್ಧ್ವಮುಖವು ಸರಳ ಅದಿಷ್ಠಾನ, ಭಿತ್ತಿಯನ್ನು ಹೊಂದಿದ್ದು, ಶಿಖರವು ನಶಿಸಿ ಹೋಗಿದೆ. ಇತ್ತೀಚೆಗೆ ಈ ದೇವಾಲಯದ ಹಿಂಭಾಗವನ್ನು ನವೀಕರಿಸಿದ್ದಾರೆ.

೪.೨. ಲೌಕಿಕ ಸ್ಮಾರಕಗಳು

ಮಾನವನ ಹಿತವನ್ನು ಬಯಸುವಂತಹ ಕಟ್ಟಡಗಳನ್ನು ಲೌಕಿಕ ಸ್ಮಾರಕಗಳು ಎನ್ನುತ್ತೇವೆ. ಅರಮನೆ, ಕೆರೆ, ಬಾವಿ, ಹೊಂಡಗಳು ಇವೆಲ್ಲವೂ ಲೌಕಿಕ ಸ್ಮಾರಕಗಳಿಗೆ ನಿದರ್ಶನಗಳಾಗಿವೆ. ಚನ್ನಗಿರಿ ಪರಿಸರದಲ್ಲಿ ಲೌಕಿಕ ಸ್ಮಾರಕಗಳ ಕುರುಹುಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಕೆರೆಗಳು

ಕೆರೆಗಳ ಇತಿಹಾಸವನ್ನು ಅವಲೋಕಿಸಿದಾಗ ಪ್ರಾಚೀನ ಭಾರತದಲ್ಲಿ ಸುದರ್ಶನ ಕೆರೆಯನ್ನು ರುದ್ರದಾಮಾನ್‌ನು ಕಟ್ಟಿಸಿದನೆಂದು ಸಂಸ್ಕೃತ ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.[೪೧] ಸುದರ್ಶನ ಕೆರೆಯನ್ನು ಚಂದ್ರಗುಪ್ತ ಮೌರ್ಯನ ರಾಜ್ಯಪಾಲ 'ಪುಷ್ಯಗುಪ್ತ'ನು ಕೆರೆಯನ್ನು ಕಟ್ಟಿಸಿದನು.[೪೨] ರುದ್ರದಾಮಾನ್‌ನ ಕಾಲದಲ್ಲಿ ಕೆರೆಯ ಬಲದಂಡೆ ಹೊಡೆದು ಹೋದಾಗ ಸ್ವಂತ ಹಣದಿಂದ ಪ್ರಜೆಗಳ ಅಭಿಪ್ರಾಯದಿಂದ ಕೆರೆಯ ಬಲದಂಡೆಯನ್ನು ನಿರ್ಮಿಸಿದ. ನಂತರ ಯಾವನ ರಾಜ್ಯ ತುಷ್ಯಪ ನಾಲೆಯನ್ನು ನಿರ್ಮಿಸಿದನು. ಸ್ಕಂದಗುಪ್ತನ ಕಾಲದಲ್ಲಿ ಚಕ್ರಪಾಲಿತನು ಬಲದಂಡೆಯನ್ನು ನಿರ್ಮಿಸಿ, ಚಕ್ರಪಾಲೇಶ್ವರ ದೇವಾಲಯವನ್ನು ಕಟ್ಟಿಸಿದನು.[೪೩]

ಕದಂಬರ ಮಯೂರಶರ್ಮನು ಚಂದ್ರವಳ್ಳಿ ಕೆರೆಯನ್ನು ಕಟ್ಟಿಸಿದ್ದಾನೆ. ಗಂಗರು, ಬಾದಾಮಿ ಚಳುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವಿಜಯನಗರೋತ್ತರ ಕಾಲದಲ್ಲಿಯೂ ಹಲವಾರು ಕೆರೆಗಳು ನಿರ್ಮಾಣವಾದವು. ವಿಜಯನಗರದ ಕಾಲದಲ್ಲಿ ಹಲವಾರು ಕೆರೆಗಳು ನಿರ್ಮಾಣವಾದವು ಕೆರೆಯನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು, ದೇವಾಲಯಗಳನ್ನು ನಿರ್ಮಿಸುವುದು ಪುಣ್ಯದ ಕೆಲಸವೆಂದು ಆ ಕಾಲಘಟ್ಟದಲ್ಲಿ ಜನರ ನಂಬಿಕೆಯಾಗಿತ್ತು.

ಚನ್ನಗಿರಿ ತಾಲ್ಲೂಕಿನಲ್ಲಿ ಹೊಯ್ಸಳರ ಕಾಲದಿಂದ ವಿಜಯನಗರ ಮತ್ತು ವಿಜಯನಗರೋತ್ತರದಲ್ಲಿ ಕೆರೆಗಳನ್ನು ಕಟ್ಟಿಸಿದ್ದಾರೆ. ಕೈಫಿಯತ್ತು ಆಧಾರಿತ ಕೆರೆಗಳು ಮತ್ತು ಶಾಸನ ಉಲ್ಲೇಖಿತ ಕೆರೆಗಳನ್ನು ಆಕಾರವಾಗಿಟ್ಟುಕೊಂಡು ಕೆರೆಗಳ ಅಧ್ಯಯನ ಮಾಡಲಾಗಿದೆ.

ಐತಿಹಾಸಿಕ ಕೆರೆಗಳು

ಕೈಫಿಯತ್ತಿನಲ್ಲಿ ಉಲ್ಲೇಖಿತ ಮಾಹಿತಿ ಮತ್ತು ಕ್ಷೇತ್ರಕಾರ್ಯ ಅಧಾರಿತ ಹಾಗೂ ಅನುಷಾಂಗಿಕ ಆಕಾರಗಳ ಆಧಾರ ಮೇಲೆ ಐತಿಹಾಸಿಕ ಕೆರೆಗಳನ್ನು ಪರಿಶೋಧಿಸಲಾಗಿದೆ.

ಸ್ಮಾರಕ : ಸೂಳೆಕೆರೆ (ಶಾಂತಿಸಾಗರ)

ಗ್ರಾಮ : ಸೂಳೆಕೆರೆ

ಸ್ಥಳ : ಸೂಳೆಕೆರೆ ಬೆಟ್ಟದ

ರಾಜವಂಶ : ಹೊಯ್ಸಳರು

ಕಾಲ : ಕ್ರಿ.ಶ. ೧೨ನೇ ಶತಮಾನ

ಪ್ರಕಟಣೆ : ಗಿರಿಜಾ ಟಿ., ದಾವಣಗೆರೆ ಇದು ನಮ್ಮ ಜಿಲೆ, ಪು.೫೨೨-೫೨೩

ಐತಿಹ್ಯದ ಪ್ರಕಾರ ಸೂಳೆಕೆರೆ ಇರುವ ಸ್ಥಳದಲ್ಲಿ ಸ್ವರ್ಗಾವತಿ ಎಂಬ ಪಟ್ಟಣವಿತ್ತು. ೧೨ನೇ ಶತಮಾನದಲ್ಲಿ ರಾಜ ವಿಕ್ರಮರಾಯ ಎಂಬುವನು ಆಡಳಿತ ನಡೆಸುತ್ತಿದ್ದನು. ನೂತನದೇವಿಯು ಅವನ ಹೆಂಡತಿಯಾಗಿದ್ದಳು. ಅವರಿಗೆ ಮಕ್ಕಳಿರಲಿಲ್ಲ. ಬಹಳ ದಿನಗಳ ನಂತರ ತನ್ನ ಆರಾಧ್ಯದೈವ ಸಿದ್ದೇಶ್ವರವನ್ನು ಕುರಿತು ತಪಸ್ಸು ಮಾಡಿದಾಗ ಅವರಿಗೆ ಒಂದು ಹೆಣ್ಣುಮಗು ಜನಿಸಿತೆಂದು, ಆ ಮಗುವಿಗೆ ಶಾಂತವ್ವೆ ಎಂದು ನಾಮಕರಣ ಮಾಡಲಾಯಿತೆಂದೂ ಹೇಳಲಾಗಿದೆ. ಪ್ರೌಢ ವಯಸ್ಸಿಗೆ ಬಂದ ಶಾಂತವ್ವೆಗೆ ಮದುವೆ ಮಾಡಲು ಬಯಸಿದಾಗ ಶಾಂತವ್ವೆಯು ಮದುವೆಯನ್ನು ನಿರಾಕರಿಸಿದಳು. ಕಾರಣ ನಾನು ಮದುವೆಯಾದರೆ ಶಿವಸ್ವರೂಪಿಯಾದ ಸಿದ್ದೇಶ್ವರನನ್ನೆ ಹೊರತು ಯಾರನ್ನು ಮದುವೆಯಾಗುವುದಿಲ್ಲವೆಂದು ಹಠಹಿಡಿದಳು. ಅವಳು ಹಗಲು–ರಾತ್ರಿ ಸಿದ್ದೇಶ್ವರ ದೇವಾಲಯದಲ್ಲಿ ಕಾಲಕಳೆಯುತ್ತಿದ್ದಳು. ಅವಳ ಭಕ್ತಿಗೆ ಪರಶಿವನು ಮೆಚ್ಚಿ, ಮನುಷ್ಯ ಜಾತಿಯಲ್ಲಿ ಬಂದು ಆಕೆಯ ಸಂಗಡ ಹಗಲು–ರಾತ್ರಿ ಕಾಲ ಕಳೆಯುತ್ತಿದ್ದನೆಂದು ಹೋಗುವಾಗ ಆತ ತನ್ನ ಜಡೆ (ಬೊಂಡೆ) ಕೊಡವಿ ಹೋದಾಗ ಸುವರ್ಣ ವರಹಗಳು ನಿತ್ಯ ಹಾಸಿಗೆಯಲ್ಲಿ ಬೀಳುತ್ತಿದ್ದವೆಂದೂ, ಈ ವರಹಗಳನ್ನೆಲ್ಲಾ ಅವಳು ಕೂಡಿಹಾಕಿ ಸ್ತ್ರೀ ಜನ್ಮ ಸ್ಥಿರವಲ್ಲ ಮುಂದೆ ತನ್ನ ಹೆಸರು ಉಳಿಯಬೇಕೆಂದು ಕೆರೆಯನ್ನು ಕಟ್ಟಿಸಿದಳು. ಈ ಶಾಂತವ್ವ ಅಕ್ರಮವಾಗಿ ದೇವಪುರುಷನೊಂದಿಗೆ ಸಂಬಂಧ ಬೆಳೆಸಿ ಹಣಗಳಿಸಿದ್ದಕ್ಕಾಗಿ ಆಕೆಯ ತಂದೆಯೇ ಅವಳನ್ನು ಸೂಳೆ ಎಂದು ಕರೆದನೆಂದೂ ಆಕೆ ಕಟ್ಟಿಸಿದ ಕೆರೆಯೇ ಸೂಳೆಕೆರೆಯಾಯಿತು. ಬಹಳಕಾಲ ಆ ಕೆರೆಯಲ್ಲಿ ನೀರು ಸಂಗ್ರಹವಾಗಲಿಲ್ಲ. ಅನಂತರ ಶಾಂತವ್ವ ಕೆರೆಗೆ ತನ್ನ ಪ್ರಾಣವನ್ನು ಬಲಿಯಾಗಿ ಅರ್ಪಿಸಿದಾಗ ನೀರು ಸಂಗ್ರವಾಯಿತೆಂದು ಶಾಂತವ್ವನೇ ಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿ ನೆಲೆಸಿರುವ ಶಾಂತಲಾ ಪರಮೇಶ್ವರಿ ಎಂಬ ನಂಬಿಕೆಯಿದೆ.[೪೪]

ಈ ಕೆರೆಯು ಏಷ್ಯದಲ್ಲಿಯೇ ಎರಡನೇ ದೊಡ್ಡಕೆರೆಯಾಗಿದ್ದು ಈ ಕೆರೆಯ ಸುತ್ತಳತೆ ೬೪ ಕಿ.ಮೀ ಹೊಂದಿರುವ ಕೆರೆಯು ಕರ್ನಾಟಕದಲ್ಲಿಯೇ ಅತಿದೊಡ್ಡ ಕೆರೆಯಾಗಿದೆ. ಹಿರೇಹಳ್ಳ, ಸೊಪ್ಪಿನಹಳ್ಳ, ಮಾವಿನಹೊಳೆ ಹಳ್ಳಗಳನ್ನು ಸೇರಿಸಿಕೊಂಡು ಹರಿದ್ರಾ ಅಥವಾ ಹರಿದ್ವಾವತಿ ಎಂದೂ ಕರೆಯುತ್ತಿದ್ದ ಚಿಕ್ಕಹೊಳೆಗೆ ಸೂಳೆಕೆರೆ ಸಮೀಪದ ಸಿದ್ದೇಶ್ವರದ ಎರಡು ಬೆಟ್ಟಗಳ ನಡುವೆ ಕಾಡುಗಲ್ಲು ಮತ್ತು ಮಣ್ಣನ್ನು ಬಳಸಿಕೊಂಡು ವಡ್ಡ(ಏರಿ)ನ್ನು ನಿರ್ಮಿಸಿ ಅದಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಎರಡು ತೂಬನ್ನು ಅಳವಡಿಸಲಾಗಿದೆ. ಉತ್ತರದ ತೂಬಿಗೆ ಸಿದ್ದನತೂಬೆಂದು, ಅದರ ನಾಲೆಗೆ ಸಿದ್ದನನಾಲೆ ಎಂದು ಕರೆದಿದ್ದಾರೆ. ತೂಬು ಸಂಪೂರ್ಣವಾಗಿ ನಾಶವಾಗಿದೆ. ದಕ್ಷಿಣದ ತೂಬಿಗೆ ಬಸವನ ತೊಬೆಂದು ಅದರ ನಾಲೆಗೆ ಬಸವನ ನಾಲೆ ಎಂದು ಕರೆಯುತ್ತಾರೆ. ಪ್ರಸ್ತುತ ಕೆರೆಯಲ್ಲಿ ನೀರು ಸಂಪೂರ್ಣವಾಗಿ ತುಂಬಿದೆ.[೪೫]

ಸ್ಮಾರಕ : ಸಂತೆಬೆನ್ನೂರು ಕೆರೆ

ಗ್ರಾಮ : ಸಂತೆಬೆನ್ನೂರು

ಸ್ಥಳ : ಗ್ರಾಮದ ಈಶಾನ್ಯ ಭಾಗದಲ್ಲಿದೆ

ರಾಜವಂಶ : ಸಂತೆಬೆನ್ನೂರಿನ ನಾಯಕರು

ರಾಜ : ಇಮ್ಮಡಿ ಕೆಂಗೋಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೫೫೬

ಪ್ರಕಟಣೆ : ಅಪ್ರಕಟಿತ

ಕ್ರಿ.ಶ ೧೫೫೬ರಲ್ಲಿ ಇಮ್ಮಡಿಕೆಂಗಪ್ಪನಾಯಕನು ಸಂತೆಬೆನ್ನೂರು ಕೆರೆ ಕಟ್ಟಿಸಿದನು.[೪೬] ೧ ೧/೨ ಕಿ.ಮೀ ಉದ್ದ ೧ ಕಿ.ಮೀ ಅಗಲವಿರುವ ಕೆರೆಯು ವೃತ್ತಕಾರದ ಮಾದರಿಯಲ್ಲಿ ನಿರ್ಮಿಸಲಾಗಿದೆ. ಕೆರೆಯ ಬದುವನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ.

ಕೆರೆಯ ಮಧ್ಯದ ವಡ್ಡಿನ ಪಕ್ಕದಲ್ಲಿರುವ ತೂಬನ್ನು ಆರು ಇಂಚು ಉದ್ದ ೨ ಇಂಚು ಅಗಲದ ಇಟ್ಟಿಗೆಗಳನ್ನು ಬಳಸಿ ಅದರೊಂದಿಗೆ ಗಾರೆಯನ್ನು ಮಿಶ್ರಣ ಮಾಡಿ ೨ ೧/೨ ಅಡಿ ಎತ್ತರದ ಕಟ್ಟೆಯನ್ನು ಕಟ್ಟಿದ್ದಾರೆ. ಅದರ ಮೇಲ್ಭಾಗದಲ್ಲಿ ಮೂರು ಅಡಿ ಉದ್ದದ x ಒಂದು ಅಡಿ ಅಗಲದ ಎರಡು ಚೌಕಾಕಾರದ ಕಣಶಿಲೆಯನ್ನು ನಿಲ್ಲಿಸಿದ್ದಾರೆ. ೧ ೧/೨ ಅಡಿ ಅಗಲದಲ್ಲಿ ನಿಲ್ಲಿಸಿದ್ದು ಅದರ ಮೇಲ್ಭಾಗದಲ್ಲಿ ೧ ೧/೨ ಅಡಿ ಅಗಲದ x ೨ ಅಡಿ ಉದ್ದವಾದ ಸು.೪ ಇಂಚು ದಪ್ಪದ ಕಣಶಿಲೆಯನ್ನು ಬಳಸಿದ್ದಾರೆ. ಅದರ ಮಧ್ಯದಲ್ಲಿ ೪ ಅಡಿ ಅಗಲ ವೃತ್ತಾಕಾರವಾಗಿ ಕಲ್ಲನ್ನು ಕತ್ತರಿಸಿದ್ದು (ಹೋಲ್) ಅದರ ನಡುವೆ ಕಬ್ಬಿಣದ ಸಹಾಯದಿಂದ ವಾಲ್‌ನ್ನು ತಿರುಗುವ ತಂತ್ರಜ್ಞಾನವನ್ನು ಬಳಸಿದ್ದಾರೆ.

ತೂಬಿನ ಮಧ್ಯ ಕೆರೆಯಕಟ್ಟೆ ಇದೆ. ಇದರ ಹೊರಭಾಗದಲ್ಲಿ ಎಡ ಮತ್ತು ಬಲಭಾಗದ ಕಾಲುವೆಗಳಿಗೆ ವ್ಯವಸ್ಥೆಯನ್ನು ಮಾಡಲಾಗಿದ್ದು ಕೆರೆಯ ತೂಬಿನ ಮೂಲಕ ನೀರು ಬಿಟ್ಟಗೆ ಎಡ ಮತ್ತು ಬಲ ಭಾಗದ ಕಾಲುವೆಗಳ ಮೂಲಕ ಹರಿಯುತ್ತಿರುವ ಹಾಗೆ ತೂಬನ್ನು ವ್ಯವಸ್ಥೆ ಮಾಡಲಾಗಿದ್ದಿತು. ಪ್ರಸ್ತುತ ಕೆರೆಯಲ್ಲಿ ನೀರಿಲ್ಲ, ಕೆರೆಯ ತೂಬು ವಿನಾಶದ ಅಂಚಿನಲ್ಲಿದೆ.

ಸ್ಮಾರಕ : ಮೆದಕೆರೆ ಕೆರೆ

ಗ್ರಾಮ : ಮೆದಕೆರೆ

ಸ್ಥಳ : ಊರಿನ ಪ್ರಾರಂಭದ ಬಲಭಾಗದಲ್ಲಿದೆ.

ರಾಜವಂಶ : ಸಂತೆಬೆನ್ನೂರಿನ ನಾಯಕರು

ಅರಸ : ಇಮ್ಮಡಿ ಕೆಂಗಪ್ಪ ನಾಯಕ

ಕಾಲ : ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಇಮ್ಮಡಿ ಕೆಂಗಾ ಹನುಮಪ್ಪ ನಾಯಕನು ಮೆದಕೆರೆ ಗ್ರಾಮದ ಕೆರೆಯನ್ನು ಕಟ್ಟಿಸಿದನು.[೪೭] ೧ ೧/೨ ಕಿ.ಮೀ ಉದ್ದ, ೧ ಕಿ.ಮೀ ಅಗಲವಿರುವ ಕೆರೆಯು ವೃತ್ತಾಕಾರದ ಮಾದರಿಯಲ್ಲಿದೆ. ಕೆರೆಯ ಬದುವನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ವಾಯುವ್ಯ ಭಾಗದಲ್ಲಿ ತೂಬಿದ್ದಿತ್ತು. ಆದರೆ ಈಗ ಆಧುನಿಕ ತೂಬನ್ನು ನಿರ್ಮಿಸಲಾಗಿದೆ. ಆಗ ಅಸ್ತಿತ್ವದಲ್ಲಿದ್ದ ಕೆರೆಯ ಕಾಲುವೆಗಳನ್ನೇ ಈಗ ಬಳಸಿಕೊಳ್ಳಲಾಗಿದೆ. ಕಾಲುವೆಯ ನೀರು ಗ್ರಾಮದ ಬಲಭಾಗದಲ್ಲಿ ಹರಿದು ಹೋಗುವ ವ್ಯವಸ್ಥೆ ಕಲ್ಪಿಸಿದ್ದಾರೆ. ಕೆರೆ ನೀರು ತುಂಬಿದಾಗ ಹರಿದು ಹೋಗಲು ಕೋಡಿ ವ್ಯವಸ್ಥೆ ಕಟ್ಟಿಸಿದ್ದಾರೆ.

ಸ್ಮಾರಕ : ಕೆರೆ

ಗ್ರಾಮ : ಸಿದ್ಧರ ಮಠ

ಸ್ಥಳ : ಊರಿನ ಪ್ರಾರಂಭದ ಎಡಭಾಗದಲ್ಲಿದೆ

ರಾಜವಂಶ : ಸಂತೆಬೆನ್ನೂರಿನ ನಾಯಕರು

ಅರಸ : ಇಮ್ಮಡಿ ಕೆಂಗಾಹನುಮಪ್ಪ ನಾಯಕ

ಕಾಲ : ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಇಮ್ಮಡಿ ಕೆಂಗಾಹನುಮಪ್ಪ ನಾಯಕನು ನಿರ್ಮಿಸಿದನು.[೪೮] ವಡ್ಡನ್ನು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದು, ಕೆರೆಯು ತ್ರಿಭುಜ ಆಕೃತಿಯಲ್ಲಿದೆ. ಉತ್ತರ ಭಾಗದಲ್ಲಿ ತೂಬಿಗೆ ಗ್ರ್ಯಾನೈಟ್ ಕಲ್ಲನ್ನು ಬಳಸಿದ್ದು ಸುಮಾರು ೨ ೧/೨ ಅಡಿ ಎತ್ತರ, ೧ ೧/೨ ಅಡಿ ಅಗಲದ ಕಬ್ಬಿಣದ ಸರಳನ್ನು ಅಳವಡಿಸಲಾಗಿದೆ. ಎಡ ಮತ್ತು ಬಲಭಾಗದಲ್ಲಿ ಕಾಲುವೆಯಿದೆ.

ಸ್ಮಾರಕ : ತಳಿಗೆರೆ ಕೆರೆ

ಗ್ರಾಮ : ತಳಿಗೆರೆ

ಸ್ಥಳ : ಗ್ರಾಮದ ಹೊರಭಾಗದಲ್ಲಿದೆ

ರಾಜವಂಶ : ಸಂತೆಬೆನ್ನೂರಿನ ನಾಯಕರು

ಅರಸ : ಇಮ್ಮಡಿ ಕೆಂಗಾಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಕೆರೆಯನ್ನು ಕಟ್ಟಿಸಿದನು.[೪೯] ವೃತ್ತಕಾರದಲ್ಲಿದೆ. ತೂಬನ್ನು ನವೀಕರಿಸಲಾಗಿದೆ. ಕಾಡುಗಲ್ಲು ಮತ್ತು ಮಣ್ಣನ್ನು ಬಳಸಿ ವಡ್ಡನ ನಿರ್ಮಿಸಿದ್ದಾರೆ. ಕೆರೆಕೋಡಿ, ಕಾಲುವೆ ವ್ಯವಸ್ಥೆ ಇದೆ.

ಸ್ಮಾರಕ : ಹಿರೇಕೋಗಿಲೂರು ಕೆರೆ

ಗ್ರಾಮ : ಹಿರೇಕೋಗಿಲೂರು

ಸ್ಥಳ : ಹಿರೇಕೋಗಿಲೂರು ಗ್ರಾಮದಿಂದ ಸಂತೆಬೆನ್ನೂರಿಗೆ ಹೋಗುವ ಮಾರ್ಗದಲ್ಲಿದೆ.

ರಾಜವಂಶ : ಸಂತೆಬೆನ್ನೂರಿನ ನಾಯಕರು

ಅರಸ : ಇಮ್ಮಡಿ ಕೆಂಗಾಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಈ ಕೆರೆಯನ್ನು 'ಇಮ್ಮಡಿ ಕೆಂಗಾಹನುಮಪ್ಪ ನಾಯಕನು'[೫೦] ಕಟ್ಟಿಸಿದನು. ಆಯಾತಾಕಾರವಾಗಿರುವ ಕೆರೆಯನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ಏರಿಯನ್ನು ನಿರ್ಮಿಸಲಾಗಿದೆ. ಪೂರ್ವಭಾಗದಲ್ಲಿ ಕಣಶಿಲೆಯಿಂದ ತೂಬನ್ನು ಕಟ್ಟಿದ್ದು ಕಬ್ಬಿಣದ ಸರಳಿನ ಮೂಲಕ ನೀರು ಹೊರಗೆ ಹೋಗಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕಾಲುವೆಗಳು ಅಸ್ತಿತ್ವದಲ್ಲಿವೆ.

ಸ್ಮಾರಕ : ಕೆರೆ

ಗ್ರಾಮ : ಕುಳನೂರು

ಸ್ಥಳ : ಗ್ರಾಮದ ವಾಯುವ್ಯ ಭಾಗದಲ್ಲಿದೆ.

ರಾಜವಂಶ : ಸಂತೆಬೆನ್ನೂರು ನಾಯಕರು

ಅರಸ : ನಿಚ್ಚಮಧುವಣಿಗ ನಾಯಕ

ಕಾಲ : ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಈ ಕೆರೆಯನ್ನು ನಿಚ್ಚಮದುವಣಿಗ ನಾಯಕನು ಕಟ್ಟಿಸಿದನು.[೫೧] ಆಯಾತಾಕಾರದ ಮಾದರಿಯಲ್ಲಿರುವ ಕೆರೆಯು ಕಾಡುಗಲ್ಲು ಮತ್ತು ಮಣ್ಣನ್ನು ಬಳಸಿ ವಡ್ಡು (ಏರಿಯನ್ನು) ಕಟ್ಟಿಸಿದ್ದಾರೆ. ಪೂರ್ವಭಾಗದಲ್ಲಿ ತೂಬಿನ ವ್ಯವಸ್ಥೆಯಿದ್ದಿತ್ತು. ಆದರೆ ಈಗ ಅದನ್ನು ಕಿತ್ತುಹಾಕಿ ಆ ಸ್ಥಳದಲ್ಲಿ ಇತ್ತೀಚೆಗೆ ಸಿಮೆಂಟ್ ತೂಬನ್ನು ನಿರ್ಮಿಸಿದ್ದಾರೆ. ಪ್ರಸ್ತುತ ಕೆರೆಯಲ್ಲಿ ನೀರಿಲ್ಲ.

ಸ್ಮಾರಕ : ಗಿರಿಯವ್ವ ನಾಗತಿಕೆರೆ

ಗ್ರಾಮ : ಕಂಚುಗಾರನಹಳ್ಳಿ

ಸ್ಥಳ : ದಾಗಿನಕಟ್ಟೆ

ರಾಜವಂಶ : ಸಂತೆಬೆನ್ನೂರು ನಾಯಕರು

ಅರಸ : ಹನುಮಪ್ಪ ನಾಯಕ

ಕಾಲ : ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಕಂಚುಗಾರನಹಳ್ಳಿ ಗ್ರಾಮದಲ್ಲಿ ಹನುಮಪ್ಪನಾಯಕರ ಹೆಂಡತಿ ಗಿರಿಯವ್ವ ನಾಗತಿಯು ಒಂದು ಕೆರೆಯನ್ನು ಕಟ್ಟಿಸಿದಳು. ಇದನ್ನೇ ಗಿರಿಯವ್ವ ನಾಗತಿಕೆರೆಯೆಂದು ಕರೆಯುತ್ತಾರೆ.[೫೨] ಆಯಾತಾಕಾರವಾಗಿರುವ ಕೆರೆಯು ೨ ಕಿ.ಮೀ ಉದ್ದ ೧ ಕಿ.ಮೀ ಅಗಲವಿದೆ. ಆದರೆ ಕೆರೆಯನ್ನು ಉತ್ತರ ಭಾಗದಲ್ಲಿ ಅತಿಕ್ರಮಿಸಿಕೊಂಡು ವ್ಯವಸಾಯಕ್ಕೆ ಬಳಸಿಕೊಂಡಿದ್ದಾರೆ. ಉತ್ತರಭಾಗದಲ್ಲಿನ ಮಧ್ಯದಲ್ಲಿ ತೂಬನ್ನು ವಾಸ್ತುಶಿಲ್ಪದ ಆಧಾರದಿಂದ ನಿರ್ಮಿಸಿದ್ದಾರೆ. ತೂಬು ನಾಲ್ಕು ಹಂತಗಳಿಂದ ಕೂಡಿದೆ. ಆರಂಭಿಕ ಹಂತವು ಅದಿಷ್ಠಾನವಾಗಿದ್ದು ವಿಜಯನಗರೋತ್ತರ (ಸಂತೆಬೆನ್ನೂರು ನಾಯಕರ ಕಾಲದ) ಮಾದರಿಯ ಸುಟ್ಟ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಿದ್ದಾರೆ. ಎರಡನೇ ಹಂತವು ಅದಿಷ್ಠಾನದ ಮೇಲೆ ಕಲ್ಲು ಚೌಕಾಕಾರದ ದಪ್ಪವಾದ ಕಂಬಗಳು ಏರುಮುಖದ ವಿನ್ಯಾಸದಲ್ಲಿ ಚಿಕ್ಕದಾಗುತ್ತ ಸಾಗುವಂತೆ ಕೆತ್ತಲಾಗಿದ್ದು, ಬಲ ಮತ್ತು ಎಡ ಎರಡು-ಎರಡು ಕಂಬಗಳ ಕೆಳಭಾಗದಲ್ಲಿ ಆಯಾತಾಕಾರದ ೧೧$^{೧}/_{೨}$ ಅಡಿ ಉದ್ದ ೪ ಇಂಚು ದಪ್ಪದ ಕಣಶಿಲೆಯನ್ನು ಜೋಡಿಸಿದ್ದು, ಅದರ ಮಧ್ಯದಲ್ಲಿ ವೃತ್ತಾಕಾರವಾಗಿ ರಂಧ್ರ (ಹೋಲ್) ಮಾಡಲಾಗಿದೆ. ಈ ನಾಲ್ಕು ಕಣಶಿಲೆ ಸ್ತಂಭಗಳು ಸಾಧಾರಣ ಭೋದಿಗೆಯನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ಪ್ರಸ್ತಾರ(ಛಾವಣಿ)ವಿದೆ. ಮೂರನೇ ಹಂತದಲ್ಲಿ ಪ್ರಸ್ತಾರದ ಮೇಲ್ಭಾಗದಲ್ಲಿ ನಾಲ್ಕು ಕಂಬಗಳನ್ನು ನಿಲ್ಲಿಸಿದ್ದು ಅದರ ಪೀಠವು ಚೌಕಾಕಾರವಾಗಿದೆ. ದಿಂಡು ಅಷ್ಟಮುಖದಲ್ಲಿ ಪಾಲಿಕೆಯ ರೀತಿ ಕತ್ತರಿಸಲಾಗಿದೆ. ನಾಲ್ಕನೆ ಹಂತದಲ್ಲಿ ಪ್ರಸ್ತಾರದ ಮೇಲೆ ಶಿಖರವಿದೆ. ಶಿಖರವು ನಶಿಸಿಹೋಗಿರುವ ಹಂತದಲ್ಲಿದ್ದು, ಅದನ್ನು ಸುಟ್ಟ ಇಟ್ಟಿಗೆಯನ್ನು ಅದರೊಂದಿಗೆ ಗಾರೆಯನ್ನು ಬೆರೆಸಿ ನಿರ್ಮಿಸಿದೆ. ಶಿಖರದ ಮೇಲ್ಭಾಗದಲ್ಲಿ ಅಮಲಕವಿದೆ.

ಕೆಳಭಾಗದಲ್ಲಿರುವ ಎರಡು ರಂಧ್ರಗಳ ಸಹಾಯದಿಂದ ತೂಬಿನ ನೀರನ್ನು ಹೊರಬಿಡುವ ವ್ಯವಸ್ಥೆಯಿದ್ದು, ಹೊರಹೋಗುವ ನೀರಿಗೆ ಕಾಲುವೆಯ ವ್ಯವಸ್ಥೆ ಮಾಡಲಾಗಿದ್ದು, ಕೆರೆ ತುಂಬಿದಾಗ ಕೆರೆ ಹಾನಿ ಹಾಗದಂತೆ ರಕ್ಷಿಸಲು ಕಾಡುಗಲ್ಲಿನಿಂದ ಕೆರೆಗೆ ಕೋಡಿ ನಿರ್ಮಿಸಿದ್ದಾರೆ.

ಸ್ಮಾರಕ : ಕೆರೆ

ಗ್ರಾಮ : ಸಾಸ್ವಿಹಳ್ಳಿ

ಸ್ಥಳ : ಗ್ರಾಮದ ಉತ್ತರ ಭಾಗದಲ್ಲಿದೆ

ರಾಜವಂಶ : ಸಂತೆಬೆನ್ನೂರು ನಾಯಕರು

ಅರಸ : ಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಈ ಕೆರೆಯನ್ನು ಹನುಮಪ್ಪನಾಯಕರು ಕಟ್ಟಿಸಿದರು. ಅದಕ್ಕೆ ಹವಾಲೆವೀರನಾಯಕ ಕಟ್ಟಿಸಿದ್ದ ಕಾರಣ ಅದಕ್ಕೆ ವೀರನಾಯಕನ ಕೆರೆ ಎಂದು ಕರೆಯುತ್ತಾರೆ.[೫೩] ಆಯಾತಾಕಾರವಾಗಿದ್ದು ೨ ಕಿ.ಮೀ ಉದ್ದ, ೧ ಕಿ.ಮೀ ಅಗಲವಿದೆ. ತೂಬು ಪ್ರಸ್ತುತ ನವೀಕರಿಸಲಾಗಿದೆ. ಕೆರೆಯ ವಡ್ಡನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ತೂಬಿನ ವ್ಯವಸ್ಥೆ ಮಾಡಲಾಗಿದೆ. ಕೆರೆ ನೀರು ತುಂಬಿದಾಗ ಕೆರೆಗೆ ಹಾನಿ ಹಾಗದಂತೆ ಕೆರೆಯ ರಕ್ಷಣೆಗಾಗಿ ವಡ್ಡನ್ನು ಕಟ್ಟಿದ್ದಾರೆ.

ಸ್ಮಾರಕ : ಗ್ರಾಮದ ಕೆರೆ

ಗ್ರಾಮ : ಹೊಸಹಳ್ಳಿ

ಸ್ಥಳ : ಗ್ರಾಮದ ಹೊರಭಾಗದಲ್ಲಿದೆ.

ರಾಜವಂಶ : ಸಂತೆಬೆನ್ನೂರು ನಾಯಕರು

ಅರಸ : ಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಈ ಕೆರೆಯನ್ನು ಹೊಸಹಳ್ಳಿ ಗ್ರಾಮದ ಹವಾಲೆಬಾಲನಾಯಕ ಎಂಬುವವನು ಕಟ್ಟಿಸಿದ. ಕಾರಣ ಇದನ್ನು 'ಬಾಲನಾಯಕನಕೆರೆ' ಎಂದು ಕರೆಯುವರೆಂದು ಸಾಸ್ವಿಹಳ್ಳಿ ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ.[೫೪] ಆಯಾತಾಕಾರವಾಗಿರುವ ಕೆರೆಯು ಸು. ೨ ಕಿ.ಮೀ ಉದ್ದ, ೧ ಕಿ.ಮೀ

ಅಗಲವಿದೆ. ವಡ್ಡು (ಏರಿಯನ್ನು) ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದ್ದು, ತೂಬನ್ನು ಪ್ರಸ್ತುತ ನವೀಕರಿಸಲಾಗಿದ್ದು, ಕಾಲುವೆ ವ್ಯವಸ್ಥೆ ಇದೆ. ಕೋಡಿಯನ್ನು ಕಟ್ಟಿದ್ದಾರೆ.

ಸ್ಮಾರಕ : ಗ್ರಾಮದ ಕೆರೆ

ಗ್ರಾಮ : ರಾಮೇನಹಳ್ಳಿ

ಸ್ಥಳ : ಗ್ರಾಮದ ಆರಂಭಿಕ ಸ್ಥಳದಲ್ಲಿದೆ.

ಸಂತತಿ : ಸಂತೆಬೆನ್ನೂರು ನಾಯಕರು

ಅರಸ : ಇಮ್ಮಡಿ ಹನುಮಪ್ಪ ನಾಯಕ

ಕಾಲ : ಕ್ರಿ.ಶ. ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಇಮ್ಮಡಿ ಹನುಮಪ್ಪ ನಾಯಕ ರಾಮೇನಹಳ್ಳಿ ಕೆರೆ ನಿರ್ಮಿಸಿದ.[೫೫] ರಾಮೇನಹಳ್ಳಿಯ ಕೆರೆಯು ವೃತ್ತಾಕಾರವಾಗಿದ್ದು, ವಡ್ಡ(ಏರಿ)ನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ತೂಬನ್ನು ಗ್ರಾನೈಟ್ ಮತ್ತು ಸುಟ್ಟ ಇಟ್ಟಿಗೆಯನ್ನು ಬಳಸಿ ನಿರ್ಮಿಸಿದ್ದಾರೆ. ತೂಬಿನ ಪೀಠಭಾಗವನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಿದ್ದಾರೆ. ೧೪ ಅಡಿ ಉದ್ದ, ೧ ಅಡಿ ದಪ್ಪದ ಚೌಕಾಕಾರದ ಗ್ರಾನೈಟ್ ಎರಡು ಕಂಬಗಳನ್ನು ೨೧/೨ ಅಡಿ ಅಂತರದಲ್ಲಿ ನಿಲ್ಲಿಸಿದ್ದಾರೆ. ಅವುಗಳಿಗೆ ನಾಲ್ಕು ಅಡಿ ಅಂತರದಲ್ಲಿ ಆಯಾತಾಕಾರದ ೧ ಅಡಿ ಅಗಲ, ನಾಲ್ಕು ಇಂಚು ದಪ್ಪ, ೨೧/೨ ಅಡಿ ಉದ್ದದ ಕಣಶಿಲೆಯನ್ನು ಜೋಡಿಸಲಾಗಿದೆ. ಅದರ ನಡುವೆ ಚಿಕ್ಕರಂಧ್ರ ಮಾಡಿ ಇದರ ಸಹಾಯದಿಂದ ಕಬ್ಬಿಣದ ಸರಳನ್ನು ಎತ್ತಲು ತಿರುಗಿಸುವ ವ್ಯವಸ್ಥೆ ಮಾಡಲಾಗಿದ್ದಿತು. ಎರಡು ಮುಖ್ಯ ಕಂಬಗಳ ಮೇಲ್ಭಾಗದಲ್ಲಿ ಅದರ ಅಡಿ ಅಂತರದಲ್ಲಿ ಎರಡು ಮೂರು ಅಡಿ ಉದ್ದ, ನಾಲ್ಕು ಇಂಚು ದಪ್ಪದ ಆಯಾತಾಕಾರದ ಎರಡು ಕಣಶಿಲೆಯನ್ನು ೪ ಅಡಿ ಅಂತರದಲ್ಲಿ ಜೋಡಿಸಲಾಗಿದೆ. ಅವುಗಳ ಮಧ್ಯದಲ್ಲಿ ರಂಧ್ರವಿದೆ. ಕಾರಣವೇನೆಂದರೆ ಮುಖ್ಯ ಕಂಬಗಳು ಅಲಗಾಡಬಾರದೆಂಬ ಮತ್ತು ಕಬ್ಬಿಣದ ಸರಳನ್ನು ತಿರುವುದರ ಮೂಲಕ ನೀರನ್ನು ಹೊರಗೆ ಬಿಡುವ ವ್ಯವಸ್ಥೆಯ ಉದ್ದೇಶ ಇದೊಂದು ಸುಂದರವಾದ ವಾಸ್ತುಶಿಲ್ಪವಾಗಿದೆ. ವಡ್ಡಿನ ಹೊರಭಾಗದಲ್ಲಿ ಕಾಲುವೆಗಳ ವ್ಯವಸ್ಥೆ ಕಲ್ಪಿಸಲಾಗಿದ್ದು, ಕೆರೆ ತುಂಬಿದಾಗ ಕೆರೆಗೆ ಹಾನಿ ಹಾಗದಂತೆ ನೀರು ಹೊರ ಹೋಗಲು ಕೋಡಿಯನ್ನು ಕಾಡುಗಲ್ಲುಗಳಾದ ನಿರ್ಮಿಸಿದ್ದಾರೆ. ಪ್ರಸ್ತುತ ಕೆರೆಯಲ್ಲಿ ನೀರಿಲ್ಲ.

ಸ್ಮಾರಕ : ಕೆರೆ

ಗ್ರಾಮ : ಹೊದಿಗೆರೆ

ಸ್ಥಳ : ಗ್ರಾಮದ ಷಾಹಜಿ ಬೋನ್ಸ್ಲೆಯ ಸಮಾಧಿ ಸ್ಮಾರಕದ ಮುಂಭಾಗದಲ್ಲಿದೆ

ಸಂತತಿ : ಸಂತೆಬೆನ್ನೂರು ನಾಯಕರು

ಅರಸ : ಹನುಮಪ್ಪ ನಾಯಕ

ಕಾಲ : ಇಮ್ಮಡಿ ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಇಮ್ಮಡಿ ಹನುಮಪ್ಪ ನಾಯಕನು ಹರಿಯುತ್ತಿದ್ದ ಹಳ್ಳಕ್ಕೆ ಕೆರೆ ಕಟ್ಟಿಸಿದಳು.[೫೬] ಕೆರೆಯು ವೃತ್ತಕಾರದಲ್ಲಿದ್ದು ೧ ಕಿ.ಮೀ ಉದ್ದ ೪ ಅಗಲವಿದ್ದು ವಡ್ಡ(ಏರಿ)ನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದಾರೆ. ಕೆರೆಯ ತೂಬಿನ ಪೀಠಭಾಗವನ್ನು ಇತ್ತೀಚೆಗೆ ನವೀಕರಿಸಲಾಗಿದೆ. ಆದರೆ ಉಳಿದ ಭಾಗವು ಸಂತೆಬೆನ್ನೂರಿನ ನಾಯಕರ ಕಾಲದಲ್ಲಿ ನಿರ್ಮಿಸಲಾಗಿದೆ. ಸು. ೧೨ ಅಡಿ ಎತ್ತರದ ೧ ಅಡಿ ದಪ್ಪ ೧ ಅಡಿ ಅಗಲದ ಎರಡು ಸ್ತಂಭವನ್ನು ೨ ೧/೨ ಅಡಿ ಅಂತರದಲ್ಲಿ ನಿಲ್ಲಿಸಿದ್ದು, ಅದಕ್ಕೆ ೩ ಅಡಿ ಎತ್ತರದಲ್ಲಿ ೨ ೧/೨ ಅಡಿ ಉದ್ದ ೧ ಅಡಿ ಅಗಲವಿರುವ ೪ ಇಂಚು ದಪ್ಪದ ಆಯಾತಾಕಾರದ ಕಣಶಿಲೆಯನ್ನು ಜೋಡಿಸಲಾಗಿದೆ. ಅದರ ಮಧ್ಯದಲ್ಲಿ ವೃತ್ತಾಕಾರದ ರಂಧ್ರವಿದೆ. ಮುಖ್ಯ ಸ್ತಂಭಗಳ ಮೇಲ್ಭಾಗದಲ್ಲಿ ೩ ಅಡಿ ಉದ್ದ ೧ ಅಡಿ ಅಗಲ ೪ ಇಂಚು ದಪ್ಪದ ಸಮಾನಂತರ ಎರಡು ಕಣಶಿಲೆಯು ಅರ್ಧ ಅಡಿ ಅಂತರದಲ್ಲಿ ಜೋಡಿಸಲಾಗಿದ್ದು, ಅವುಗಳ ನಡುವೆ ವೃತ್ತಾಕಾರದ ರಂಧ್ರವಿದೆ. ವಡ್ಡಿನ ಹೊರಭಾಗದಲ್ಲಿ ಕಾಲುವೆಯ ವ್ಯವಸ್ಥೆ ಕಲ್ಪಿಸಲಾಗಿತ್ತು. ನೀರು ತುಂಬಿದಾಗ ನೀರು ಹೊರ ಹೋಗಲು ಕೋಡಿ ವ್ಯವಸ್ಥೆ ಮಾಡಲಾಗಿದೆ.

ಶಾಸನ ಉಲ್ಲೇಖಿತ ಕೆರೆಗಳು

ಚನ್ನಗಿರಿ ತಾಲ್ಲೂಕಿನಲ್ಲಿ ಶಾಸನಗಳಲ್ಲಿ ಉಲ್ಲೇಖಿಸಿದ ಕೆರೆಗಳ ಬಗ್ಗೆ ಮಾಹಿತಿ ನೀಡಲಾಗಿದ್ದು ಅದರ ಆಧಾರದ ಮೇಲೆ ಪ್ರಸ್ತುತ ನಾಲ್ಕು ಕೆರೆಗಳು ಲಭ್ಯವಾಗಿವೆ. ಅವುಗಳೆಂದರೆ ತ್ಯಾವಣಿಗೆಕೆರೆ, ತಾವರೆಕೆರೆ(ಹೊಸಹಳ್ಳಿ) ಹೊಸಹಳ್ಳಿ ಕೆರೆ, ಅಲಕನಾಳು ಕೆರೆ (ಬಿಲ್ಲಸಮುದ್ರ ಮತ್ತು ಭೂಸಮುದ್ರ)

ಸ್ಮಾರಕ : ಕೆರೆ

ಗ್ರಾಮ : ತ್ಯಾವಣಿಗೆ

ಸ್ಥಳ : ಊರಿನ ಹೊರ ಪೂರ್ವಭಾಗದಲ್ಲಿದೆ

ಸಂತತಿ : ನೊಳಂಬರು

ಅರಸ : ತ್ರೈಲೋಕ್ಯಮಲ್ಲನನ್ನಿನೊಳಂಬಪಲ್ಲವ ಪೆರ್ಮಾಡಿ

ಕಾಲ : ಕ್ರಿ.ಶ. ೧೦೫೦

ಪ್ರಕಟಣೆ : ಬಿ.ಎಲ್.ರೈಸ್., ಇ.ಸಿ.ಸಂ.೭., ಭಾಗ-೨, ಶಾಸನ-೭, ಪು-೪೨೭

ಕ್ರಿ.ಶ.೧೦೫೦ರ ತ್ಯಾವಣಿಗೆ ಗ್ರಾಮದ ನೊಳಂಬರ ಎರಡನೇ ತ್ರೈಲೋಕ್ಯಮಲ್ಲನನ್ನಿನೊಳಂಬಪಲ್ಲವ ಪೆರ್ಮಾಡಿ ಕಾಲದಲ್ಲಿ ಬೆಳೆಗೌಡನ ಅಳಿಯ ನೆನಿಗೆಯ ಮಲ್ಲನು ಕೆರೆಯನ್ನು ದೇವಾಲಯವನ್ನು ಕಟ್ಟಿಸಿ ಭೂದಾನವನ್ನು ಮಾಡಿದ ಬಗ್ಗೆ ಉಲ್ಲೇಖಿಸಿದೆ.[೫೭] ಪ್ರಸ್ತುತ ವೃತ್ತಕಾರದಲ್ಲಿರುವ ಕೆರೆಯು ೨ ಕಿ.ಮೀ ಉದ್ದ, ೧ ಕಿ.ಮೀ ಅಗಲವಿದೆ. ಕಾಡುಗಲ್ಲು ಮತ್ತು ಮಣ್ಣಿನಿಂದ ವಡ್ಡನ್ನು ನಿರ್ಮಿಸಿದ್ದಾರೆ. ತೂಬನ್ನು ಪ್ರಸ್ತುತ ನವೀಕರಿಸಿದ್ದಾರೆ. ಕಾಲುವೆಯ ಸಂಪರ್ಕವಿದ್ದು ಕೋಡಿಯನ್ನು ನಿರ್ಮಿಸಿದ್ದಾರೆ.

ಸ್ಮಾರಕ : ಕೆರೆ

ಗ್ರಾಮ : ಅಲಕನಾಳು

ಸ್ಥಳ : ಊರಿನ ಹೊರಭಾಗದಲ್ಲಿದೆ(ಬಿಲ್ಲೇಶ್ವರ ದೇವಾಲಯದ ಹಿಂಭಾಗದಲ್ಲಿದೆ)

ರಾಜವಂಶ : ಆಸಂದಿಗಂಗರು

ಅರಸ : ನರಸಿಂಹ

ಕಾಲ : ಕ್ರಿ.ಶ. ೧೨೧೪

ಪ್ರಕಟಣೆ : ಬಿ.ಎಲ್.ರೈಸ್., ಇ.ಸಿ.ಸಂ.೭., ಭಾಗ-೨,ಶಾಸನ-೬೪, ಪು-೪೬೦

ಕ್ರಿ.ಶ ೧೨೧೪ ರಲ್ಲಿ ಏರೆಯಂಗನ ಸಾಮಂತರಾದ ಆಸಂದಿಗಂಗರ ನರಸಿಂಹನ ಕಾಲದಲ್ಲಿ ಮಹಾನಾಲಪ್ರಭು ಮೂಡಿಗೆರೆ ರಾಮಗೌಡನು ಅಲಕನಾಳಿನಲ್ಲಿ ಬಿಲ್ಲಸಮುದ್ರ ಮತ್ತು ಭೂ ಸಮುದ್ರವನ್ನು ಕೆರೆಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸಿದೆ.[೫೮] ಪ್ರಸ್ತುತ ಕೆರೆಗಳು ವೃತ್ತಾಕಾರದಲ್ಲಿದ್ದು ತೂಬುಗಳು ನಶಿಸಿ ಹೋಗಿವೆ. ೧ ಕಿ.ಮೀ ವಿಸ್ತೀರ್ಣವನ್ನು ಹೊಂದಿರುವ ಕೆರೆ ಇದೆ. ಮತ್ತೊಂದು ೧ ಕಿ.ಮೀ ಉದ್ದ, ೨ ಕಿ.ಮೀ ಅಗಲವಿರುವ ಕೆರೆಯಾಗಿದೆ. ಪ್ರಸ್ತುತ ಎರಡು ಕೆರೆಗಳಲ್ಲಿ ನೀರಿಲ್ಲ.

ಸ್ಮಾರಕ : ಕೆರೆ

ಗ್ರಾಮ : ಹೊಸಹಳ್ಳಿ

ಸ್ಥಳ : ಊರಿನ ನೈರುತ್ಯ ಭಾಗದಲ್ಲಿದೆ

ರಾಜವಂಶ : ವಿಜಾಪುರದ ಅದಿಲ್ ಷಾಹಿಗಳು

ಅರಸ : ೧ನೇ ಆದಿಲ್‌ಶಾಹಿ

ಕಾಲ : ಕ್ರಿ.ಶ. ೧೬೫೨

ಪ್ರಕಟಣೆ : ಬಿ.ಎಲ್. ರೈಸ್, ಇ.ಸಿ.೭, ಭಾಗ-೨, ಶಾಸನ-೪೩, ಪು- ೪೪೬

ಕ್ರಿ.ಶ. ೧೬೫೨ರ ನಂದನ ವರ್ಷದಲ್ಲಿ ಪಾದಷಾಹ ರೋಗಗ್ರಸ್ಥನಾದಾಗ ಅವನ ಪರವಾಗಿ ಪ್ರಾರ್ಥಿಸಿ ತಾವರೆಕೆರೆಯನ್ನು ಕಟ್ಟಲು ಅಡಿಗಲ್ಲು ಹಾಕುತ್ತಾರೆ. ಕಾಶಿ ಮತ್ತು ರಾಮೇಶ್ವರಕ್ಕೆ ಪ್ರಯಾಣ ಮಾಡುತ್ತಿದ್ದ, ಜನರು ಈ ಮಾರ್ಗದಿಂದ ಹೋಗುತ್ತಿದ್ದರೆಂದು ಶಾಸನವು ಉಲ್ಲೇಖಿಸಿದೆ.[೫೯] ಕೆರೆಯು ೧ ಕಿ.ಮೀ ವಿಸ್ತೀರ್ಣ ಹೊಂದಿದ್ದು, ತೂಬು ನಶಿಸಿಹೋಗಿದೆ. ಕಾಡುಗಲ್ಲು ಮತ್ತು ಮಣ್ಣಿನಿಂದ ಕೆರೆಯ ವಡ್ಡನ್ನು ನಿರ್ಮಿಸಿದ್ದಕ್ಕೆ ಕೋಡಿ ಇದೆ. ಪ್ರಸ್ತುತ ಕೆರೆಯನ್ನು ಒತ್ತುವಾರಿಯಾಗಿದೆ.

ಬಾವಿಗಳು

ಪುರಾತತ್ವ ಆಕಾರಗಳಲ್ಲಿ ಬಾವಿಗಳು ಆ ಕಾಲಘಟ್ಟದ ಇತಿಹಾಸವನ್ನು ವಿವರಿಸುವ ಸ್ಮಾರಕಗಳು. ಚನ್ನಗಿರಿ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯದಲ್ಲಿ ಐತಿಹಾಸಿಕ ಬಾವಿಗಳು ದೊರೆತಿವೆ.

ಸ್ಮಾರಕ : ಬಾವಿ

ಗ್ರಾಮ : ಸಂತೆಬೆನ್ನೂರು

ಸ್ಥಳ : ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿದೆ.

ರಾಜವಂಶ : ಸಂತೆಬೆನ್ನೂರು ನಾಯಕರು

ವಸ್ತು : ಕಣಶಿಲೆ

ಕಾಲ : ೧೬ನೇ ಶತಮಾನ

ಪ್ರಕಟಣೆ : ಅಪ್ರಕಟಿತ

ಮೂರು ಅಡಿ ಅಗಲ x ಎರಡು ಅಡಿ ಉದ್ದದ ಬಾವಿಯನ್ನು ೧೫ ಅಡಿ ಆಳವಾದ ಬಾವಿಯನ್ನು ತೊಡಿದ್ದು, ಕಣಶಿಲೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಿದ್ದಾರೆ. ಬಾವಿಯ ಎಡ ಮತ್ತು ಬಲ ಭಾಗದಲ್ಲಿ ೭ ಅಡಿ ಎತ್ತರದ ಎರಡು ಗ್ರಾನೈಟ್ ಕಲ್ಲು ನಿಲ್ಲಿಸಿದ್ದಾರೆ. ಇದರ

ಸಹಾಯದಿಂದ ನೀರನ್ನು ಎಳೆಯಲು ಸಹಾಯಕವಾಗುವಂತೆ ನಿರ್ಮಿಸಲಾಗಿದೆ. ಪ್ರಸ್ತುತ ಬಾವಿಯಲ್ಲಿ ನೀರಿಲ್ಲ, ಕಸದಿಂದ ಬಾವಿಯ ಒಳಭಾಗವನ್ನು ಮುಚ್ಚಲಾಗಿದೆ. ಈ ಬಾವಿಯ ನೀರಿನಿಂದ ಕೋಟೆ ಆಂಜನೇಯ ಸ್ವಾಮಿಗೆ ಅಭಿಷೇಕವನ್ನು ಮಾಡುತ್ತಿದ್ದರು.

ಸ್ಮಾರಕ : ಬಾವಿ

ಗ್ರಾಮ : ಸಂತೆಬೆನ್ನೂರು

ಸ್ಥಳ : ಊರಿನ ದುರ್ಗಮ್ಮ ದೇವಾಲಯದ ಪಕ್ಕದಲ್ಲಿದೆ.

ರಾಜವಂಶ : ಸಂತೆಬೆನ್ನೂರಿನ ನಾಯಕರು

ಕಾಲ : ೧೬ನೇ ಶತಮಾನ

ವಸ್ತು : ಕಣಶಿಲೆ

ಪ್ರಕಟಣೆ : ಅಪ್ರಕಟಿತ

ಐದು ಅಡಿ ಅಗಲ x ಏಳು ಅಡಿ ಉದ್ದದ ಬಾವಿಯನ್ನು ಕಣಶಿಲೆ ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದ್ದು, ಸು. ೨ ೧/೨ ಅಡಿ ಅಂತರದಲ್ಲಿ ನಾಲ್ಕು ಕಣಶಿಲೆಯ ಆಯಾತಾಕಾರದ ಸ್ತಂಭಗಳನ್ನು ನಿಲ್ಲಿಸಿದ್ದಾರೆ. ಇದರ ಸಹಾಯದಿಂದ ನೀರನ್ನು ಮೇಲೆತ್ತಲು ಸಹಾಯಕವಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಬಾವಿಯಲ್ಲಿ ನೀರಿರುವುದರಿಂದ ಅದರ ಆಳವನ್ನು ಲೆಕ್ಕ ಹಾಕಲು ಸಾಧ್ಯವಾಗಿಲ್ಲ.

ಸಂತೆಬೆನ್ನೂರಿನ ಪುಷ್ಕರಣಿ

ಸ್ಮಾರಕ : ಪುಷ್ಕರಣಿ

ಗ್ರಾಮ : ಸಂತೆಬೆನ್ನೂರು

ಸ್ಥಳ : ದಾವಣಗೆರೆ ಮತ್ತು ಚನ್ನಗಿರಿ ರಸ್ತೆಯಲ್ಲಿ ಬರುವಂತಹ ಸಂತೆಬೆನ್ನೂರಿನ ವೃತ್ತದ ಸ್ವಲ್ಪ ಮುಂಭಾಗದ ಎಡಬದಿಯಲ್ಲಿದೆ.

ಕಾಲ : ಕ್ರಿ.ಶ. ೧೬ನೇ ಶತಮಾನ

ಸಂತತಿ : ಸಂತೆಬೆನ್ನೂರು ನಾಯಕರು

ಪ್ರಕಟಣೆ : ಎಂ.ಎಂ.ಆರ್. ವರದಿ ೧೯೩೭, ಪು.೬೦

ಕ್ರಿ.ಶ. ೧೫೫೮ ಈ ಗ್ರಾಮದಲ್ಲಿ ಶ್ರೀರಾಮಚಂದ್ರ ದೇವಾಲಯ ಮತ್ತು ಅದರ ಮುಂಭಾಗದಲ್ಲಿ ವಿಶಾಲವಾದ ರಾಮತೀರ್ಥವೆಂಬ ಪುಷ್ಕರಣಿಯನ್ನು ಹಿರೇಕೆಂಗಪ್ಪನಾಯಕನು ಬಂಡೆಯ ಮೇಲೆ ನಿರ್ಮಿಸಿದ್ದಾನೆ. ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಇಟ್ಟಿಗೆ ಬಳಸಿ ಮತ್ತು

ಗಾರೆಯ ಸಹಾಯದಿಂದ ಕಟ್ಟಿಸಿದ್ದಾರೆ. ಸಂತೆಬೆನ್ನೂರಿನ ಪುಷ್ಕರಣಿ ಚತುರಸ್ರವಾದ ತಳವಿನ್ಯಾಸವನ್ನು ಹೊಂದಿದ್ದು ೨೩೫ ಅಡಿ ಉದ್ದ ೨೪೫ ಅಗಲವಿದ್ದು ಎರಡು ಹಂತಗಳಲ್ಲಿ ಒಳಭಾಗದಲ್ಲಿ ಇಳಿಜಾರುತ್ತಾ ರಚನೆಗೊಂಡಿದೆ.[೬೦] ನಾಲ್ಕು ದಿಕ್ಕುಗಳಲ್ಲಿ ಒಂದೊಂದರಂತೆ ಪ್ರವೇಶ ಮಂಟಪಗಳಿವೆ. ಈ ಮಂಟಪಗಳು ಎತ್ತರವಾದ ಜಗಲಿಯ ಮೇಲೆ ರಚಿಸಲಾಗಿದೆ. ಸರಳಕಂಬ ಮಾದರಿಯಲ್ಲಿವೆ. ಮಂಟಪಗಳ ಮೇಲ್ಭಾಗದ ರಚನೆಯು ಆಮ್ಲಕ ರೀತಿಯ ಶಿಖರವನ್ನು ಹೊಂದಿದೆ. ಈ ರೀತಿಯಲ್ಲಿ ಎಂಟು ದಿಕ್ಕಿಗೆ ಅಷ್ಟಮಂಟಪಗಳನ್ನು ನಿರ್ಮಿಸಲಾಗಿತ್ತು. ಪ್ರಸ್ತುತ ಆರು ಮಂಟಪಗಳಿವೆ. ಈ ಮಂಟಪಗಳಲ್ಲಿ ಧಾರ್ಮಿಕ, ಸಾಮಾಜಿಕ ಜೀವನದ ಉಬ್ಬುಶಿಲ್ಪಗಳನ್ನು ಮಂಟಪಗಳ ಸರಳ ಕಂಬಗಳ ಮೇಲೆ ಕಾಣಬಹುದಾಗಿದೆ. ಪುಷ್ಕರಣಿ ಬಂಡೆಯ ಮೇಲಿರುವುದರಿಂದ ಸ್ವಾಭಾವಿಕ ಜಲ ಪ್ರಾಪ್ತಿ ಇಲ್ಲವಾದ್ದರಿಂದ ಜಲಹರಿ ಮಂಟಪದ ಮೂಲಕ ನೀರು ಈ ಕೊಳಕ್ಕೆ ಬರುತ್ತದೆ. ಹೆಚ್ಚಾದ ನೀರು ಈಶಾನ್ಯ ದಿಕ್ಕಿನಲ್ಲಿ ನಿರ್ಮಿಸಿರುವ ತೂಬಿನ ಮಂಟಪದ ಮೂಲಕ ಹೊರಹೋಗುವ ವ್ಯವಸ್ಥೆ ಮಾಡಲಾಗಿದ್ದು, ಪ್ರಸ್ತುತ ಈ ತೂಬು ಅವಸಾನದ ಸ್ಥಿತಿಯಲ್ಲಿದೆ.

ಪುಷ್ಕರಣಿಯ ಮಧ್ಯದಲ್ಲಿರುವ ವಸಂತಮಂಟಪವನ್ನು ವಸಂತಕಾಲದಲ್ಲಿ ದೇವರ ಉತ್ಸವ ನಡೆಸಲು ಬಳಸುತ್ತಿದ್ದರು. ಈ ಮಂಟಪದಿಂದ ನೀರು ಮೇಲಕ್ಕೂ ಚಿಮ್ಮುವ ವ್ಯವಸ್ಥೆಯಿದ್ದಿತು. ಆದ್ದರಿಂದ ಸ್ಥಳೀಯರು ಇದನ್ನು ಕಾರಂಜಿ ಮಂಟಪವೆಂದು ಕರೆಯುತ್ತಿದ್ದರು. ನಾಲ್ಕು ದಿಕ್ಕಿನಲ್ಲೂ ನೋಡಿದರೆ ಒಂದೇ ರೀತಿಯ ತೇರಿನಂತೆ ಕಾಣುವ ಸುಂದರ ಕಟ್ಟಡವು ವಾಸ್ತು ವೈವಿಧ್ಯತೆಯಿಂದ ಕೂಡಿದ್ದು, ಇದಕ್ಕೆ ಸರಿಸಾಟಿಯಾದ ವಾಸ್ತು ಬೇರೊಂದಿಲ್ಲ ಎಂದು ಖ್ಯಾತ ಸಂಶೋಧಕ ಎಂ. ಚಿದಾನಂದ ಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.[೬೧]

೩೦ ಅಡಿ ಉದ್ದ, ೩೦ ಅಡಿ ಅಗಲ, ೬೦ ಅಡಿ ಎತ್ತರ ಇರುವ ವಸಂತಮಂಟಪವು ನೆಲ ಅಂತಸ್ತು, ರಹಸ್ಯ ಕೋಣೆ, ವೀಕ್ಷಣಾ ಮಂಟಪ, ಉಯ್ಯಾಲೆ ಮಂಟಪ ಶಿಖರವನ್ನು ಒಳಗೊಂಡಂತೆ ಐದು ಅಂತಸ್ತುಗಳನ್ನು ಹೊಂದಿದೆ. ಇದರ ಕಪೋತವು ಪ್ರಾಣಿ, ಪಕ್ಷಿಗಳಿಂದ ಅಲಂಕೃತಗೊಂಡಿದೆ. ಶಿಖರವು ಆಮ್ಲಕ ಮಾದರಿಯಲ್ಲಿದ್ದು, ಕಳಶವನ್ನು ನಿರ್ಮಿಸಲಾಗಿದೆ. ಪುಷ್ಕರಣಿಯು ಸದಾ ನೀರಿನಿಂದ ಆವೃತ್ತವಾಗಿದೆ. ಇದಕ್ಕೆ ಮಳೆನೀರು ನೈರುತ್ಯದ ಭಾಗದ ಬಾವಿಯಲ್ಲಿ ಸಂಗ್ರಹವಾಗಿ ಸುರಂಗಮಾರ್ಗದ ಮೂಲಕ ಒದಗಿಸಲಾಗುವ ತಂತ್ರಜ್ಞಾನ ಅಳವಡಿಸಲಾಗಿದೆ[೬೨]. ಪುಷ್ಕರಣಿಯು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗೋಪುರಗಳನ್ನು ಹೊಂದಿದ್ದು, ಗೋಪುರಗಳ ಸ್ತಂಭಗಳ ಮೇಲೆ ಹನುಮಂತ, ನರ್ತಿಸುವ ಕೃಷ್ಣ, ಗಂಡಭೇರುಂಡಗಳಂತಹ ಉಬ್ಬುಶಿಲ್ಪಗಳನ್ನು ಕಂಡರಿಸಲಾಗಿದೆ.[೬೩]

ಅರಮನೆಯು ಲೌಕಿಕ ಸ್ಮಾರಕಗಳಲ್ಲಿ ಕಂಡುಬಂದರು ಸಹ ಕೋಟೆಯ ಒಳಗೆ ಅರಮನೆ ನಿರ್ಮಿಸಿ ಅದರ ಸುತ್ತ ಕಂದಕಗಳನ್ನು ತೋಡಿಸಿದ್ದರಿಂದ ರಕ್ಷಣ ಸ್ಮಾರಕಗಳಲ್ಲಿಯೇ ಅಧ್ಯಯನ

ಮಾಡಲಾಗಿದೆ. ಚನ್ನಗಿರಿಯಲ್ಲಿ ಅಂತಹ ಸ್ಮಾರಕಗಳ ಬಗ್ಗೆ ತಿಳಿಯುವಂತಹ ಪ್ರಯತ್ನ ಮಾಡಲಾಗಿದೆ.

೪.೩. ರಕ್ಷಣಾ ಸ್ಮಾರಕಗಳು

ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಜನಸಾಮಾನ್ಯರು, ಸಾಮಂತರು ಅರಸರು ತಮ್ಮ ರಕ್ಷಣೆಗಾಗಿ ಕೋಟೆಗಳನ್ನು, ಬಯಲು ಬರಜುಗಳನ್ನು ನಿರ್ಮಿಸಿಕೊಂಡು ಧಾಳಿಕಾರರಿಂದ ರಕ್ಷಣೆ ಪಡೆಯುತ್ತಿದ್ದರು. ಅಂತಹ ಕಟ್ಟಡಗಳೇ ರಕ್ಷಣಾ ಸ್ಮಾರಕಗಳಾಗಿವೆ. ಚನ್ನಗಿರಿಯಲ್ಲಿ ಅಂತಹ ರಕ್ಷಣಾ ಕಟ್ಟಡಗಳು ಕಂಡುಬಂದಿವೆ.

ಕೋಟೆಗಳು

ಮಧ್ಯಯುಗಿನ ಕಾಲದಲ್ಲಿ ಪ್ರಮುಖ ರಕ್ಷಣಾ ಸ್ಮಾರಕಗಳೆಂದರೆ ಕೋಟೆಗಳು. ರಾಜರು ತಮ್ಮ ರಕ್ಷಣೆಗಾಗಿ ಕಟ್ಟಲ್ಪಟ್ಟ ಸ್ಮಾರಕಗಳಾಗಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಹಲವಾರು ಕೋಟೆಗಳು ಕಂಡುಬರುತ್ತವೆ. ಅವುಗಳೆಂದರೆ ಚನ್ನಗಿರಿಕೋಟೆ, ಬಸವಪಟ್ಟಣದಕೋಟೆ, ಉಬ್ರಾಣಿಕೋಟೆ, ರಂಗಯ್ಯನಗಿರಿಕೋಟೆ, ಹೊದಿಗೆರೆಕೋಟೆ, ದೇವರಹಳ್ಳಿಕೋಟೆ, ಸಂತೆಬೆನ್ನೂರು ಕೋಟೆ, ಉಪನಾಯಕನಹಳ್ಳಿಕೋಟೆಗಳು. ಅವುಗಳಲ್ಲಿ ಚನ್ನಗಿರಿ ಕೋಟೆಯನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕೋಟೆಗಳು ಕಾಲದ ಹೊಡೆತಕ್ಕೆ ಸಿಕ್ಕಿ ನಶಿಸಿಹೋಗಿ, ಅವಶೇಷಗಳ ರೂಪದಲ್ಲಿ ಗೋಡೆಗಳು ಅವುಗಳ ಅದಿಷ್ಠಾನ ಮಾತ್ರ ದೊರಕಿವೆ.

ಸ್ಮಾರಕ	:	ಕೋಟೆ
ಗ್ರಾಮ	:	ಚನ್ನಗಿರಿ
ಸ್ಥಳ	:	ಚನ್ನಗಿರಿ ಪಟ್ಟಣದ ನೈರುತ್ಯಭಾಗದ ಬೆಟ್ಟದ ಮೇಲಿದೆ
ಕಾಲ	:	ಕ್ರಿ.ಶ. ೧೮ನೇ ಶತಮಾನ
ಸಂತತಿ	:	ಇಕ್ಕೇರಿಯ ಅರಸರು
ನಿಮಾತೃ	:	ಕೆಳದಿಯ ಚನ್ನಮ್ಮಾಜೀ
ಪ್ರಕಟಣೆ	:	ಎಂ.ಎಂ.ಆರ್. ವರದಿ ೧೯೩೭, ಪು.೫೫

ಕೆಳದಿಯ ರಾಣಿಯಾದ ಚನ್ನಮ್ಮಾಜಿಯು ಚನ್ನಗಿರಿಯ ನೈರುತ್ಯ ಭಾಗದ ಸು.೬೧ ಮೀ ಎತ್ತರ, ೧೨೬.೫೦ ಮೀ ಅಗಲವಾಗಿರುವ ಬೆಟ್ಟದ ಮೇಲೆ ಕಟ್ಟಿಸಿದ ಗಿರಿದುರ್ಗ ಕೋಟೆಯಾಗಿದೆ.[೬೪] ಔರಂಗಜೇಬನು ದಕ್ಷಿಣ ಭಾರತದಲ್ಲಿ ಮರಾಠರ ರಾಜರಾಮ (ಶಿವಾಜಿಯ ಮಗ)ನ ಮೇಲೆ ದಾಳಿ ಮಾಡಿದಾಗ, ರಾಜರಾಮನು ಅಲೆಮಾರಿಯಾಗಿ ತಪ್ಪಿಸಿಕೊಂಡು,

ಕೆಳದಿಯ ಚನ್ನಮಾಜ್ಜಿಯ ಆಶ್ರಯವನ್ನು ಕೋರಿದನು. ಆಗ ಚನ್ನಮ್ಮಾಜಿಯು ರಾಜರಾಮನಿಗ ಚನ್ನಗಿರಿಯಲ್ಲಿ ಆಶ್ರಯ ನೀಡಿದಳು. ಇದರಿಂದ ಕೋಪಗೊಂಡ ಔರಂಗಜೇಬನು ಚನ್ನಗಿರಿಯ ಕೋಟೆಯ ಮೇಲೆ ದಾಳಿಮಾಡಿದನು. ಬಲಿಷ್ಠವಾದ ಚನ್ನಗಿರಿ ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಚೆನ್ನಮ್ಮಾಜಿಯ ಸೈನ್ಯವು ಔರಂಗಜೇಬನ ಸೈನ್ಯವನ್ನು ಸೋಲಿಸಿ ಓಡಿಸಿತು.

ಅಂಡಾಕಾರವಾಗಿರುವ ಕೋಟೆಯು ಎರಡು ಸುತ್ತನ್ನು ಹೊಂದಿದೆ. ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಎರಡು ದ್ವಾರ ಬಾಗಿಲುಗಳಿವೆ. ದ್ವಾರಗಳ ಮೇಲ್ಭಾಗವು ನಶಿಸಿಹೋಗಿದೆ. ಚನ್ನಬಸಪ್ಪ ಪಾಟೀಲ್‌ರವರು ಚನ್ನಗಿರಿ ಕೋಟೆಯಲ್ಲಿ ೭ ಬುರುಜುಗಳು, ೨ ಮುಖ್ಯ ಬತ್ತೇರಿಗಳಿವೆ ಎಂದು ತಿಳಿಸಿದ್ದಾರೆ. ಕೋಟೆಯ ಸುತ್ತಲು ವೃತ್ತಾಕಾರದ ಕೊತ್ತಲವಿದೆ. ೧೯೪೨ರ ಎಂ.ಎ.ಆರ್. ವರದಿಯಲ್ಲಿ ಕೋಟೆಯ ಮುಖ್ಯ ದ್ವಾರವನ್ನು ನವೀಕರಿಸಿದ ಬಗ್ಗೆ ವಿವರಿಸಿದೆ.[೬೫]

ಕೋಟೆಯ ಗೋಡೆ

ಕಾಡುಗಳನ್ನು ಸಮತಟ್ಟಾಗಿ ಕತ್ತರಿಸಿ, ಮಣ್ಣಿನ ಗಾರೆಯನ್ನು ಬಳಸಿ ಕಟ್ಟಿದ್ದಾರೆ. ಗೋಡೆಗಳು ವೈರಿಗಳಿಗೆ ಕಾಣದ ಹಾಗೆ ಮುಳ್ಳಿನ ಪೊದೆಗಳನ್ನು ಬಳಸುತ್ತಿದ್ದರು. ಗೋಡೆಯ ಎತ್ತರ ನೆಲದಿಂದ ಸು. ೧೪ ಅಡಿ ಎತ್ತರ x ೮ ಅಡಿ ಅಗಲವಿದೆ. ಗೋಡೆಯ ಮೇಲ್ಭಾಗದಿಂದ ವೈರಿಗಳ ಮೇಲೆ ಕಾಸಿದ ಮರಳು ಮತ್ತು ಕಾಯ್ದ ಎಣ್ಣೆಯನ್ನು ಸುರಿಯುತ್ತಿದ್ದರು. ಚಿಕ್ಕ ಕಿಂಡಿಗಳು ಗೋಡೆಯಲ್ಲಿ ಕಂಡುಬರುತ್ತವೆ. ಈ ಕಿಂಡಿಗಳ ಸಹಾಯದಿಂದ ಬಂದೂಕನ್ನು ಬಳಸಲು ಸಹಾಯಕವಾಗುತ್ತಿತ್ತು.

ಕೋಟೆ ಬುರುಜು

ಸೈನಿಕರು ಎಚ್ಚರಿಕೆಯಿಂದ ಕೋಟೆಯ ಮೇಲೆ ದಾಳಿ ಮಾಡುವಂತಹ ದಾಳಿಕಾರರನ್ನು ವೀಕ್ಷಣೆ ಮಾಡುವ ವೀಕ್ಷಣ ಗೋಪುರಗಳಾಗಿವೆ. ಇವು ಕೋಟೆಗೆ ಭದ್ರತೆಯನ್ನು ಒದಗಿಸುತ್ತವೆ. ಹಾಗೆಯೇ ಇಲ್ಲಿ ತಮ್ಮ ರಾಜ್ಯದ ಧ್ವಜವನ್ನು ಕಟ್ಟಿರುತ್ತಾರೆ. ಕೋಟೆಯ ಗೋಡೆಯ ಹೊರಭಾಗಕ್ಕೆ ವೃತ್ತಾಕಾರವಾಗಿ ಹೊರಚಾಚಿಕೊಂಡಿರುವ ಭಾಗವೇ ಬುರುಜ ಚನ್ನಗಿರಿ ಕೋಟೆಯು ಏಳು ಬುರುಜುಗಳನ್ನು ಹೊಂದಿದ್ದು, ೧೫ ರಿಂದ ೧೯ ಮೀ. ಅಂತರದಲ್ಲಿ ನಿರ್ಮಿಸಲಾಗಿದೆ. ಚಿಕ್ಕ ಬುರುಜು ೩೦ ಮೀ. ದೊಡ್ಡ ಬುರುಜು ೫೦ ಮೀ. ಸುತ್ತಳತೆಯನ್ನು ಹೊಂದಿರುವ ಬುರುಜುಗಳಲ್ಲಿ ಬಂದೂಕಿನ ಕೋವಿಕಿಂಡಿ ಮತ್ತು ಫಿರಂಗಿಕಿಂಡಿಗಳನ್ನು ಒಳಗೊಂಡಿದೆ.

ಕೋಟೆ ಬತೇರಿ

ಅತಿ ಎತ್ತರದ ವೀಕ್ಷಣ ಗೋಪುರಗಳಾಗಿದ್ದು, ಧ್ವಜವನ್ನು ಪ್ರದರ್ಶಿಸುತ್ತಿರುತ್ತಾರೆ. ರಾಜ್ಯಕ್ಕೆ ಅಪಾಯವುಂಟಾಗುವ ಸಂದರ್ಭದಲ್ಲಿ ಕಹಳೆಯನ್ನು ಊದುತ್ತಾರೆ ಮತ್ತು ಬೆಂಕಿಜ್ವಾಲೆಯನ್ನು

ಹಚ್ಚುತ್ತಾರೆ. ಕೋಟೆಯ ಗೋಡೆಯನ್ನು ಕಟ್ಟಲು ಸಾಧ್ಯವಾದ ಗಿರಿದುರ್ಗದ ಸ್ಥಳಗಳಲ್ಲಿ ಎತ್ತರ ಹಾಗೂ ವೃತ್ತಾಕಾರವಾಗಿ ಬತೇರಿಗಳನ್ನು ನಿರ್ಮಿಸಿರುತ್ತಾರೆ.

ಚನ್ನಗಿರಿ ಕೋಟೆಯಲ್ಲಿ ಎರಡು ಮುಖ್ಯ ಬತೇರಿಗಳಿವೆ. ನೈರುತ್ಯ ದಿಕ್ಕಿನಲ್ಲಿರುವ ಬತೇರಿಯ ಸಂಪೂರ್ಣವಾಗಿ ನಶಿಸಿಹೋಗಿದೆ. ಆಗ್ನೇಯ ದಿಕ್ಕಿನಲ್ಲಿರುವ ಬತ್ತೇರಿಯು ೨೦ ಅಡಿ ಎತ್ತರವಾಗಿದ್ದು, ಮೇಲೆ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ಬತ್ತೇರಿಗಳಿಂದ ಕೋಟೆಯ ಅತಿ ಎತ್ತರದ ಗೋಪುರವಾಗಿರುವುದರಿಂದ ದೂರದ ಪ್ರದೇಶಗಳಿಂದ ಬರುವ ದಾಳಿಕಾರರನ್ನು ವೀಕ್ಷಿಸಬಹುದಾಗಿದೆ.

ಕೋಟೆಯೊಳಗಿನ ಹೊಂಡಗಳು

ಕೋಟೆಯಲ್ಲಿ ವಾಸಿಸುವ ಸೈನಿಕರು, ಜನರು ಮತ್ತು ಅಧಿಕಾರಿಗಳು ಪ್ರಾಣಿಗಳಿಗೆ ನೀರಿನ ಅವಶ್ಯಕತೆ ಇರುತ್ತದೆ. ಇದ್ದರಿಂದ ಕೋಟೆಯ ಒಳಭಾಗದ ಎತ್ತರವಾದ ಇಳಿಜಾರಿನ ಪ್ರದೇಶದ ಕೆಳಗಿನ ತಗ್ಗಿನ ಪ್ರದೇಶದಲ್ಲಿ ಕೃತಕವಾಗಿ ಬಂಡೆಯನ್ನು ಕೊರೆದು ನೈಸರ್ಗಿಕವಾಗಿ ತಗ್ಗಾಗಿರುವ ಪ್ರದೇಶದಲ್ಲಿ ನೀರನ್ನು ಸಂಗ್ರಹಿಸುತ್ತಾರೆ. ಇವುಗಳನ್ನೇ ಕೋಟೆಯೊಳಗಿನ ಹೊಂಡಗಳು ಎಂದು ಕರೆಯುತ್ತಾರೆ. ಇವುಗಳ ತಳಭಾಗ ಕಲ್ಲಾಗಿರುವುದರಿಂದ ವರ್ಷವಿಡೀ ಇಲ್ಲಿ ನೀರು ಸಂಗ್ರಹವಾಗಿರುತ್ತದೆ.

ಚನ್ನಗಿರಿ ಕೋಟೆಯಲ್ಲಿ ಮೂರು ಕೃತಕ ಹೊಂಡಗಳಿವೆ. ರಂಗನಾಥ ದೇವಾಲಯದ ಪಶ್ಚಿಮಕ್ಕಿರುವ ಹೊಂಡಕ್ಕೆ ಕಲ್ಲನ್ನು ಕೊರೆದು ಸೋಪಾನಗಳನ್ನು ನಿರ್ಮಿಸಿದ್ದಾರೆ. ೧೫ ಅಡಿ ಆಳವನ್ನು ಹೊಂದಿರುವ ಹೊಂಡವಾಗಿದೆ. ಇದರಿಂದ ಬೇಟೆ ರಂಗನಾಥ ಸ್ವಾಮಿಗೆ ನೀರನ್ನು ತೆಗೆದುಕೊಂಡು ಹೋಗಿ ಅಭಿಷೇಕ ಮಾಡುತ್ತಾರೆ. ಈಶಾನ್ಯ ಭಾಗದಲ್ಲಿ ಇದೇ ರೀತಿಯ ಹೊಂಡವಿದೆ. ಉತ್ತರ ಭಾಗದಲ್ಲಿ ಚಿಕ್ಕ ಹೊಂಡಗಳಿವೆ. ಇವುಗಳಿಗೆ ಕಲ್ಲನ್ನು ಕೊರೆದು ಸೋಪಾನ ವ್ಯವಸ್ಥೆ ಮಾಡಿದ್ದಾರೆ.[೬೬]

ಕೋಟೆ ಕಂದಕ

ಕೋಟೆಯ ಸುತ್ತಲು ಕಂದಕಗಳನ್ನು ನಿರ್ಮಿಸಿ ಅದರಲ್ಲಿ ಸದಾ ನೀರಿರುವಂತೆ ವ್ಯವಸ್ಥೆ ಮಾಡಿ, ಅದರಲ್ಲಿ ವಿಷಜಂತುಗಳನ್ನು ಸಾಕುತ್ತಾರೆ. ಕಂದಕಗಳು ತುಂಬ ಅಗಲವಾಗಿದ್ದರೆ ಶತ್ರುಗಳು ಗುರಿ ಇಟ್ಟು ಹೊಡೆಯುವ ಬಂದೂಕಿನ ಗುಂಡು, ಫಿರಂಗಿಗುಂಡು, ಬಾಣಗಳು ಕಂದಕದಲ್ಲಿಯೇ ಬೀಳುತ್ತವೆ.

ಚನ್ನಗಿರಿ ಕೋಟೆಯು ಕಂದಕವನ್ನು ಹೊಂದಿತ್ತು. ಆದರೆ ಪ್ರಸ್ತುತ ಜನರು ಕಂದಕಗಳನ್ನು ಸಮತಟ್ಟಾಗಿ ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕೋಟೆಯ ಪೂರ್ವಭಾಗ ವಸತಿರಹಿತವಾಗಿದ್ದು, ತಗ್ಗಾದ ಪ್ರದೇಶವು ಕಂಡುಬಂದಿದ್ದು ಸುಮಾರು ೧೫ ಮೀಟರ್

ಅಗಲವಾದ ತಗ್ಗಾದ ಪ್ರದೇಶವನ್ನು ಕಂದಕವೆಂದು ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಚನ್ನಗಿರಿ ಕೋಟೆಯು ಅಗಲವಾದ ಕಂದಕವನ್ನು ಹೊಂದಿತ್ತು. ಸದಾ ಕೆಸರು ನೀರು ತುಂಬಿರುತ್ತಿತ್ತೆಂಬುದು ಆ ಕಂದಕದಿಂದ ಮನವರಿಕೆಯಾಗುತ್ತದೆ.

ಸ್ಮಾರಕ	:	ಕೋಟೆ
ಗ್ರಾಮ	:	ಬಸವ ಪಟ್ಟಣ
ಸ್ಥಳ	:	ಊರಿನ ಪಶ್ಚಿಮ ಭಾಗದ ಬೆಟ್ಟದ ಮೇಲೆ
ಅರಸ	:	ಧೂಮರಾಜ ಮತ್ತು ಕೆಂಗಪ್ಪನಾಯಕ
ಸಂತತಿ	:	ಬಸವಪಟ್ಟಣದ ಪಾಳೆಗಾರರು
ಕಾಲ	:	ಕ್ರಿ. ಶ. ೧೪೯೯
ಪ್ರಕಟಣೆ	:	ಅಪ್ರಕಟಿತ

ಧೂಮರಾಜ ಕೋಟೆ ಕಟ್ಟಿಸಿದ, ನಾಯಕ ಬಸವಪಟ್ಟಣದಲ್ಲಿ ಬಲಿಷ್ಠವಾದ ಸುಸಜ್ಜಿತವಾದ ಕೋಟೆ ಕಟ್ಟಿದ ಕೆಂಗಪ್ಪನಾಯಕ (ಹನುಮನಾಯಕನ ಮಗ) ೧೪೯೯ ರಲ್ಲಿ ೫ ವರ್ಷಗಳ ಕಾಲ ಕೋಟೆಯನ್ನು ದುರಸ್ಥಿಗೊಳಿಸಿದ. ಕೋಟೆಯಲ್ಲಿ ಅರಮನೆ ನಿರ್ಮಿಸಿ ರಕ್ಷಣೆಗಾಗಿ ಅರಮನೆ ಮುಂದೆ ನೀರಿನ ಕಾಲುವೆ ತೊಡಿಸಿ ಮೊಸಳೆ, ಹಾವುಗಳಂತಹ ವಿಷ ಪ್ರಾಣಿಗಳನ್ನು ಅದರಲ್ಲಿ ಸಾಕಿದನು. ಕೋಟೆಗೆ ಮೂರು ಕಡೆ ಬಾಗಿಲುಗಳಿದ್ದವು. ಉತ್ತರದಲ್ಲಿ ಚೌಡೇಶ್ವರಿ ಬಾಗಿಲು, ದಕ್ಷಿಣದಲ್ಲಿ ಹನುಮಬಾಗಿಲು, ಪಶ್ಚಿಮದಲ್ಲಿ ಹರವಿ ಬಾಗಿಲುಗಳಿದ್ದವು. ಬೆಟ್ಟಗುಡ್ಡಗಳಲ್ಲಿ ರಣ ಬತ್ತೇರಿಗಳನ್ನು ಸ್ಥಾಪಿಸಿ ದಾಖಲಿಸಿದ್ದು[೬೭] ಪಶ್ಚಿಮದ ಬೆಟ್ಟದಲ್ಲಿ ಕೋಟೆಯ ಅವಶೇಷಗಳು ಲಭ್ಯವಾಗಿವೆ. ಬಸವಪಟ್ಟಣದ ಪಾಳೇಗಾರರು ಸುಸರ್ಜಿತವಾದ ವಿಸ್ತಾರವಾದ ಬಸವಪಟ್ಟಣದ ಸುತ್ತ ಒಂದು ಹಂತದ ಕೋಟೆಯ ಗೋಡೆಯನ್ನು ನಿರ್ಮಿಸಿದ್ದರು. ಆದರೆ ಪ್ರಸ್ತುತ ನಶಿಸಿ ಹೋಗಿದೆ. ಕೇವಲ ಹಾಳಾಗಿರುವ ಕೋಟೆಯ ಗೋಡೆಯ ಅವಶೇಷಗಳು ದೊರಕಿವೆ. ಕಾಡುಗಲ್ಲನ್ನು ಮತ್ತು ಮಣ್ಣಿನ ಗಾರೆಯನ್ನು ಬಳಸಿ ಕೋಟೆಯ ಗೋಡೆಯನ್ನು ಬೆಟ್ಟದ ಮೇಲ್ಭಾಗದಲ್ಲಿ ನಿರ್ಮಿಸಿದ್ದರಿಂದ ಕೆಳಭಾಗವು ಬೃಹತ್ ತಗ್ಗಿನ ಪ್ರದೇಶವಾಗಿತ್ತು. ಶತ್ರುಗಳು ಸುಲಭವಾಗಿ ಕೋಟೆಯನ್ನು ದಾಟಿಬರಲು ಸಾಧ್ಯವಾಗುತ್ತಿರಲಿಲ್ಲ. ಕೋಟೆಯ ಪ್ರಕಾರದಲ್ಲಿ ೩ಅಡಿ ದಪ್ಪ ೧೦ ಅಡಿ ಎತ್ತರದ ಅವಶೇಷವು ದೊರಕಿದೆ. ಕ್ರಿ.ಶ. ೧೬೩೬ರಲ್ಲಿ ಬಿಜಾಪೂರ ರಣದುಲ್ಲಾಖಾನ್ ದಾಳಿ ಮಾಡಿದಾಗ ಮುತ್ತಿಗೆ ಹಾಕಿದಾಗ ಈ ಕೋಟೆ ನಾಶವಾಯಿತು.[೬೮]

ಸ್ಮಾರಕ	:	ಕೋಟೆ
ಗ್ರಾಮ	:	ಉಬ್ರಾಣಿ
ಸ್ಥಳ	:	ಗ್ರಾಮದ ಪಶ್ಚಿಮ ಭಾಗದಲ್ಲಿ ಹರಡಿದೆ.
ಕಾಲ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಹೊಯ್ಸಳರ ಕಾಲ

ಅರಸ : ಎರಡನೇ ಬಲ್ಲಾಳನ ಪತ್ನಿ ಉಮಾದೇವಿ

ಪ್ರಕಟಣೆ : ಅಪ್ರಕಟಿತ

ಗ್ರಾಮದ ಪಶ್ಚಿಮ ಭಾಗದ ಎತ್ತರವಾದ ಬೆಟ್ಟದ ಮೇಲೆ ವೃತ್ತಾಕಾರವಾಗಿ ಸುತ್ತುವರೆದ ಒಂದು ಹಂತದ ಕೋಟೆಯ ಪ್ರಕಾರವನ್ನು ಹೊಂದಿದೆ. ಕೋಟೆಯ ಗೋಡೆಯ ಎತ್ತರವಾದ ಬೆಟ್ಟದ ತಪ್ಪಲಿನಲ್ಲಿ ನಿರ್ಮಿಸಿರುವುದರಿಂದ ಹೊರಭಾಗವು ಪ್ರಪಾತವಾಗಿದೆ. ಸ್ಥಳೀಯ ಕಾಡುಗಲ್ಲನ್ನು ಬಳಸಿ ಸು. ೪ ಅಡಿ ದಪ್ಪ ೧೫ ಅಡಿ ಎತ್ತರದ ಪ್ರಕಾರವನ್ನು ಗುರುತಿಸಲಾಗಿದೆ.

ಈ ಕೋಟೆಯಲ್ಲಿ ಹೊಯ್ಸಳರ ಎರಡನೇ ಬಲ್ಲಾಳನ ರಾಣಿ ಉಮಾದೇವಿಯು ಇಲ್ಲಿ ಸ್ವಲ್ಪಕಾಲ ನೆಲೆಸಿ ಆಳ್ವಿಕೆ ಮಾಡಿದಳೆಂದು ಸ್ಥಳೀಯ ವಿದ್ವಾಂಸರಾದ ಸುಮತೀಂದ್ರನಾಡಿಗರ್‌ರವರ ಅಭಿಪ್ರಾಯವಾಗಿದೆ.[೯] ಉಮಾದೇವಿಯೇ ಉಭಯರಾಣಿ ಎಂದು ಅವರ ಅಭಿಪ್ರಾಯ, ಅವಳಿಂದಲೇ ಈ ಗ್ರಾಮಕ್ಕೆ ಉಬ್ರಾಣಿ ಎಂಬ ಹೆಸರು ಬಂದಿತೆಂದು ಅವರ ವಿಚಾರವಾಗಿದೆ.[೨೦]

ಸ್ಮಾರಕ : ಕೋಟೆ

ಗ್ರಾಮ : ಸಂತೆಬೆನ್ನೂರು

ಸ್ಥಳ : ಸಂತೆಬೆನ್ನೂರಿನ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ

ಕಾಲ : ಕ್ರಿ.ಶ. ೧೭ನೇ ಶತಮಾನ

ಅರಸ : ಮುಮ್ಮಡಿ ಹನುಮಪ್ಪನಾಯಕಿ

ರಾಜವಂಶ : ಸಂತೆಬೆನ್ನೂರಿನ ನಾಯಕರು

ಪ್ರಕಟಣೆ : ಅಪ್ರಕಟಿತ

ಮುಮ್ಮಡಿ ಹನುಮಪ್ಪ ನಾಯಕನ ಮಗ ಕೆಂಗಹನುಮಪ್ಪ ನಾಯಕನು ಬೇಟೆಯಾಡುವ ಉದ್ದೇಶದಿಂದ ಮದಕರಿ ಸೀಮೆಯ ರಂಗಪುರ ಗ್ರಾಮದ ಕಾಡಿಗೆ ಬರುತ್ತಾನೆ. ಆ ಸ್ಥಳದಲ್ಲಿ ಮೊಲವೊಂದು ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಬಂದು ಕಚ್ಚಿತು. ಇದನ್ನು ಕಂಡ ಕೆಂಗಪ್ಪನಾಯಕ ಇದು ಗಂಡು ಭೂಮಿಯೆಂದು ತಿಳಿದು ಇಲ್ಲಿ ಕೋಟೆಯನ್ನು ಕಟ್ಟಿಸಿದ.[೨೧]

ಚಿತ್ರದುರ್ಗದ ಪಾಳೆಗಾರರು ಸಂತೆಬೆನ್ನೂರಿನ ನಾಯಕರ ಮೇಲೆ ದಾಳಿ ಮಾಡಿದಾಗ, ಸಂತೆಬೆನ್ನೂರಿನ ನಾಯಕರು ಸಂತೆಬೆನ್ನೂರು ಕೋಟೆಯಲ್ಲಿ ರಕ್ಷಣೆ ಪಡೆದಿದ್ದರು. ಆಗ ಚಿತ್ರದುರ್ಗದ ಪಾಳೇಗಾರರು ಎಷ್ಟೇ ಪ್ರಯತ್ನಪಟ್ಟರೂ ಸುಸಜ್ಜಿತವಾದ ಬಲಿಷ್ಠವಾದ ಸಂತೆಬೆನ್ನೂರು ಕೋಟೆಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ[೨೨]. ಪ್ರಸ್ತುತ ಕೋಟೆಯು

ನಶಿಸಿ ಹೋಗಿದೆ. ಆ ಸ್ಥಳದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೂ ಕೋಟೆಯ ಪ್ರಕಾರದ ಅವಶೇಷಗಳು ಲಭ್ಯವಾಗಿವೆ. ಬೃಹತ್ ಗ್ರಾನೈಟ್‌ಕಲ್ಲನ್ನು ಆಯಾತಾಕಾರವಾಗಿ ಕತ್ತರಿಸಿ ಗಾರೆಯಿಂದ ಜೋಡಿಸಿ ೫ ಅಡಿ ದಪ್ಪ ೨೦ ಅಡಿ ಎತ್ತರದ ಕೋಟೆಯ ಗೋಡೆಯನ್ನು ನಿರ್ಮಿಸಿದ್ದಾರೆ. ಪ್ರಕಾರದ ಪಕ್ಕದಲ್ಲಿ ಬೃಹತ್ ಕಂದಕವಿದೆ. ಆ ಕಾಲಘಟ್ಟದಲ್ಲಿ ಕಂದಕದಲ್ಲಿ ಕೆಸರಿನ ನೀರು ಹರಿಯುತ್ತಿದ್ದು, ವಿಷ ಜಂತುಗಳನ್ನು ಸಾಕುತ್ತಿದ್ದರೆಂದು ಕಂದಕಕ್ಕೆ ನೀರಿನ ವ್ಯವಸ್ಥೆಯನ್ನು ಮಳೆಯ ನೀರನ್ನು ಸಂಗ್ರಹಿಸುತ್ತಿದ್ದರು ಮತ್ತು ಸಂತೆಬೆನ್ನೂರಿನ ಕೆರೆಯ ನೀರನ್ನು ಹಾಯಿಸುತ್ತಿದ್ದರು. ಕೋಟೆಯ ಪ್ರಕಾರದ ಪಕ್ಕದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಈ ಕೋಟೆಯನ್ನು ಮರಾಠರ ಪರುಶುರಾಮ ಮತ್ತು ಮೈಸೂರಿನ ಸರ್ವಾಧಿಕಾರಿ ಹೈದರಾಲಿ ದಾಳಿ ಮಾಡಿ ನಾಶಮಾಡಿದರು.

ಸ್ಮಾರಕ	:	ಕೋಟೆ
ಗ್ರಾಮ	:	ಉಪನಾಯಕನ ಹಳ್ಳಿ
ಸ್ಥಳ	:	ಗ್ರಾಮದ ಮಧ್ಯಭಾಗದಲ್ಲಿದೆ.
ಕಾಲ	:	ಕ್ರಿ.ಶ. ೧೭ನೇ ಶತಮಾನ
ರಾಜವಂಶ	:	ಸಂತೆಬೆನ್ನೂರಿನ ನಾಯಕರು
ಪ್ರಕಟಣೆ	:	ಅಪ್ರಕಟಿತ

ಸಂತೆಬೆನ್ನೂರಿನ ನಾಯಕರ ಕಾಲದಲ್ಲಿ ಅವರ ಸಂತತಿಗೆ ಸೇರಿದ ಉಪನಾಯಕರು ಅಲ್ಲಿ ಆಳ್ವಿಕೆ ಮಾಡುತ್ತಿದ್ದರೆಂದು ಆದ್ದರಿಂದ ಉಪನಾಯಕನಹಳ್ಳಿ ಎಂದು ಕರೆಯುತ್ತಾರೆ.[೭೩] ಗ್ರಾಮದ ಮಧ್ಯದ ಭಾಗದಲ್ಲಿ ಕೋಟೆಯ ಪ್ರಕಾರದ ಅವಶೇಷ ದೊರಕಿದೆ. ಕಾಡುಗಲ್ಲನ್ನು ಬಳಸಿ ಮಣ್ಣಿನ ಗಾರೆಯಿಂದ ಜೋಡಿಸಿದ್ದಾರೆ. ಪ್ರಸ್ತುತ ಪ್ರಕಾರದ ಭಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಭಾಗವನ್ನು ಕೋಟೆ ಪ್ರದೇಶವೆಂದು ಕರೆಯುತ್ತಾರೆ. ಸು. ೪ ಅಡಿ ದಪ್ಪ ೧೦ ಅಡಿ ಎತ್ತರದ ಕೋಟೆ ಪ್ರಕಾರವು ದೊರಕಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ ಮಧ್ಯಯುಗೀನ ಕಾಲದಲ್ಲಿ ಕೋಟೆಗಳಿದ್ದವೆಂದು ಕೈಫಿಯತ್‌ಗಳಲ್ಲಿ ಉಲ್ಲೇಖವಾಗಿದ್ದು, ಪ್ರಸ್ತುತ ಅವುಗಳ ಕುರುವು ಕಾಣದ ಹಾಗೆ ನಶಿಸಿಹೋಗಿವೆ. ಅಂತಹ ಕೋಟೆಗಳೆಂದರೆ ಹೊದಿಗೆರೆ ಕೋಟೆ, ದೇವರಹಳ್ಳಿ ಕೋಟೆಗಳು ಅಸ್ತಿತ್ವದಲ್ಲಿದ್ದವೆಂದು ಆಧಾರಗಳು ದೊರೆತರೂ ಯಾವ ಪ್ರದೇಶದಲ್ಲಿದ್ದವೆಂದು ಗುರುತಿಸಲು ಸಾಧ್ಯವಾಗದ ರೀತಿಯಲ್ಲಿ ಆಧುನಿಕರಣದ ಸೊಗಡಿನಲ್ಲಿ ನಾಶವಾಗಿದೆ.[೭೪]

ಬುರುಜುಗಳು

ಬುರುಜು ಅಥವಾ ಕಾವಲು ಗೋಪುರಗಳನ್ನು ಗ್ರಾಮಗಳಲ್ಲಿ ನಿರ್ಮಾಣ ಮಾಡಿರುವ ಉದ್ದೇಶ ಗ್ರಾಮದ ತಳವಾರನು(ಸೈನಿಕನು) ಕಾವಲು ಕಾಯುತ್ತಿದ್ದನು. ಬುರುಜುಗಳ ಮೇಲಿಂದ ದೂರದ ಪ್ರದೇಶ ವೀಕ್ಷಣೆ ಮಾಡಲು ಸಹಾಯಕವಾಗುತ್ತಿತ್ತು. ಇದರಿಂದ ಗ್ರಾಮಕ್ಕೆ ದಾಳಿ ಮಾಡುವ ಕಳ್ಳಕಾಕರು ಮತ್ತು ವೈರಿಗಳು ಸೈನ್ಯ ಸಮೇತ ಬರುವುದನ್ನು ಗಮನಿಸಿ ಅದಕ್ಕೆ ಪ್ರತಿಯಾಗಿ ಗ್ರಾಮದ ಜನರು ರಕ್ಷಣೆ ಮಾಡಿಕೊಳ್ಳಲು ಅಥವಾ ಹೋರಟ ಮಾಡಲು ಸಹಾಯಕವಾಗುತ್ತಿತ್ತು. ಚನ್ನಗಿರಿ ತಾಲ್ಲೂಕಿನಲ್ಲಿ ವಡ್ನಾಳು, ಚಿರಡೋಣಿ, ಕಗ್ಗತ್ತೂರು ಕಾಶಿಪುರ ಗ್ರಾಮಗಳಲ್ಲಿ ಬುರುಜುಗಳು ಕಂಡುಬಂದಿವೆ.

ಸ್ಮಾರಕ	:	ಬುರುಜು
ಗ್ರಾಮ	:	ವಡ್ನಾಳು (ವಡ್ಡಿನಹಾಳು)
ಸ್ಥಳ	:	ಗ್ರಾಮದ ಮಧ್ಯದಲ್ಲಿದೆ
ಕಾಲ	:	ಕ್ರಿ.ಶ. ೧೬ನೇ ಶತಮಾನ
ರಾಜವಂಶ	:	ಸಂತೆಬೆನ್ನೂರು ನಾಯಕರು
ಪ್ರಕಟಣೆ	:	ಅಪ್ರಕಟಿತ

ರಾಷ್ಟ್ರೀಯ ಹೆದ್ದಾರಿ ೧೩ರ ಪಕ್ಕದಲ್ಲಿ ಬರುವ ಬೆಂಕಿಕೆರೆಯಿಂದ ಸು. ಮೂರು ಕಿ.ಮೀ ತಲುಪಿದರೆ ವಡ್ನಾಳು ಗ್ರಾಮ ಬರುತ್ತದೆ. ಗ್ರಾಮದ ಮಧ್ಯದಲ್ಲಿ ಬುರುಜು ಗೋಚರಿಸುತ್ತದೆ. ಸು. ೪೦ ಅಡಿ ಎತ್ತರ, ೧೦ ಅಡಿ ದಪ್ಪ, ೪೦ ಅಡಿ ಅಗಲವಿದೆ. ಒಳಭಾಗವು ೨೦ ಅಡಿ ವಿಸ್ತಾರವನ್ನು ಹೊಂದಿದ್ದು, ಕಾಡುಗಲ್ಲು ಮತ್ತು ಮಣ್ಣಿನ ಗಾರೆಯನ್ನು ಜೋಡಿಸಿ ನಿರ್ಮಿಸಿದ್ದಾರೆ. ಈ ಬುರುಜಿನ ಪಶ್ಚಿಮದ ಕಡೆಯ ತಳಭಾಗವು ಭಗ್ನಗೊಂಡಿದೆ.

ಸ್ಮಾರಕ	:	ಬುರುಜು
ಗ್ರಾಮ	:	ಚಿರಡೋಣಿ
ಸ್ಥಳ	:	ಗ್ರಾಮದ ಮಧ್ಯದಲ್ಲಿದೆ
ಕಾಲ	:	ಕ್ರಿ.ಶ. ೧೫ನೇ ಶತಮಾನ
ರಾಜವಂಶ	:	ಬಸವಪಟ್ಟಣದ ಪಾಳೇಗಾರರು

ಸ್ಥಳೀಯರ ಪ್ರಕಾರ ಕೆಂಗಣ್ಣನಾಯಕನು ಈ ಬುರುಜನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[೭೫] ಈ ಕಾವಲುಗೋಪುರದ ೬೦ ಅಡಿ ದಪ್ಪ, ೪೦ ಅಡಿ ಅಗಲ, ೧೦ ಅಡಿ ದಪ್ಪದ ಬುರುಜನ್ನು

ಕಾಡುಗಲ್ಲು ಬಳಸಿ ಅದರೊಂದಿಗೆ ಕೆಂಪುಮಣ್ಣಿನ ಗಾರೆಯನ್ನು ಸೇರಿಸಿ ನಿರ್ಮಿಸಲಾಗಿದೆ. ಇದೇ ರೀತಿಯಲ್ಲಿ ಕಗ್ಗತ್ತೂರು ಮತ್ತು ಕಾಶಿಪುರಗಳಲ್ಲಿ ಬುರುಜುಗಳು ಕಂಡುಬರುತ್ತವೆ.

ಅರಮನೆಯ ಅವಶೇಷಗಳು

ರಾಜರು ಭವ್ಯವಾದ ಅರಮನೆಗಳನ್ನು ಸೌಧಗಳನ್ನು ತಮ್ಮ ವಾಸಕ್ಕಾಗಿ ನಿರ್ಮಿಸಿದ್ದಾರೆ. ಚನ್ನಗಿರಿ ತಾಲ್ಲೂಕಿನಲ್ಲಿಯು ಇಂತಹ ಅರಮನೆಗಳನ್ನು ನಿರ್ಮಾಣ ಮಾಡಿರುವುದನ್ನು ಶಾಸನಗಳಲ್ಲಿ, ಕೈಫಿಯತ್‌ಗಳಲ್ಲಿ ನಿದರ್ಶನವಿದೆ. ಆದರೆ ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಅರಮನೆಯ ಅವಶೇಷಗಳನ್ನು ಬಸವಪಟ್ಟಣದಲ್ಲಿ ಕಾಣಬಹುದಾಗಿದೆ. ಸಂತೆಬೆನ್ನೂರಿನಲ್ಲಿ ಅರಮನೆಯ ಅವಶೇಷ ಸಂಪೂರ್ಣವಾಗಿ ನಶಿಸಿಹೋಗಿದೆ.

ಸ್ಮಾರಕ	:	ಅರಮನೆ ಅವಶೇಷ
ಗ್ರಾಮ	:	ಬಸವಪಟ್ಟಣ
ಸ್ಥಳ	:	ಎಸ್.ಎಂ. ಕೃಷ್ಣನಗರ
ಕಾಲ	:	ಕ್ರಿ.ಶ. ೧೫ನೇ ಶತಮಾನ
ರಾಜವಂಶ	:	ಬಸವಪಟ್ಟಣದ ಪಾಳೇಗಾರರು
ಅರಸ	:	ಕೆಂಗಪ್ಪನಾಯಕ
ಪ್ರಕಟಣೆ	:	ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.೯೯೭

ಹನುಮಪ್ಪನಾಯಕರ ಮಗ ಕೆಂಗಪ್ಪನಾಯಕ (ಕೆಂಗಣ್ಣನಾಯಕ) ಬಸವಪಟ್ಟಣದ ಕೋಟೆಯನ್ನು ದುರಸ್ಥಿ ಮಾಡಿಸಿ, ಕೋಟೆಯೊಳಗೆ ಅರಮನೆ ಕಟ್ಟಿಸಿ, ಅದರ ರಕ್ಷಣೆಗಾಗಿ ಅರಮನೆಯ ಮುಂದೆ ಕಾಲುವೆ ತೋಡಿಸಿ, ಅದಕ್ಕೆ ನೀರು ಹಾಯಿಸಿ ಮೊಸಳೆ, ವಿಷ ಸರ್ಪಗಳನ್ನು ಸಾಕಿದನು. ಮತ್ತು ಕೋಟೆಯ ಮುಂದೆ ಮತ್ತೊಂದು ಕಂದಕ ತೋಡಿಸಿ, ಪೂರ್ವ ಭಾಗದಲ್ಲಿ ಅರಮನೆಯ ಮುಖ್ಯ ಪ್ರವೇಶ ದ್ವಾರ ನಿರ್ಮಿಸಿದ (ಪ್ರಸ್ತುತ ಅದರ ದ್ವಾರ ಬಾಗಿಲ ಅವಶೇಷವಿದೆ). ಅರಮನೆಯ ನಾಲ್ಕು ಭಾಗಗಳಲ್ಲಿ ನಾಲ್ಕು ಬುರುಜುಗಳನ್ನು ಕಟ್ಟಿಸಿ, ಕಾವಲು ಕಾಯಲು ರಣಧೀರ ಬೇಡರ ಪಡೆಯನ್ನಿರಿಸಿದ್ದ.[೭೬]

ಪ್ರಸ್ತುತ ಅರಮನೆಯ ಅವಶೇಷವು ಎಸ್.ಎಂ. ಕೃಷ್ಣನಗರದಲ್ಲಿ ಕಣಶಿಲೆ ಮತ್ತು ಗಾರೆಯನ್ನು ಬಳಸಿ ೨೦ ಕುಂಟೆ ಪ್ರದೇಶದಲ್ಲಿ ಅರಮನೆ ಅಸ್ತಿತ್ವದಲ್ಲಿದ್ದಿತ್ತೆಂಬುದನ್ನು ಅಲ್ಲಿ ಲಭ್ಯವಾದ ಎತ್ತರವಾದ ಕಟ್ಟಡ ದ್ವಾರಬಾಗಿಲಿನ ಅವಶೇಷಗಳಿಂದ ತಿಳಿಯುತ್ತದೆ. ಇಟ್ಟಿಗೆ, ಗಾರೆ ಮತ್ತು ಕಣಶಿಲೆಯನ್ನು ಬಳಸಿ ನಿರ್ಮಿಸಿದ್ದಾರೆ. ಇಟ್ಟಿಗೆಯು ಇಂಗ್ಲೀಷ್‌ನ 'ಐ' ಬಾಂಡ್ ವಿನ್ಯಾಸದಲ್ಲಿದ್ದು

ವಿಜಯನಗರ ಕಾಲದ ಇಟ್ಟಿಗೆಯನ್ನು ಹೋಲುತ್ತದೆ. ಇದರ ಪಕ್ಕದಲ್ಲಿಯೇ ರಾಣಿಯರ ಸ್ನಾನದ ಕಲ್ಲು ಲಭ್ಯವಾಗಿದೆ.

ಸ್ಮಾರಕ	:	ಅರಮನೆ ಅವಶೇಷ
ಗ್ರಾಮ	:	ಸಂತೆಬೆನ್ನೂರು
ಸ್ಥಳ	:	ಗ್ರಾಮದ ಮಧ್ಯದಲ್ಲಿದೆ.
ಕಾಲ	:	ಕ್ರಿ.ಶ. ೧೬ನೇ ಶತಮಾನ
ರಾಜವಂಶ	:	ಸಂತೆಬೆನ್ನೂರು ನಾಯಕರು
ಅರಸ	:	ಹಿರೇ ಕೆಂಗಪ್ಪನಾಯಕರು
ಪ್ರಕಟಣೆ	:	ಸುಮತೀಂದ್ರ ನಾಡಿಗ್, ಸಂತೆಬೆನ್ನೂರು ನಾಯಕರು, ಪು.೪೯೭

ಹಿರೇ ಕೆಂಗಪ್ಪನಾಯಕರು ಅರಮನೆಯನ್ನು ನಿರ್ಮಿಸಿದನು.[೭೭] ಪ್ರಸ್ತುತ ಅರಮನೆಯು ನಶಿಸಿಹೋಗಿ ಅದರ ಕುರುವುಗಳು ಇಲ್ಲದಾಗಿವೆ.

೪.೪. ಇತರೆ ಸ್ಮಾರಕಗಳು

ಸಂತೆಬೆನ್ನೂರಿನಲ್ಲಿ ಇತರೆ ಸ್ಮಾರಕಗಳು ಲಭ್ಯವಾಗಿವೆ. ಅವುಗಳೆಂದರೆ ಮುಸಾಫಿರ್‌ಖಾನ್, ಹಿರೇಮಳಲಿಯ ಹೊಯ್ಸಳರ ಲಾಂಛನ, ಹಿರೇಮಲಹಾಳ್‌ನ ಕಬ್ಬಿಣದ ಭರ್ಚಿ(ಈಟಿ), ಹೊದಿಗೆರೆಯ ಷಾಹಜೀಬೋನ್‌ಸ್ಲೆಯ ಸಮಾಧಿಯು ಪ್ರಮುಖ ಸ್ಮಾರಕಗಳಾಗಿವೆ.

ಹೊಯ್ಸಳರ ಲಾಂಛನ

ಗ್ರಾಮ	:	ಹಿರೇಮಳಲಿ
ಸ್ಥಳ	:	ಈಶ್ವರ ದೇವಾಲಯದ ಮುಂಭಾಗದಲ್ಲಿದೆ.
ರಾಜವಂಶ	:	ಹೊಯ್ಸಳರು
ಕಾಲ	:	ಕ್ರಿ.ಶ. ೧೨ನೇ ಶತಮಾನ
ಬಳಸಿದ ವಸ್ತು	:	ಬಳಪದ ಕಲ್ಲು
ಪ್ರಕಟಣೆ	:	ಅಪ್ರಕಟಿತ

ಹಿರೇಮಳಲಿಯ ಈಶ್ವರ ದೇವಾಲಯದಲ್ಲಿನ ಹೊಯ್ಸಳರ ಲಾಂಛನವು ಭಗ್ನವಶೇಷವಾಗಿದ್ದು ಅದರ ಉಳಿದ ಭಾಗವನ್ನು ವಿಶ್ಲೇಷಿಸಲಾಗಿದೆ. ಸಳನು ಹುಲಿಯನ್ನು ಕೊಲ್ಲುತ್ತಿರುವ ಕೆತ್ತನೆಯು

ನಶಿಸಿಹೋಗಿದೆ. ಹುಲಿಯು ಗಾಂಭಿರ್ಯವಾಗಿ ನಿಂತಿದ್ದು ಅದರ ಹಿಂಗಾಲು ಮತ್ತು ಮುಂಗಾಲುಗಳು ಮುರಿದು ಹೋಗಿವೆ. ಹೊಯ್ಸಳರ ಲಾಂಛನವು ಲಭ್ಯವಾಗಿರುವುದರಿಂದ ಇಲ್ಲಿನ ಈಶ್ವರ ದೇವಾಲಯ ನಿರ್ಮಿಸಿದ್ದ ಮತ್ತು ಹಿರೇಮಳಯ ಭಾಗವು ಹೊಯ್ಸಳರಿಗೆ ಸೇರಿದ ಪ್ರಮುಖ ಗ್ರಾಮವಾಗಿದ್ದೆಂದು ತಿಳಿದುಬರುತ್ತದೆ.

ಸ್ಮಾರಕ	:	ಕಬ್ಬಿಣದ ಭರ್ಚಿ(ಈಟಿ)
ಗ್ರಾಮ	:	ಮಲಹಾಳು
ಸ್ಥಳ	:	ಗ್ರಾಮದ ಮಧ್ಯದಲ್ಲಿನ ಇತ್ತೀಚಿನ ಆಂಜನೇಯ ದೇವಾಲಯದಲ್ಲಿ ಕಬ್ಬಿಣದ ಸರುಳುವಿಗೆ ನಿಲ್ಲಿಸಿದ್ದಾರೆ.
ರಾಜವಂಶ	:	ಸಂತೆಬೆನ್ನೂರಿನ ಪಾಳೇಗಾರರ ಸಾಮಂತರು
ಬಳಸಿದ ವಸ್ತು	:	ಕಬ್ಬಿಣ
ಕಾಲ	:	ಕ್ರಿ.ಶ. ೧೭ನೇ ಶತಮಾನ
ಪ್ರಕಟಣೆ	:	ಅಪ್ರಕಟಿತ

ಮಲಹಾಳದಲ್ಲಿ ಕೋಟೆಯ ಅವಶೇಷಗಳಿದ್ದು, ಅದು ೧೭ನೇ ಶತಮಾನಕ್ಕೆ ಸೇರಿದಾಗಿದ್ದು, ಆ ಕಾಲಘಟ್ಟದಲ್ಲಿ ಸಂತೆಬೆನ್ನೂರಿನ ನಾಯಕರ ಸಾಮಂತರನಾದ ಸ್ಥಳೀಯ ನಾಯಕ ಇಲ್ಲಿ ಆಳ್ವಿಕೆ ಮಾಡುತ್ತಿದ್ದ. ಈ ಗ್ರಾಮದ ನಾಯಕನಿಗೆ ಸೇರಿದ ಆರು ಅಡಿ ಉದ್ದ ೩ ಇಂಚು ದಪ್ಪವಿರುವ ಒಂದು ಭರ್ಚಿ ಲಭ್ಯವಾಗಿದೆ. ಇದರ ಬಳಕೆಯ ಆ ಕಾಲಘಟ್ಟಕ್ಕೆ ಸೇರಿದ ಒಂದು ಅಪ್ರಕಟಿತ ಶಾಸನೋಕ್ತ ವೀರಗಲ್ಲಿನಲ್ಲಿ ಬಳಕೆಯ ಬಗ್ಗೆ ಚಿತ್ರಸಲಾಗಿದೆ. ವೀರನು ಕುದುರೆಯನ್ನು ಏರಿ ಬಲಗೈಯಲ್ಲಿ ಭರ್ಚಿಯನ್ನು ಹಿಡಿದು ಎಡಗೈಯಲ್ಲಿ ಕುದುರೆಯ ಲಾಗಮನ್ನು ಹಿಡಿದು ಕಾಡುಪ್ರಾಣಿಗಳ ಬೇಟೆಯನ್ನಾಡುವಂತೆ ಶಿಲ್ಪಿಯು ಕಂಡರಿಸಿದ್ದಾನೆ. ಇದನ್ನು ಕಾಡುಪ್ರಾಣಿಯ ಬೇಟೆಯಲ್ಲಿ ಬಳಸಿ ಸಾವನ್ನಪ್ಪಿದ್ದಾನೆ. ಅವನ ಹೆಂಡತಿಯು ಸತಿಸಹಗಮನ ಅನುಸರಿಸಿದ್ದಾಳೆ. ಅಂದಿನಿಂದ ಈ ಭರ್ಚಿಯನ್ನು ಆರಾಧಿಸಲಾಗುತ್ತಿದೆ.

ಈ ಭರ್ಚಿಯಿಂದ ಕಬ್ಬಿಣದ ಆಯುಧಗಳ ತಯಾರಿಕ ತಂತ್ರಜ್ಞಾನ ಅವರಿಗೆ ತಿಳಿದಿತ್ತು. ಆದರೆ ಕಬ್ಬಿಣದ ಅದಿರನ್ನು ಯಾವ ಗಣಿಗಳ ಪ್ರದೇಶದಿಂದ ಅಗೆಯುತ್ತಿದ್ದರು ಮತ್ತು ಎಲ್ಲಿ ಕಬ್ಬಿಣದ ಆಯುಧಗಳನ್ನು ತಯಾರಿಸುತ್ತಿದ್ದರೆಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಆದರೆ ಅವರಿಗೆ ಕಬ್ಬಿಣದ ಗಣಿಗಾರಿಕೆ, ಆಯುಧಗಳ ತಯಾರಿಕೆ ಕಲೆ ಅವರಿಗೆ ತಿಳಿದಿತ್ತೆಂಬುದನ್ನು ಗಮನಿಸಬಹುದಾಗಿದೆ.

ಸ್ಮಾರಕ : ಮುಸಾಫಿರ್‌ಖಾನೆ
ಗ್ರಾಮ : ಸಂತೆಬೆನ್ನೂರು
ಸ್ಥಳ : ಪುಷ್ಕರಣಿಯ ಮುಂಭಾಗದಲ್ಲಿದೆ
ಸಂತತಿ : ಬಿಜಾಪುರದ ಆದಿಲ್‌ಷಾಹಿ ಸುಲ್ತಾನರು
ಅರಸ : ಒಂದನೇ ಆದಿಲ್ ಷಾನ ಸಾಮಂತ ರಣದುಲ್ಲಾಖಾನ್
ಬಳಸಿದ ವಸ್ತು : ಕಣಶಿಲೆ
ಪ್ರಕಟಣೆ : ಎಂ.ಎ.ಆರ್. ೧೯೩೭,
ಕಾಲ : ಕ್ರಿ.ಶ. ೧೭ನೇ ಶತಮಾನ

ಒಂದನೇ ಆಲಿ ಆದಿಲ್‌ಷಾನ ದಂಡನಾಯಕ ರಣದುಲ್ಲಾಖಾನ್‌ನು ನಿರ್ಮಿಸಿದ್ದಾನೆ. ಸಂತೆಬೆನ್ನೂರಿನ ನಾಯಕರ ಕೆಂಗಪ್ಪನಾಯಕನನ್ನು ಸೋಲಿಸಿ, ಶ್ರೀರಾಮಚಂದ್ರ ದೇವಾಲಯವನ್ನು ನಾಶಮಾಡಿ ಆ ಸ್ಥಳದಲ್ಲಿ ಕ್ರಿ.ಶ. ೧೬೪೧–೧೬೫೬ ರ ಅವಧಿಯಲ್ಲಿ ಮಸೀದಿಯನ್ನು ನಿರ್ಮಿಸಲು ಕಾರ್ಯಪ್ರವೃತ್ತರಾದರು. ಆದರೆ ಆ ಸ್ಥಳದಲ್ಲಿ ಹಂದಿ ಸಾವನ್ನಪ್ಪಿದ್ದರಿಂದ, ಅಪವಿತ್ರವಾಯಿತೆಂದು ಉಪಯೋಗಿಸಲಿಲ್ಲ. ಅದರ ಬದಲಾಗಿ ಮುಸಾಫಿರ್ ಖಾನ ರಚಿಸಲಾಯಿತು. ರಣದುಲ್ಲಾಖಾನನ ಸಹಚಾರನಾಗಿದ್ದ ಖಾನ್–ಖಾನ್, ಪತ್ತೆಖಾನ್, ಪರೀದ್‌ಖಾನ್, ಸರ್ಜಾಖಾನ್ ಕ್ರಿ.ಶ. ೧೬೪೧ ರಿಂದ ೧೬೫೬ರ ಅವಧಿಯಲ್ಲಿ ನಿರ್ಮಿಸಿದರು. ಇಂಡೋ ಇಸ್ಲಾಮಿಕ್ ಶೈಲಿಯಲ್ಲಿರುವ ಕಟ್ಟಡ ೩೧.೫ ಮೀ. ಉದ್ದ, ೧೨ ಮೀ ಅಗಲವಿದ್ದು, ೧೬ ದೊಡ್ಡ ಕಂಬಗಳ ಮೇಲೆ ೯ ಕಮಾನುಗಳ ಅಂಕಣವಿದೆ. ಇದರ ಮೇಲೆ ಹೋಗಲು ಎರಡು ಬದಿ ಮೆಟ್ಟಿಲುಗಳಿವೆ.[೨೮] ಕೆಲವು ಕಾಲ ಮಿಲಿಟರಿ ಕೊಠಡಿಯಾಗಿಯೂ ಉಪಯೋಗಿಸುತ್ತಿದ್ದರು. ಪ್ರಸ್ತುತ ಪ್ರಾಚ್ಯಾವಸ್ತು ಇಲಾಖೆಯ ಸಂರಕ್ಷಿತ ಸ್ಮಾರಕವಾಗಿದೆ.

ಸ್ಮಾರಕ : ರಾಣಿಯ ಸ್ನಾನದ ಕಲ್ಲು (ಬಿಸಿ ನೀರು–ತಣ್ಣೀರು ಬಾವಿ)
ಗ್ರಾಮ : ಬಸವಪಟ್ಟಣ
ಸ್ಥಳ : ಎಸ್.ಎಂ. ಕೃಷ್ಣನಗರದ ಉತ್ತರ ದಿಕ್ಕಿನ ಹೊಲದಲ್ಲಿದೆ.
ರಾಜವಂಶ : ಬಸವಪಟ್ಟಣದ ಪಾಳೇಗಾರರು
ಅರಸ : ಕೆಂಗಪ್ಪನಾಯಕ
ಕಾಲ : ಕ್ರಿ.ಶ. ೧೬ನೇ ಶತಮಾನ
ಬಳಸಿದ ಕಲ್ಲು : ಸೋಪಿನ ಕಲ್ಲು
ಪ್ರಕಟಣೆ : ಟಿ. ಗಿರಿಜಾ ದಾವಣಗೆರೆ ಇದು ನಮ್ಮ ಜಿಲ್ಲೆ, ಪು–೪೯೭

ಹನುಮನಾಯಕನ ಮಗ ಕೆಂಗಪ್ಪನಾಯಕನಿಗೆ ೭ ಜನ ಪತ್ನಿಯರಿದ್ದರು. ಇವರು ಒಂದೇ ಕಡೆ ಏಕಕಾಲಕ್ಕೆ ಸ್ನಾನ ಮಾಡುವ ಉದ್ದೇಶಕ್ಕಾಗಿ ಏಕಶಿಲಾ ಬಳಪದಕಲ್ಲನ್ನು ಬಳಸಿ ನಿರ್ಮಿಸಿದ

ವಿಶಿಷ್ಟವಾದ ಸ್ಮಾರಕವಾಗಿದೆ. ಏಕಕಾಲಕ್ಕೆ ತಣ್ಣೀರು, ಬೀಸಿನೀರು ಸರಬರಾಜಾಗುವ ವ್ಯವಸ್ಥೆ ಮಾಡಿದ್ದ. ಇದಕ್ಕೆ ತಣ್ಣಿರು, ಬಿಸಿ ನೀರು ಬಾವಿ ಎಂದು ಕರೆಯುತ್ತಿದ್ದರು.[೭೯] ಈ ತಣ್ಣಿರು ಬಾವಿಯ ಸಮೀಪ ಸುರಂಗ ಮಾರ್ಗವನ್ನು ನಿರ್ಮಿಸಿದ್ದು, ಇದರ ಮೂಲಕ ಮಾರುವೇಷದಲ್ಲಿ ಪ್ರಜೆಗಳ ಬಳಿ ಹೋಗಿ ಅವರ ಕಷ್ಟ ಸುಖ ತಿಳಿದುಕೊಳ್ಳುತ್ತಿದ್ದ ಮತ್ತು ಶತ್ರುಗಳಿಂದ ರಕ್ಷಿಸಿಕೊಳ್ಳಲು ಈ ಸುರಂಗ ಮಾರ್ಗ ಉಪಯುಕ್ತವೆನ್ನುವ ದೂರ ದೃಷ್ಟಿ ಹೊಂದಿದ್ದನು.[೮೦] ಬಳಪದ ಶಿಲೆಯಿಂದ ನಿರ್ಮಿಸಿದ ತಣ್ಣಿರು ಬಿಸಿ ನೀರು ಬಾವಿಯ ಕಲ್ಲಿನ ಹೊರ ಭಾಗದಲ್ಲಿ ತೆರೆದ ಕಮಲ ದಳಗಳಲ್ಲಿ ಶಿಲ್ಪಿ ಕೆತ್ತಿದ್ದಾನೆ. ಸ್ನಾನದ ಬಾವಿ ಮತ್ತು ಸುರಂಗ ಮಾರ್ಗದ ನಿರ್ಮಾಣವು ಆ ಕಾಲಘಟ್ಟದಲ್ಲಿ ಮುಂದುವರಿದ ತಾಂತ್ರಿಕತೆಗೆ ನಿದರ್ಶನವಾಗಿದೆ.

ಸ್ಮಾರಕ	:	ಸಮಾಧಿ (ಹೊದಿಗೆರೆಯ ಷಾಹಜೀಬೋನ್ಸ್ಲೆಯ ಸಮಾಧಿ)
ಗ್ರಾಮ	:	ಹೊದಿಗೆರೆ
ಸ್ಥಳ	:	ಕೆರೆಯ ಮುಂಭಾಗದಲ್ಲಿದೆ.
ಸಂತತಿ	:	ಮರಾಠರು
ಅರಸ	:	ಶಿವಾಜಿ
ಕಾಲ	:	ಕ್ರಿ.ಶ. ೧೬೬೪
ಪ್ರಕಟಣೆ	:	ಟಿ. ಗಿರಿಜಾ ದಾವಣಗೆರೆ ಇದು ನಮ್ಮ ಜಿಲ್ಲೆ, ಪು-೫೨೯

ದಕ್ಷಿಣ ಭಾರತದಲ್ಲಿ ಹೈಂದವೀ ಸಾಮ್ರಾಜ್ಯವನ್ನು ನಿರ್ಮಿಸಿದ ಮರಾಠ ಸಾಮ್ರಾಜ್ಯದ ಸ್ಥಾಪಕ ಶಿವಾಜಿಯ ತಂದೆ ಷಾಹಜೀಬೋನ್ಸ್ಲೆಯ ಸಮಾಧಿಯು ಹೊದಿಗೆರೆಯಲ್ಲಿದೆ.

೧೭ನೇ ಶತಮಾನದಲ್ಲಿ ಕೆಳದಿಯ ಅರಸರ ಸಮಕಾಲೀನರಾಗಿ ಚನ್ನಗಿರಿ ತಾಲ್ಲೂಕಿನ ಬಹುಭಾಗವನ್ನು ಮರಾಠರು ಆಕ್ರಮಿಸಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಶಿವಾಜಿಯ ತಂದೆ ಷಾಹಜೀಬೋನ್ಸ್ಲೆಯು ಈ ಭಾಗದಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸಲು ಬಂದಿರುತ್ತಾನೆ. ೧೬೬೪ ರ ಜನವರಿ ೨೩ ರಂದು ಷಾಹಜಿಬೋನ್ಸ್ಲೆಯು ಹೊದಿಗೆರೆ ಸಮೀಪದ ಕಾಡಿನಲ್ಲಿ ಬೇಟೆಯಾಡಲು ಹೋದ ಸನ್ನಿವೇಶದಲ್ಲಿ ಕುದುರೆಯ ಮೇಲಿನಿಂದ ಕೆಳಗೆಬಿದ್ದು ಸಾವನ್ನಪ್ಪುತ್ತಾನೆ. ಶಿವಾಜಿಯ ಮಲಸಹೋದರ 'ವೆಂಕೋಬಷಹಾಜಿ'ಯು ಷಾಹಜೀಬೋನ್ಸ್ಲೆಯ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡುತ್ತಾನೆ. ಈ ಸಂಗಾತಿಯು ತಿಳಿಯುತ್ತಿದ್ದಂತೆ ದುಃಖದಿಂದ ಶಿವಾಜಿಯು ಹೊದಿಗೆರೆಗೆ ಬರುತ್ತಾನೆ. ತಂದೆಯ ಚಿತಾಭಸ್ಮವನ್ನು ನೋಡಿ ಕಣ್ಣೀರಿಡುತ್ತಾನೆ. ಹೊದಿಗೆರೆಯಲ್ಲಿಯೇ ಷಾಹಜಿಯ ಚಿತಾಭಸ್ಮದ ಬೂದಿಯನ್ನು ಸಮಾಧಿ ಮಾಡುತ್ತಾನೆ. ಸದಾ ದೀಪವು ಉರಿಯುವಂತೆ ಒಂದು ಚಿಕ್ಕ ದೀಪಸ್ತಂಭವನ್ನು ತಲೆಯ ಭಾಗದಲ್ಲಿ ನಿರ್ಮಿಸಲಾಗಿದೆ. ಈ ಸಮಾಧಿಯ ಮೇಲೆ 'ಶ್ರೀ ಶಹಾಜಿರಾಜನ ಸಮಾಧಿ' ಎಂದು ಪಾಳೇಗಾರರ ಕಾಲದ ಕನ್ನಡ ಲಿಪಿಯನ್ನು ಬಳಸಿ ಬರೆಯಲಾಗಿದೆ. ೧೯೬೦ ರಲ್ಲಿ ಈ ಸಮಾಧಿ ಸ್ಥಳದಲ್ಲಿ ಪುನರ್ ನಿರ್ಮಾಣ

ಮಾಡಿ, ಈ ಸಮಾಧಿಯನ್ನು ಪುರಾತತ್ವ ಇಲಾಖೆಯು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಿದೆ. ೨೬ ಗುಂಟೆ ಭೂಮಿಯನ್ನು ನೀಡಿ, ಉದ್ಯಾನವನ್ನು ನಿರ್ಮಿಸಿ, ಸುತ್ತಲೂ ಗೋಡೆಯನ್ನು ಕಟ್ಟಲಾಗಿದೆ[೮೧].

ಚನ್ನಗಿರಿ ತಾಲ್ಲೂಕಿನಲ್ಲಿ ಕಂಡುಬಂದ ಸ್ಮಾರಕಗಳಾದ ದೇವಾಲಯಗಳು, ಕೆರೆಗಳು, ಬಾವಿಗಳು, ಹೊಂಡಗಳು, ಪುಷ್ಕರಣಿ, ಕೋಟೆ, ಬಯಲು ಬುರುಜು, ಅರಮನೆ ಅವಶೇಷ, ಇತರೆ ಸ್ಮಾರಕಗಳನ್ನು ಕ್ರೋಢಿಕರಿಸಿಕೊಂಡು ಈ ಅಧ್ಯಯನದಲ್ಲಿ ವಿವರಿಸಿದೆ. ದೇವಾಲಯಗಳನ್ನು ಧಾರ್ಮಿಕವಾಗಿ 'ವಾಸ್ತು'ವಿನ ಆಧಾರದಲ್ಲಿ ವಿಶ್ಲೇಷಣೆಗೆ ಒಳಪಡಿಸಿದಾಗ ೨೯ ಶೈವ ದೇವಾಲಯಗಳು, ೫ ವೈಷ್ಣವ ದೇವಾಲಯಗಳು, ೨ ಶಾಕ್ತ ದೇವಲಯಗಳು ಲಭ್ಯವಾಗಿವೆ. ೧೫ ಕೆರೆಗಳು, ೨ ಬಾವಿಗಳು, ಸಂತೆಬೆನ್ನೂರಿನಲ್ಲಿ ಕೆಂಗಪ್ಪನಾಯಕ ಕಟ್ಟಿಸಿದ ಪುಷ್ಕಾರಣಿ, ಚನ್ನಗಿರಿ, ಬಸವಪಟ್ಟಣದ ಕೋಟೆಗಳು, ಬಯಲು ಬುರುಜುಗಳು, ಬಸವ ಪಟ್ಟಣ ಮತ್ತು ಸಂತೆಬೆನ್ನೂರಿನ ಅರಮನೆ ಅವಶೇಷಗಳು, ಸ್ಮಾರಕಗಳಾದ ಹಿರೇಮಳಲಿಯ ಹೊಯ್ಸಳರ ಲಾಂಛನ, ಮಲಹಾಳಿನ ಕಬ್ಬಿಣದ ಭರ್ಜಿ, ರಾಣಿಯರ ಸ್ನಾನದ ಬಾವಿ, ಮುಸಿಫಿರ್‌ಖಾನ್ ಮತ್ತು ಹೊದಿಗೆರೆಯ ಷಾಹಜಿಬೊನ್ಸ್ಲೆ ಸಮಾಧಿಗಳನ್ನೊಳಗೊಂಡು ಸ್ಮಾರಕಗಳ ವಾಸ್ತುವನ್ನು ವಿಶ್ಲೇಷಿಸುವುದರ ಮೂಲಕ ಚನ್ನಗಿರಿ ತಾಲ್ಲೂಕಿನ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಪ್ರಯತ್ನವನ್ನು ಈ ಬರಹದಲ್ಲಿ ಮಾಡಿದೆ.

ಕೊನೆ ಟಿಪ್ಪಣಿಗಳು

೧. ಸದಾಶಿವ, ಸಮಗ್ರ ಭಾರತದ ಇತಿಹಾಸ, ಪು. ೩೦

೨. ಅದೇ ಪು.೨೨

೩. ಅನಂತರಂಗಚಾರ್ ಎನ್., ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ, ಪು. ೩೦೮

೪. ರಾಮಚಂದ್ರರಾವ್.ಎಸ್.ಕೆ., ಗುಡಿ ಜನರ ಜೀವನಾಡಿ, ೧೯೯೪, ಪು. ೧

೫. ಭಟ್‌ಸೂರಿ ಕೆ.ಜಿ., ಹಾಡುವಳ್ಳಿ, ಜೈನಶಾಸನ, ವಾಸ್ತು–ಮೂರ್ತಿಶಿಲ್ಪ, ಪು. ೧೭

೬. ಗೋಪಾಲರಾವ್ ಎಚ್.ಎಸ್., ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣದ ಚಾಲುಕ್ಯರ ದೇವಾಲಯ, ಪು.೩

೭. ರಾಮಚಂದ್ರರಾವ್.ಎಸ್.ಕೆ., ಭಾರತದ ದೇವಾಲಯ–ನೆಲೆ:ಹಿನ್ನೆಲೆ, ಪು.೪೯

೮. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು.೯೪೧.

೯. ಅದೇ, ಪು.೯೪೧

೧೦. ಅದೇ, ಪು.೯೪೧

೧೧. ಅದೇ, ಪು.೯೪೧

೧೨. ರಘುನಾಥ ಭಟ್ ಎಚ್.ಆರ್., ಪ್ರಾಚೀನ ಕರ್ನಾಟಕದ ವಾಸ್ತುಶಿಲ್ಪಕಲೆ, ಪು.೫೩೨

೧೩. ಅಪರ್ಣ ಕೂ.ಸ., ದೇವಾಲಯ ವಾಸ್ತುಶಿಲ್ಪಪರಿಚಯ, ಪು.೩

೧೪. ಪ್ರಭಾಕರ್.ಎಂ.ಎನ್.ದೇವಲಯ ವಾಸ್ತು ಚಂದ್ರಿಕೆ, ಪು.೧೭

೧೫. ಅಪರ್ಣ ಕೂ.ಸ., ಪೂರ್ವೋಕ್ತ, ಪು.೩

೧೬. ಅದೇ, ಪು.೪

೧೭. ಅದೇ, ಪು.೪

೧೮. ಅದೇ, ಪು.೪

೧೯. ಅದೇ, ಪು.೫

೨೦. ರಘುನಾಥಭಟ್ ಎಚ್.ಆರ್., ಪೂರ್ವೋಕ್ತ, ಪು.೫೬೪.

೨೧. ಅಪರ್ಣ ಕೂ.ಸ., ಪೂರ್ವೋಕ್ತ, ಪು.೭

೨೨. ಎಂ.ಎ.ಇಂಡಿಯನ್ ಟೆಂಪಲ್ ಫರ್ಮ್ಸ್ ಇನ್ ಕರ್ನಾಟಕ ಇನ್‌ಸ್ಕ್ರಿಪ್‌ಷನ್, ಪು.೨೧

೨೩. ಅದೇ, ಪು.೨೨.

೨೪. ಪ್ರಭಾಕರ್ ಎಂ.ಎನ್., ಪೂರ್ವೋಕ್ತ, ಪು.೩೭

೨೫. ಅಪರ್ಣಾ ಕೂ.ಸ., ಪೂರ್ವೋಕ್ತ, ಪು.೩೭

೨೬. ಅದೇ, ಪು.೬

೨೭. ಅದೇ, ಪು.೬೩.

೨೮. ನಾಯಕ ಹಾ.ಮಾ.(ಸಂ), ಕನ್ನಡ ವಿಷಯ ವಿಶ್ವಕೋಶ, ಪು.೯೫೦

೨೯. ಅಪರ್ಣಾ ಕೂ.ಸ., ಪೂರ್ವೋಕ್ತ ಪು.೨೨

೩೦. ಅದೇ, ಪು.೨೧

೩೧. ಧಾಕೆ ಎಂ.ಎ., ಅವರು ಈ ಮಾಹಿತಿಗಳನ್ನು ಮೊದಲು ಬೆಳಕಿಗೆ (Indian temple from in Karnataka inscriptions-1975) ತಂದಿದ್ದಾರೆ. ತರುವಾಯ ಪ್ರಭಾಕರ್ ಎಂ.ಎನ್.(ದೇವಲಯ ವಾಸ್ತು ೨೦೦೦) ಮೊದಲದವರು ಈ ದಿಶೆಯಲ್ಲಿ ಮತ್ತಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದಾರೆ.

೩೨. ಕಡಪಟ್ಟಿ ಎಂ.ಎನ್., ಪ್ರಾಚೀನ ಕರ್ನಾಟಕದಲ್ಲಿ ಶೈವ ಧರ್ಮ, ಪು.೧೧-೩೨

೩೩. ಅದೇ, ೩೭

೩೪. ಮೈಸೂರು ಆರ್ಕ್ಯಲಾಜಿಕಲ್ ವರದಿ-೧೯೩೭(ಎಂ.ಎ.ಆರ್), ಸರ್ಕಾರಿ ಮುದ್ರಣಾಲಯ, ಮೈಸೂರು ಗವರ್ನಮೆಂಟ್-೧೯೩೮, ಪು.೫೪

೩೫. ಅದೇ, ಪು.೫೫

೩೬. ಅದೇ, ಪು.೫೫

೩೭. ಅದೇ, ಪು.೫೬

೩೮. ಅದೇ, ಪು.೬೨

೩೯. ಅದೇ, ಪು.೬೮

೪೦. ಯೋಗಾನಂದ ಎಸ್.ಕೆ. ನೀತಿಗೆರೆ ಗ್ರಾಮದ ಶಾಸನೋಕ್ತ ವೀರಭದ್ರ ದೇವಾಲಯ ಮತ್ತು ಸ್ಮಾರಕಗಳು, ಪು.೭೭-೮೫.

೪೧. ಸದಾಶಿವ ಕೆ., ಪೂರ್ವೋಕ್ತ, ಪು.೧೮೪

೪೨. ಅದೇ, ಪು.೧೮೪

೪೩. ಅದೇ, ಪು.೧೮೫

೪೪. ಗಿರಿಜಾ ಟಿ. ದಾವಣಗೆರೆ ಇದು ನಮ್ಮ ಜಿಲ್ಲೆ, ಪು.೫೨೩

೪೫. ಅದೇ, ಪು.೫೨೩

೪೬. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಸಂತೆಬೆನ್ನೂರು ನಾಯಕರು, ಪು.೩೦

೪೭. ಅದೇ, ಪು.೩೦

೪೮. ಅದೇ, ಪು.೩೦

೪೯. ಅದೇ, ಪು೩೦

೫೦. ಅದೇ, ಪು.೩೦

೫೧. ಅದೇ, ಪು.೩೧

೫೨. ಅದೇ, ಪು.೬೦

೫೩. ಅದೇ, ಪು.೬೦

೫೪. ಅದೇ, ಪು.೬೦

೫೫. ಗಿರಿಜಾ ಟಿ., ಪೂರ್ವೋಕ್ತ, ಪು.೫೨೯

೫೬. ಅದೇ, ಪು.೫೨೯

೫೭. ರೈಸ್ ಬಿ.ಎಲ್., ಪೂರ್ವೋಕ್ತ, ಪು.೪೨೩

೫೮. ಅದೇ, ಪು.೪೬೦

೫೯. ಅದೇ, ಪು.೪೭೨

೬೦. ಎಂ.ಎ.ಆರ್. ೧೯೩೭, ಪೂರ್ವೋಕ್ತ, ಪು.೧೦೯

೬೧. ಸುರೇಶ ಬಿ., ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳ ದೇವಾಲಯ, ಪು.೧೭೮-೧೭೯.

೬೨. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಪೂರ್ವೋಕ್ತ, ಪು.೧೩೭

೬೩. ಅಂಬಳಿಕೆ ಹಿರಿಯಣ್ಣ, ಕನ್ನಡ ವಿಷಯ ವಿಶ್ವಕೋಶ, ಪು.೧೦೪೯

೬೪. ಎಂ.ಎ.ಆರ್.-೧೯೩೭, ಪೂರ್ವೋಕ್ತ, ಪು.೧೦೬

೬೫. ಎಂ.ಎ.ಆರ್.-೧೯೪೨, ಪೂರ್ವೋಕ್ತ-೧೯೪೩, ಪು.೩೨

೬೬. ಎಂ.ಎ.ಆರ್.-೧೯೩೭, ಪೂರ್ವೋಕ್ತ, ಪು.೧೦೧

೬೭. ಗಿರಿಜಾ ಟಿ., ಪೂರ್ವೋಕ್ತ, ಪು.೪೯೬-೪೯೭

೬೮. ಅದೇ, ಪು.೪೯೮

೬೯. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು, ಪು.೧೫೮

೭೦. ಅದೇ, ಪು.೧೫೭

೭೧. ಗಿರಿಜಾ ಟಿ., ಪೂರ್ವೋಕ್ತ, ಪು.೫೧೨

೭೨. ಸಂತೆಬೆನ್ನೂರು, ಸುಮತೀಂದ್ರ ನಾಡಿಗ್, ಪೂರ್ವೋಕ್ತ, ಪು.೬೦

೭೩. ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ಪೂರ್ವೋಕ್ತ, ಪು. ೧೧೬

೭೪. ಸಂತೆಬೆನ್ನೂರು ಸಮುತೀಂದ್ರ ನಾಡಿಗ್, ಸಂತೆಬೆನ್ನೂರಿನ ನಾಯಕರು, ಪು.೫೯

೭೫. ಮಂಜುನಾಯ್ಕ ಆರ್., ಚನ್ನಗಿರಿ ತಾಲ್ಲೂಕಿನ ಪುರಾತತ್ವ ಅವಶೇಷಗಳು, ಪು.೧೧೮

೭೬. ಗಿರಿಜಾ ಟಿ., ಪೂರ್ವೋಕ್ತ, ಪು.೪೯೬-೪೯೭

೭೭. ಅದೇ, ಪು.೫೧೨

೭೮. ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ, ಪು.೧೦೪೯

೭೯. ಗಿರಿಜಾ ಟಿ., ಪೂರ್ವೋಕ್ತ, ಪು.೪೯೭

೮೦. ಅದೇ, ಪು.೪೯೭

೮೧. ಅದೇ, ಪು.೫೩೦

ಶೈವ ಧರ್ಮ ದೇವಾಲಯಗಳು


ಕ್ರ.ಸಂ.	ಗ್ರಾಮ	ಕಾಲಮಾನ	ಹೆಸರು	ಬಳಸಿದ ಶಿಲೆ	ರಾಜಸಂತತಿ
೧	ಕತ್ತಲಗೆರೆ	೧೦ನೇ ಶತಮಾನ	ಈಶ್ವರ ದೇವಾಲಯ	ಕಪ್ಪು	ಕಲ್ಯಾಣದ ಚಾಲುಕ್ಯರು
೨	ಚನ್ನಗಿರಿ	೧೨ನೇ ಶತಮಾನ	ಕಲ್ಲೇಶ್ವರ ದೇವಾಲಯ	ಬಳಪ	ಕಲ್ಯಾಣದ ಚಾಲುಕ್ಯರು
೩	ಚನ್ನಗಿರಿ	೧೨ನೇ ಶತಮಾನ	ಈಶ್ವರ ಮತ್ತು ಕಲ್ಲುವ್ಮಠ ದೇವಾಲಯ	ಬಳಪ	ಕಲ್ಯಾಣದ ಚಾಲುಕ್ಯರು
೪	ಕಲ್ಕೆರೆ	೧೨೨೧	ಬೇಳೇಶ್ವರ	ಬಳಪ	ಹೊಯ್ಸಳರು
೫	ಕಲ್ಕೆರೆ	೧೨ನೇ ಶತಮಾನ	ಕಲ್ಲೇಶ್ವರ	ಬಳಪ	ಕಲ್ಯಾಣದ ಚಾಲುಕ್ಯರು
೬	ನಲ್ಲುದರೆ	೧೨ನೇ ಶತಮಾನ	ಕಲ್ಲೇಶ್ವರ/ತ್ರೈಪುರುಷ ದೇವಾಲಯ	ಬಳಪ	ಹೊಯ್ಸಳರು
೭	ನಲ್ಲುದರೆ	೧೨ನೇ ಶತಮಾನ	ಬ್ರಹ್ಮೇಶ್ವರ ದೇವಾಲಯ	ಬಳಪ	ಹೊಯ್ಸಳರು
೮	ಅಲಕನಾಳು	೧೨ನೇ ಶತಮಾನ	ಶ್ರೀ ಬಲ್ಲೇಶ್ವರ/ಜಲ್ಲೇಶ್ವರ ದೇವಾಲಯ	ಬಳಪ	ಹೊಯ್ಸಳರು
೯	ಹಿರೇಕೋಗಿಲೂರು	೧೨೬೮	ಈಶ್ವರ/ಕಲ್ಲೇಶ್ವರ ದೇವಾಲಯ	ಕಪ್ಪು	ಸೇವುಣರು
೧೦	ಹಿರೇಮಳಲಿ	೧೨ನೇ ಶತಮಾನ	ಈಶ್ವರ ದೇವಾಲಯ	ಬಳಪ	ಕಲ್ಯಾಣದ ಚಾಲುಕ್ಯರು
೧೧	ತ್ಯಾವಣಗೆ	೧೨ನೇ ಶತಮಾನ	ಬೆಟ್ಟದ ಮಲೇಶ್ವರ	ಬಳಪ	ಕಲ್ಯಾಣದ ಚಾಲುಕ್ಯರು
೧೨	ಮುದಿಗೆರೆ	೧೨ನೇ ಶತಮಾನ	ಈಶ್ವರ ದೇವಾಲಯ	ಕಪ್ಪು	ಕಲ್ಯಾಣದ ಚಾಲುಕ್ಯರು
೧೩	ಮೆದಕೆರೆ	೧೨ನೇ ಶತಮಾನ	ಮಧುಕೇಶ್ವರ/ಮಲ್ಲೇಶ್ವರ ದೇವಾಲಯ	ಬಳಪ	ಕಲ್ಯಾಣ ಚಾಲುಕ್ಯರು
೧೪	ತಾವರಕೆರೆ	೧೨ನೇ ಶತಮಾನ	ಈಶ್ವರ ದೇವಾಲಯ	ಬಳಪ	ಹೊಯ್ಸಳರು
೧೫	ಅಲಕನಾಳು	೧೩ನೇ ಶತಮಾನ	ಭೈರವೇಶ್ವರ ದೇವಾಲಯ	ಬಳಪ	ಹೊಯ್ಸಳರು

೧೬	ಸಿದ್ಧರಮಠ	೧೪ನೇ ಶತಮಾನ	ರಾಮೇಶ್ವರ ದೇವಾಲಯ	ಕಣಶಿಲೆ	ವಿಜಯನಗರ
೧೭	ತ್ಯಾವಣಗೆ	೧೪ನೇ ಶತಮಾನ	ಕಲ್ಲೇಶ್ವರ ದೇವಾಲಯ	ಕಣಶಿಲೆ	ವಿಜಯನಗರ
೧೮	ತಾವರಕೆರೆ	೧೪ನೇ ಶತಮಾನ	ನೀಲಕಂಠೇಶ್ವರ ದೇವಾಲಯ	ಕಣಶಿಲೆ	ವಿಜಯನಗರ
೧೯	ದೊಡ್ಡ ಅಬ್ಬಿಗೆರೆ	೧೪ನೇ ಶತಮಾನ	ಈಶ್ವರ ದೇವಾಲಯ	ಕಣಶಿಲೆ	ವಿಜಯನಗರ
೨೦	ಮಾವಿನಹೊಳೆ	೧೫ನೇ ಶತಮಾನ	ಮಲ್ಲಿಕಾರ್ಜುನ ದೇವಾಲಯ	ಕಣಶಿಲೆ	ವಿಜಯನಗರ
೨೧	ಚನ್ನಗಿರಿ	೧೫ನೇ ಶತಮಾನ	ಬಸವಣ್ಣ ದೇವಾಲಯ	ಕಣಶಿಲೆ	ವಿಜಯನಗರ
೨೨	ಮಸಣಿಕೆರೆ	೧೫ನೇ ಶತಮಾನ	ಈಶ್ವರ ದೇವಾಲಯ	ಕಪ್ಪು	ಕಲ್ಯಾಣದ ಚಾಲುಕ್ಯರು
೨೩	ಅಸ್ತಪನಹಳ್ಳಿ	೧೬ನೇ ಶತಮಾನ	ಸೋಮೇಶ್ವರ ದೇವಾಲಯ	ಕಣಶಿಲೆ	ವಿಜಯನಗರ
೨೪	ಸೂಳೆಕೆರೆ	೧೬ನೇ ಶತಮಾನ	ಸಿದ್ದೇಶ್ವರ	ಕಣಶಿಲೆ	ವಿಜಯನಗರ
೨೫	ಬಸವಪಟ್ಟಣ	೧೬ನೇ ಶತಮಾನ	ವಿರೂಪಾಕ್ಷೇಶ್ವರ	ಕಣಶಿಲೆ	ಸಂತೆಬೆನ್ನೂರು, ನಾಯಕರು
೨೬	ಮೊರಡಿ	೧೬ನೇ ಶತಮಾನ	'ಗುಡ್ಡದ ಮಲ್ಲೇಶ್ವರ ದೇವಾಲಯ	ಕಣಶಿಲೆ	ಸಂತೆಬೆನ್ನೂರು, ನಾಯಕರು
೨೭	ನಾಗೇನಹಳ್ಳಿ	೧೬ನೇ ಶತಮಾನ	ಈಶ್ವರ ದೇವಾಲಯ	ಕಣಶಿಲೆ	ಸಂತೆಬೆನ್ನರು, ನಾಯಕರು
೨೮	ಬೆಳಲಗೆರೆ	೧೭ನೇ ಶತಮಾನ	ಮಾದೇಶ್ವರ/ಈಶ್ವರ ದೇವಾಲಯ	ಕಣಶಿಲೆ	ಸಂತೆಬೆನ್ನೂರು, ನಾಯಕರು
೨೯	ನೀತಿಗೆರೆ	೧೫ನೇ ಶತಮಾನ	ವೀರಭದ್ರ ದೇವಾಲಯ	ಕಣಶಿಲೆ	ವಿಜಯನಗರ

ವೈಷ್ಣವ ದೇವಾಲಯಗಳು					
೧	ನಲ್ಲೂರು	೧೨ನೇ ಶತಮಾನ	ಕೇಶವ ದೇವಾಲಯ	ಬಳಪ	ಹೊಯ್ಸಳರು
೨	ದೇವರಹಳ್ಳಿ	೧೫ನೇ ಶತಮಾನ	ಶ್ರೀರಂಗನಾಥ ಸ್ವಾಮಿ ದೇವಾಲಯ	ಕಣಶಿಲೆ	ವಿಜಯನಗರ
೩	ಚನ್ನಗಿರಿ	೧೫ನೇ ಶತಮಾನ	ಬೈಟೆ ರಂಗನಾಥ ಸ್ವಾಮಿ	ಕಣಶಿಲೆ	ವಿಜಯನಗರ
೪	ದಾಗಿನಕಟ್ಟೆ	೧೫ನೇ ಶತಮಾನ	ರಂಗನಾಥ ಸ್ವಾಮಿ ದೇವಾಲಯ	ಕಣಶಿಲೆ	ವಿಜಯನಗರ
೫	ಚಿಕ್ಕಕೋಗಲುರು	೧೬೭೫	ಆಂಜನೇಯ ದೇವಾಲಯ	ಕಣಶಿಲೆ	ಚಿತ್ರದುರ್ಗದ ಪಾಳೇಗಾರರು
ಶಾಕ್ತ ದೇವಾಲಯಗಳು					
೧	ಸೂಳೆಕೆರೆ	೧೫ನೇ ಶತಮಾನ	ಪಾರ್ವತಿ ದೇವಾಲಯ	ಕಣಶಿಲೆ	ವಿಜಯನಗರ
೨	ಬಸವಪಟ್ಟಣ	೧೬ನೇ ಶತಮಾನ	ದುರ್ಗಾಂಭಿಕ ದೇವಾಲಯ	ಕಣಶಿಲೆ	ವಿಜಯನಗರೋತ್ತರ, ಸಚಿತೆಬೆನ್ನರು ನಾಯಕರು

ಕ್ರಸಂ.	ದೇವಾಲಯಗಳು	ಸಂಖ್ಯೆ
1	ಶೈವ ದೇವಾಲಯಗಳು	29
2	ವೈಷ್ಣವ ದೇವಾಲಯಗಳು	5
3	ಶಾಕ್ತ ದೇವಾಲಯಗಳು	2
	ಒಟ್ಟು ದೇವಾಲಯಗಳು	**36**

ಕೋನಚಿತ್ರ 3. ದೇವಾಲಯಗಳ ವೈವಿಧ್ಯತೆ



ಐತಿಹಾಸಿಕ ಕೆರೆಗಳು


ಕ್ರಸಂ.	ಗ್ರಾಮ	ಸ್ಮಾರಕ	ರಾಜಸಂತತಿ	ಪ್ರಕಟಣೆ
೧	ಸೂಳೆಕೆರೆ	ಶಾಂತಿ ನಗರ	ಹೊಯ್ಸಳರು	ಇತಿಹಾಸದ ಹೆಜ್ಜೆಗಳು, ದಾವಣಗೆರೆ ಜಿಲ್ಲೆ
೨	ಸಂತೆಬೆನ್ನೂರು	ಸಂತೆಬೆನ್ನೂರಿನ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೩	ಮೆದಕೆರೆ	ಮೆದಕೆರೆ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೪	ಸಿದ್ಧರಮಠ	ಸಿದ್ಧರಮಠ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೫	ತಳಿಗೆರೆ	ತಳಿಗೆರೆ ಗ್ರಾಮದ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೬	ಕುಳನೂರು	ಕುಳನೂರು ಗ್ರಾಮದ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೭	ಕಂಚುಗಾರನಹಳ್ಳಿ	ಕಂಚುಗಾರನಹಳ್ಳಿಯ ಗಿರಿಯವ್ವ ನಾಗತಿ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೮	ಸಾಸ್ವಿಹಳ್ಳಿ	ಸಾಸ್ವಿಹಳ್ಳಿ ಕೆರೆ	ಸಂತಬೆನ್ನೂರಿನ ನಾಯಕರು .	ಅಪ್ರಕಟಿತ
೯	ಹೊಸಹಳ್ಳಿ	ಹೊಸಹಳ್ಳಿ ಗ್ರಾಮ್ಮದ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೧೦	ರಾಮೇನಹಳ್ಳಿ	ರಾಮೇನಹಳ್ಳಿ ಗ್ರಾಮದ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ
೧೧	ಹೊದಿಗೆರೆ	ಹೊದಿಗೆರೆ ಕೆರೆ	ಸಂತಬೆನ್ನೂರಿನ ನಾಯಕರು	ಅಪ್ರಕಟಿತ

ಐತಿಹಾಸಿಕ ಕೆರೆಗಳು

ಕ್ರ.ಸಂ.	ಗ್ರಾಮ	ಸ್ಮಾರಕ	ರಾಜಸಂತತಿ	ರಾಜ	ಪ್ರಕಟಣೆ
೧	ತ್ಯಾವಣಗಿ	ತ್ಯಾವಣಗಿ ಕೆರೆ	ನೊಳಂಬರು	ತ್ರೈಲೋಕ್ಯನನ್ನಿ ನೊಳಂಬ ಪಲ್ಲವ ಪೆರಮಾಡಿ	ಇ. ಸಿ -೧೭ ೮ನೇ ಶಾಸನ
೨	ಅಲಕನಾಳು	ಅಲಕನಾಳು ಕೆರೆ	ಅಸಂದಿಗಂಗರು		ಇ. ಸಿ -೧೭ ೬೪ನೇ ಶಾಸನ
೩	ತಾವರೆಕೆರೆ	ಹೊಸಹಳ್ಳಿ	ಬಿಜಾಪುರದ ಅದಿಲ್ ಷಾಯಿಗಳು		ಇ. ಸಿ -೧೭ ೪೨ನೇ ಶಾಸನ ಮತ್ತು ೪೩ನೇ ಶಾಸನಗಳು

ಕ್ರಸಂ.	ಸ್ಮಾರಕಗಳು	ಸಂಖ್ಯೆ
1	ದೇವಾಲಯಗಳು	36
2	ಐತಿಹಾಸಿಕ ಕೆರೆಗಳು	12
3	ಶಾಸನೋಕ್ತ ಕೆರೆಗಳು	3
4	ಬಾವಿಗಳು	2
5	ಪುಷ್ಕರಣಿ	1
6	ಕೋಟೆಗಳು	5
7	ಬಯಲು ಬುರುಜುಗಳು	3
8	ಅರಮನೆ ಅವಶೇಷಗಳು	2
9	ಇತರೆ ಸ್ಮಾರಕಗಳು	5
	ಒಟ್ಟು ಸ್ಮಾರಕಗಳು	**69**

ವೃತ್ತಚಿತ್ರ 4. ಸ್ಮಾರಕಗಳ ವೈವಿಧ್ಯತೆ



ಅಧ್ಯಾಯ : ಐದು

ಮೂರ್ತಿಶಿಲ್ಪಗಳು

೫.೧. ಶೈವಶಿಲ್ಪಗಳು

೫.೨. ವೈಷ್ಣವಶಿಲ್ಪಗಳು

೫.೩. ಶಾಕ್ತಶಿಲ್ಪಗಳು

೫.೪. ಜೈನಶಿಲ್ಪಗಳು

ಅಧ್ಯಾಯ : ಐದು

ಮೂರ್ತಿಶಿಲ್ಪಗಳು

ಭಾರತ ದೇಶದಲ್ಲಿರುವಷ್ಟು ದೇವಾಲಯಗಳು ಮೂರ್ತಿಶಿಲ್ಪಗಳು ಬೇರೆ ಯಾವ ದೇಶಗಳಲ್ಲಿ ಕಂಡುಬರುವುದಿಲ್ಲ. ಗ್ರಾಮಗಳಲ್ಲಿ, ನಗರಗಳಲ್ಲಿ ಕನಿಷ್ಠ ಪಕ್ಷ ಚಿಕ್ಕ ಗುಡಿ ಅಥವಾ ಪಾಳುಬಿದ್ದಿರುವ ಗುಡಿಯಾದರೂ ಇದ್ದು ಅದರೊಳಗೆ ಸುಂದರವಾದ ಮೂರ್ತಿಶಿಲ್ಪಗಳು ಇದ್ದೇ ಇರುತ್ತವೆ.[೧] ಮೂರ್ತಿಶಿಲ್ಪಗಳು ಭಾರತೀಯರ ಭಾವನೆಯ ಪ್ರತೀಕಗಳಾಗಿವೆ.[೨] ಅರವತ್ತು ನಾಲ್ಕು ಕಲೆಗಳಲ್ಲಿ ಶಿಲ್ಪಕಲೆಯೂ ಒಂದಾಗಿದೆ. ಶಿಲ್ಪ ಎಂಬ ಪದವು ಶೀಲಸಮುದೌ ಎಂಬ ಧಾತುವಿನಿಂದ ನಿಷ್ಪತ್ತಿಯಾಗಿದ್ದು, ಶೀಲ್ ತಪಸ್ಸು, ಸಮುದೌ ಸಮಾಧಿ ಎಂಬ ಅರ್ಥಗಳನ್ನು ಹೊಂದಿದೆ.[೩] ಅಂದರೆ ಶಿಲಾ ಸಮುದೌ ಶೀಲ್ಯದ ಇತಿಶಿಲ್ಪ' ಮನಸ್ಸು ಸಮಾಧಿ ಸ್ಥಿತಿಯಲ್ಲಿದ್ದಾಗ ರೂಪಿತವಾಗುವ ಕರಕುಶಲ ವಸ್ತುವೇ ಶಿಲ್ಪ ಎಂದು ವ್ಯಾಪಕ ಅರ್ಥವನ್ನು ಹೊಂದಿದೆ.[೪] ಭಾರತೀ ಕಲೆಗಳಲ್ಲಿ ವಾಸ್ತು, ಮೂರ್ತಿ, ಚಿತ್ರಕಲೆಗಳಿಗೆ ಸಂಬಂಧಿಸಿದ ಒಟ್ಟಾರೆ ಅಧ್ಯಯನವನ್ನು ಶಿಲ್ಪಶಾಸ್ತ್ರವೆಂದು ಕರೆಯುತ್ತಾರೆ.[೫] ಶಿಲ್ಪ ಎಂದರೆ ಮೂರ್ತಿಶಿಲ್ಪಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಗಿದೆ.[೬] 'ಶಿಲ್ಪ ಅಥವಾ ದುಂಡು ಶಿಲ್ಪ'ವು ತನ್ನದೇ ಆದ ಮೈ ಇರುತ್ತದೆ. ಹಾಗೂ ನಾಲ್ಕೂ ದಿಕ್ಕುಗಳಿಂದಲೂ ನೋಡಬಹುದಾದ ನಿರ್ಮಾಣಕ್ಕೆ ಶಿಲ್ಪ ಎಂದು ಕರೆಯುತ್ತಾರೆ.[೭]

ಶಿಲ್ಪಗಳ ಉಗಮ

ಶಿಲಾಯುಗದ ಮಾನವನು ಕಾಡಿನಲ್ಲಿ ವಾಸಿಸುವಾಗ ಪ್ರಕೃತಿಯಲ್ಲಿರುವ ಬದಲಾವಣೆಯನ್ನು ಅರಿತು, ಅದರ ಹಿಂದೆ ಯಾವುದೋ ಆಗೋಚರ ಶಕ್ತಿಯ ಪ್ರಭಾವವನ್ನು ತಿಳಿದು, ಅಮೂರ್ತವಾದ ಆಗೋಚರ ಶಕ್ತಿಯನ್ನು ಮನುಷ್ಯ ಆಕಾರದ ರೂಪಕೊಟ್ಟು ಶಿಲೆಯನ್ನು ಕೆತ್ತಿ ಆರಾಧನೆ ಮಾಡುವ ಪ್ರವೃತ್ತಿ ಬೆಳೆಯಿತು.[೮]

ಸಿಂಧೂ ನಾಗರಿಕತೆಯ ನಿವೇಶನಗಳಲ್ಲಿ ಉತ್ಖನದ ಸಹಾಯದಿಂದ ಡುಬ್ಬದ ಗೂಳಿ, ಶಿವ, ಸೈನಿಕನ ರುಂಡಭಾಗ, ನರ್ತನ ಭಂಗಿಯಲ್ಲಿರುವ ಸ್ತ್ರೀಯರ ಶಿಲ್ಪಗಳು ದೊರೆತಿವೆ.[೯] ವೈದಿಕ ನಾಗರಿಕತೆಯಲ್ಲಿ ಅರಂಭಿಕವಾಗಿ ಪ್ರಕೃತಿಯ ಆರಾಧನೆ ನಂತರ ವೇದಗಳ ಕಾಲದಲ್ಲಿ ದೈವತಾರಾಧನೆ ಸ್ಥಿರವಾಯಿತು. ಅವುಗಳಿಗೆಲ್ಲ ಒಂದೊಂದು ಪಾತ್ರ(ರೂಪ)ವನ್ನು ನೀಡಿದರು.[೧೦] ಭಾರತದ ಚಾರಿತ್ರಿಕ ಯುಗದಲ್ಲಿ ಮೊದಲ ಬಾರಿಗೆ ಲಭ್ಯವಾಗಿರುವ ಶಿಲ್ಪವು ಮೌರ್ಯರ ಕಾಲದ್ದಾಗಿದೆ.[೧೧] ಕುಶಾನರ ಮನೆತನದ ಆಳ್ವಿಕೆಯಲ್ಲಿ ಗಾಂಧಾರಕಲೆ ಉಗಮವಾಗಿ, ಸಮಕಾಲೀನ ಶೈಲಿ ಮತ್ತು ಭಾರತೀಯ ವಸ್ತು(ವಿಷಯ)ವಿನಿಂದ, ಭಾರತೀಯ ಶಿಲ್ಪಪರಂಪರೆ ಬೆಳವಣಿಗೆಗೆ ಕಾರಣವಾಗಿ ಗುಪ್ತರು, ವರ್ಧನರ ಕಾಲದಲ್ಲಿ ಶಿಲ್ಪಕಲೆಯು ಮುಂದುವರೆಯಿತು.[೧೨] ಕರ್ನಾಟಕದ ಚಾರಿತ್ರಿಕ ಯುಗಕ್ಕೆ ಬಂದರೆ ರಾಜರುಗಳ ಪ್ರೋತ್ಸಾಹದಿಂದ ಮೂರ್ತಿಶಿಲ್ಪ ಶಾತವಾಹನರ

ಕಾಲದಲ್ಲಿನ ಬೆಳವಣಿಗೆ ಹೊಂದಿತು. ಸನ್ನತಿ ಉತ್ಖನನದಲ್ಲಿ ಲಭ್ಯವಾದ ಮಣ್ಣಿನ ಮೂರ್ತಿಗಳು, ಕದಂಬರ ಕಾಲಕ್ಕೆ ಸೇರಿದ ನಾಗಶಿಲ್ಪ, ಗಂಗರು, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಮೂರ್ತಿಶಿಲ್ಪವು ಉಚ್ಛ್ರಾಯಸ್ಥಿತಿ ತಲುಪಿ ಹೊಯ್ಸಳರ ಕಾಲಕ್ಕೆ ಸುಂದರ ಆಕರ್ಷಕ ರೂಪವನ್ನು ಪಡೆಯಿತು.[೧೩]

ಪ್ರತಿಮಾ ಲಕ್ಷಣಗಳು

ಮೂರ್ತಿಶಿಲ್ಪಗಳು ಭಾರತೀಯರ ಭಾವನೆಯ ಪ್ರತೀಕ. ದೇವಾಲಯದಲ್ಲಿ ಮೂರ್ತಿಯನ್ನು ಒಮ್ಮೆ ಪ್ರತಿಷ್ಠಾಪನೆ ಮಾಡಿದರೆ, ಆ ಸ್ಥಳದಿಂದ ತೆಗೆಯಲಾಗದು. ಇದನ್ನು ಅಚಲಬಿಂಬ, ಧ್ರುವಭೇದ, ಮೂಲಭೇದ ಎನ್ನುವರು.[೧೪] ಬಿಂಬದ ಪ್ರತಿಯೊಂದು ಭಾಗವನ್ನು ಕೆತ್ತಿದಾಗ ಮಾತ್ರ ದುಂಡು ಶಿಲ್ಪವೆಂದು ಕರೆಸಿಕೊಳ್ಳುತ್ತದೆ. ಆದರೆ ಶಿಲ್ಪವನ್ನು ಅಡಿಯಿಂದ ಮುಡಿಯವರೆಗೆ ಕೆತ್ತಿರುವ ಬಿಂಬವು ವ್ಯಕ್ತಬಿಂಬ, ಎದೆಯವರೆಗೆ ಕೆತ್ತಿರುವ ಬಿಂಬವು ವ್ಯಕ್ತಾವ್ಯಕ್ತ ಬಿಂಬ, ಆಕಾರ ರಹಿತವಾದ ಪೂಜಾರ್ಹ ವಸ್ತುವು ಅವ್ಯಕ್ತ ಬಿಂಬ ಎನ್ನುವರು.[೧೫] ಸಾಮಾನ್ಯವಾಗಿ ಬಿಂಬಗಳಲ್ಲಿ ವ್ಯಕ್ತವಾದ ರೂಪ ಮತ್ತು ಭಾವಗಳಿಗನುಗುಣವಾಗಿ ಸೌಮ್ಯಬಿಂಬ, ಶಾಂತ ಅಥವಾ ಪ್ರಸನ್ನ ಮತ್ತು ಉಗ್ರ, ರೌದ್ರ ಮೂರ್ತಿಗಳೆಂದು ಗೋಚರಿಸುತ್ತವೆ.[೧೬] ದೇವತಾ ಶಿಲ್ಪಗಳ ಮುದ್ರೆಗಳು, ಹಿಡಿದಿರುವ ಆಯುಧಗಳು, ವಾಹನಗಳು ಆಭರಣಗಳು ಮೊದಲಾದ ಲಕ್ಷಣಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದೆ.

ಶಿಲ್ಪಗಳಲ್ಲಿ ಮುದ್ರೆಗಳು

ಮೂರ್ತಿಗಳನ್ನು ಗುರುತಿಸಲು ಮುದ್ರೆಗಳು ಹೆಚ್ಚು ಪ್ರಾಮುಖ್ಯತೆ ಪಡೆದಿರುತ್ತವೆ. ಮುದ್ರೆ ಒಂದು ಭಾಷೆಯಂತಿದ್ದು, ಬೆರಳು ಮತ್ತು ಹಸ್ತ ವಿನ್ಯಾಸಗಳ ಮೂಲಕ ಬಿಂಬದ ಭಾವನೆಯನ್ನು ಪ್ರಕಟಿಸುತ್ತವೆ. ಮೂರ್ತಿಗಳಲ್ಲಿ ನಿಶ್ಚಿತ ಕ್ರಮದಲ್ಲಿರುವ ಕೈಗಳ ಸ್ಥಿತಿಗೆ ಹಸ್ತವೆಂದೂ, ಬೆರಳುಗಳನ್ನು ಮಡಿಸಿದ ಸ್ಥಿತಿಯನ್ನು 'ಮುದ್ರೆ' ಎಂದು ಕರೆಯುವರು.[೧೭] ಶಿಲ್ಪಗಳು ನಾಟ್ಯದ ಮತ್ತೊಂದು ರೂಪವೇ ಆಗಿವೆ.[೧೮] ಹಾಗಾಗಿ ಶಿಲ್ಪಗಳಲ್ಲಿ ಮುದ್ರೆಗಳನ್ನು ನಾಟ್ಯಶಾಸ್ತ್ರದಿಂದ ಪಡೆದಿರುಬಹುದೆಂದು ಗೋಚರಿಸುತ್ತದೆ. ಶಿಲ್ಪ ಮತ್ತು ನಾಟ್ಯಗಳು ಕಲೆಯ ಎರಡು ಮುಖಗಳೆನಿಸಿವೆ. ಸಿ. ಎಸ್. ಶಿವರಾಮಮೂರ್ತಿ, ಬ್ಯಾನರ್ಜಿ, ಟಿ.ಎ. ಗೋಪಿನಾಥರಾವ್ ಮೊದಲಾದ ವಿದ್ವಾಂಸರು ಶಿಲ್ಪಗಳಲ್ಲಿ ೧೫ ಮುದ್ರೆಗಳನ್ನು ಗುರುತಿಸಿದ್ದಾರೆ. ಮತ್ತು ಶುಕ್ಲಾರವರು ಹಸ್ತಮುದ್ರೆ, ಪಾದಮುದ್ರೆ ಮತ್ತು ಆಸನ ಮುದ್ರೆಗಳೆಂದು ವಿಂಗಡಿಸಿದ್ದಾರೆ. ಆದರೆ ಶಿಲ್ಪಗಳಲ್ಲಿ ಈ ಕೆಳಗೆ ನೀಡಲಾದ ೨೭ ಮುದ್ರೆಗಳನ್ನು ಗುರುತಿಸಬಹುದು.[೧೯]

ಅಭಯ ಮುದ್ರೆ (ಕಾಪಾಡುವ ಈ ಹಸ್ತವು ಮೇಲ್ಮುಖವಾಗಿದ್ದು ಪರಿಶೀಲಕನ ಕಡೆಗೆ ತಿರುಗುತ್ತದೆ) ದೇವಾನು ದೇವತೆಗಳು ಈ ಮುದ್ರೆಯಲ್ಲಿ ಕೃಪ ಕಟಾಕ್ಷವನ್ನು ನೀಡುತ್ತಾರೆ. ವರದಾ

ಮುದ್ರೆ (ವರ ನೀಡುವ ಹಸ್ತವು ಕೆಳಮುಖವಾಗಿರುತ್ತದೆ) ಲಕ್ಷ್ಮೀ ಅನ್ನಪೂರ್ಣೇಶ್ವರಿ ಮೊದಲಾದ ದೇವತೆಗಳು ಈ ಮುದ್ರೆಯನ್ನು ಹೊಂದಿರುತ್ತಾರೆ. 'ಅಹೂಯ ವರದಾಡ' ಮುದ್ರೆ (ಅಭಯ ಮುದ್ರೆಯ ರೂಪದಲ್ಲಿಯೇ ಇದ್ದು ಬೆರಳುಗಳು ಸ್ವಲ್ಪ ಮಟ್ಟಿಗೆ ಬಾಗಿರುತ್ತವೆ. ಅಂಜಲಿ ಮುದ್ರ (ಎರಡುಕೈಗಳನ್ನು ಜೋಡಿಸಿ ಎದೆಯ ಮೇಲಿರಿಸಿಕೊಂಡಿರುವುದು) ಹನುಮಂತನು ಈ ಮುದ್ರೆಯನ್ನು ಹೊಂದಿದ್ದಾನೆ. ಸಿಂಹಕರ್ಣ ಮುದ್ರೆ, ಕಟಕ ಮುದ್ರೆ (ಈ ಮುದ್ರೆಗಳು ಹೆಚ್ಚಾಗಿ ದೇವಿಶಿಲ್ಪಗಳಲ್ಲಿ ಕಂಡುಬರುತ್ತವೆ. ಹೂವುಗಳನ್ನು ಹಿಡಿದಿರುವಾಗ ಈ ಮುದ್ರೆಯಲ್ಲಿರುತ್ತವೆ.) ಗರ್ಜಸ್ಥ ಅಥವಾ ದಂಡಕಸ್ತಮುದ್ರೆ (ಹಸ್ತದ ಆನೆಯ ಸೊಂಡಿಲಿನಾಕಾರದಲ್ಲಿರುತ್ತದೆ), ಡೋಲಕರಮ್ (ಸ್ಥಾನಿಕ ದೇವಿ ಶಿಲ್ಪಗಳಲ್ಲಿರುತ್ತವೆ), ಡಮರುಗ ಹಸ್ತ (ಶಿವನು ಡಮರುಗವನ್ನು ಹಿಡಿದಿರುವಲ್ಲಿ ಕಂಡುಬರುತ್ತದೆ) ಆಲಿಂಗನ ಹಸ್ತ (ಶಿವ, ಪಾರ್ವತಿ ಶಿಲ್ಪಗಳಲ್ಲಿ ಕಂಡುಬರುತ್ತದೆ) ಕಟ್ಯಾವಲಂಬಿತ ಮುದ್ರೆ (ಹಸ್ತವು ಸಂಟೋದಲ್ಲಿರುತ್ತದೆ) ಊರು ಹಸ್ತ ಮುದ್ರೆ (ಕಟಿ ಪ್ರದೇಶದ ಕೆಳಭಾಗದಲ್ಲಿ ಪ್ರಾಣಿಗಳು ಅಥವಾ ಆಯುಧಗಳ ಮೇಲಿರುತ್ತದೆ) ಧನುರ್ ಹಸ್ತ (ಧನಸ್ಸನ್ನು ಹಿಡಿದಿರುತ್ತದೆ), ಮುಷ್ಠಿ ಕರಮ್ (ಆಯುಧವನ್ನು ಹಿಡಿದಿರುವ ಸಂಬಂಧ), ನಾಟ್ಯಕರಮ್ (ನರ್ತನ ಶಿಲ್ಪಗಳಲ್ಲಿ ಕಂಡುಬರುತ್ತದೆ) ನಿದ್ರಾಹಸ್ತ (ದೇಹದ ಪೂರ್ತಿ ಭಾರವು ಒಂದು ಹಸ್ತದ ಮೇಲಿರುತ್ತದೆ ಮತ್ತು ಈ ಹಸ್ತವು ನೆಲದ ಮೇಲೆ ಅಥವಾ ಪೀಠದ ಮೇಲಿರುತ್ತದೆ.) ತರ್ಜನೀ ಮುದ್ರೆ(ನಿಯಮವನ್ನು ವಿಧಿಸುವಂತೆ ತೋರು ಬೆರಳನ್ನು ಮೇಲೆ ತೋರಿಸುವುದು) 'ಕರ್ತರಿಮುಖ ಮುದ್ರೆ ಮತ್ತು ಅರ್ಧಪತಾಕ ಮುದ್ರೆ' (ಈ ಎರಡು ಮುದ್ರೆ ದೇವತಾ ಶಿಲ್ಪಗಳಲ್ಲಿ ಶಂಖ, ಚಕ್ರ ಇನ್ನಿತರ ಆಯುಧಗಳನ್ನು ಹಿಡಿಯುವಾಗ ಕಂಡುಬರುತ್ತದೆ) ವಿಷ್ಣು ನಾರಾಯಣ ಮೊದಲಾದ ಅವತಾರ ದೇವತೆಗಳು ಈ ಮುದ್ರೆಯನ್ನು ಹೊಂದಿರುತ್ತಾರೆ.

ಧ್ಯಾನ ಮುದ್ರೆ (ಪದ್ಮಸಾನದಲ್ಲಿ ಕುಳಿತು ದೃಷ್ಟಿಯನ್ನು ನಾಸಿಕದ ಮೇಲೆ ಕೇಂದ್ರಿಕರಿಸಿ, ಬಲಹಸ್ತದ ಮೇಲೆ ಎಡಹಸ್ತವನ್ನಿಟ್ಟು, ಪದ್ಮಾಸನ ಸ್ಥಿತವಾಗಿರುವ ಪಾದಗಳ ಮೇಲೆ ಇರಿಸುವುದು), ವ್ಯಾಖ್ಯಾನ ಮುದ್ರೆ (ತೋರು ಬೆರಳು ಮತ್ತು ಹೆಬ್ಬೆರಳು ಒಂದಕ್ಕೊಂದು ಇತರ ಬೆರಳುಗಳು ತೆರೆದಿರುವುದು), ಜ್ಞಾನ ಮುದ್ರೆ (ತೋರುಬೆರಳಿನ ಮತ್ತು ಹೆಬ್ಬಟ್ಟಿನ ತುದಿಯು ಒಂದಕ್ಕೊಂದು ಸ್ಪರ್ಶಿಸಿ ಸಹೃದಯ ಹತ್ತಿರವೇ ಇರುವುದು), ಧರ್ಮ ಚಕ್ರಪ್ರವರ್ತನ ಮುದ್ರೆ (ಬುದ್ಧನ ಶಿಲ್ಪಗಳಲ್ಲಿ ಮಾತ್ರ ಕಂಡುಬರುತ್ತದೆ. ಇದರಲ್ಲಿ ವಾಮನ ಹಸ್ತವು (ಎಡ) ಜ್ಞಾನ ಮುದ್ರೆಯಲ್ಲಿಯೂ ದಕ್ಷಿಣ ಹಸ್ತ (ಬಲ) ವ್ಯಾಖ್ಯಾನ ಮುದ್ರೆಯಲ್ಲಿರುತ್ತದೆ.) ಭೂಸ್ಪರ್ಷ ಮುದ್ರೆ (ಹಸ್ತವು ಭೂಮಿಯನ್ನು ಸ್ಪರ್ಶಿಸಿರುತ್ತದೆ.) ಅಜಾನುಲಂಬಬಾಹು ಮುದ್ರೆ (ಜಿನ ಶಿಲ್ಪಗಳಲ್ಲಿ ಮಾತ್ರ ಕಂಡುಬರುತ್ತದೆ)

ಶಿಲ್ಪಗಳಲ್ಲಿ ಆಸನಗಳು

ಭಾರತೀಯ ಶಿಲ್ಪಶಾಸ್ತ್ರ ಗಂಥಗಳು ಶಿಲ್ಪಗಳನ್ನು ಮೂರು ಪ್ರಭೇದಗಳಾಗಿ ಗುರುತಿಸಿವೆ. ಸ್ಥಾನಿಕ (ನಿಂತಿರುವುದು), ಆಸೀನ (ಕುಳಿತಿರುವುದು) ಮತ್ತು ಶಯನ (ಮಲಗಿರುವುದು) ಆದರೆ

ಇವುಗಳ ಜೊತೆಗೆ ಯಾನಕ (ವಾಹನವೇರಿ ಹೋಗುತ್ತಿರುವ ಅಥವಾ ನಡೆಯುತ್ತಿರುವ ಪ್ರಭೇದವನ್ನು ಸೇರಿಸಬಹುದು.[೨೦]

ಸ್ಥಾನಿಕ ಭಂಗಿಯಲ್ಲಿ ವಿಷಕಂಠ, ನೃತ್ಯಮೂರ್ತಿ, ಚಂದ್ರಶೇಖರ, ವೀರಭದ್ರ, ಭೈರವ, ವಿಷ್ಣುವಿನ ಕೆಲವು ರೂಪದ ಶಿಲ್ಪಗಳು, ದೇವಿಶಿಲ್ಪಗಳು, ಭಕ್ತಶಿಲ್ಪಗಳು ಕಂಡುಬರುತ್ತವೆ. ಈ ಪ್ರಭೇದದಲ್ಲಿ ಸಮಭಂಗಿ, ದ್ವಿಭಂಗಿ ತ್ರಿಭಂಗಿ ಹಾಗೂ ನೃತ್ಯಭಂಗಿ ಎನ್ನುವ ಭಂಗಿಗಳಿವೆ.[೨೧] ಆಸೀನ ಭಂಗಿಯಲ್ಲಿ ದಕ್ಷಿಣಮೂರ್ತಿ, ಸೋಮಸ್ಕಂದ, ಸದಾಶಿವ ಮೈಲಾರಲಿಂಗ ಮೊದಲಾದ ಶಿವನ ಶಿಲ್ಪಗಳು, ಜೈನ ಪರಂಪರೆಯ ೨೪ ಜನ ತೀರ್ಥಂಕರರ ಶಿಲ್ಪಗಳು, ಗಣಪತಿ, ಗಜಲಕ್ಷ್ಮೀ, ಸರಸ್ವತಿ, ಸಪ್ತಮಾತೃಕೆಯರು ಮೊದಲಾದ ಶಿಲ್ಪಗಳು ಕಂಡುಬರುತ್ತವೆ. ಈ ಭಂಗಿಯಲ್ಲಿ ಯೋಗಾಸನ, ಅನಂತಾಸನ, ಸಿಂಹಾಸನ, ಭದ್ರಾಸನ, ವಿಮಲಾಸನ, ಪದ್ಮಾಸನ, ಆಲಿಡಾಸನ, ಪ್ರತ್ಯಾಲೀಡಾಸನ, ವೀರಾಸನ, ಸುಖಾಸನ, ಸವ್ಯಲಲಿತಾಸನ, ವಾಮಲಲಿತಾಸನ, ಪ್ರಲಂಭಾಸನ ಮೊದಲಾದ ಪ್ರಕಾರಗಳಿವೆ.[೨೨] ಶಯನ ಭಂಗಿಯಲ್ಲಿ ವಿಷ್ಣುವಿನ ಶಿಲ್ಪಗಳು (ಭೋಗಿ ಶಯನ, ಅನಂತಶಯನ) ಶಿಲ್ಪಗಳು ಕಾಣಿಸುತ್ತವೆ. ಜೈನ ಪರಂಪರೆಯ ತೀರ್ಥಂಕರ ಶಿಲ್ಪಗಳು ಸಾಮಾನ್ಯವಾಗಿ ಪರ್ಯಂಕಾಸನ, ಪಲ್ಯಂಕಾಸನ, ಪದ್ಮಾಸನ, ಕಾಯೋತ್ಸರ್ಗ, ವಿಸರ್ಗ, ಖಡ್ಗಾಸನ ಭಂಗಿಗಳಲ್ಲಿ ಗೋಚರಿಸುತ್ತವೆ. 'ಅಹಿರ್ಬುಧ್ಯಸಂಹಿತೆ' ಕರತಿಯ ಚಕ್ರದಾನ ಕೂರ್ಮಾಸನ, ಪದ್ಮಾಸನ, ಮಯೂರಾಸನ, ಅಲೀಢಾಸನಗಳನ್ನು ದಾಖಲಿಸಿದೆ.[೨೩] ಶಿಲ್ಪಗಳನ್ನು ಅಲಂಕರಿಸಿದರೆ ಅಸಾಧರಣವಾದ ಶಕ್ತಿ ಪ್ರಾಪ್ತಿಯಾಗುತ್ತದೆಂದು ಪ್ರಾಚೀನ ಕಾಲದಲ್ಲಿ ಜನರು ನಂಬಿದ್ದರು. ಇಂದಿಗೂ ಆ ನಂಬಿಕೆ ಮುಂದುವರೆದಿದೆ. ಶಿಲ್ಪಶಾಸ್ತ್ರಗಳು ಮೂರ್ತಿಶಿಲ್ಪಗಳು ಸರ್ವಾಂಗಗಳಿಂದ ವಸ್ತ್ರಾಭರಣಗಳಿಂದ ಭೂಷಿತವಾಗಿರಬೇಕೆಂದು ದಾಖಲಿಸಿವೆ.[೨೪] ಹಾಗಾಗಿಯೇ ದೇವತಾ ಶಿಲ್ಪಗಳಲ್ಲಿ ಕಿರೀಟ, ಜಟಾಮುಕುಟ, ಕರಂಡಮುಕುಟ ಜಟಾಬಂಧ, ಜಟಾಭರ, ಶಿಖಾಮಣಿ, ಕೇಶಬಂಧ(ಕುಂತಲ, ಶಿರಸ್ತ್ರಕ, ಧರ್ಮಿಲ), ಮಕರಕುಂಡಲ, ಪತ್ರಕುಂಡಲ, ರತ್ನ ಕುಂಡಲ, ರತ್ನಮಾಲೆ, ಮಗಿಸರ, ಕಂಠಹಾರ, ಶ್ರೀವತ್ಸವ, ಉದರಬಂದ, ಪಾದಜಾಲಕಗಳು, ಭುಜಂಗವಲಯ, ಊರದಾಮ, ಮಣಿಬಂಧ, ವೈಜ್ಯಯಂತಿ, ಪ್ರಭಾಮಂಡಲ, ಪತ್ರಪಟ್ಟ, ರತ್ನಪಟ್ಟ, ಕುಚಬಂಧ, ಮಂಡನ ದ್ರವ್ಯ, ಕೊರಳಸರಗಳು, ಬೆರಳುಂಗುರುಗಳು ಮೊದಲಾದ ಆಭರಣಗಳು ಗೋಚರಿಸುತ್ತವೆ. ಜೈನಪರಂಪರೆಯಲ್ಲಿ ತೀರ್ಥಂಕರರ ಶಿಲ್ಪಗಳು ನಿರಾಲಂಕೃತವಾಗಿರುತ್ತವೆ. ಆದರೆ ಯಕ್ಷ-ಯಕ್ಷಿಯರು, ಶ್ವೇತಾಂಬರ ಪಾದದ ಶಿಲ್ಪಗಳು ವಸ್ತ್ರಾಂಭರಗಳಿಂದ ಅಲಂಕೃತಗೊಂಡಿರುತ್ತವೆ.[೨೫]

ಶಿಲ್ಪಗಳಲ್ಲಿ ಆಯುಧಗಳು

ಆಗಮಗಳಲ್ಲಿ ಮನುಷ್ಯನ ದೇಹವನ್ನು ಮರಕ್ಕೆ ಹೋಲಿಕೆ ಮಾಡಲಾಗಿದೆ. ಮರದ ಕಾಂಡವು ಮನುಷ್ಯನ ಸೊಂಟದಿಂದ ಕೆಳಗಿನ ಭಾಗವನ್ನು ಸೂಚಿಸಿದರೆ, ರೆಂಬೆಗಳು ಆತನ

ಕೈಗಳನ್ನು ಪ್ರತಿಬಿಂಬಿಸುತ್ತವೆ. ಅಷ್ಟಭುಜ ತ್ರಿವಿಕ್ರಮ, ಶತಬಾಹು ಭೈರವ, ದ್ವಾದಶ ಬಾಹುದುರ್ಗ, ಸಹಸ್ರಬಾಹು ಕಾರ್ತವೀರ್ಯ ಮೊದಲಾದ ಶಿಲ್ಪಗಳನ್ನು ಗಮನಿಸಿದರೆ ಮಹಾವೃಕ್ಷದ ಕಲ್ಪನೆ ಬರುತ್ತದೆ.[೨೬] ಮೂರ್ತಿಶಿಲ್ಪಗಳಲ್ಲಿ ವಿಭಿನ್ನ ರೀತಿಯ ಆಯುಧಗಳು ಪ್ರಧಾನವಾಗಿವೆ. ಮುಖ್ಯವಾಗಿ ಸಾತ್ವಿಕ, ವೀರ, ಶಾಂತಶಿಲ್ಪಗಳಲ್ಲಿ ಎರಡು ಅಥವಾ ನಾಲ್ಕು ಕೈಗಳಿರುತ್ತದೆ. ರಾಜಸ, ತಾಮಸ ಶಿಲ್ಪಗಳಲ್ಲಿ ಆರು, ಎಂಟು ಕೈಗಳಿರುತ್ತವೆ. ಉಗ್ರ, ಸಂಹಾರ ತಾಮಸ ಶಿಲ್ಪಗಳು ಹತ್ತು, ಹನ್ನೆರಡು, ಹದಿನಾರು, ನೂರು ಕೈಗಳಿರುತ್ತವೆ. ಎಲ್ಲಾ ಶಿಲ್ಪಗಳಲ್ಲಿ ಶಂಖ, ಚಕ್ರ, ಗದ, ತ್ರಿಶೂಲ, ಡಮರು, ಶೂಲ, ಟಂಕ, ಪಾಶ, ಖಡ್ಗ, ಧನಸ್ಸು, ಬಾಣ, ಅಂಕುಶ, ಪರಶು, ನೇಗಿಲು, ಅಗ್ನಿ ಇನ್ನೂ ಮೊದಲಾದ ಆಯುಧಗಳು ಕಂಡುಬರುತ್ತವೆ.[೨೭]

ಸಾಮಾನ್ಯವಾಗಿ ಮೂರ್ತಿಶಿಲ್ಪಗಳಲ್ಲಿ ನಿರ್ದಿಷ್ಟವಾದ ಆಯುಧಗಳನ್ನು ಆಯಾ ದೇವ-ದೇವತೆಗಳೊಂದಿಗೆ ಸಮೀಕರಿಸಿರುವುದು ಕಂಡುಬರುತ್ತದೆ. ಪ್ರಮುಖವಾಗಿ ವಿಷ್ಣುವಿಗೆ ಶಂಖ, ಚಕ್ರ ಗದಾ, ಪದ್ಮ, ಶಿವನಿಗೆ ತ್ರಿಶೂಲ, ಡಮರು, ಅಗ್ನಿ, ಗಣಪತಿಗೆ ಪಾಶ, ಅಂಕುಶ, ಲಕ್ಷ್ಮೀಗೆ ಕಮಲ, ಪಾರ್ವತಿಗೆ ನಿಲೋತ್ಪರಿ, ಬಲರಾಮನಿಗೆ ನೇಗಿಲು, ಪರಶುರಾಮನಿಗೆ ಪರಶು, ರಾಮನಿಗೆ ಬಿಲ್ಲು-ಬಾಣ, ಕಾರ್ತಿಕೇಯನಿಗೆ ಶೂಲ, ಟಂಕ, ವಜ್ರ ಬ್ರಹ್ಮನಿಗೆ ಕಮಂಡಲ, ಸೌಟು, ಅಕ್ಷಮಾಲೆ, ಸರಸ್ವತಿಗೆ ವೀಣೆ, ಅಕ್ಷಮಾಲೆ, ಪುಸ್ತಕ, ವೀರಭದ್ರನಿಗೆ ಖಡ್ಗ, ಖೇಟಕ ಹೀಗೆ ಪ್ರಾಚೀನ ಭಾರತದ ಶಿಲ್ಪಶಾಸ್ತ್ರ ಗ್ರಂಥಗಳು ಪ್ರತಿಯೊಂದು ದೇವ-ದೇವತೆಗೂ ನಿರ್ದಿಷ್ಟವಾದ ಆಯುಧಗಳನ್ನು ನಿರ್ದೇಶಿಸಿರುವುದು ತಿಳಿದುಬರುತ್ತದೆ.[೨೮] ದೇವಾಲಯಗಳಲ್ಲಿ ಆಯುಧಗಳಿಗೆ ಪ್ರತ್ಯೇಕವಾದ ಮೂರ್ತಿರೂಪವನ್ನು ಕೊಟ್ಟು ಸ್ವತಂತ್ರವಾಗಿ ಪೂಜಿಸುವುದು ಗೋಚರಿಸುತ್ತದೆ, ಇವುಗಳಿಗೆ ಆಯುಧ ಪುರುಷರೆಂದು ಕರೆಯುತ್ತದೆ. ವೈಷ್ಣವ ದೇವಾಲಯಗಳಲ್ಲಿ ಚಕ್ರವನ್ನು, ಶೈವ ದೇವಲಯಗಳಲ್ಲಿ ತ್ರಿಶೂಲವನ್ನು ಕಾರ್ತಿಕೇಯನ ದೇವಾಲಯಗಳಲ್ಲಿ ಶಕ್ತಿ-ಆಯುಧ ಪುರುಷರಾಗಿ ದೇವಾಲಯದ ಪೂಜಾ ವಿಧಿಗಳಲ್ಲಿ ಭಾಗಿಯಾಗಿರುತ್ತವೆ.[೩೧]

ವೈಷ್ಣವಾಗಮಗಳು ಮತ್ತು ಶೈವಾಗಮಗಳು ಆಯುಧಗಳಿಗೆ ಆಧ್ಯಾತ್ಮಿಕ ಅರ್ಥವನ್ನು ನೀಡಿರುವುದು ಕಾಣುತ್ತೇವೆ.[೩೨] ಶಂಖವು ಭೂತಾದ್ಯ ಹಂಕಾರಾತ್ಮಕವೆಂದೂ ಚಕ್ರವು ಮನಸ್ಸೆಂದೂ, ಗದೆಯೂ ಬಲದರೂಪವೆಂದೂ, ತ್ರಿಶೂಲವು ಸತ್ವ, ರಜ, ತಮೋ ಗುಣಗಳನ್ನು, ಪರಶು ದೈವೀಕಶಕ್ತಿಯನ್ನು, ಖಡ್ಗವು ಶೌರ್ಯವನ್ನು, ಅಗ್ನಿಯು ಸಂಹಾರ ಶಕ್ತಿಯನ್ನು, ಪಾಶವು ತ್ರಿಗುಣಾತ್ಮಕವಾದ ಬಂಧ, ವಜ್ರ ಬುದ್ಧಿಯನ್ನು, ಘಂಟೆಯು ಸೃಷ್ಟಿಯನ್ನು ಸೂಚಿಸುತ್ತವೆ.[೩೩]

ವಾಹನಗಳು(ಲಾಂಛನಗಳು)

ಪ್ರಾಚೀನ ಕಾಲದಿಂದಲೂ ಬಹುತೇಕ ಪ್ರಮುಖ ದೇವ-ದೇವತೆಗಳಿಗೆ ವಾಹನಗಳನ್ನು ಕಲ್ಪಿಸಿರುವುದು ಶಿಲ್ಪಗಳಲ್ಲಿ ಕಂಡುಬರುತ್ತದೆ. ವಿಷ್ಣವಿಗೆ ಗರುಡ, ಶಿವನಿಗೆ ನಂದಿ, ಬ್ರಹ್ಮನಿಗೆ ಹಂಸ,

ಗಣಪತಿಗೆ ಇಲಿ, ಕಾರ್ತಿಕೆಯನಿಗೆ ನವಿಲು, ಇಂದ್ರನಿಗೆ ಆನೆ, ಕುಬೇರನಿಗೆ ಕುದುರೆ, ಯಮನಿಗೆ ಕೋಣ, ಅಗ್ನಿಗೆ ಟಗರು, ನಿರುತಿಗೆ ನರ, ವರುಣನಿಗೆ ಮಕರ, ವಾಯುವಿಗೆ ಆಡು, ಈಶಾನ್ಯನಿಗೆ ನಂದಿ, ದತ್ತಾತ್ರೆಯನಿಗೆ ನಾಯಿ, ಮಹಿಷಾಸುರ ಮರ್ದಿನಿಗೆ ಸಿಂಹ, ಲಕ್ಷ್ಮೀಗೆ ಪದ್ಮ, ಬ್ರಾಹ್ಮಿಗೆ ಹಂಸ, ಕೌಮರಿಗೆ ಮಯೂರ, ವರಾಹಿಗೆ ಮಹಿಷ, ಇಂದ್ರಾಣಿಗೆ ಗಜ, ಮಾಹೇಶ್ವರಿಗೆ ನಂದಿ, ಚಾಮುಂಡಿಗೆ ನರಿ ಹೀಗೆ ಮೊದಲಾದ ವಾಹನಗಳಿರುತ್ತವೆ. ಹಾಗೆಯೇ ವಿಷ್ಣುವಿಗೆ ಶ್ರೀವತ್ಸ, ಶಿವನಿಗೆ ಜಟಾಮಂಡಲ ಮತ್ತು ಚಂದ್ರ ಮತ್ತು ಜೈನ ಧರ್ಮದ ೨೪ ಜನ ತೀರ್ಥಂಕರರಿಗೆ ಬೇರೆ ಬೆರೆ ಲಾಂಛನಗಳಿರುತ್ತವೆ. ಈ ವಾಹನಗಳು ಅಥವಾ ಲಾಂಛನಗಳು ಆಯಾ ದೇವ-ದೇವತೆಯರು ಮತ್ತು ತೀರ್ಥಂಕರರನ್ನು ಗುರುತಿಸಲು ಅನುಕೂಲಕರವಾಗಿವೆ.[೩೪] ಹೀಗೆ ಭಾರತದ ಮೂರ್ತಿಶಿಲ್ಪಗಳು ನಿರ್ದಿಷ್ಟವಾದ ಲಕ್ಷಣಗಳನ್ನು ಹೊಂದಿದ್ದು ಪ್ರತಿಯೊಂದು ದೇವ-ದೇವತೆಗಳಿಗೆ ಪ್ರತ್ಯೇಕವಾದ ಆಸನ, ಆಭರಣ, ಆಯುಧ ವಾಹನಗಳಿರುತ್ತವೆ. ಹಾಗೆಯೇ ಆಯಾ ಕಾಲಘಟ್ಟದ ಧಾರ್ಮಿಕ ವಿಧಿ-ವಿಧಾನಗಳನ್ನು ಮೈಗೂಡಿಸಿಕೊಂಡು ಬೆಳವಣಿಗೆ ಹೊಂದಿವೆ. ಪ್ರಸ್ತುತ ಚನ್ನಗಿರಿ ತಾಲ್ಲೂಕಿನ ಪರಿಸರದಲ್ಲಿ ಶೈವ, ವೈಷ್ಣವ, ಶಾಕ್ತಕ, ಜೈನ ಪಂಥಗಳ ಶಿಲ್ಪಗಳು ಕಂಡುಬಂದಿದ್ದು ಅವುಗಳ ಪ್ರತಿಮಾ ಲಕ್ಷಣಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೫.೧. ಶೈವ ಶಿಲ್ಪಗಳು

ಶೈವಧರ್ಮದಲ್ಲಿ ಶಿವ ಮತ್ತು ಅವನ ಪರಿವಾರ ದೇವತೆಗಳನ್ನು ಆರಾಧನೆ ಮಾಡುತ್ತಾರೆ. ಶಿವನ ವಿವಿಧ ರೂಪಗಳಾದ ಭೈರವ, ವೀರಭದ್ರನ ಆರಾಧನೆಯೊಂದಿಗೆ, ಪರಿವಾರ ದೇವತೆಗಳಾದ ಗಣಪತಿ, ಸ್ಕಂದ ಮತ್ತು ವೀರಶೈವ ಅನುಯಾಯಿಗಳಾದ ಗುಂಡಬ್ರಹ್ಮಯ್ಯರನ್ನು ಸಹ ಪೂಜಿಸುತ್ತಾರೆ. ಶಿವನ ಮೂಲ ಸಿಂಧೂಬಯಲಿನ ನಾಗರೀಕತೆಯ 'ಪಶುಪತಿಯೇ' ಶಿವನ ಪ್ರಾಚೀನ ರೂಪವೆಂದು ಸರ್ ಜಾನ್‌ಮಾರ್ಶಲ್ ಅವರ ಅಭಿಪ್ರಾಯವಾಗಿದೆ.[೩೫] ಋಗ್ವೇದ ಕಾಲದಲ್ಲಿ ಶಿವನನ್ನು ರುದ್ರನೆಂದು ನಂತರ ವೇದಗಳ ಕಾಲದಲ್ಲಿ ಶಿವನ ಪರಿಕಲ್ಪನೆ ಅಸ್ತಿತ್ವಕ್ಕೆ ಬರಲಾರಂಭಿಸಿತು.[೩೬]

ದಕ್ಷಿಣಭಾರತದಲ್ಲಿ ಸಂಘಂಯುಗದಲ್ಲಿ 'ಶೈವನಾಯಕರು' ಎಂಬ ಶೈವ ಪಂಥ ಅಸ್ತಿತ್ವದಲ್ಲಿತ್ತು,[೩೭] ರಾಜಮನೆತನಗಳ ಆಶ್ರಯ ಮತ್ತು ಪ್ರೋತ್ಸಾಹದಿಂದ ಶೈವಪಂಥದ ಮೂಲಕ ಶಿಲ್ಪಗಳು ಬೆಳೆದುಬಂದವು. ಶೈವ ಧರ್ಮದಲ್ಲಿ ಶಿವನನ್ನು ಲಿಂಗರೂಪದಲ್ಲಿ, ಮೂರ್ತಿರೂಪದಲ್ಲಿ ಆರಾಧಿಸುತ್ತಾರೆ. ಲಕುಲೀಶ, ಪಾಶುಪತ, ಕಾಳಾಮುಖರೆಂಬ ಶೈವ ಪಂಥಗಳು ಅಸ್ತಿತ್ವಕ್ಕೆ ಬಂದವು.[೩೮] ಶೈವ ಧರ್ಮದಲ್ಲಿ ಶಿವನನ್ನು ಲಿಂಗರೂಪದಲ್ಲಿ ಆರಾಧಿಸುತ್ತಾರೆ.[೩೯] ಶಿವನ ಲೀಲೆಗಳ ಆಧಾರದ ಮೇಲೆ ಶಿವನ ಶಿಲ್ಪಗಳನ್ನು ಕೆತ್ತುತ್ತಾರೆ. ಅಮರಸಿಂಹನ ಅಮರಕೋಶದಲ್ಲಿ ನಲವತ್ತೆಂಟು ಅವತಾರಗಳನ್ನು ಉಲ್ಲೇಖಿಸಿದೆ. ಆಗಮಗಳು ಇಪ್ಪತ್ತನಾಲ್ಕು ಲೀಲೆಗಳನ್ನು

ಹೆಸರಿಸಿವೆ.[೪೦] ಪ್ರಸ್ತುತ ಚನ್ನಗಿರಿ ತಾಲ್ಲೂಕಿನಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದ ಶಿವಲಿಂಗಗಳು, ನಂದಿಗಳು, ವೀರಭದ್ರ, ಭೈರವ, ಗಣಪತಿ, ಸುಬ್ರಹ್ಮಣ್ಯ ಶಿಲ್ಪಗಳನ್ನು ಅಧ್ಯಯನ ಮಾಡಿ ದಾಖಲಿಸಲಾಗಿದೆ.

ಶಿವಲಿಂಗಗಳು

ಶಿವನನ್ನು ಶೈವರು ಲಿಂಗರೂಪದಲ್ಲಿ ಆರಾಧಿಸುವ ಪದ್ಧತಿ ಪುರಾತನ ಕಾಲದಿಂದಲೂ ಕಾಣಬಹುದಾಗಿದೆ. ಲಿಂಗವನ್ನು ಸ್ಥಾವರಲಿಂಗ ಮತ್ತು ಜಂಗಮಲಿಂಗ ಎಂದು ವರ್ಗೀಕರಿಸುತ್ತಾರೆ. 'ಸ್ಥಾವರ' ಎಂದರೆ ದೊಡ್ಡಲಿಂಗಗಳು ಇವುಗಳನ್ನು ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿರುತ್ತಾರೆ. ಜಂಗಮವೆಂದರೆ ಚಿಕ್ಕಲಿಂಗಗಳು ಅಂದರೆ ಸಣ್ಣಕಲ್ಲಿನ ಆಕಾರದ ಲಿಂಗಗಳೇ ಜಂಗಮಗಳಾಗಿವೆ.[೪೧]

ಶಿವಲಿಂಗವು ಚಲ ಮತ್ತು ಅಚಲಲಿಂಗವೆಂದು ಎರಡು ಭಾಗಗಳಾಗಿ ವರ್ಗೀಕರಿಸಿದ್ದಾರೆ. ಅಚಲಾಲಿಂಗದಲ್ಲಿ ಒಂಭತ್ತು ನಮೂನೆಯ ಲಿಂಗಗಳಿವೆ. ಸ್ವಯಾಂಭವ, ಪುರವ, ದೈವತ, ಗಾಣಪತ್ಯ ಅಸುರ, ಸುರ, ರಾಕ್ಷಸ ಮಾನಸಾ ಬಾಣಲಿಂಗಗಳಿವೆ. ಪೀಠವನ್ನು ಬ್ರಹ್ಮನೆಂದು, ಫಾಣಿವಟ್ಟಲು ಜಲಹಾರಿ ವಿಷ್ಣುವೆಂದು, ಕೊಳವೆಯಾಕಾರವನ್ನು ರುದ್ರಭಾಗವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಶಿವಲಿಂಗವು ಪೀಠ, ಪಾಣಿವಟ್ಟಲು, ಜಲಾಹರಿ, ರುದ್ರಭಾಗ, ಬ್ರಹ್ಮಸೂತ್ರವನ್ನು ಒಳಗೊಂಡಿರುತ್ತದೆ.[೪೨]

ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೊಟ್ಟೆಯಾಕಾರದ (ಅಂಡಾಕಾರ), ಅರ್ಧಚಂದ್ರ, ವೃತ್ತಾಕಾರದ ಮತ್ತು ಬಾಣಾಕಾರದ ಶಿವಲಿಂಗಗಳು ಕಂಡುಬಂದಿವೆ. ಪೀಠವು ವೃತ್ತಾಕಾರ, ಚೌಕಾಕಾರ, ಆಯಾತಾಕಾರಗಳನ್ನು ಒಳಗೊಂಡಿವೆ. ಪ್ರಾಚೀನ ಕಾಲದ ಆರಂಭಿಕ ಶಿವಲಿಂಗಗಳು ನೆಲದ ಮೇಲ್ಭಾಗದಲ್ಲಿ ರುದ್ರಭಾಗ ಮಾತ್ರ ಹೊಂದಿರುವಂತೆ ಶಿವಲಿಂಗಗಳಿವೆ. ಪೀಠವಾಗಲಿ, ಪಾಣಿವಟ್ಟಾಗಾಗಲಿ ಇವುಗಳಿಗೆ ಇರುವುದಿಲ್ಲ. ಇಂತಹ ಲಿಂಗಗಳು ಪ್ರಾಚೀನ ಕಾಲದ ಶಿವಲಿಂಗಗಳಾಗಿದ್ದು, ಲಿಂಗಗಳ ಬೆಳವಣಿಗೆಯ ಹಂತದ್ದಾಗಿವೆ. ತ್ಯಾವಣಿಗೆ ಈಶ್ವರ, ಸಿದ್ಧರಮಠದ ರಾಮೇಶ್ವರ, ಮಾವಿನ ಹೊಳೆಯ ಮಲ್ಲಿಕಾರ್ಜುನ, ಚನ್ನಗಿರಿಯ ಕಲ್ಲುಮಠದ ಶಿವಲಿಂಗಗಳನ್ನು ಇಲ್ಲಿ ಉದಾಹರಿಸಬಹುದು. ಇವುಗಳನ್ನು ಕಪ್ಪುಕಲ್ಲು ಬಳಸಿ ರಚನೆ ಮಾಡಲಾಗಿದೆ. ಆರಂಭಿಕ ಶಿವಲಿಂಗಗಳಲ್ಲಿ ಅತ್ಯಂತ ದೊಡ್ಡಶಿವಲಿಂಗ ಸಿದ್ಧರಮಠದ ಶಿವಲಿಂಗವಾಗಿದೆ. ಈ ಎಲ್ಲಾ ಶಿವಲಿಂಗಗಳು ಪೂರ್ವ ಕಲ್ಯಾಣದ ಚಾಲುಕ್ಯರ ಮತ್ತು ಕಲ್ಯಾಣದ ಚಾಲುಕ್ಯರ ಕಾಲಮಾನಕ್ಕೆ ಸೇರಿವೆ.

ಹೊಯ್ಸಳರ ಕಾಲದಲ್ಲಿ ಶಿವಲಿಂಗಗಳ ವಾಸ್ತು ಬೆಳವಣಿಗೆಯು ಮಾರ್ಪಾಡು ಕಂಡಿತು. ಪೀಠ, ಪಾಣಿವಟ್ಟಿಲು, ಜಲಾಹರಿ, ರುದ್ರಭಾಗ, ಬ್ರಹ್ಮಸೂತ್ರಗಳನ್ನು ಒಳಗೊಂಡಿದೆ. ಬಳಪದಕಲ್ಲು, ಕಪ್ಪುಕಲ್ಲನ್ನು ಬಳಿ ಶಿವಲಿಂಗಗಳನ್ನು ರಚನೆ ಮಾಡಿದ್ದಾರೆ. ತ್ಯಾವಣಿಗೆ ಈಶ್ವರ, ನಲ್ಕುದರೆಯ

ಬ್ರಹ್ಮೇಶ್ವರ, ಕಲ್ಲೇಶ್ವರ, ಹಿರೇಕೋಗಿಲೂರಿನ ಈಶ್ವರ, ಕಲ್ಕೆರೆ ಬೆಳೇಶ್ವರ, ತಾವರೆಕೆರೆ ಈಶ್ವರ, ಚನ್ನಗಿರಿಯ ಕಲ್ಲೇಶ್ವರ, ಸೂಳೆಕೆರೆಯ ಸಿದ್ದೇಶ್ವರ, ಉಪನಾಯಕನಹಳ್ಳಿಯ ಈಶ್ವರ, ಕಾರಿಗನೂರು ಈಶ್ವರ, ತಣಿಗೆರೆಯ ಈಶ್ವರ, ಬಸವಪಟ್ಟಣದ ವಿರೂಪಾಕ್ಷೇಶ್ವರ ಶಿವಲಿಂಗಗಳನ್ನು ಉದಾಹರಿಸಬಹುದಾಗಿದೆ. ತಣಿಗೆರೆಯ ಈಶ್ವರ ದೇವಾಲಯದಲ್ಲಿನ ಶಿವಲಿಂಗವು ಸುಂದರವಾದ ವೃತ್ತಕಾರದ ಶಿವಲಿಂಗವಾಗಿದೆ. ತ್ಯಾವಣಿಗೆ ಈಶ್ವರ ದೇವಾಲಯದ ಶಿವಲಿಂಗ ದೊಡ್ಡದಾದ ಶಿವಲಿಂಗವಾಗಿದೆ. ಕೆಲವು ಶಿವಲಿಂಗಗಳ ವಿವರಣೆಯನ್ನು ಇಲ್ಲಿ ಸೆರೆಹಿಡಿಯಲಾಗಿದೆ.

ಶಿಲ್ಪ : ಶಿವಲಿಂಗ
ಗ್ರಾಮ : ತ್ಯಾವಣಿಗಿ
ಸ್ಥಳ : ಬೆಟ್ಟದ ಮಲ್ಲೇಶ್ವರ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಬಳಪದ ಕಲ್ಲು
ಪ್ರಕಟಣೆ : ಅಪ್ರಕಟಿತ

ಗರ್ಭಗೃಹದಲ್ಲಿರುವ ಶಿವಲಿಂಗವು ೧/೨ ಅಡಿ ಎತ್ತರವಿದ್ದು, ಅಭಿಮುಖವಾಗಿದೆ. ರುದ್ರ ಭಾಗವನ್ನು ಹೊಂದಿದೆ.

ಶಿಲ್ಪ : ಶಿವಲಿಂಗ
ಗ್ರಾಮ : ಸಿದ್ಧರಮಠ
ಸ್ಥಳ : ರಾಮೇಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಕಪ್ಪು ಕಲ್ಲು
ಪ್ರಕಟಣೆ : ಅಪ್ರಕಟಿತ

ಪಶ್ಚಿಮಾಭಿಮುಖವಾಗಿರುವ ಅಂಡಾಕಾರದ ಶಿವಲಿಂಗವು ಯೋಗಿಯಾಕಾರದ ರುದ್ರಭಾಗವನ್ನು ಒಳಗೊಂಡಿದೆ.

ಶಿಲ್ಪ : ಶಿವಲಿಂಗ
ಗ್ರಾಮ : ಹಿರೇಕೋಗಿಲೂರು
ಸ್ಥಳ : ಈಶ್ವರ ದೇವಾಲಯದ ಗರ್ಭಗೃಹದಲ್ಲಿದೆ.
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಕಪ್ಪು ಕಲ್ಲು
ಪ್ರಕಟಣೆ : ಅಪ್ರಕಟಿತ

ಉತ್ತರದ ಗರ್ಭಗೃಹದಲ್ಲಿರುವ ಶಿವಲಿಂಗವು ದಕ್ಷಿಣಕ್ಕೆ ಅಭಿಮುಖವಾಗಿದ್ದು, ನಾಲ್ಕು ಅಡಿ ಎತ್ತರ, ಮೂರು ಅಡಿ ಅಗಲವಿದೆ. ಪಾಣಿಪೀಠದ ಮೇಲಿರುವ ಶಿವಲಿಂಗವು ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗ ಮತ್ತು ಪಾಣಿವಟ್ಟಲು ಅಭಿಷೇಕ ಮಾಡಿದ ನೀರು ಹೊರಬರಲು ಜಲಹರಿ ಇದೆ.

ಶಿಲ್ಪ : ಶಿವಲಿಂಗ
ಗ್ರಾಮ : ಸೂಳೆಕೆರೆ
ಸ್ಥಳ : ಸಿದ್ಧೇಶ್ವರ ದೇವಾಲಯದ ಗರ್ಭಗುಡಿ
ಕಾಲ : ಕ್ರಿ.ಶ. ೧೫ನೇ ಶತಮಾನ
ವಸ್ತು : ಕಣಶಿಲೆ
ಪ್ರಕಟಣೆ : ಎಂ.ಎ.ಆರ್., ೧೯೩೭, ಪು.೬೦

ಗರ್ಭಗೃಹದಲ್ಲಿರುವ ಶಿವಲಿಂಗವು ದಕ್ಷಿಣಕ್ಕೆ ಅಭಿಮುಖವಾಗಿದೆ. ವಿಷ್ಣುಭಾಗ, ಬ್ರಹ್ಮಭಾಗ, ರುದ್ರಭಾಗ ಮತ್ತು ಪಾಣಿವಟ್ಟಲು ಹಾಗೂ ಜಲಹಾರಿಗಳಿವೆ.

ನಂದಿಶಿಲ್ಪಗಳು

'ವೃಷಭ' ಅಥವಾ 'ನಂದಿ' ಶಿವನ ವಾಹನವಾಗಿದೆ. ನಂದಿಶಿಲ್ಪಗಳು ಗರ್ಭಗೃಹದಲ್ಲಿರುವ ಶಿವಲಿಂಗ, ವೀರಭದ್ರ, ಭೈರವನಿಗೆ ಅಭಿಮುಖವಾಗಿ ಅಂತರಾಳ ಅಥವಾ ನವರಂಗದಲ್ಲಿ ಪ್ರತಿಷ್ಠಾಪಿಸಲಾಗಿದೆ. ಕೆಲವು ಪ್ರತ್ಯೇಕವಾಗಿ ದೇವಾಲಯದ ಹೊರಭಾಗದಲ್ಲಿ ನಂದಿಮಂಟಪ ಪ್ರತಿಷ್ಠಾಪಿಸಲಾಗಿದೆ. ನಂದಿಶಿಲ್ಪಗಳನ್ನು ನಿರ್ಮಾಣ ಮಾಡಲು ಬಳಪದಕಲ್ಲು ಮತ್ತು ಕಪ್ಪುಶಿಲೆಯನ್ನು ಬಳಸಲಾಗಿದೆ. ನಂದಿಶಿಲ್ಪಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು.[೬೩]

೧. ಅಲಂಕಾರರಹಿತ ನಂದಿಶಿಲ್ಪಗಳು
೨. ಅಲಂಕಾರಸಹಿತ ನಂದಿಶಿಲ್ಪಗಳು

ಅಲಂಕಾರರಹಿತ ನಂದಿಶಿಲ್ಪಗಳು

ಇವು ಸಾಧಾರಣವಾಗಿ ತಲೆಯನ್ನು ತಗ್ಗಿಸಿ ಲಿಂಗಕ್ಕೆ ಎದುರಾಗಿ ಮುಂದಿನ ಬಲಗಾಲನ್ನು ಮಡಚಿ, ಎಡಗಾಲನ್ನು ಮುಂದೆ ಚಾಚಿಕೊಂಡು, ಒಂದೇ ಕಡೆ ಬಾಗಿ ಮಲಗಿರುತ್ತದೆ. ಪ್ರಾಚೀನಕಾಲದ ನಂದಿಗಳ ಭುಜವು ಅಷ್ಟೇನು ಎತ್ತರವಾಗಿರುವುದಿಲ್ಲ. ಕೊರಳಲ್ಲಿ ಸಾಧಾರಣ ಗಂಟೆ ಸರವಿದ್ದು, ಬಾಲವು ಬಾಗಿರುತ್ತದೆ. ಈ ರೀತಿಯ ನಂದಿಶಿಲ್ಪಗಳನ್ನು ಅಲಂಕಾರರಹಿತ ನಂದಿಶಿಲ್ಪಗಳೆನ್ನುವರು. ಇಂತಹ ನಂದಿಶಿಲ್ಪಗಳು ಸೂಳೆಕೆರೆ, ತಾವರೆಕೆರೆ, ನಲ್ಲುದರೆ, ಕಲ್ಕೆರೆ, ಸಿದ್ಧರಮಠ, ಮೆದಕೆರೆ, ತ್ಯಾವಣಿಗೆ, ಹಿರೇಮಲಹಾಳ್, ಚನ್ನಗಿರಿ, ಹಿರೇಮಾಡಳ್, ಮುದಿಗೆರೆ, ಮರವಂಜಿ, ಮಸಣಿಕೆರೆ, ಅಸ್ತಾಪನಹಳ್ಳಿ ಹಿರೇಮಳಲಿಯಲ್ಲಿ ಕಾಣಬಹುದು.

ಅಲಂಕಾರಸಹಿತ ನಂದಿಶಿಲ್ಪಗಳು

ಕೊರಳಲ್ಲಿ ಗಂಟೆಸರ, ಗಗ್ಗರ, ಕೊರಳಸರ, ಹಣೆಪಟ್ಟಿ, ಕಾಲ್ಕಡಗ, ದೇಹವನ್ನು ಅಲಂಕಾರ ಬಟ್ಟೆಯಿಂದ ಮುಚ್ಚಿ ಅಲಂಕಾರ ಮಾಡಿರುತ್ತಾರೆ. ಡುಬ್ಬದ ಗೂಳಿ ಎತ್ತರವಾಗಿದ್ದು, ಬಾಲವನ್ನು ಮೇಲಕ್ಕೆ ಎತ್ತಿಕೊಂಡಿರುತ್ತದೆ. ಇವು ಅಲಂಕಾರಸಹಿತ ನಂದಿಶಿಲ್ಪಗಳು. ಕಲ್ಕೆರೆ, ಹಿರೇಕೋಗಲೂರು, ನಲ್ಕುದರೆ, ಮಾವಿನಹೊಳೆ, ನೀತಿಗೆರೆ, ಸೂಳೆಕೆರೆ ಮುಂತಾದ ಕಡೆಯಲ್ಲಿ ಈ ರೀತಿಯ ಶಿಲ್ಪಗಳು ಕಂಡಬಂದಿವೆ. ಕೆಲವು ನಂದಿಮೂರ್ತಿಶಿಲ್ಪಗಳ ವಿವರಣೆ ಈ ಕೆಳಗೆ ನೀಡಲಾಗಿದೆ.

ಶಿಲ್ಪ : ನಂದಿ
ಗ್ರಾಮ : ನಲ್ಕುದರೆ
ಸ್ಥಳ : ಬ್ರಹ್ಮೇಶ್ವರ ದೇವಾಲಯದ ನಂದಿಮಂಟಪದಲ್ಲಿದೆ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಬಳಪದ ಕಲ್ಲು
ಪ್ರಕಟಣೆ : ಅಪ್ರಕಟಿತ

ಚೌಕಾಕಾರದ ಪೀಠದ ಮೇಲಿರುವ ನಂದಿಶಿಲ್ಪವು ಎಡಗಾಲನ್ನು ಮುಂದೆ ಮಡಚಿದೆ. ಬಲಗಾಲನ್ನು ಒಳಕ್ಕೆ ಎಳೆದುಕೊಂಡಿದೆ, ಭುಜವು ಸಾಧಾರಣವಾಗಿದೆ. ಕೊರಳಲ್ಲಿ ಘಂಟಾಸರ, ಗಗ್ಗರಿ ಆಭರಣಗಳನ್ನು ಧರಿಸಿದೆ.

ಶಿಲ್ಪ : ನಂದಿ
ಗ್ರಾಮ : ಹಿರೇಮಳಲಿ
ಸ್ಥಳ : ಈಶ್ವರ ದೇವಾಲಯದ ನವರಂಗದಲ್ಲಿದೆ
ಕಾಲ : ಕ್ರಿ.ಶ. ೧೨ನೇ ಶತಮಾನ
ವಸ್ತು : ಬಳಪದ ಕಲ್ಲು

ಶಿವಲಿಂಗಕ್ಕೆ ಅಭಿಮುಖವಾಗಿರುವ ನಂದಿಯು ೧ ೧/೨ ಅಡಿ ಎತ್ತರ, ೧ ಅಡಿ ಅಗಲವಿದೆ. ಮುಂಭಾಗ ಎಡಗಾಲನ್ನು ಮುಂದಕ್ಕೆ ಚಾಚಿ, ಹಿಂಭಾಗದ ಎಡಗಾಲನ್ನು ಒಳಗಡೆ ಮಡಚಿದೆ. ಕೊರಳಸರ, ಗಗ್ಗರಿ, ಘಂಟೆಸರವನ್ನು ಧರಿಸಿದ್ದು, ಆಭರಣಗಳಿಂದ ಅಲಂಕಾರಗೊಂಡಿದೆ.

ಶಿಲ್ಪ : ನಂದಿ
ಗ್ರಾಮ : ಮಾವಿನಹೊಳೆ
ಸ್ಥಳ : ಮಲ್ಲಿಕಾರ್ಜುನ ದೇವಾಲಯದ ನಂದಿಮಂಟಪದಲ್ಲಿದೆ
ಕಾಲ : ಕ್ರಿ.ಶ. ೧೫ನೇ ಶತಮಾನ
ವಸ್ತು : ಕಪ್ಪು ಕಲ್ಲು

ಶಿವಲಿಂಗಕ್ಕೆ ಅಭಿಮುಖವಾಗಿರುವ ನಂದಿಯು ಸುಮಾರು ಮೂರು ಅಡಿ ಎತ್ತರ, ಎರಡು ಅಡಿ ಅಗಲವಿದೆ. ಮುಂದಿನ ಎಡಗಾಲನ್ನು ಮುಂದಕ್ಕೂ, ಬಲಗಾಲನ್ನು ಒಳಗಡೆ ಮಡಚಿದೆ. ಭುಜವು ಉಬ್ಬಿಕೊಂಡಿದ್ದು, ಘಂಟೆಸರ, ಗಗ್ಗರಿ, ಗೆಜ್ಜೆಸರ, ಕಾಲಗೆಜ್ಜೆಸರ, ಹಣೆಪಟ್ಟಿಯಂತಹ ಆಭರಣಗಳನ್ನು ಧರಿಸಿದೆ.

ಭೈರವನ ಶಿಲ್ಪ

ಶಿವನ ಒಂದು ರೂಪ ಭೈರವನಾಗಿದ್ದಾನೆ. ಭೈರವ ಎಂದರೆ ಭಯಾನಕ ಎನ್ನುವ ಪದದ ಅರ್ಥವಾಗಿದೆ. ಭೈರವನ ಅನೇಕ ರೂಪಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ ತ್ರಿಪುರಾಂತಕ ಭೈರವ, ಬೇತಾಲಭೈರವ, ಅಗ್ನಿಭೈರವ, ಕಾಲಭೈರವ, ಕರಾಳ ಭೈರವ, ಭೀಮರೂಪಭೈರವ, ಪಾತಾಳಭೈರವ ಮುಂತಾದ ಪ್ರಕಾರಗಳಿವೆ. ಗುಣಗಳ ಆಧಾರದ ಮೇಲೆ ಭೈರವನನ್ನು ಸಾತ್ವಿಕ, ರಾಜಸಿಕ, ತಾಮಸಿಕ ರೂಪಗಳನ್ನಾಗಿ ವಿಂಗಡಿಸಿದ್ದಾರೆ.[೪೪]

* ಸಾತ್ವಿಕ ರೂಪದ ಭೈರವ: ಭೈರವನು ಬೆತ್ತಲೆಯಾಗಿದ್ದು, ದ್ವಿಭುಜಧಾರಿಯಾದ ಇವನು ಸದಾ ನಗುಮುಖದಿಂದ ಇರುವನು.
* ರಾಜಸಿಕ ರೂಪದ ಭೈರವ: ಚತುರ್ಭುಜಧಾರಿಯಾಗಿ ಖಡ್ಗ, ತ್ರಿಶೂಲ, ಢಮರು ಹಾಗೂ ಪಾನಪಾತ್ರೆಯನ್ನು ಹಿಡಿದಿರುತ್ತಾನೆ.
* ತಾಮಸಿಕ ರೂಪ ಭೈರವ: ಎಂಟು ಕೈಗಳಿದ್ದು ಕೊಡಲಿ, ಡಮರು, ಕತ್ತಿ, ಖೇಟ, ಬಾಣ, ಶೂಲ, ಕಪಾಲಗಳನ್ನು ಹಿಡಿದಿರುತ್ತಾನೆ.

ಶಿಲ್ಪ	:	ಭೈರವ
ಗ್ರಾಮ	:	ಅಲಕನಾಳು
ಸ್ಥಳ	:	ಗ್ರಾಮದ ಭೈರವ ದೇವಾಲಯದಲ್ಲಿದೆ
ವಸ್ತು	:	ಕಪ್ಪುಶಿಲೆ
ಕಾಲಮಾನ	:	ಕ್ರಿ.ಶ. ೧೦ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಯ ದೇವಾಲಯಗಳ ಅಧ್ಯಯನ, ಪು.೯೯೧

ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಭೈರವನು ಚತುರ್ಭುಜಧಾರಿಯಾಗಿದ್ದು, ಕ್ರಮವಾಗಿ ಖಡ್ಗ, ಡಮರು, ತ್ರಿಶೂಲ, ರುಂಡ ಹಿಡಿದಿದ್ದಾನೆ. ಜಟಾಮುಕುಟ ಭೈರವನ ಕಿವಿಯಲ್ಲಿ ಸರ್ಪಕುಂಡಲಗಳಿದ್ದು, ಕಂಠಾಭರಣ, ಎದೆಹಾರ, ಯಜ್ಞೋಪವಿತ, ರುಂಡಮಾಲೆ, ಕಟಿಬಂಧ

ಹಾಗೂ ಕೈಕಡಗಗಳಿವೆ. ಎದೆಯಲ್ಲಿ ಮತ್ತು ಮೊಣಕಾಲಿನ ಬಳಿ ಸರ್ಪ ಸುತ್ತುವರೆದಿದೆ. ಕಾಲ್ಕಡಗ ಪಾದರಕ್ಷೆಗಳನ್ನು ಹೊಂದಿದ ಮೂರ್ತಿಯ ಹಿಂಭಾಗದಲ್ಲಿ ಸರ್ಪತೋರಣಮುಕ್ತ ಪ್ರಭಾವಳಿಗಳಿವೆ.

ಶಿಲ್ಪ	:	ಭೈರವ
ಗ್ರಾಮ	:	ಮರವಂಜಿ
ಸ್ಥಳ	:	ಈಶ್ವರ ದೇವಾಲಯದ ಆವರಣದಲ್ಲಿ
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಪು.೧೯೨

ಭೈರವನು ನಗ್ನನಾಗಿ ನಿಂತಿದ್ದು, ಚತುರ್ಭುಜಧಾರಿಯಾಗಿದ್ದಾನೆ, ಕೈಗಳಲ್ಲಿ ಕ್ರಮವಾಗಿ ತ್ರಿಶೂಲ, ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲವನ್ನು ಹಿಡಿದ್ದು, ಕೆದರಿದ ಜಡೆ, ಸರ್ಪಕುಂಡಲ, ಭುಜಕೀರ್ತಿ, ಕೇಯೂರ, ಕೊರಳಹಾರ, ಎದೆಪಟ್ಟಿ, ಯಜ್ಞೋಪವಿತ, ರುಂಡಮಾಲೆ, ಕೈಕಡಗ, ಕಾಲ್ಗಡಗ ಮತ್ತು ಪಾದರಕ್ಷೆಗಳಿಂದ ಅಲಂಕೃತಗೊಂಡಿದ್ದಾನೆ. ಮೊಣಕಾಲಿನ ಬಳಿ ಸರ್ಪವೊಂದು ಸುತ್ತಿಕೊಂಡಿದೆ. ಕಾಲಿನ ಎಡಭಾಗದಲ್ಲಿ ನಾಯಿಯೊಂದು ಭೈರವನನ್ನು ನೋಡುತ್ತಾ ಮುಂದಿನ ಕಾಲುಗಳಲ್ಲಿ ನಮಸ್ಕರಿಸಿ ಹಿಂದಿನ ಕಾಲುಗಳ ಮೇಲೆ ನಿಂತಿದೆ. ಪೀಠದ ಎಡ ಮತ್ತು ಬಲಭಾಗದಲ್ಲಿ ನೃತ್ಯಗಾರ್ತಿಯರನ್ನು ಮತ್ತು ಅಪ್ಸರೆಯರನ್ನು ಕೆತ್ತಲಾಗಿದೆ.

ಕಾರ್ತಿಕೇಯ ಸ್ಕಂಧ ಶಿಲ್ಪಗಳು

ಕಾರ್ತಿಕೇಯನಿಗೆ ಕುಮಾರ, ಸ್ಕಂಧ, ಸುಬ್ರಹ್ಮಣ್ಯ, ಷಣ್ಮುಖ ಎಂಬ ಹಲವಾರು ಹೆಸರಗಳಿವೆ. ಸಾಮಾನ್ಯವಾಗಿ ದ್ವಿಭುಜ, ಚತುರ್ಭುಜಧಾರಿಯಾಗಿರುವನು. ಆರು ತಲೆಗಳಿದ್ದಾಗ, ಹನ್ನೆರಡು ಕೈಗಳಿರುತ್ತವೆ. ಕುಕ್ಕಟ ಘಂಟೆ, ವೈಜಯಂತಿ, ಪತಾಕೆ ಹಿಡಿದಿರುತ್ತಾನೆ. ಎಡಗೈಯಲ್ಲಿ ವಜ್ರಾಯುಧವು, ಬಲಗೈಯಲ್ಲಿ ಶಕ್ತಾಯುಧವನ್ನು ಹಿಡಿದಿರುವನು. ತಾಲ್ಲೂಕಿನಲ್ಲಿ ಲಭ್ಯವಾದ ಕಾರ್ತಿಕೇಯನ ಶಿಲ್ಪಗಳು ಇಂತಿವೆ.

ಶಿಲ್ಪ	:	ಕಾರ್ತಿಕೇಯ
ಗ್ರಾಮ	:	ಕತ್ತಲಗೆರೆ
ಸ್ಥಳ	:	ಈಶ್ವರ ದೇವಾಲಯದ ನವರಂಗದಲ್ಲಿದೆ
ವಸ್ತು	:	ಕಪ್ಪುಶಿಲೆ
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಪ್ರಕಟಣೆ	:	ಓಬಳೇಶಪ್ಪ ಎಂ.ಆರ್., ಚನ್ನಗಿರಿ ತಾಲ್ಲೂಕಿನ ದೇವಾಲಯಗಳ ಅಧ್ಯಯನ, ಪು.೮೩

ಕಾರ್ತಿಕೇಯ ನವಿಲಿನ ಮೇಲೆ ಸುಖಾಸೀನನಾಗಿದ್ದು, ಚತುರ್ಭುಜಧಾರಿಯಾಗಿದ್ದು ಕ್ರಮವಾಗಿ ಪದ್ಮಶೂಲ, ಶಂಖ, ವಜ್ರಾಯುಧವನ್ನು ಹಿಡಿದಿದ್ದಾನೆ. ಆಭರಣ ಮತ್ತು ವಸ್ತ್ರಧಾರಿಯಾಗಿದ್ದಾನೆ.

ಶಿಲ್ಪ	:	ಕಾರ್ತಿಕೇಯ
ಗ್ರಾಮ	:	ನಲ್ಲುದರೆ
ಸ್ಥಳ	:	ಬ್ರಹ್ಮೇಶ್ವರ ದೇವಾಲಯದ ನವರಂಗದ ಬಲಗಡೆ ಗೋಡೆಗೆ ನಿಲ್ಲಿಸಲಾಗಿದೆ.
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಅಪ್ರಕಟಿತ

ನವಿಲಿನ ಮೇಲೆ ನೃತ್ಯ ಭಂಗಿಯಲ್ಲಿ ಆಸೀನನಾಗಿದ್ದು, ದ್ವಿಭುಜಧಾರಿಯಾಗಿದ್ದು, ಕ್ರಮವಾಗಿ ಬಲಗೈಯಲ್ಲಿ ಶಕ್ತಿಯುಧವನ್ನು, ಎಡಗೈಯಲ್ಲಿ ವಜ್ರಾಯುಧವನ್ನು ಹಿಡಿದಿದ್ದಾನೆ. ನವಿಲು ತನ್ನ ಗರಿಗಳನ್ನು ಹರಡಿಕೊಂಡಿದೆ. ನವಿಲಿನ ನೆತ್ತಿಯ ಮೇಲೆ ಕುಕ್ಕಟವನ್ನು ಹೊಂದಿದ್ದು, ಮಡಿಕೆಯಲ್ಲಿನ ನೀರನ್ನು ನವಿಲು ಕುಡಿಯುವಂತೆ ಕಂಡಿರಿಸಲಾಗಿದೆ.

ವೀರಭದ್ರನ ಶಿಲ್ಪಗಳು

ಶೈವ ಧರ್ಮದಲ್ಲಿ ಪ್ರಮುಖ ಆರಾಧಕ, ಈತನ ಜನ್ಮದ ಹಿಂದೆ ದೊಡ್ಡ ವೃತ್ತಾಂತವಿದೆ. ಶಿವನ ಪತ್ನಿ ದಾಕ್ಷಾಯಿಣಿಯ ತಂದೆ ದಕ್ಷಬ್ರಹ್ಮನು ಒಮ್ಮೆ ತನ್ನ ಅಳಿಯನಾದ ಶಿವನ ಆಸ್ಥಾನಕ್ಕೆ ಬಂದಾಗ, ಶಿವನು ಪತ್ನಿಯೊಂದಿಗೆ ಮಗ್ನನಾಗಿದ್ದು ತನಗೆ ಆದರಾತಿಥ್ಯ ದೊರೆಯಲಿಲ್ಲ ಎಂದು ಕುಪಿತಗೊಂಡ ದಕ್ಷಬ್ರಹ್ಮನು, ಶಿವನನ್ನು ಅವಮಾನಿಸುವ ಉದ್ದೇಶದಿಂದಲೇ ಯಜ್ಞನಡೆಸಲು ತೀರ್ಮಾನಿಸಿದ. ಈ ಯಜ್ಞಕ್ಕೆ ದಕ್ಷಬ್ರಹ್ಮನು ಎಲ್ಲ ದೇವ-ದೇವತೆಯರನ್ನು ಕರೆದು, ಶಿವನನ್ನು ಹೊರತುಪಡಿಸಿ, ಇತರೆ ಅಳಿಯಂದಿರನ್ನು ಆಹ್ವಾನಿಸಿದ. ತನಗೆ ಆಹ್ವಾನ ಬರದೇ ಇದ್ದುದನ್ನು ಕಂಡು ದಾಕ್ಷಾಯಿಣಿ ಶಿವನ ಅನುಮತಿ ಪಡೆದು ಯಜ್ಞಕ್ಕೆ ಹೋಗುವಳು. ಆದರೆ ತಂದೆಯ

ವರ್ತನೆ ಕಂಡು ಬೇಸರದಿಂದ ಅದೇ ಯಜ್ಞಕುಂಡದಲ್ಲಿ ಬಿದ್ದು ಪ್ರಾಣಬಿಟ್ಟಳು. ಇದರಿಂದ ಕುಪಿತನಾದ ಶಿವನು ತನ್ನ ಜಡೆಯನ್ನು ನೆಲಕ್ಕೆ ಅಪ್ಪಳಿಸಲು ವೀರಭದ್ರನು ಜನ್ಮತಾಳಿದನು. ನಂತರ ಅದೇ ವೀರಭದ್ರನು ಯಜ್ಞವನ್ನು ಧ್ವಂಸ ಮಾಡಿ ದಕ್ಷನ ಶಿರವನ್ನು ಕಡಿಯುವನು. ದಕ್ಷನ ಪತ್ನಿಯಾದ ವೀರಾಣಿಯು ವೀರಭದ್ರನಲ್ಲಿ ಬೇಡಿಕೊಂಡಾಗ ಅಲ್ಲಿಯೇ ಇದ್ದ ಟಗರಿನ ರುಂಡವನ್ನು ದಕ್ಷನ ಶರೀರಕ್ಕೆ ಸೇರಿಸಿ ಜನ್ಮ ನೀಡಿದನು. ಸಾಮಾನ್ಯವಾಗಿ ವೀರಭದ್ರನು ವೀರಾಸನದಲ್ಲಿ ಅಥವಾ ದ್ವಿಭಂಗಿಯಲ್ಲಿ ಸ್ಥಾನಿಕ ರೂಪದಲ್ಲಿರುತ್ತಾನೆ. ಕೈಗಳಲ್ಲಿ ಖಡ್ಗ ಮತ್ತು ಖೇಟಗಳಿರುತ್ತವೆ. ಪಾರ್ಶ್ವದಲ್ಲಿ ದಕ್ಷಬ್ರಹ್ಮನು ಮತ್ತು ಆತನ ಪತ್ನಿ ವೀರಾಣಿ ಇಬ್ಬರು ಅಂಜಲಿಮುದ್ರೆಯಲ್ಲಿ ನಿಂತಿರುವುದನ್ನು ಕಾಣಬಹುದು.[೪೬]

ವೀರಭದ್ರನು ಶಿವನ ಅವತಾರವಾಗಿದ್ದು, ಕೂರ್ಮಪುರಾಣ, ವೀರಭದ್ರಪುರಾಣ, ಭಾಗವತಪುರಾಣ, ವೀರಭದ್ರಮೂರ್ತಿಯ ಉಗಮ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸಿವೆ 'ಶ್ರೀತತ್ವನಿಧಿ' ವೀರಭದ್ರನ ಪ್ರತಿಮಾ ಲಕ್ಷಣಗಳನ್ನು ವಿವರಿಸುತ್ತವೆ. ವೀರಭದ್ರ ಮೂರ್ತಿಯ ವಿವಿಧ ರೂಪಗಳನ್ನು ತಿಳಿಸುತ್ತವೆ. ಪ್ರಸ್ತುತ ಇಂತಹ ಮೂರ್ತಿಗಳು ಚನ್ನಗಿರಿ ತಾಲ್ಲೂಕಿನ ನೀತಿಗೆರೆ, ಮುದಿಗೆರೆ, ಮಸಣಿಕೆರೆ, ಚನ್ನಗಿರಿಯಲ್ಲಿ ದೊರೆತಿವೆ.

ಶಿಲ್ಪ	:	ವೀರಭದ್ರ
ಗ್ರಾಮ	:	ನೀತಿಗೆರೆ
ಸ್ಥಳ	:	ವೀರಭದ್ರ ದೇವಾಲಯ
ವಸ್ತು	:	ಕಪ್ಪುಶಿಲೆ
ಕಾಲಮಾನ	:	ಕ್ರಿ.ಶ. ೧೪ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಅಪ್ರಕಟಿತ

ವೀರಾಸನದಲ್ಲಿ ಸ್ಥಾನಿಕ ರೂಪದಲ್ಲಿ ನಿಂತಿರುವ ವೀರಭದ್ರನು ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಕ್ರಮವಾಗಿ ಖಡ್ಗ, ಬಾಣ, ಖೇಟ, ಧನಸ್ಸನ್ನು ಹಿಡಿದಿದ್ದಾನೆ. ಕೊರಳಲ್ಲಿ ರುಂಡಮಾಲೆ ಧರಿಸಿದ್ದು, ಕಿರೀಟಧಾರಿ, ಯಜ್ಞೋಪವಿತ, ಕಿಂಕಣಿ, ಕೈಕಡಗ, ಭುಜಬಂದಿಯನ್ನು ಧರಿಸಿದ್ದಾನೆ.

ಶಿಲ್ಪ	:	ವೀರಭದ್ರ
ಗ್ರಾಮ	:	ಚನ್ನಗಿರಿ
ಸ್ಥಳ	:	ಕಲ್ಲೇಶ್ವರ ದೇವಾಲಯ.
ವಸ್ತು	:	ಕಪ್ಪುಶಿಲೆ
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೮೮

ಪೀಠದಲ್ಲಿ ಸ್ಥಾನಿಕ ಭಂಗಿಯಲ್ಲಿ ನಿಂತಿದ್ದು, ಚತುರ್ಭುಜ ಕಿರೀಟ ಧರಿಸಿದ್ದು, ಕ್ರಮವಾಗಿ ತ್ರಿಶೂಲ, ಧನಸ್ಸು, ಖಡ್ಗ, ಖೇಟ ಹಿಡಿದಿದ್ದಾನೆ, ಕೊರಳಹಾರ, ಕಿವಿಯೊಲೆ, ಭುಜಕೀರ್ತಿ, ಕೆಯೂರ, ಕೈಕಡಗ, ಯಜ್ಞೋಪವಿತ, ಕಾಲ್ಕಡಗವನ್ನು ಧರಿಸಿದ್ದಾನೆ. ವೀರಭದ್ರಮೂರ್ತಿಯ ಬಲಬದಿಯಲ್ಲಿ ದಕ್ಷನು ಅಂಜಲಿಮುದ್ರೆಯಲ್ಲಿ ಕುಳಿತಿದ್ದಾನೆ.

ಶಿಲ್ಪ	:	ವೀರಭದ್ರ
ಗ್ರಾಮ	:	ಹಿರೇಕೋಗಿಲೂರು
ಸ್ಥಳ	:	ಗ್ರಾಮದ ವೀರಭದ್ರೇಶ್ವರ ದೇವಾಲಯ
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಸೇವುಣರು
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ ದಾವಣಗೆರೆ ಜಿಲ್ಲೆಗಳ ದೇವಾಲಯಗಳು ಪು.೧೮೮

ಕಿರೀಟಧಾರಿ ಚತುರ್ಭುಜನಾಗಿದ್ದು, ಕ್ರಮವಾಗಿ ತ್ರಿಶೂಲ, ಖಡ್ಗ, ಧನಸ್ಸು, ಖೇಟಗಳನ್ನು ಹಿಡಿದು, ಕಿವಿಯೊಲೆ ಉದರಬಂಧ, ಕಟೀಬಂಧ, ಅಲಂಕೃತ ಪಂಜೆ, ಕೈಕಡಗ, ಕೆಯೂರ ಹಾಗೂ ತೊಡೆಯವರೆಗೆ ಇಳಿಬಿದ್ದಿರುವ ರುಂಡಮಾಲೆ, ಯಜ್ಞೋಪವಿತ ಧರಿಸಿದ್ದು, ಪೀಠಭಾಗವು ಪದ್ಮಗಳಿಂದ ಅಲಂಕೃತವಾಗಿದೆ. ಕೆಳಗಡೆ ಬಲಭಾಗದಲ್ಲಿ ದಕ್ಷಬ್ರಹ್ಮನು ಟಗುರಿನ ತಲೆಯನ್ನು ಹೊಂದಿದ್ದು, ಅಲ್ಲಿ ತನ್ನ ಪತ್ನಿ ವೀರಾಣಿಯೊಂದಿಗೆ ಅಂಜಲಿಮುದ್ರೆಯಲ್ಲಿ ನಿಂತಿರುವನು.

ಶಿಲ್ಪ	:	ವೀರಭದ್ರ
ಗ್ರಾಮ	:	ಮಸಣಿಕೆರೆ
ಸ್ಥಳ	:	ಗ್ರಾಮದ ವೀರಭದ್ರೇಶ್ವರ ದೇವಾಲಯದಲ್ಲಿದೆ.
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೦ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೭

ಸುಖಾಸನದಲ್ಲಿ ಕಿರೀಟಧಾರಿಯಾಗಿದ್ದು, ಚತುರ್ಭುಜನಾಗಿ ಕ್ರಮವಾಗಿ ಕೈಗಳಲ್ಲಿ ತ್ರಿಶೂಲ, ಬಾಣ, ಖಡ್ಗ, ಖೇಟ ಹಿಡಿದಿದ್ದು, ಕಿವಿಯಲ್ಲಿ ಮರಕಮಂಡಲ, ಕೊರಳಲ್ಲಿ ಅನೇಕ ಬಗೆಯ

ಹಾರಗಳಿದ್ದು, ಉಪವೀತಬಂಧ, ಕೈಕಡಗ, ಕೆಯೂರ, ಕಟಿಬಂಧ ಧರಿಸಿದ್ದಾನೆ. ಈ ಶಿಲ್ಪದ ವಿಶೇಷತೆಯೆಂದರೆ, ಖೇಟವನ್ನು ಬೆರಳುಗಳಲ್ಲಿ ದಕ್ಷಬ್ರಹ್ಮನ ತಲೆಗೆ ತಾಗಿರುವಂತೆ ಕಂಡರಿಸಲಾಗಿದೆ.

ಗಣಪತಿ ಶಿಲ್ಪ

ಗಣಪತಿಯ ಪ್ರಾಚೀನ ಶಿಲ್ಪಗಳು ನಿರಾಭರಣವಾಗಿವೆ. ನಂತರದ ಕಾಲದಲ್ಲಿ ಕರಂಡಮಕುಟ ಅಥವಾ ಜಟಾಮಕುಟ, ರತ್ನಹಾರಗಳು, ಕಂಕಣ, ಉಪವೀತ ಮುಂತಾದ ಅಲಂಕಾರಗಳಿಂದ ಕೂಡಿರುತ್ತದೆ.[೪೭] ಶಾಸ್ತ್ರಗಳಲ್ಲಿ ಈತನನ್ನು ವಕ್ರತುಂಡ, ಹಸ್ತವಕ್ರ, ಏಕದಂತ, ಲಂಬೋದರ, ಮೂಷಿಕವಾಹನ ಎಂದು ವರ್ಣಿಸಿವೆ.[೪೮] ಶೈಲಿಯನ್ನು ಆಧರಿಸಿ ಮಹಾಗಣಪತಿ, ಲಕ್ಷ್ಮೀಗಣಪತಿ, ಶಕ್ತಿಗಣಪತಿ, ಪಂಚಮುಖಿ ಗಣಪತಿ, ಬಲಮುರಿ ಗಣಪತಿ ಎಂದು ವರ್ಗೀಕರಿಸಿದ್ದಾರೆ. ಚನ್ನಗಿರಿಯಲ್ಲಿ ಲಭ್ಯವಾದ ಗಣಪತಿ ಶಿಲ್ಪಗಳು ಈ ಕೆಳಗಿನಂತಿವೆ.[೪೯]

ಶಿಲ್ಪ	:	ಗಣಪತಿ
ಗ್ರಾಮ	:	ತ್ಯಾವಣಿಗೆ
ಸ್ಥಳ	:	ಕಲ್ಲೇಶ್ವರ ದೇವಾಲಯದ ಹೊರಭಾಗದ ಭಿತ್ತಿಯಲ್ಲಿದೆ
ವಸ್ತು	:	ಕಪ್ಪು ಶಿಲೆ
ಕಾಲಮಾನ	:	ಕ್ರಿ.ಶ.೧೧ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಅಪ್ರಕಟಿತ

ಜಟಾಮುಕುಟ ಹೊಂದಿರುವ ಗಣಪತಿಯು ಚತುರ್ಭುಜಧಾರಿಯಾಗಿದ್ದು, ಕ್ರಮವಾಗಿ ಕೈಗಳಲ್ಲಿ ಅಂಕುಶ, ಪಾಶ, ಮೊದಕ ಪಾತ್ರೆಯಿದ್ದು, ಸೊಂಡಿಲಿನಿಂದ ಮೊದಕ ಪಾತ್ರೆಯ ಫಲವನ್ನು ತಿನ್ನುವಂತೆ ಕಂಡರಿಸಲಾಗಿದೆ. ಕಾಲಿಗೆ ಕಡಗವನ್ನು ಧರಿಸಿದ್ದು, ನಿರಾಭರಣವಾಗಿದೆ. ಬಲಗೈಯ ಮುಂಭಾಗದ ಕೈಯಲ್ಲಿ ಹಿಡಿದಿರುವ ವಸ್ತುವು ಭಗ್ನಗೊಂಡಿದೆ.

ಶಿಲ್ಪ	:	ಗಣಪತಿ
ಗ್ರಾಮ	:	ನಲ್ಲುದರೆ
ಸ್ಥಳ	:	ಬ್ರಹ್ಮೇಶ್ವರ ದೇವಾಲಯ
ವಸ್ತು	:	ಬಳಪದ ಶಿಲೆ
ರಾಜ ವಂಶ	:	ಹೊಯ್ಸಳರು
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ಪ್ರಕಟಣೆ	:	ಅಪ್ರಕಟಿತ

ಜಟಾಮುಕುಟಧಾರಿಯಾಗಿರುವ ಗಣಪತಿಯು ಚತುರ್ಭುಜಧಾರಿಯಾಗಿದ್ದು, ಕ್ರಮವಾಗಿ ಕೈಗಳಲ್ಲಿ ಅಂಕುಶ, ಪಾಶ, ಮೊದಕ ಪಾತ್ರೆಯಿದ್ದು, ಸೊಂಡಿಲು ಮುರಿದು ಹೋಗಿದೆ. ನಿರಾಭರಣ ಧಾರಿಯಾಗಿದ್ದು, ಕೇವಲ ಕಾಲಿಗೆ ಕಡಗ ಮಾತ್ರ ಧರಿಸಲ್ಪಟ್ಟಿದೆ.

ಶಿಲ್ಪ	:	ಗಣಪತಿ
ಗ್ರಾಮ	:	ಹಿರೇಕೋಗಿಲೂರು
ಸ್ಥಳ	:	ಈಶ್ವರ ದೇವಾಲಯದ ಉತ್ತರದ ಗರ್ಭಗುಡಿಯಲ್ಲಿದೆ.
ವಸ್ತು	:	ಕಪ್ಪು ಶಿಲೆ
ರಾಜವಂಶ	:	ಯಾದವರು
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೬

ಸುಖಾಸನದಲ್ಲಿರುವ ಗಣಪತಿ ಮೂರ್ತಿಯು ಕರಂಡಮಕುಟ, ಚತುರ್ಭುಜವನ್ನು ಹೊಂದಿರುವನು. ಕೈಗಳಲ್ಲಿ ಅಂಕುಶ ಮೊದಕ ಪಾತ್ರೆಯಲ್ಲಿ ಮೋದಕವಿದ್ದು ಸೊಂಡಲಿನಿಂದ ಮೋದಕ ಸ್ವೀಕರಿಸುತ್ತಿದ್ದಾನೆ. ಉದರಬಂಧ ಯಜ್ಞೋಪವಿತ, ಕಾಲು ಮತ್ತು ಕೈಗಳಲ್ಲಿ ಕೆಯೂರ ಧರಿಸಲ್ಪಟ್ಟಿದೆ.

ಶಿಲ್ಪ	:	ಗಣಪತಿ
ಗ್ರಾಮ	:	ಹಿರೇಕೋಗಿಲೂರು
ಸ್ಥಳ	:	ಗ್ರಾಮದ ವೀರಭದ್ರೇಶ್ವರ ದೇವಾಲಯದಲ್ಲಿದೆ.
ವಸ್ತು	:	ಕಪ್ಪು ಶಿಲೆ
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಯಾದವರು
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೬

ಕಿರೀಟಧಾರಿಯಾಗಿದ್ದು, ಚತುರ್ಭುಜಧಾರಿಯಾಗಿದ್ದು, ಕ್ರಮವಾಗಿ ಕೈಗಳಲ್ಲಿ ಅಂಕುಶ, ಪಾಶ, ಮೊದಕಪಾತ್ರೆಯನ್ನು ಹಿಡಿದಿದ್ದು, ಸೊಂಡಿಲಿನಿಂದ ಮೋದಕವನ್ನು ಸ್ವೀಕರಿಸುತ್ತಿದ್ದಾನೆ.

ಕೊರಳಹಾರ, ಸರ್ಪಬಂಧ, ಯಜ್ಞೋಪವಿತ, ಮಣಿಸರ ಧರಿಸಿದ್ದು, ಪಾಣಿಪೀಠದ ಬಿಂಬದಲ್ಲಿ ಮೂಷಿಕವಿದೆ. ಮೂರ್ತಿಯ ಹಿಂಭಾಗದಲ್ಲಿ ಕೀರ್ತಿಮುಖ ಒಳಗೊಂಡ ಪ್ರಭಾವಳಿ ಇದೆ.

ಶಿಲ್ಪ	:	ಗಣಪತಿ
ಗ್ರಾಮ	:	ಮರವಂಜಿ
ಸ್ಥಳ	:	ಈಶ್ವರ ದೇವಾಲಯ
ವಸ್ತು	:	ಕಪ್ಪು ಶಿಲೆ
ಕಾಲಮಾನ	:	ಕ್ರಿ.ಶ. ೧೦ನೇ ಶತಮಾನ
ರಾಜವಂಶ	:	ಯಾದವರು
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೬

ಜಟಾಕಿರೀಟಧಾರಿ, ಚತುರ್ಭುಜಧಾರಿಯಾದ ಗಣಪತಿ ಶಿಲ್ಪವು ಕ್ರಮವಾಗಿ ಕೈಗಳಲ್ಲಿ, ಅಂಜಲಿಮುದ್ರೆ, ಅಂಕುಶ, ಪಾಶ, ಮೋದಕಪಾತ್ರೆಯನ್ನು ಹಿಡಿದಿದ್ದು, ಪಾತ್ರೆಯಲ್ಲಿ ಫಲವನ್ನು ಸೊಂಡಿಲಿನಿಂದ ಸ್ವೀಕರಿಸುತ್ತಿದ್ದಾನೆ. ಕೊರಳಲ್ಲಿ ಮಣಿಸರ, ಉದರಬಂಧ, ಯಜ್ಞೋಪವೀತ, ಕಾಲ್ಕಡಗವನ್ನು ಧರಿಸಿದ್ದು, ಶಿಲ್ಪದ ಹಿಂಭಾಗದಲ್ಲಿ ಶರಶ್ಚಕ್ರವಿದೆ. ಜಟೆಯು ಭುಜದ ಮೇಲೆ ಇಳಿಬಿದ್ದಿದೆ.

ಶಿಲ್ಪ	:	ಗಣಪತಿ
ಗ್ರಾಮ	:	ನಲ್ಲೂರು
ಸ್ಥಳ	:	ಕೇಶವ ದೇವಾಲಯ
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೮

ಕರಂಡಮಕುಟಧಾರಿಯಾದ ಗಣಪತಿ ಶಿಲ್ಪವು ಸುಖಾಸನದಲ್ಲಿ ಆಸೀನವಾಗಿದ್ದು ಚತುರ್ಭುಜಧಾರಿ ಯಾಗಿದ್ದು, ಕ್ರಮವಾಗಿ ಕೈಗಳಲ್ಲಿ ಅಭಯಮುದ್ರೆ, ಅಂಕುಶ, ಪಾಶ, ಮೊದಕ

ಪಾತ್ರೆಯನ್ನು ಹಿಡಿದಿದ್ದು, ಸೊಂಡಿಲಿನಿಂದ ಪಾತ್ರೆಯಲ್ಲಿರುವ ಮೋದಕವನ್ನು ಸ್ವೀಕರಿಸುತ್ತಿದೆ. ಕೊರಳಲ್ಲಿ ಮಣಿಸರ, ಉದರಬಂಧ, ಯಜ್ಞೋಪವಿತ, ಕಾಲ್ಕಡಗ ಧರಿಸಿದೆ.

ಒಟ್ಟು ಏಳು ಗಣಪತಿ ಶಿಲ್ಪಗಳು ದೊರೆತಿದ್ದು, ತ್ಯಾವಣಿಗೆ ಮತ್ತು ನಲ್ಕುದರೆಯಲ್ಲಿ ಲಭ್ಯವಾಗಿರುವ ಶಿಲ್ಪಗಳು ಅಲಂಕಾರರಹಿತವಾಗಿದ್ದು, ಆರಂಭಿಕ ಕಾಲಘಟ್ಟಕ್ಕೆ ಸೇರಿದವಾಗಿವೆ. ನಂತರದ ಶಿಲ್ಪಗಳು ಅಲಂಕೃತ ಮೂರ್ತಿಶಿಲ್ಪಗಳಾಗಿವೆ. ಕ್ರಿ.ಶ. ೧೧ನೇ ಶತಮಾನದಲ್ಲಿ ಗಣಪತಿ ಆರಾಧನೆ ಪದ್ಧತಿ ಈ ಭಾಗದಲ್ಲಿ ಹೆಚ್ಚಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹೊಯ್ಸಳರು, ಕಲ್ಯಾಣದ ಚಾಲುಕ್ಯರು, ಸೇವುಣರ ಕಾಲದಲ್ಲಿ ಗಣಪತಿ ಆರಾಧನೆ ಪದ್ಧತಿ ಇದ್ದಿತ್ತೆಂಬುದಕ್ಕೆ ಈ ಶಿಲ್ಪಗಳೇ ನಿದರ್ಶನ.

ಗುಂಡಬ್ರಹ್ಮಯ್ಯನ ಶಿಲ್ಪ

ಗುಂಡಬ್ರಹ್ಮಯ್ಯರು ವೀರಶೈವ ಧರ್ಮದ ಅನುಯಾಯಿಗಳಾಗಿದ್ದು, ಸುಮಾರು ೧೩ನೇ ಶತಮಾನದ ನಂತರದ ಕಾಲದಲ್ಲಿ ಈ ಶಿಲ್ಪಗಳು ಕೆಲವು ಕಡೆ ಕಂಡಬಂದಿವೆ. ಕಂಬಗಳ ಚೌಕಾಭಾಗದಲ್ಲಿ ಈ ಶಿಲ್ಪವನ್ನು ಕಂಡರಿಸಿದರೆ ಕೆಲವೊಂದು ಪ್ರತ್ಯೇಕ ಬಿಡಿ ಶಿಲ್ಪಗಳಿರುವುದು ಕಾಣಬಹುದಾಗಿದೆ. ಹಗರಿಬೊಮ್ಮನಹಳ್ಳಿಯಲ್ಲಿ ದೊರೆತ ಹಸ್ತಪ್ರತಿಯಲ್ಲಿ ಹನ್ನೆರಡು ಜನ ಗುಂಡಬ್ರಹ್ಮಯ್ಯರ ವಿವರ ಲಭ್ಯವಾಗಿದೆ. ಆದಿಗುಂಡ, ಚಕ್ರಿಯ ಗುಂಡ, ತ್ರಿಭುವನ ಮೂಲ, ಚಕ್ರಗುಂಡ, ಭೂಗುಂಡ, ಬ್ರಹ್ಮಗುಂಡ, ಬ್ರಹ್ಮಾಂಡಬಾಂಡರ, ಜೀವಮೇರು ಅಜಂಡಾ, ಬಾಂಡೋಧರ, ಬಾದರಾಯಿಣಿ, ಬಾದಮ್ಮಯ್ಯ, ಬಾರಿಗುಂಡ(ಭೂಮಿಗುಂಡ), ಪಂಚಕಲಶ ಪ್ರತಿಷ್ಠಾಪನಾಗುಂಡ ಪಂಚಕಲಶಕ್ಕೆ ಆಜ್ಞಾಧಾರಕಗುಂಡ ಈ ಹನ್ನೆರಡು ಜನ ಗುಂಡಯ್ಯರಲ್ಲಿ ಹತ್ತು ಜನ ಗುಂಡಯ್ಯರಿಗೆ ಶಿವದೀಕ್ಷೆಯಾಗಿತ್ತು ಎಂಬುದನ್ನು ಹಸ್ತಪ್ರತಿಯಲ್ಲಿ ತಿಳಿಸಲಾಗಿದೆ.

ಶಿಲ್ಪ	:	ಗುಂಡಬ್ರಹ್ಮಯ್ಯ
ಗ್ರಾಮ	:	ನೀತಿಗೆರೆ
ಸ್ಥಳ	:	ಸಂತೆಬೆನ್ನೂರು ಮತ್ತು ದುಮ್ಮಿಯ ರಸ್ತೆಯ ಗ್ರಾಮದ ಬಲಭಾಗದಲ್ಲಿದೆ
ವಸ್ತು	:	ಬಳಪದ ಶಿಲೆ
ಕಾಲಮಾನ	:	ಕ್ರಿ.ಶ. ೧೪ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ದಾವಣಗೆರೆ ಜಿಲ್ಲೆಯ ಇತಿಹಾಸದ ಕೆಲವು ಹೆಜ್ಜೆಗಳು, ಪು.೮೩

ಗುಂಡಬ್ರಹ್ಮಯ್ಯರು ಎರಡು ಸಮಾನಂತರವಾಗಿ ನೆಟ್ಟ ಅಲಂಕೃತ ಸ್ತಂಬಗಳ ಮೇಲೆ ಉದ್ದನೆಯ ಹಲಗೆಯ ಮೇಲೆ ಕುಳಿತಿರುವರು. ಕೆಳಭಾಗದಲ್ಲಿ ಅಕ್ಕ-ಪಕ್ಕ ನಿಂತಿರುವಂತೆ ಕಂಡರಿಸಿದ್ದು, ತಮ್ಮ ಕೈಗಳಲ್ಲಿ ಉದ್ದನೆಯ ಶೂಲವನ್ನು, ಆತ್ಮಲಿಂಗವನ್ನು ಎದೆಗೆ ಸಮಾನಂತರವಾಗಿ ಹಿಡಿದುಕೊಂಡಿದ್ದಾರೆ. ಕೇಶವನ್ನು ಎಡಕ್ಕೆ ತುರುಬು ಕಟ್ಟಿಕೊಂಡಿದ್ದಾರೆ. ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದು, ಶಿಲ್ಪದ ಸುತ್ತಲೂ ಸ್ತಂಭತೋರಣದ ಪ್ರಭಾವಳಿ ರಚನೆ ಇದೆ. ಕತ್ತಲಗೆರೆಯಲ್ಲಿಯೂ ಇದೇ ರೀತಿಯ ಗುಂಡಬ್ರಹ್ಮಯ್ಯರ ಶಿಲ್ಪ ಲಭ್ಯವಾಗಿದೆ.

೫.೨. ವೈಷ್ಣವ ಶಿಲ್ಪಗಳು

ಋಗ್ವೇದದಲ್ಲಿ ವಿಷ್ಣುವಿನ ಆರಾಧನೆ ಕಂಡುಬರುತ್ತದೆ. ಆದರೆ ವೇದಗಳ ಕಾಲದಲ್ಲಿ ವಿಷ್ಣವಿಗೆ ದೇವತೆಗಳಲ್ಲಿ ಪ್ರಮುಖವಾದ ಸ್ಥಾನವಿದೆ. ಕ್ರಿ.ಪೂ. ೪ನೇ ಶತಮಾನದಲ್ಲಿ ಮಧ್ಯಪ್ರದೇಶದ ಉಜ್ಜಯಿನಿಯ ಸಮೀಪದ ಬೇಸ್ನನಗರದಲ್ಲಿ ವಾಸುದೇವ ಕೃಷ್ಣನಿಗಾಗಿ ಹೆಲಿಯೋಡೋರಸ್ ಎಂಬ ಗ್ರೀಕ್ ರಾಯಬಾರಿಯು ಅಲ್ಲಿನ ಸ್ಥಳೀಯ ರಾಜನಾದ ಭಾಗಚಂದ್ರನ ಅನುಮತಿ ಪಡೆದು ವಾಸುದೇವ ಕೃಷ್ಣನಿಗಾಗಿ ಒಂದು ದೇವಾಲಯವನ್ನು ನಿರ್ಮಿಸಿದನು. ಅಂದರೆ ಕ್ರಿ.ಪೂ. ೪ನೇ ಶತಮಾನದಲ್ಲಿಯೇ ಕೃಷ್ಣನ ಆರಾಧಕ ಪಂಥ ಅಸ್ತಿತ್ವದಲ್ಲಿತ್ತೆಂದು ವಿದೇಶಗಳಲ್ಲಿಯೂ ಪ್ರಾಮುಖ್ಯತೆ ಗಳಿಸಿತ್ತೆಂದು ತಿಳಿದುಬರುತ್ತದೆ.[೫೦]

ಮೌರ್ಯರ ಕಾಲದಲ್ಲಿ, ಗುಪ್ತರ ಕಾಲದಲ್ಲಿ ಬಿಟ್ಟರ್‌ಗಾವ್‌ನ ದಶಾವತಾರದ ದೇವಾಲಯ ಕಂಡುಬಂದರೆ ಈ ಕಾಲಘಟ್ಟದಲ್ಲಿ ವಿಷ್ಣುವಿನ ಹತ್ತು ಅವತಾರಗಳು ಬೆಳಕಿಗೆ ಬಂದವು. ಅವುಗಳೆಂದರೆ ಮತ್ಸ್ಯ, ಕೂರ್ಮ, ವೇಮನ(ವಾಮನ) ವರಹ, ರಾಮ, ಪರಶುರಾಮ, ನಾರಾಯಣ, ಕೃಷ್ಣ, ಬುದ್ಧ, ಕಲ್ಕಿ ಅವತಾರಗಳಲ್ಲಿ ಆರಾಧನೆ ಅಸ್ತಿತ್ವಕ್ಕೆ ಬಂದಿತು. ಇದರೊಂದಿಗೆ ಅಲ್ಲಿನ ಗುಪ್ತ ಅರಸರು ಭಾಗವತ, ಪರಮಭಾಗವತರೆಂಬ ಬಿರುದನ್ನು ಧರಿಸುತ್ತಿದ್ದು, ಅಲ್ಲಿ ಭಾಗವತ ಮತ್ತು ಪರಮಭಾಗವತ ಪಂಥಗಳು ಅಸ್ತಿತ್ವಕ್ಕೆ ಬಂದವು.[೫೨] ವರ್ಧನರ ಕಾಲದ ವೈಷ್ಣವ ಪಂಥದಲ್ಲಿ ಬೆಳವಣಿಗೆ ಹೊಂದಿತು.

ದಕ್ಷಿಣ ಭಾರತದಲ್ಲಿ ಸಂಗಂಯುಗದಲ್ಲಿ ವೈಷ್ಣವ ಆಳ್ವರರ ಪಂಥ ಅಸ್ತಿತ್ವದಲ್ಲಿತ್ತು. ಶಾತವಾಹನರಿಂದ ಮೈಸೂರಿನ ಒಡೆಯರವರೆಗೆ ವೈಷ್ಣವ ಪಂಥದ ಆರಾಧನೆ ಕಂಡುಬರುವುದರ ಜೊತೆಯಲ್ಲಿಯೇ, ಹೊಯ್ಸಳರ ಕಾಲದಲ್ಲಿ ಶ್ರೀರಾಮನುಜಾಚಾರ್ಯರು ಶ್ರೀವೈಷ್ಣವ ಪಂಥವನ್ನು ಪ್ರಚಾರ ಮಾಡಿದರು. ಅಂದರೆ ವಿಷ್ಣು ಅಥವಾ ನಾರಾಯಣನೊಂದಿಗೆ ಲಕ್ಷ್ಮಿಯನ್ನು ಆರಾಧಿಸು ಪಂಥವೇ ಶ್ರೀವೈಷ್ಣವಪಂಥ. ಶ್ರೀ ಅಂದರೆ ಲಕ್ಷ್ಮೀ, ವೈಷ್ಣವ ಅಂದರೆ ವಿಷ್ಣು ಅಥವಾ ನಾರಾಯಣನನ್ನು ಆರಾಧಿಸುವುದು ಎಂದರ್ಥ. ಈ ಪಂಥವನ್ನು ವಿಷ್ಣುವರ್ಧನನು ಸ್ವೀಕರಿಸಿದನು.[೫೩] ಬೃಹತ್‌ಸಂಹಿತೆ, ಮತ್ಸ್ಯಪುರಾಣ, ವಿಷ್ಣುಧರ್ಮೋತ್ತರ ಪುರಾಣ,

ಸಮಾರಂಗಣಸೂತ್ರದಾರ ಮೊದಲಾದ ಗ್ರಂಥಗಳು ಮೂರ್ತಿ ಆರಾಧನೆ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸುತ್ತವೆ.[೫೪]

ಚನ್ನಗಿರಿ ತಾಲ್ಲೂಕಿನಲ್ಲಿ ವೈಷ್ಣವ ಶಿಲ್ಪಗಳಾದ ವಿಷ್ಣು, ಕೇಶವ, ಲಕ್ಷ್ಮೀನಾರಾಯಣ, ಸೂರ್ಯನಾರಾಯಣ, ಹರಿಹರೇಶ್ವರ, ಬೇಟೆರಂಗನಾಥ, ರೇವಂತ, ಸೂರ್ಯ, ಗರುಡನ ಶಿಲ್ಪಗಳು ಲಭ್ಯವಾಗಿವೆ.

ಶಿಲ್ಪ	:	ವಿಷ್ಣು
ಗ್ರಾಮ	:	ತ್ಯಾವಣಿಗೆ
ಸ್ಥಳ	:	ಗ್ರಾಮದ ಮಧ್ಯಭಾಗದ ಇತ್ತೀಚಿನ ಹನುಮಂತ ದೇವಾಲಯದ ಪ್ರಕಾರದ ಹೊರಭಾಗಕ್ಕೆ ನಿಲ್ಲಿಸಲಾಗಿದೆ.
ವಸ್ತು	:	ಬಳಪದ ಕಲ್ಲು
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಅಪ್ರಕಟಿತ

ಕಿರೀಟ ಮುಕುಟಧಾರಿಯಾಗಿ ಸ್ಥಾನಿಕರೂಪದಲ್ಲಿರುವ ವಿಷ್ಣುಶಿಲ್ಪವು ಚತುರ್ಭುಜ ಧಾರಿಯಾಗಿದ್ದಾನೆ. ಮೂರು ಕೈಗಳು ಭಗ್ನಗೊಂಡಿದ್ದು, ಎಡ ಹಿಂಬದಿಯ ಕೈಯಲ್ಲಿ ಚಕ್ರವಿದೆ. ವಿಷ್ಣುವಿನ ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಾಭರಣ, ಮಣಿಸರ, ಮಕರಕುಂಡಲ, ಕೈಯಲ್ಲಿ ಕೈಯೂಂಗುರಗಳಿದ್ದು, ಭುಜಕೀರ್ತಿ, ಉದರಬಂಧ, ಯಜ್ಞೋಪವಿತ, ಕಟಿವಸ್ತ್ರ ಪಾದಗಳಲ್ಲಿ ಪಾದರಸ, ಕಿಂಕಿಣಿಗಳಿಂದ ಅಲಂಕೃತಗೊಂಡಿದ್ದಾರೆ. ಶಿಲ್ಪದ ಹಿಂಭಾಗದಲ್ಲಿ ಸ್ತಂಭ ಮಕರತೋರಣಗಳಿಂದ ಅಲಂಕೃತವಾಗಿದ್ದು, ಅದರ ಒಳಭಾಗದಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಪೀಠದ ಎಡ ಮತ್ತು ಬಲಭಾಗದಲ್ಲಿ ಭೂದೇವಿ ಮತ್ತು ಶ್ರೀದೇವಿಯರು ನಿಂತಿದ್ದಾರೆ.

ಶಿಲ್ಪ	:	ಕೇಶವ
ಗ್ರಾಮ	:	ಚನ್ನಗಿರಿ
ಸ್ಥಳ	:	ಚನ್ನಗಿರಿ ಕಲ್ಲೇಶ್ವರ ದೇವಾಲಯ
ವಸ್ತು	:	ಬಳಪದ ಕಲ್ಲು
ಕಾಲಮಾನ	:	ಕ್ರಿ.ಶ.೧೨ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಎಂ.ಎ. ಆರ್. ವರದಿ, ೧೯೩೭, ಪು.೫೪

ಪೀಠದಲ್ಲಿ ಸ್ಥಾನಿಕ ರೂಪದಲ್ಲಿರುವ ಕೇಶವಶಿಲ್ಪವು ಕಿರೀಟ ಮುಕುಟಧಾರಿಯಾಗಿ, ಚತುರ್ಭುಜವನ್ನು ಹೊಂದಿದ್ದು, ಕೈಗಳಲ್ಲಿ ಕ್ರಮವಾಗಿ ಶಂಖ, ಪದ್ಮ, ಚಕ್ರ, ಗದಾವನ್ನು ಹಿಡಿದಿದ್ದು, ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಕಂಠಾಭರಣ, ಮಣಿಸರವಿದೆ. ಪಾದಸರ, ಕಿಂಕಿಣಿ, ಯಜ್ಞೋಪವಿತ, ಭುಜಕೀರ್ತಿ, ಕಟಿವಸ್ತ್ರಗಳಿಂದ ಅಲಂಕೃತಗೊಂಡಿದೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾಮಂಡಲ ಮತ್ತು ಮಕರತೋರಣವಿದೆ. ಅದರಲ್ಲಿ ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಚಿಕ್ಕದಾಗಿ ಕೆತ್ತಿದ್ದಾರೆ. ಕೇಶವಶಿಲ್ಪದ ಕಾಲುಗಳ ಎಡ ಮತ್ತು ಬಲಭಾಗದಲ್ಲಿ ಶ್ರೀದೇವಿ-ಭೂದೇವಿಯರು ನಿಂತಿದ್ದಾರೆ.

ಶಿಲ್ಪ	:	ಕೇಶವ
ಗ್ರಾಮ	:	ನಲ್ಲೂರು
ಸ್ಥಳ	:	ಕೇಶವ ದೇವಾಲಯದಲ್ಲಿದೆ.
ವಸ್ತು	:	ಬಳಪದ ಕಲ್ಲು
ಕಾಲಮಾನ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೯೬

ಕಿರೀಟ ಮುಕುಟಧಾರಿಯಾಗಿ, ಚತುರ್ಭುಜಧಾರಿಯಾಗಿರುವ ವಿಷ್ಣುವು ಕೈಗಳಲ್ಲಿ ಕ್ರಮವಾಗಿ ಶಂಖ, ಪದ್ಮ, ಚಕ್ರ, ಗದಾವನ್ನು ಹಿಡಿದಿರುವ ಕೇಶವನು ಕಂಠಹಾರ, ಮಣಿಸರ, ಉದರಬಂಧ, ವೈಜಯಂತಿಮಾಲೆ, ಯಜ್ಞೋಪವಿತ, ಕೇಯೂರ, ಕಾಲ್ಕಡಗಗಳಿಂದ ಅಲಂಕೃತಗೊಂಡಿದ್ದಾನೆ. ಪೀಠದ ಎಡ ಮತ್ತು ಬಲಭಾಗದಲ್ಲಿ ಭೂದೇವಿ ಮತ್ತು ಶ್ರೀದೇವಿಯರ ಶಿಲ್ಪಗಳಿವೆ.

ಶಿಲ್ಪ	:	ಕೇಶವ
ಗ್ರಾಮ	:	ಸೂಳೆಕೆರೆ
ಸ್ಥಳ	:	ಸಿದ್ದೇಶ್ವರ ದೇವಾಲಯದ ಪ್ರಕಾರದ ಆವರಣದಲ್ಲಿದೆ.
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಎಂ. ಎ. ಆರ್. ವರದಿ, ೧೯೩೭, ಪು.೫೭

ಸ್ಥಾನಿಕ ಆಸನದಲ್ಲಿರುವ ಕೇಶವನು ಕಿರೀಟ ಮುಕುಟಧಾರಿಯಾಗಿದ್ದು ಕಿರೀಟವು ಶಿಖಾಮಣಿ, ರತ್ನಪಟ್ಟಿಗಳನ್ನೊಳಗೊಂಡಿದೆ. ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಕ್ರಮವಾಗಿ

ಪದ್ಮ, ಶಂಖ, ಚಕ್ರ, ಗದಾವನ್ನು ಹಿಡಿದಿರುವ ಕೇಶವನು, ಪತ್ರಕುಂಡಲ, ಕಂಠಹಾರ, ಮಣಿಸರ, ಕೆಯೂರ, ಕಂಕಣ, ಯಜ್ಞೋಪವಿತ, ಉದರಬಂಧ, ಕಟಿವಸ್ತ್ರ, ಪಾದಸರ, ಕಿಂಕಿಣಿಗಳಿಂದ ಅಲಂಕೃತಗೊಂಡಿದ್ದಾನೆ. ಪಾಣಿಪೀಠದ ಎಡ ಮತ್ತು ಬಲಭಾಗದಲ್ಲಿ ಭೂದೇವಿ ಮತ್ತು ಶ್ರೀದೇವಿಯರಿದ್ದಾರೆ.

ಶಿಲ್ಪ	:	ಕೇಶವ
ಗ್ರಾಮ	:	ಮೆದಕೆರೆ
ಸ್ಥಳ	:	ಮಧುಕೇಶ್ವರ ದೇವಾಲಯದ ಮುಂಭಾಗದಲ್ಲಿದೆ
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯ
ಪ್ರಕಟಣೆ	:	ಓಬಳೇಶಪ್ಪ ಎಂ.ಆರ್., ಚನ್ನಗಿರಿ ತಾಲೂಕಿನ ದೇವಾಲಯಗಳ ಒಂದು ಅಧ್ಯಯನ, ಪು.೪೬

ಪೀಠದ ಮೇಲೆ ಸ್ಥಾನಿಕ ಆಸನದಲ್ಲಿರುವ ಶಿಲ್ಪವು ಕರಂಡಮುಕುಟ ಕಿರೀಟದೊಂದಿಗೆ ಜಟಾಧಾರಿಯಾಗಿದ್ದು ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಕ್ರಮವಾಗಿ ಅಭಯ, ಚಕ್ರ, ಗದಾ, ಅಭಯಮುದ್ರಾ, ಶಂಖವನ್ನು ಹಿಡಿದಿರುವ ಪುರುಷೋತ್ತಮನು, ಮಕರಕುಂಡಲ, ಕಂಠಹಾರ, ಮಣಿಸರ, ಯಜ್ಞೋಪವಿತ, ಕೈಯೂರ, ಉದರಬಂಧ ಕಂಕಣ, ಕಟಿವಸ್ತ್ರ, ಉತ್ತರೀಯಬಂಧ, ಪಾದರಸ, ಕಿಂಕಣಿಗಳಿಂದ ಅಲಂಕೃತಗೊಂಡಿದ್ದಾನೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ರಚನೆಯಿದ್ದು, ಮಕರತೋರಣವನ್ನು ಹೊಂದಿದೆ. ಪೀಠದ ಎಡ ಮತ್ತು ಬಲಭಾಗದಲ್ಲಿ ಭೂದೇವಿ–ಶ್ರೀದೇವಿಯರು ಚಾಮರವನ್ನು ಹಿಡಿದು ನಿಂತಿದ್ದಾರೆ.

ಶಿಲ್ಪ	:	ಲಕ್ಷ್ಮೀನಾರಾಯಣ
ಗ್ರಾಮ	:	ಹಿರೇಕೋಗಿಲೂರು
ಸ್ಥಳ	:	ಶಿವಪ್ಪನಾಯಕ ವಸ್ತು ಸಂಗ್ರಹಾಲಯ, ಶಿವಮೊಗ್ಗ ಅಅ ೧೩೬೨
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಕೆ.ಜಿ. ಭಟ್‌ಸೂರಿ, ಎಂಟಿಕ್ವಿಟಿಸ್ ಇನ್ ಗವರ್ನ್‌ಮೆಂಟ್ ಮ್ಯೂಸಿಯಂ, ಶಿವಮೊಗ್ಗ ೧೯೯೫, ಪು.೨೩

ನಾರಾಯಣ ಲಕ್ಷ್ಮಿಯೊಂದಿಗೆ ಸುಖಾಸನದಲ್ಲಿ ಆಸೀನನಾಗಿದ್ದು, ಕಿರೀಟಮಕುಟಧಾರಿ ಚತುರ್ಭುಜಧಾರಿಯಾಗಿದ್ದು, ಗದಾ, ಚಕ್ರ, ಶಂಖವನ್ನು ಹೊಂದಿದ್ದಾನೆ. ಲಕ್ಷ್ಮೀಯ ಸೊಂಟವನ್ನು ಹಿಡಿದಿರುವ ನಾರಾಯಣನು ಭುಜಕೀರ್ತಿ ಪತ್ರಕುಂಡಲ, ಮಣಿಸರ, ವೈಜಯಾಂತಿಮಾಲೆ, ಹಾರ, ಕೆಯೂರ, ಕಂಕಣ, ಪಾದಸರ, ಉದರಬಂಧ, ಯಜ್ಞೋಪವಿತಗಳಿಂದ ಅಲಂಕೃತಗೊಂಡಿದ್ದಾನೆ.

ನಾರಾಯಣನ ಎಡತೊಡೆಯ ಮೇಲೆ ಸವ್ಯಲಲಿತಾಸನದಲ್ಲಿ ಆಸೀಳಾಗಿರುವ ಲಕ್ಷ್ಮೀಯು ಕಿರೀಟಮಕುಟಧಾರಿ, ದ್ವಿಭುಜಧಾರಿಯಾಗಿ ಬಲಗೈಯನ್ನು ನಾರಾಯಣನ ಭುಜದ ಮೇಲೆ ಹಾಕಿರುವಳು. ಎಡಗೈ ಭಗ್ನಗೊಂಡಿದೆ. ಬಹುಶಃ ಅಭಯ ಮುದ್ರೆಯಲ್ಲಿರಬಹುದು. ಪತ್ರಕುಂಡಲ, ಮಣಿಸರ, ಹಾರ, ಕಂಕಣ, ತೋಳಬಂಧಿ, ಕಿಂಕಿಣಿ, ಉಪವಿತ, ಹಲವು ಆಭರಣಗಳಿಂದ ಅಲಂಕೃತಗೊಂಡಿರುವಳು. ಶಿಲ್ಪದ ಹಿಂಭಾಗದಲ್ಲಿ ಮಕರತೋರಣದ ಅಲಂಕರಣವಿದೆ.

ಶಿಲ್ಪ	:	ಸೂರ್ಯನಾರಾಯಣ
ಗ್ರಾಮ	:	ಮೆದಕೆರೆ
ಸ್ಥಳ	:	ಮಧುಕೇಶ್ವರ ದೇವಾಲಯದ ಮುಂಭಾಗದ ಆವರಣದಲ್ಲಿದೆ.
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯ
ಪ್ರಕಟಣೆ	:	ಗಿರಿಜಾ ಟಿ., ದಾವಣಗೆರೆ ಇದು ನಮ್ಮ ಜಿಲ್ಲೆ, ಪು.೫೦೭

ಸಾರಥಿಯಾದ ಅರುಣನು ಏಳು ಅಶ್ವಗಳನ್ನು ಮುನ್ನಡೆಸುತ್ತಿರುವ ಪೀಠವನ್ನು ರಚಿಸಿದ್ದು, ಅದರ ಮೇಲೆ ಸ್ಥಾನಿಕರೂಪದಲ್ಲಿ ಆಸೀನವಾಗಿದ್ದು ಕರಂಡಮಕುಟ, ಕಿರೀಟ ಜಟಾಧಾರಿಯಾಗಿ, ದ್ವಿಭುಜಧಾರಿಯಾಗಿರುವ ಸೂರ್ಯನಾರಾಯಣ ಶಿಲ್ಪವು, ಕೈಗಳು ಅಭಯ ಮುದ್ರೆಯಲ್ಲಿವೆ. ಶಿಲ್ಪದ ಹಿಂಭಾಗದ ಎರಡು ಬಿಂದಿಗೆಯಿಂದ ಪ್ರವಹಿಸುತ್ತಿರುವ ಬೆಳಕಿನ ಕಿರಣಗಳಿಗೆ ಅಭಯ ಮುದ್ರೆ ನೀಡಲಾಗುತ್ತಿದೆ. ಈ ಬೆಳಕು ಜಗತ್ತಿಗೆ ಹರಡಲಿ ಎಂಬುವ ಉದ್ದೇಶವಾಗಿದೆ. ಭುಜಕೀರ್ತಿ ಪತ್ರಕುಂಡಲ, ಕಂಠಹಾರ, ಮಣಿಸರ, ಯಜ್ಞೋಪವಿತ, ಉದರಬಂಧ, ಕಾಲುಸರ, ಕಿಂಕಿಣಿಯ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಮತ್ತು ಮಕರತೋರಣದ ಅಲಂಕರಣೆ ಇದೆ. ಅದರಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದ್ದು, ಪೀಠದಲ್ಲಿ ಛಾಯಾದೇವಿ ಮತ್ತು ಸಂಜ್ಞಾದೇವಿಯರು ಚಾಮರವನ್ನು ಹಿಡಿದು ಸ್ಥಾನಿಕರೂಪದಲ್ಲಿ ಆಸೀನರಾಗಿದ್ದಾರೆ. ಈ ಶಿಲ್ಪದ ವಿಶೇಷತೆಯೆಂದರೆ ಚನ್ನಗಿರಿ ತಾಲ್ಲೂಕಿನಲ್ಲಿ ಲಭ್ಯವಾದ ಅತ್ಯಂತ ಸುಂದರ ಮತ್ತು ಬಹಳ ಅಪರೂಪವಾದ ಸೂರ್ಯನಾರಾಯಣ ಮೂರ್ತಿಶಿಲ್ಪವಾಗಿದೆ.

ಶಿಲ್ಪ	:	ಹರಿಹರೇಶ್ವರ
ಗ್ರಾಮ	:	ಅಲಕನಾಳು
ಸ್ಥಳ	:	ಈಶ್ವರ ದೇವಾಲಯದ ನವರಂಗದಲ್ಲಿದೆ.
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೨ನೇ ಶತಮಾನ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೨೪೬

ಹರಿ(ವಿಷ್ಣು) ಮತ್ತು ಹರ(ಶಿವ)ನ ಪ್ರತಿಮಾಲಕ್ಷಣಗಳ ಸಂಯೋಜನೆ ಒಂದೇ ಶಿಲ್ಪದಲ್ಲಿ ಮಾಡಿರುವುದರಿಂದ ಹರಿಹರೇಶ್ವರ ಎಂದು ಕರೆಯುತ್ತಾರೆ. ಎಡಭಾಗದಲ್ಲಿ ಹರನ- ಬಲಭಾಗದಲ್ಲಿ ಹರಿಯ ಪ್ರತಿಮಾಲಕ್ಷಣ ಕಾಣಬಹುದಾಗಿದೆ. ಪೀಠದಲ್ಲಿ ಸ್ಥಾನಿಕರೂಪದಲ್ಲಿ ನಿಂತಿರುವ ಶಿಲ್ಪವು ಜಟಾಮಕುಟ ಮತ್ತು ಕಿರೀಟ ಮಕುಟಧಾರಿಯಾಗಿದ್ದು, ಚತುರ್ಭುಜಧಾರಿಯಾಗಿದ್ದು ಕ್ರಮವಾಗಿ ಕೈಗಳಲ್ಲಿ ಎಡಭಾಗದಲ್ಲಿ ಅಭಯ ತ್ರಿಶೂಲ, ಬಲಭಾಗದಲ್ಲಿ ಚಕ್ರ, ಶಂಖಗಳನ್ನು ಹಿಡಿದಿರುವರು, ಮಕರಕುಂಡಲ, ಪತ್ರಕುಂಡಲ, ಸರ, ಉದರಬಂಧ, ಯಜ್ಞೋಪವಿತ, ಕಿಂಕಣಿಗಳಿಂದ ಅಲಂಕೃತಗೊಂಡಿರುವನು. ಪೀಠದ ಎಡಭಾಗದಲ್ಲಿ ನಂದಿ ಮತ್ತು ಪಾರ್ವತಿಯ ಶಿಲ್ಪ, ಬಲಭಾಗದಲ್ಲಿ ಲಕ್ಷ್ಮೀ ಹಾಗೂ ಗರುಡರ ಶಿಲ್ಪಗಳು ಸ್ಥಾನಿಕರೂಪದಲ್ಲಿ ನಿಂತಿವೆ. ಚನ್ನಗಿರಿ ತಾಲ್ಲೂಕಿನ ಹರಿಹರೇಶ್ವರನ ಶಿಲ್ಪವು ಲಕನಾಳು ಗ್ರಾಮದಲ್ಲಿ ಮಾತ್ರ ಲಭ್ಯವಾಗಿದೆ. ಅಂದರೆ ಈ ಕಾಲಘಟ್ಟದಲ್ಲಿ ಈ ಪ್ರದೇಶದಲ್ಲಿ ಹರಿಹರನು ಒಂದೇ ಎಂದು ಆರಾಧಿಸುವ ಪಂಥ ಅಸ್ತಿತ್ವದಲ್ಲಿತ್ತೆಂದು ತಿಳಿದುಬರಲು ಈ ಶಿಲ್ಪವು ನಿದರ್ಶನವಾಗಿದೆ.

ಶಿಲ್ಪ	:	ಬೇಟೆ ರಂಗನಾಥ
ಗ್ರಾಮ	:	ಚನ್ನಗಿರಿ
ಸ್ಥಳ	:	ಕೋಟೆಯ ಮೇಲಿನ ರಂಗನಾಥ ದೇವಾಲಯದಲ್ಲಿದೆ
ವಸ್ತು	:	ಕಪ್ಪು ಕಲ್ಲು
ಕಾಲ	:	ಕ್ರಿ.ಶ. ೧೫ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಎಂ. ಎ. ಆರ್. ವರದಿ, ೧೯೩೭, ಪು.೧೧೪

ಪೀಠದ ಮೇಲೆ ಸ್ಥಾನಿಕರೂಪದಲ್ಲಿ ನಿಂತಿರುವ ಬೇಟೆ ರಂಗನಾಥನು ಕಿರೀಟಮುಕುಟ, ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಅಭಯ ಮುದ್ರೆ, ಬಿಲ್ಲು ಮತ್ತು ಧನಸ್ಸು, ಖಡ್ಗವನ್ನು ಹಿಡಿದ ಕೊಂಡಿರುವನು. ಭುಜಕೀರ್ತಿ, ಪತ್ರಕುಂಡಲ, ಕಂಠಹಾರ, ಮಣಿಸರ, ವೈಜಯಂತಿಮಾಲೆ, ಕೆಯೂರ, ಕಂಕಣ, ಯಜ್ಞೋಪವಿತ, ಉದರಬಂಧ, ಕಾಲುಸರ, ಕಿಂಕಣಿಯಂತಹ

ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಪೀಠದಲ್ಲಿ ಭೂದೇವಿ ಮತ್ತು ಶ್ರೀದೇವಿಯರ ಶಿಲ್ಪಗಳಿವೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಮತ್ತು ಮಕರತೋರಣದ ರಚನೆಯಿದೆ.

ಶಿಲ್ಪ	:	ಸೂರ್ಯ
ಗ್ರಾಮ	:	ಮಸಣಿಕೆರೆ
ಸ್ಥಳ	:	ಈಶ್ವರ ದೇವಾಲಯ
ವಸ್ತು	:	ಬಳಪದ ಕಲ್ಲು
ಕಾಲ	:	೧೨ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೨೪೯

ಅರುಣನು ಏಳು ಅಶ್ವಗಳನ್ನು ಮುನ್ನಡೆಸುತ್ತಿರುವ ಪೀಠದ ಮೇಲೆ ಸೂರ್ಯನು ಸ್ಥಾನಿಕರೂಪದಲ್ಲಿ ನಿಂತಿರುವನು ಕಿರೀಟಧಾರಿ, ದ್ವಿಭುಜಧಾರಿಯಾಗಿದ್ದು ಎರಡು ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವನು. ಕಂಠಹಾರ, ಮಣಿಸರ, ಕಂಕಣ, ಕೆಯೂರ, ಪಾದಸರ, ಕಿಂಕಿಣಿ, ಆಭರಣಗಳಿಂದ ಅಲಂಕೃತಗೊಂಡಿರುವನು. ಪೀಠದ ಬಲ ಮತ್ತು ಎಡಭಾಗದಲ್ಲಿ ಛಾಯಾದೇವಿ ಮತ್ತು ಸಂಜ್ಞಾದೇವಿ ಇರುವರು. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಮತ್ತು ತೋರಣದ ಅಲಂಕರಣವಿದೆ.

ಶಿಲ್ಪ	:	ಗರುಡ
ಗ್ರಾಮ	:	ದೇವರಹಳ್ಳಿ
ಸ್ಥಳ	:	ರಂಗನಾಥ ದೇವಾಲಯದ ಎದುರಿನ ಗರುಡ ಮಂಟಪದಲ್ಲಿದೆ.
ವಸ್ತು	:	ಕಣಶಿಲೆ
ಕಾಲ	:	ಕ್ರಿ.ಶ. ೧೫ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಎಂ. ಎ. ಆರ್. ೧೯೩೭, ಪು.೧೧೪

ಸ್ಥಾನಿಕರೂಪದಲ್ಲಿ ನಿಂತಿರುವ ಶಿಲ್ಪವು ಕರಂಡಮುಕುಟಧಾರಿ, ದ್ವಿಭುಜಧಾರಿಯಾಗಿ, ಅಂಜಲಿ ಮುದ್ರೆಯಲ್ಲಿದೆ. ಭುಜಕೀರ್ತಿ, ಕರ್ಣಕುಂಡಲ, ರತ್ನಮಾಲ, ಸರ್ಪಕುಂಡಲ, ಮಣಿಸರ, ಕೆಯೂರ, ಕಂಕಣ, ಕಟಿವಸ್ತ್ರ, ಪಾದಸರ, ಕಿಂಕಿಣಿ, ವಸ್ತ್ರಗಳಿಂದ ಅಲಂಕೃತಗೊಂಡಿದೆ. ಬೆನ್ನಹಿಂಭಾಗದಲ್ಲಿ ರೆಕ್ಕೆಗಳಿವೆ. ಮೀಸೆಯು ಎದ್ದುಬರುವಂತೆ ಕಂಡರಿಸಲಾಗಿದೆ. ಗರುಡ ಶಿಲ್ಪದ ಮುಖದಲ್ಲಿ ಭಕ್ತಿ ಮತ್ತು ಗಾಂಭೀರ್ಯತೆ ಕಾಣುತ್ತದೆ.

ಚನ್ನಗಿರಿ ತಾಲ್ಲೂಕಿನಲ್ಲಿ ವಿಷ್ಣು, ಕೇಶವ, ಲಕ್ಷ್ಮೀನಾರಾಯಣ, ಸೂರ್ಯನಾರಾಯಣ, ಹರಿಹರೇಶ್ವರ, ಬೇಟೆರಂಗನಾಥ, ಸೂರ್ಯ ಮತ್ತು ಗರುಡನ ಮೂರ್ತಿ ಶಿಲ್ಪಗಳು ದೊರೆಕಿರುವುದರಿಂದ ವೈಷ್ಣವ ಪಂಥದ ಆರಾಧಕರು ಇಲ್ಲಿ ನೆಲೆಸಿದ್ದಾರೆಂದು ಈ ಶಿಲ್ಪಗಳಿಂದ ತಿಳಿದುಬರುತ್ತದೆ.

೫.೩. ಶಾಕ್ತ ಶಿಲ್ಪಗಳು

ಭಾರತದ ಧಾರ್ಮಿಕ ಇತಿಹಾಸವನ್ನು ಅವಲೋಕಿಸಿದರೆ ಶಾಕ್ತ ಪಂಥದ ಆರಾಧನೆಯನ್ನು ಕಾಣಬಹುದಾಗಿದೆ. ಸಿಂಧೂಬಯಲಿನ ನಾಗರೀಕತೆಯ ಜನರ ಪ್ರಮುಖ ಆರಾಧ್ಯ ದೈವವೆಂದರೆ ಮಾತೃದೇವತೆ. ವೇದಗಳ ಕಾಲದಲ್ಲಿಯೂ ಸ್ತ್ರೀ ದೇವತೆಗಳ ಆರಾಧನ ಪದ್ಧತಿ ಅಸ್ತಿತ್ವದಲ್ಲಿತ್ತು. ಋಗ್ವೇದದ ಮೂರನೇ ಭಾಗದಲ್ಲಿ ಗಾಯಿತ್ರಿಮಂತ್ರದ ಶ್ಲೋಕಗಳು ಕಂಡುಬರುತ್ತವೆ.[೫೫]

ಕರ್ನಾಟಕದಲ್ಲಿ ಕ್ರಿ.ಶ. ೬ನೇ ಶತಮಾನದಲ್ಲಿ ಶಾಕ್ತ ಆರಾಧನೆಯ ಪಂಥದ ಕುರುಹುಗಳು ಕಂಡುಬಂದವು. ಕದಂಬರು ವೈಜಯಂತಿ, ಬಾದಾಮಿ ಚಾಲುಕ್ಯರು ಬನಶಂಕರಿ, ವಿಜಯನಗರ ಅರಸರ ಕಾಲದಲ್ಲಿ ಭುವನೇಶ್ವರಿ, ಮೈಸೂರಿನ ಅರಸರು ಚಾಮುಂಡೇಶ್ವರಿ ಆರಾಧನೆಯು ರಾಜವಂಶ ಮತ್ತು ಆಳರಸರ ಪ್ರೋತ್ಸಾಹದಿಂದ ಬೆಳೆದುಬಂದಿತು.[೫೬] ಶಕ್ತಿ ದೇವತೆಯಾದ ಪಾರ್ವತಿ, ಲಕ್ಷ್ಮೀ, ಸರಸ್ವತಿ, ಮಹಿಷಮರ್ಧಿನಿ, ಸಪ್ತಮಾತೃಕೆಯರ ಆರಾಧನೆಯು ಚನ್ನಗಿರಿ ತಾಲ್ಲೂಕಿನಲ್ಲಿ ಶಾಕ್ತಪಂಥದ ದೇವತೆಗಳ ಆರಾಧನೆ ಇತ್ತೆಂಬುದರ ಬಗ್ಗೆ ಇಲ್ಲಿನ ಶಿಲ್ಪಗಳ ಆಧಾರದಿಂದ ತಿಳಿದುಬರುತ್ತದೆ.

ಶಿಲ್ಪ	:	ಮಹಿಷಾಸುರ ಮರ್ಧಿನಿ
ಗ್ರಾಮ	:	ಅಲಕನಾಳು
ಸ್ಥಳ	:	ಈಶ್ವರ ದೇವಾಲಯದಲ್ಲಿದೆ..
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ಸು. ೧೧ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ, ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೨೩೦

ಪೀಠದ ಮೇಲಿನ ಶಿಲ್ಪವು ಕಿರೀಟಧಾರಿ, ಚತುರ್ಭುಜಧಾರಿಯಾಗಿದ್ದು ಕೈಗಳಲ್ಲಿ ಕ್ರಮವಾಗಿ ಚಕ್ರ, ಶಂಖ, ತ್ರಿಶೂಲ, ಒಂದು ಕೈಯಲ್ಲಿ ಅಸುರನ ತಲೆಯನ್ನು ಹಿಡಿದಿದ್ದು, ಕಿವಿಯಲ್ಲಿ ಚಕ್ರಕುಂಡಲ, ಕೈಯೂರ, ಕೈಕಡಗ, ಕೊರಳಲ್ಲಿ ಕಂಠಹಾರ, ವೈಜಂತಿಹಾರಗಳಿವೆ. ನಡುವಿನಲ್ಲಿ

ಕಟಿಬಂಧ, ಕಾಲ್ಕಡಗ, ಸೀರೆಯನ್ನು ಧರಿಸಿದ್ದು, ವೈಜಾಯಂತಿ ಮಾಲೆಯು ಎರಡು ಕಾಲುಗಳವರೆಗೆ ಇಳಿಬಿದ್ದಿದೆ.

ಬಲಗಾಲಿನ ಬಳಿ ಸಿಂಹವು ಅಸುರನನ್ನು ಹಿಡಿದಿರುವಂತೆ, ದೇವಿಯು ಎಡಗಾಲನ್ನು ಪೀಠದ ಮೇಲಿಟ್ಟಿದ್ದಾಳೆ. ಬಲಗಾಲಿನಲ್ಲಿ ಮಹಿಷನ ತಲೆಯನ್ನು ತುಳಿದು ತ್ರಿಶೂಲದಿಂದ ಮಹಿಷನನ್ನು ದೇವಿಯು ತಿವಿಯುವಂತೆ ಕಂಡರಿಸಲಾಗಿದೆ. ಮಹಿಷನ ಕೈಗಳಲ್ಲಿ ಖಡ್ಗ, ಖೇಟಗಳಿವೆ. ಅಲಂಕೃತಗೊಂಡಿದ್ದಾನೆ. ಅಸುರನ ಬಳಿ ಒಂದು ಸಿಂಹವಿದೆ. ಶಿಲ್ಪದ ಹಿಂಭಾಗದಲ್ಲಿ ಸುತ್ತಲು ಪ್ರಭಾವಳಿ ಇದೆ. ಈ ಶಿಲ್ಪದಲ್ಲಿ ಎರಡು ಸಿಂಹಗಳಿರುವುದು ವಿಶೇಷವಾಗಿದೆ. ಯಾವಾಗಲೂ ದೇವಿಯು ಸಿಂಹದ ಮೇಲೆ ಆಸಿನಾಳಾಗಿರುತ್ತಾಳೆ. ಅದರ ಪಕ್ಕದಲ್ಲಿ ಮತ್ತೊಂದು ಸಿಂಹವಿರುವುದು ವಿಶೇಷವಾಗಿದೆ.

ಶಿಲ್ಪ	:	ಮಹಿಷಾಸುರ ಮರ್ಧಿನಿ
ಗ್ರಾಮ	:	ಕಲ್ಕೆರೆ
ಸ್ಥಳ	:	ಮೂಲತಃ ಬೆಳೇಶ್ವರ ದೇವಾಲಯದಲ್ಲಿನ ಶಿಲ್ಪ ಪ್ರಸ್ತುತ ಶಿವಮೊಗ್ಗದ ಶಿವಪ್ಪನಾಯಕ ವಸ್ತು ಸಂಗ್ರಹಾಲಯದಲ್ಲಿದೆ.
ವಸ್ತು	:	ಬಳಪದ ಶಿಲೆ
ಕಾಲಮಾನ	:	೧೧ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಕೆ.ಜಿ.ಭಟ್‌ಸೂರಿ, ಎಂಟಿಕ್ವೆಟಿಸ್ ಇನ್ ಗವರ್ನ್‌ಮೆಂಟ್ ಮ್ಯೂಸಿಯಂ, ಶಿವಮೊಗ್ಗ ೧೯೯೫, ಪು.೩೩

ಕಿರೀಟಮಕುಟಧಾರಿಯಾಗಿದ್ದು, ಚತುರ್ಭುಜಧಾರಿಯಾಗಿ ಕೈಗಳಲ್ಲಿ ಕ್ರಮವಾಗಿ, ಬಿಲ್ಲು, ಚಕ್ರ, ತ್ರಿಶೂಲ, ಮಹಿಷನ ಮುಖವನ್ನು ಹಿಡಿದಿದೆ. ದೇವಿಯು ಕಿವಿಯಲ್ಲಿ ಚಕ್ರಕುಂಡಲ, ಕೊರಳಲ್ಲಿ ಕಂಠಾಭರಣ, ಹಾರ, ಕೈಯಲ್ಲಿ ಕೆಯೂರ, ಕಾಲುಗಳಲ್ಲಿ ಕಾಲ್ಕಡಗಗಳಿಂದ ಅಲಂಕೃತಗೊಂಡಿದ್ದಾಳೆ. ತ್ರಿಶೂಲವನ್ನು ಮಹಿಷನ ಎದೆಗೆ ತಿವಿಯುತ್ತಿದ್ದು, ಮಹಿಷದ ಮುಖವನ್ನು ಗಟ್ಟಿಯಾಗಿ ಹಿಡಿದಿದ್ದು, ಮಹಿಷ(ಕೋಣ)ನಿಗೆ ದೇವಿ ಬಿಟ್ಟ ಬಾಣವೊಂದು ತಗುಲಿದೆ. ಬಲಗಾಲನ್ನು ಮಹಿಷನ ಎದೆಯನ್ನು ತುಳಿಯುವಂತಿದ್ದು, ಎಡಗಾಲು ಪೀಠದ ಮೇಲಿದೆ. ಶಿಲ್ಪದ ಸುತ್ತಲೂ ಪ್ರಭಾವಳಿಯಿಂದ ಅಲಂಕೃತವಾಗಿದೆ.

ಶಿಲ್ಪ : ಮಹಿಷಮರ್ದಿನಿ

ಗ್ರಾಮ : ನಲ್ಲೂರು

ಸ್ಥಳ : ದುರ್ಗಿದೇವಾಲಯ.

ವಸ್ತು : ಕಪ್ಪುಕಲ್ಲು

ಕಾಲಮಾನ : ೧೧ನೇ ಶತಮಾನ

ರಾಜವಂಶ : ಕಲ್ಯಾಣದ ಚಾಲುಕ್ಯ

ಪ್ರಕಟಣೆ : ಹೆಚ್. ತಿಪ್ಪೇಸ್ವಾಮಿ ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೨೩೧

ಪಾಣಿಪೀಠದ ಮೇಲೆ ಸಿಂಹವು ಗಾಂಭಿರ್ಯದಿಂದ ನಿಂತಿದ್ದು, ಅದರ ಮೇಲೆ ಅಸೀನವಾಗಿರುವ ದೇವಿಯು ಕಿರೀಟಮುಕುಟಧಾರಿಯಾಗಿ, ಚತುರ್ಭುಜಧಾರಿಯಾಗಿ, ಕೈಗಳಲ್ಲಿ ಕ್ರಮವಾಗಿ, ಶಂಖ, ಚಕ್ರ, ತ್ರಿಶೂಲ, ಎಡಗೈ ಹಸ್ತ ಮಹಿಷನ ಮುಖವನ್ನು ಹಿಡಿದಿದೆ. ದೇವಿಯು ಭುಜಕೀರ್ತಿ, ಕಿವಿಗಳಲ್ಲಿ ಚಕ್ರಕುಂಡಲ, ಕೊರಳಲ್ಲಿ ಕಂಠಹಾರ, ಸರ, ಕೈಗಳಲ್ಲಿ ಕೆಯೂರ, ಬೆರಳುಗಳಲ್ಲಿ ಉಂಗುರ, ಕಾಲುಗಳಲ್ಲಿ ದಪ್ಪನೆಯ ಕಾಲ್ಕಡಗ, ಕುಚಬಂಧ, ಕಟಿಬಂಧ, ಸೀರೆ ಧರಿಸಿದ್ದು ಇವುಗಳಿಂದ ಅಲಂಕೃತಗೊಂಡಿದ್ದಾಳೆ. ಎಡಗಾಲಿನಿಂದ ಮಹಿಷವನ್ನು ತುಳಿಯುತ್ತಿದ್ದು, ಬಲಗಾಲು ಪೀಠದ ಮೇಲಿದೆ. ಶಿಲ್ಪದ ಹಿಂಭಾಗ ಪ್ರಭಾವಳಿಯಿಂದ ಅಲಂಕೃತಗೊಂಡಿದೆ.

ಶಿಲ್ಪ : ಮಹಿಷಸೂರ ಮರ್ಧಿನಿ

ಗ್ರಾಮ : ಬಸವಪಟ್ಟಣ

ಸ್ಥಳ : ಶಿವಪ್ಪನಾಯಕ ವಸ್ತು ಸಂಗ್ರಹಾಲಯ, ಶಿವಮೊಗ್ಗ (ಸ್ವಾದಿನ ಸಂಖ್ಯೆ: ೧೧೮೪)

ವಸ್ತು : ಬಳಪದ ಶಿಲೆ

ಕಾಲಮಾನ : ೧೧ನೇ ಶತಮಾನ

ರಾಜವಂಶ : ಹೊಯ್ಸಳ

ಪ್ರಕಟಣೆ : ಕೆ.ಜಿ.ಭಟ್‌ಸೂರಿ ಎಂಟಿಕ್ವೆಟಿಸ್ ಇನ್ ಗವರ್ನ್‌ಮೆಂಟ್ ಮ್ಯೂಸಿಯಂ, ಶಿವಮೊಗ್ಗ– ಎ ಸ್ಟಡಿ, ೧೯೯೫, ಪು.೩೨

ಮಹಿಷಮರ್ಧಿನಿಯು ಕರಂಡಮುಕುಟಧಾರಿಯಾಗಿ, ಚತುರ್ಭುಜಗಳನ್ನು ಹೊಂದಿದ್ದು, ಕೈಗಳಲ್ಲಿ ಕ್ರಮವಾಗಿ, ಶಂಖ, ಚಕ್ರ, ತ್ರಿಶೂಲವನ್ನು ಹಿಡಿದಿದ್ದಾಳೆ, ದೇವಿಯು ಭುಜಕೀರ್ತಿ, ಕಿವಿಗಳಲ್ಲಿ ಚಕ್ರಕುಂಡಲ, ಕಂಠಹಾರ, ಕೈಯೂರ, ಕಾಲ್ಕಡಗ, ಕುಚಬಂಧ, ಕಟಿಬಂಧ, ಸೀರೆವಸ್ತ್ರಗಳಿಂದ ಅಲಂಕೃತಗೊಂಡಿದ್ದಾಳೆ.

ಮುಂಭಾಗದ ಎರಡು ಕೈಗಳಿಂದ ತ್ರಿಶೂಲ ಹಿಡಿದು, ಅದನ್ನು ಅಸುರನ ಎದೆಗೆ ತಿವಿಯುತ್ತಿದ್ದಾಳೆ. ಬಲಗಾಲಿನಿಂದ ಮಹಿಷವನ್ನು ತುಳಿಯುವಂತೆ ಕಂಡರಿಸಲಾಗಿದೆ. ಮಹಿಷನ ಮುಖದಿಂದ ಅಸುರನು ಹೊರಬರುವಂತೆ ಶಿಲ್ಪಿಯು ಈ ರೀತಿಯ ಶಿಲ್ಪವನ್ನು ಕಂಡರಿಸಿದ್ದಾನೆ. ಚನ್ನಗಿರಿ ತಾಲ್ಲೂಕಿನಲ್ಲಿ ಅಂಬಿಕಾ, ಕಾಳಿ, ಕುಕ್ಕೆವಾಡೇಶ್ವರಿ, ಗಜಲಕ್ಷ್ಮೀ, ಸಪ್ತಮಾತೃಕೆಯರ ಮೂರ್ತಿಶಿಲ್ಪಗಳು ಲಭ್ಯವಾಗಿವೆ.

ಶಿಲ್ಪ	:	ಅಂಬಿಕಾ
ಗ್ರಾಮ	:	ಕಲ್ಕೆರೆ
ಸ್ಥಳ	:	ಕೆಳದಿ ವಸ್ತುಸಂಗ್ರಹಾಲಯ(ಅಅ.೧೧೭೬)
ವಸ್ತು	:	ಬಳಪದಕಲ್ಲು
ಕಾಲಮಾನ	:	೧೨ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಕೆ.ಜಿ.ಭಟ್‌ಸೂರಿ, ಎಂಟಿಕ್ವೆಟಿಸ್ ಇನ್ ಗವರ್ನ್‌ಮೆಂಟ್ ಮ್ಯೂಸಿಯಂ, ಶಿವಮೊಗ್ಗ- ಎ ಸ್ಟಡಿ, ೧೯೯೫, ಪು.೪೦

'ಅಂಬಿಕಾ' ಎಂದರೆ ತಾಯಿ ಎಂದರ್ಥ. ಲಲಿತಾಸನದಲ್ಲಿ ಎತ್ತರದ ಪೀಠದ ಮೇಲೆ ಆಸೀನಳಾಗಿದ್ದು, ಕರಂಡಮುಕುಟಧಾರಿಯಾಗಿದ್ದಾಳೆ. ನಾಲ್ಕು ಕೈಗಳು ಮುರಿದು ಹೋಗಿವೆ. ಎಡಭಾಗದಲ್ಲಿ ಮಗುವಿಗೆ ಹಾಲು ಉಣಿಸುವಂತೆ ಗೋಚರಿಸಿದೆ. ಬಲಗಾಲು ಮುಂದಿದೆ. ಅಂಬಿಕೆಯ ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಹಾರ, ಸರ, ಕೈಗಳಲ್ಲಿ ಕೈಕಡಗ, ಕಾಲುಗಳಲ್ಲಿ ಕಾಲ್ಕಡಗ, ಭುಜಕೀರ್ತಿ, ಕಟಿಬಂಧ, ಕುಚುಹಾರಗಳಿಂದ ಅಲಂಕೃತಗೊಂಡಿದ್ದಾಳೆ. ಶಿಲ್ಪದ ಹಿಂದೆ ಪ್ರಭಾವಳಿಯ ರಚನೆ ಇದೆ.

ಶಿಲ್ಪ	:	ಕಾಳಿ
ಗ್ರಾಮ	:	ದೇವರಹಳ್ಳಿ
ಸ್ಥಳ	:	ಬೆಟ್ಟದ ಮೇಲಿನ ಚೌಡಮ್ಮನ ಗುಡಿಯಲ್ಲಿದೆ
ವಸ್ತು	:	ಬಳಪದಕಲ್ಲು
ಕಾಲಮಾನ	:	ಕ್ರಿ.ಶ. ೧೪ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಎಂ.ಎ.ಆರ್., ೧೯೩೭, ಪ್ರಕಟಣೆ ೧೯೩೮, ಪು.೧೧೫

ಪೀಠದ ಮೇಲೆ ಆಸೀನವಾಗಿರುವ ಕಾಳಿಶಿಲ್ಪವು, ಕರಂಡಮಕುಟಧಾರಿ, ಚತುರ್ಭುಜ ಹೊಂದಿದ್ದು ಕ್ರಮವಾಗಿ ಕೈಗಳಲ್ಲಿ ತ್ರಿಶೂಲ, ಡಮರುಗ, ಖಡ್ಗ, ರುಂಡ ಹಿಡಿದಿದೆ, ಕಾಳಿಯು ಕಿವಿಗಳಲ್ಲಿ ಅಗಲವಾದ ಪತ್ರಕುಂಡಲ, ಕಂಠಾಭರಣ, ಕೊರಳಹಾರ, ಕೈಯಲ್ಲಿ ಕೆಯೂರ, ಕೈಕಡಗ, ಕಾಲುಗಳಲ್ಲಿ ಕಾಲ್ಕಡಗ, ಎದೆಯಲ್ಲಿ ಕುಚಬಂಧ, ಸೊಂಟಕ್ಕೆ ಕಟಿಬಂಧ, ಸೀರೆ ವಸ್ತ್ರಗಳಿಂದ ಅಲಂಕೃತಗೊಂಡಿದ್ದಾಳೆ. ಪಾದದ ಭಾಗದಲ್ಲಿ ಚಿಕ್ಕ ಸಿಂಹದ ಶಿಲ್ಪವಿದೆ. ಶಿಲ್ಪದ ಹಿಂಭಾಗ ಪ್ರಭಾವಳಿಯಿಂದ ಅಲಂಕೃತವಾಗಿದೆ.

ಶಿಲ್ಪ	:	ಕುಕ್ಕವಾಡೇಶ್ವರಿ
ಗ್ರಾಮ	:	ಜೋಳದಹಾಳ್
ಸ್ಥಳ	:	ಅಮ್ಮನ ಗುಡ್ಡ
ವಸ್ತು	:	ಕಪ್ಪುಕಲ್ಲು
ಕಾಲಮಾನ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಪ್ರಕಟಣೆ	:	ಅಪ್ರಕಟಿತ

ಕುಕ್ಕವಾಡೇಶ್ವರಿಯು ಮಲೆನಾಡಿನ ಚೌಡಮ್ಮನಾಗಿದ್ದಾಳೆ. ಬುಡಕಟ್ಟು ಜನರು ಸು.ಕ್ರಿ.ಶ ೮೦೦ ಕ್ಕಿಂತಲೂ ಪೂರ್ವದಲ್ಲಿಯೇ ಆರಾಧನೆ ಮಾಡಿದ್ದರೆಂದು ಮೌಖಿಕವಾಗಿ ಜನಪದರು ಮಾಹಿತಿ ನೀಡುತ್ತಾರೆ. ಸ್ಥಳೀಯರು ಕುಕ್ಕವಾಡದ ಅಮ್ಮ, ಕುಕ್ಕವಾಡೇಶ್ವರಿ, ರೇಣುಕಾ ಯಲ್ಲಮ್ಮ, ಅಂಬಾಭವಾನಿ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಪೀಠದ ಮೇಲೆ ಕುಕ್ಕವಾಡೇಶ್ವರಿಯ ಶಿಲ್ಪವು ಬಲತಾಸನದಲ್ಲಿ ಆಸೀನವಾಗಿದ್ದು, ಚತುರ್ಭುಜವನ್ನು ಹೊಂದಿದ್ದು, ಕ್ರಮವಾಗಿ ಕೈಗಳಲ್ಲಿ ತ್ರಿಶೂಲ, ಡಮರುಗ, ಖಡ್ಗ, ಫಲವನ್ನು ಹಿಡಿದಿದ್ದಾಳೆ. ದೇವಿಯು ಕೊರಳಲ್ಲಿ ಕಂಠಹಾರ, ಸರ, ಕೈಗಳಲ್ಲಿ ಕೆಯೂರ, ಕೈಕಡಗ, ಎದೆಯಲ್ಲಿ ಕುಚಬಂಧ, ಸೊಂಟಕ್ಕೆ ಕಟಿಬಂಧ, ಸೀರೆ ವಸ್ತ್ರವನ್ನು ಧರಿಸಿದ್ದು, ಕಾಲುಗಳಲ್ಲಿ ಕಲ್ಗಡಗಗಳಿಂದ ಅಲಂಕೃತಗೊಂಡಿದ್ದಾಳೆ. ಕುಕ್ಕವಾಡೇಶ್ವರಿಯು ಸರ್ಪದೇವತೆಯೆಂದು ಸ್ಥಳೀಯರು ಆರಾಧಿಸುತ್ತಾರೆ.

ಸಪ್ತಮಾತೃಕೆಯರು

ಸಾಮಾನ್ಯವಾಗಿ ಉತ್ತರ ವೇದಗಳ ಕಾಲದಲ್ಲಿ ಪುರುಷ ದೇವತೆಗಳಿಗೆ ಸ್ತ್ರೀದೇವತೆಗಳನ್ನು ಶಕ್ತಿದೇವತೆಗಳೆಂದು ನಿರೂಪಿಸಿ ಅಳವಡಿಸಿದರು. ಶಿವನಿಗೆ ಶಿವೇಶಕ್ತಿ, ವಿಷ್ಣುವಿಗೆ ಲಕ್ಷ್ಮೀ, ಬ್ರಹ್ಮನಿಗೆ ಸರಸ್ವತಿ, ಗಣಪತಿಗೆ ಪುಷ್ಪ, ಅನಂತನಿಗೆ ತುಷ್ಟಿ, ಕಾಲನಿಗೆ ರಾತ್ರಿ, ಸೂರ್ಯನಿಗೆ ಸಂಜ್ಞೆ, ಇಂದ್ರನಿಗೆ ಶಚಿ, ದಕ್ಷನಿಗೆ ದಕ್ಷಿಣಿ, ಸಕಂದನಿಗೆ ದೇವಸೇನೆಯನ್ನು ಜೋಡಿಸಲಾಯಿತು. ವ್ಯಾಖ್ಯಾನಕಾರನಾದ

ಉತ್ಪಲನು ಸಪ್ತಮಾತೃಕೆಯರ ಹೆಸರುಗಳನ್ನು ಈ ರೀತಿ ಹೇಳಿದ್ದಾನೆ. ಬ್ರಾಹ್ಮಿ, ವೈಷ್ಣವಿ, ಮಹೇಶ್ವರಿ, ಕೌಮಾರಿ, ಇಂದ್ರಾಣಿ, ಯಮಿ, ವಾರುಣಿ, ಕೌಬೇರಿ ಇವರುಗಳು ಕ್ರಮವಾಗಿ ಬ್ರಹ್ಮ ವಿಷ್ಣು ಮಹೇಶ್ವರ, ಸ್ಕಂದ, ಇಂದ್ರ, ಯಮ, ವರುಣ, ಕುಬೇರ ಈ ದೇವರುಗಳ ಪತ್ನಿಯರಾಗಿದ್ದಾರೆ. ಈ ಸಪ್ತ ಮಾತೃಕೆಯರನ್ನು ಒಂದೇ ಫಲಕದಲ್ಲಿ ತೋರಿಸಿರುತ್ತಾರೆ.[೫೮]

ಸಾಮಾನ್ಯವಾಗಿ ಅವರು ಕ್ರಮವಾಗಿ ಬ್ರಾಹ್ಮಿ ಮಹೇಶ್ವರಿ, ಕೌಮಾರಿ ಅಥವಾ ಕಾರ್ತಿಕೇಯ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ, ಬ್ರಾಹ್ಮೀಯ ಬಲಭಾಗದಲ್ಲಿ ವೀರಭದ್ರನನ್ನು, ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿರುತ್ತಾರೆ.[೫೯]

ಬ್ರಾಹ್ಮಿ: ಬ್ರಾಹ್ಮಿಯು ಬ್ರಹ್ಮನ ಸತಿಯಾಗಿದ್ದು, ಕಿರೀಟ ಮುಕುಟಧಾರಿಯಾಗಿದ್ದು, ನಾಲ್ಕುಮುಖಗಳನ್ನು ಹೊಂದಿರುವಳು, ಕೈಗಳಲ್ಲಿ ಕ್ರಮವಾಗಿ ಅಭಯ, ಶೂಲ, ಅಕ್ಷಮಾಲ ಹಾಗೂ ವರದಮುದ್ರೆ ಹೊಂದಿರುವಳು. ಬ್ರಾಹ್ಮಿಯ ವಾಹನ ಹಂಸ.[೬೦]

ವೈಷ್ಣವಿ: ವಿಷ್ಣುವಿನ ಸತಿಯಾದ ವೈಷ್ಣವಿಯು ಕಿರೀಟಧಾರಿಯಾಗಿದ್ದು, ಚತುರ್ಭುಜವನ್ನು ಹೊಂದಿರುವಳು, ಕೈಗಳಲ್ಲಿ ಕ್ರಮವಾಗಿ ಅಭಯ, ಚಕ್ರ, ಶಂಖ, ವರದ ಮುದ್ರೆಯಲ್ಲಿರುವಳು. ಮುಖದಲ್ಲಿ ಮಂದಹಾಸವಿರುವುದು, ವೈಷ್ಣವಿಯ ವಾಹನ ಗರುಡವಾಗಿದೆ.[೬೧]

ಮಹೇಶ್ವರಿ: ಶಿವನ ಸತಿಯಾದ ಮಹೇಶ್ವರಿಯು ಜಟಾಮುಕುಟಧಾರಿಯಾಗಿ ಕಿರೀಟದಲ್ಲಿ ಅರ್ಧಚಂದ್ರಾಕೃತಿಯನ್ನು ಹೊಂದಿದ್ದು, ಚತುರ್ಭುಜಧಾರಿ, ಕೈಗಳಲ್ಲಿ ಕ್ರಮವಾಗಿ, ಅಭಯ, ಶೂಲ, ಅಕ್ಷಮಾಲ ಹಾಗೂ ವರದ ಮುದ್ರೆಯಲ್ಲಿದೆ. ವಾಹನವಾಗಿ ನಂದಿನಿ ಇದೆ.[೬೨]

ಕೌಮಾರಿ: ಕೌಮಾರಿಯು ಸುಬ್ರಹ್ಮಣ್ಯನ ಮಡದಿಯಾಗಿರುವುದರಿಂದ ಸಾಮಾನ್ಯವಾಗಿ ಅದೇ ರೀತಿ ರೂಪವನ್ನು ಹೊಂದಿರುವಳು. ಕಿರೀಟಧಾರಿಯಾಗಿದ್ದು, ಚತುರ್ಭುಜಧಾರಿಯಾದ ಇವಳ ಕೈಗಳು ಕ್ರಮವಾಗಿ ಅಭಯ ಶಕ್ತಿ, ಕುಕ್ಕಟ ಮತ್ತು ವರದ ಮುದ್ರೆಯಲ್ಲಿರುವಳು. ಆಭರಣಪ್ರಿಯಳು, ಇವಳ ವಾಹನ ನವಿಲು.[೬೩]

ಇಂದ್ರಾಣಿ: ಇಂದ್ರನ ಪತ್ನಿಯಾದ ಇಂದ್ರಾಣಿಯು ಕಿರೀಟವನ್ನು ಧರಿಸಿದ್ದು, ಚತುರ್ಭುಜಧಾರಿಯಾಗಿದ್ದು, ಮೂರು ಕಣ್ಣುಗಳನ್ನು ಹೊಂದಿರುವಳು. ತನ್ನ ಕೈಗಳು ಕ್ರಮವಾಗಿ ಅಭಯ ಶಕ್ತಿ, ವಜ್ರ ಮತ್ತು ವರದ ಮುದ್ರೆಯನ್ನು ಹೊಂದಿರುವಳು. ಇಂದ್ರಾಣಿಯ ವಾಹನ ಆನೆ.[೬೪]

ವರಾಹಿ: ವರಾಹನ ಸತಿಯಾದ ವರಾಹಿಯೂ ಸಹ ಹಂದಿಯ ಮುಖ, ಮನುಷ್ಯನ ದೇಹಾಕೃತಿಯನ್ನು ಹೊಂದಿರುವಳು. ಆರು ಕೈಗಳನ್ನು ಹೊಂದಿದ್ದು, ಕ್ರಮವಾಗಿ ಅಭಯ, ಖಡ್ಗ, ಬೇಟೆ, ದಂಡ, ಪಾಶ ಮತ್ತು ವರದ ಮುದ್ರೆಯಲ್ಲಿರುವಳು, ವರಾಹಿಯ ವಾಹನ ಹಂದಿಯಾಗಿದೆ.[೬೫]

ಚಾಮುಂಡಾ: ಮೂರು ಕಣ್ಣುಗಳನ್ನು ಹೊಂದಿರುವಳು, ಚಾಮುಂಡಳು ಚತುರ್ಭುಜದಾರಿಯಾಗಿದ್ದು, ಕ್ರಮವಾಗಿ ಕೈಗಳು ಅಭಯ, ಕಪಾಲ (ತಲೆಬುರುಡೆ) ಶೂಲ, ವರದ ಮುದ್ರೆಯಲ್ಲಿರುವವು. ಪದ್ಮಸಾನದಲ್ಲಿ ಕುಳಿತಿದ್ದು ರುಂಡಮಾಲೆ, ಹುಲಿಧರ್ಮ ಮತ್ತು ಯಜ್ಞೋಪವಿತವನ್ನು ಧರಿಸಿರುವಳು. ಇವಳ ವಾಹನ ಗೂಬೆ ಅಥವಾ ಗಿಡುಗ.[೬೬]

ಶಿಲ್ಪ	:	ಸಪ್ತ ಮಾತೃಕೆಯರು
ಗ್ರಾಮ	:	ಮೆದಕೆರೆ
ಸ್ಥಳ	:	ಪ್ರಸ್ತುತ ಮಧುಕೇಶ್ವರ ದೇವಾಲಯದ ಮುಂಭಾಗದಲ್ಲಿದೆ.
ವಸ್ತು	:	ಬಳಪದಕಲ್ಲು
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಕಲ್ಯಾಣದ ಚಾಲುಕ್ಯರು
ಪ್ರಕಟಣೆ	:	ಓಬಳೆಶಪ್ಪ ಎಂ.ಆರ್, ಚನ್ನಗಿರಿ ತಾಲೂಕಿನ ದೇವಾಲಯಗಳ

ಒಂದು ಅಧ್ಯಯನ, ಪು.೫೦೭

ಪ್ರಾರಂಭದಲ್ಲಿ ಸಪ್ತಮಾತೃಕೆಯರ ಶಿಲ್ಪವು, ಮಧುಕೇಶ್ವರ (ಶಿವಲಿಂಗ)ದ ಗರ್ಭಗುಡಿಯ ದ್ವಾರದ ಎಡಭಾಗದ ಗೋಡೆಯಲ್ಲಿ ನಿಲ್ಲಿಸಲ್ಪಟ್ಟಿದ್ದವು. ವೀರಭದ್ರನು ಬಲಭಾಗದಲ್ಲಿದ್ದು, ಬ್ರಾಹ್ಮಿ ನಂತರ ವೈಷ್ಣವಿ, ಮಹೇಶ್ವರಿ, ಕೌಮಾರಿ, ಇಂದ್ರಾಣಿ, ವರಾಹಿ, ಚಾಮುಂಡ ಇವರ ಬಲಭಾಗದಲ್ಲಿ ಗಣಪತಿ ಶಿಲ್ಪಗಳಿವೆ. ಇವರುಗಳ ಕೆಳಭಾಗದಲ್ಲಿ ದೇವತೆಗಳ ವಾಹನಗಳಿವೆ. ಕ್ರಮವಾಗಿ ದೇವತೆಗಳ ವಾಹನಗಳು ನಂದಿ, ಹಂಸ, ಗರುಡ, ನಂದಿ, ನವಿಲು, ಆನೆ, ಆಮೆ, ಗಿಡಗ, ಇಲಿಗಳಿವೆ. ಇದು ಸುಂದರವಾದ ಸಪ್ತಮಾತೃಕೆಯ ಶಿಲ್ಪವಾಗಿದೆ.

ಶಿಲ್ಪ	:	ಸಪ್ತಮಾತೃಕೆಯರು
ಗ್ರಾಮ	:	ಹಿರೇಕೋಗಿಲೂರು
ಸ್ಥಳ	:	ಗ್ರಾಮದ ಮಧ್ಯದ ಗ್ರಾಮ ಪಂಚಾಯತಿಯ ಪಕ್ಕದಲ್ಲಿದೆ.
ವಸ್ತು	:	ಬಳಪದಕಲ್ಲು
ಕಾಲಮಾನ	:	ಕ್ರಿ.ಶ. ೧೧ನೇ ಶತಮಾನ
ರಾಜಸಂತತಿ	:	ಹೊಯ್ಸಳರು
ಪ್ರಕಟಣೆ	:	ಅಪ್ರಕಟಿತ

ಶಿಲ್ಪದ ಬಲಭಾಗದಲ್ಲಿ ವೀರಭದ್ರ ನಂತರ ಬ್ರಾಹ್ಮಿ, ವೈಷ್ಣವಿ, ಮಹೇಶ್ವರಿ, ಕೌಮಾರಿ, ಇಂದ್ರಾಣಿ, ವರಾಹಿ, ಚಾಮುಂಡ ಇವರ ಪಕ್ಕದಲ್ಲಿ ಗಣಪತಿಯರಿದ್ದು, ಇವರ ಕೆಳಭಾಗದಲ್ಲಿ ಅವರ ವಾಹನಗಳಾದಂತಹ ನಂದಿ, ಹಂಸ, ಗರುಡ, ನಂದಿ, ನವಿಲು, ಆನೆ, ಆಮೆ, ಗೂಬೆ ಅಥವಾ ಗಿಡಗವನ್ನು ಹೊಂದಿರುವರು. ಸಪ್ತಮಾತೃಕೆಯರ ಆರಾಧನ ಪದ್ಧತಿ ೧೧ನೇ

ಶತಮಾನದಲ್ಲಿ ಈ ಭಾಗದಲ್ಲಿ ಕಂಡುಬರುತ್ತದೆ ಎಂಬುದಕ್ಕೆ ಮೆದಕೆರೆ ಮತ್ತು ಹಿರೇಕೋಗಲೂರಿನಲ್ಲಿ ಲಭ್ಯವಾದ ಸಪ್ತಮಾತೃಕೆಯರ ಶಿಲ್ಪಗಳೇ ನಿದರ್ಶನವಾಗಿವೆ

೫.೪. ಜೈನ ಶಿಲ್ಪಗಳು

ಜೈನಧರ್ಮವು ಕ್ರಿ.ಪೂ ೬ನೇ ಶತಮಾನದ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿತ್ತು. ವೃಷಭನಾಥ ಅಥವಾ ಆದಿನಾಥನು ಈ ಧರ್ಮವನ್ನು ಸ್ಥಾಪಿಸಿದ. ಇಪ್ಪತ್ತನಾಲ್ಕು ತೀರ್ಥಂಕರರು ಈ ಧರ್ಮದ ಪ್ರವರ್ತಕರು. ಇಪ್ಪತ್ತೊಂದನೇ ತೀರ್ಥಂಕರ ಪಾರ್ಶ್ವನಾಥ, ಇಪ್ಪತ್ತನಾಲ್ಕನೇ ತೀರ್ಥಂಕರ ವರ್ಧಮಾನ ಮಹಾವೀರ. ಕಾಶಿ, ಮಲ್ಲ, ವಜ್ಜಿ, ಆರ್ಯಂಕಮನೆತನ, ಮೌರ್ಯ ವಂಶದ ಸ್ಥಾಪಕ ಚಂದ್ರಗುಪ್ತ ಮೌರ್ಯನು ಜೈನಧರ್ಮ ಸ್ವೀಕರಿಸಿ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತವನ್ನು ಸ್ವೀಕರಿಸಿ ನಿರ್ವಾಣವನ್ನು ಹೊಂದಿದನು. ಗುಪ್ತರು, ವರ್ಧನರು, ದೆಹಲಿಸುಲ್ತಾನರು, ಮೊಗಲರ ಕಾಲದಲ್ಲಿಯೂ ಜೈನಧರ್ಮ, ಜೈನ ಅನುಯಾಯಿಗಳು ಯತಿಗಳಿದ್ದರು.

ದಕ್ಷಿಣಭಾರತದಲ್ಲಿ ಸಂಘಂಯುಗದಲ್ಲಿ ಜೈನ ಸಾಹಿತ್ಯದ ಕೃತಿಗಳು ಲಭ್ಯವಾಗಿವೆ. ಕರ್ನಾಟಕದ ಆರಂಭಿಕ ಸಾಹಿತ್ಯ ಮತ್ತು ಇತಿಹಾಸವು ಜೈನರು ನೀಡಿದ ಕೊಡುಗೆಗಳಾಗಿವೆ. ಶಾತವಾಹನರಿಂದ ರಾಷ್ಟ್ರಕೂಟರವರೆಗೆ ಹೊಯ್ಸಳರವರೆಗೂ ಜೈನಧರ್ಮ ಪ್ರಮುಖ ಧರ್ಮವಾಗಿತ್ತು. ಆದರೆ ಕಲ್ಯಾಣದ ಚಾಲುಕ್ಯರ ಮತ್ತು ಕಲಚೂರಿಗಳ ಕಾಲದಲ್ಲಿ ಮಸುಕಾಗತೊಡಗಿತು. ನಂತರ ಪಾಳೆಯಗಾರರ ಕಾಲದಲ್ಲಿ ಮತ್ತು ಮೈಸೂರಿನ ಒಡೆಯರ ಕಾಲದಲ್ಲಿ ಕಣ್ಮರೆಯಾಯಿತು. ಜೈನರ ತೀರ್ಥಂಕರರಾದ ವೃಷಭನಾಥ, ನೇಮಿನಾಥ ಮತ್ತು ಮಹಾವೀರರು ಪರ್ಯಂಕಾಸನ ಭಂಗಿಯಲ್ಲಿ ಆಸೀನರಾಗಿರುವ ಶಿಲ್ಪಗಳು, ಉಳಿದ ಇಪ್ಪತ್ತೊಂದು ತೀರ್ಥಂಕರರು ಕಾರ್ಯೋತ್ಸರ್ಗ ಭಂಗಿಯಲ್ಲಿ ನಿಂತಿರುವ ಶಿಲ್ಪಗಳು ಕಂಡುಬಂದಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಬಸವಪಟ್ಟಣ ಸಿದ್ಧನಮಠ, ಗುರುಪುರ, ನಲ್ಕುದರೆಯಲ್ಲಿ ಜೈನ ತೀರ್ಥಂಕರರು.

ಶಿಲ್ಪ	:	ಚಂದ್ರನಾಥ
ಗ್ರಾಮ	:	ಬಸವಪಟ್ಟಣ
ಸ್ಥಳ	:	ಗ್ರಾಮದ ಪಶ್ಚಿಮದ ಬರಮಜ್ಜರ ಹಾಲಸಿದ್ದಪ್ಪನವರ ಜಮೀನಿನಲ್ಲಿದೆ.
ವಸ್ತು	:	ಬಳಪದ ಕಲ್ಲು
ಕಾಲ	:	೧೪ನೇ ಶತಮಾನ
ರಾಜವಂಶ	:	ವಿಜಯನಗರ
ಪ್ರಕಟಣೆ	:	ಹೆಚ್. ತಿಪ್ಪೇಸ್ವಾಮಿ ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೨೪೨

ಪದ್ಮಾಸನದಲ್ಲಿ ಕುಳಿತು ಧ್ಯಾನಮಗ್ನನಾಗಿದ್ದು, ಕೂದಲು ಗುಂಗುರು ಸುರುಳಿಯಾಗಿದೆ. ಮುಚ್ಚಿರುವ ಕಣ್ಣುಗಳು ಧ್ಯಾನಮಗ್ನನಾಗಿರುವ ಸಂಕೇತ. ಕೊರಳಿನ ಕೆಳಭಾಗದಲ್ಲಿ(ಎದೆಯ ಮೇಲೆ) ಮೂರು ಚಿಕ್ಕ ಗೆರೆಗಳಿವೆ. ಬಲಗೈಯಲ್ಲಿ ನೀಲಕಮಲವಿದೆ. ಮುಖದಲ್ಲಿ ಮಂದಹಾಸ ಬೀರುತ್ತಿರುವಂತೆ ಶಿಲ್ಪಿಯು ಕೆತ್ತಿದ್ದಾನೆ.

ಶಿಲ್ಪ	:	ನೇಮಿನಾಥ
ಗ್ರಾಮ	:	ಬಸವಪಟ್ಟಣ
ಸ್ಥಳ	:	ಚಂದ್ರನಾಥ ಶಿಲ್ಪದ ಪಕ್ಕದಲ್ಲಿದೆ
ವಸ್ತು	:	ಕಣಶಿಲೆ
ಕಾಲ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಟಿ. ಗಿರಿಜಾ, ದಾವಣಗೆರೆ – ಇದು ನಮ್ಮ ಜಿಲ್ಲೆ, ಪು.೪೯೫

ನೇಮಿನಾಥ ಶಿಲ್ಪವು ಮೊದಲನೇ ಶಿಲ್ಪದ ರೀತಿಯಲ್ಲಿಯೇ ಪ್ರತಿಮಾಲಕ್ಷಣಗಳನ್ನು ಹೊಂದಿದೆ. ಪದ್ಮಾಸನದಲ್ಲಿ ಧ್ಯಾನಮಗ್ನವಾಗಿದೆ. ಎದೆಯ ಮೇಲೆ ಮೂರು ಗೆರೆಗಳಿವೆ. ಬಲಗೈಯಲ್ಲಿ ಪದ್ಮವನ್ನು ಹಿಡಿದಿದ್ದಾನೆ.

ಶಿಲ್ಪ	:	ಸುಪಾರ್ಶ್ವನಾಥ
ಗ್ರಾಮ	:	ಬಸವಪಟ್ಟಣ
ಸ್ಥಳ	:	ರೆವಿನ್ಯೂ ಇನ್ಸ್‌ಪೆಕ್ಟರ್ ಕಛೇರಿಯಲ್ಲಿದೆ.
ವಸ್ತು	:	ಕಣಶಿಲೆ
ಕಾಲ	:	ಕ್ರಿ.ಶ. ೧೧ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ದಾವಣಗೆರೆ – ಇತಿಹಾಸದ ಕೆಲವು ಹೆಜ್ಜೆಗಳು, ಪು.೧೧೯

ಬಸವಪಟ್ಟಣದಲ್ಲಿ ಸರ್ಕಾರಿ ಆಸ್ಪತ್ರೆ ಕಟ್ಟಡ ಕಟ್ಟಲು ಪಾಯ ತೆಗೆಯುವ ಸಂದರ್ಭದಲ್ಲಿ ಮಣ್ಣಿನಲ್ಲಿ ಲಭ್ಯವಾಗಿದೆ. ೧೧/೨ ಅಡಿಯಲ್ಲಿ ಸ್ಥಾನಿಕರೂಪದಲ್ಲಿ ನಿಂತಿರುವ ಪಾರ್ಶ್ವನಾಥ ಶಿಲ್ಪವು

ಗುಂಗುರು ಕೂದಲು, ಎದೆಯ ಮೇಲೆ ವೃತ್ತಕಾರದ ಮೂರು ಗೆರೆಗಳಿವೆ. ತಲೆಯ ಮೇಲ್ಭಾಗದಲ್ಲಿ ಸರ್ಪವು ಎಡೆಯನ್ನು ಎತ್ತಿ ತಲೆಗೆ ಬಿಸಿಲು ಮಳೆಯಿಂದ ರಕ್ಷಣೆ ನೀಡುವಂತಿದೆ. ಸರ್ಪವು ಪಾರ್ಶ್ವನಾಥನ ಸಂಕೇತವಾಗಿದೆ. ಪೀಠದ ಭಾಗದಲ್ಲಿ ಒಂದು ಸಾಲಿನ ಶಾಸನವಿದೆ. ಶಾಸನಪಾಠ 'ಶ್ರೀ ಸೂರಸ್ಥ ಗಣದ ..... ಸಿದ್ಧಾಂತ ದೇವರು' ಎಂಬ ಸಾಲಿದೆ.

ಶಿಲ್ಪ	:	ಪಾರ್ಶ್ವನಾಥ
ಗ್ರಾಮ	:	ಸಿದ್ಧರಮಠ
ಸ್ಥಳ	:	ಶ್ರೀರಾಮೇಶ್ವರ ದೇವಾಲಯದ ಸುಖನಾಸಿಯಲ್ಲಿಡಲಾಗಿದೆ.
ವಸ್ತು	:	ಕಪ್ಪುಕಲ್ಲು
ಕಾಲ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಹೊಯ್ಸಳರು
ಪ್ರಕಟಣೆ	:	ಸಂತೆಬೆನ್ನೂರು ಸುಮತೀಂದ್ರ ನಾಡಿಗ್, ದಾವಣಗೆರೆ – ಇತಿಹಾಸದ ಕೆಲವು ಹೆಜ್ಜೆಗಳು, ಪು.೧೯

ಸಿದ್ಧರಮಠ ಗ್ರಾಮದಲ್ಲಿ ಶ್ರೀರಾಮೇಶ್ವರ ದೇವಾಲಯದ ಸಮೀಪದ ಮನೆ ತಳಪಾಯ ತೆಗೆಯುವಾಗ, ಮೂರು ಅಡಿ ಎತ್ತರದ ಪಾರ್ಶ್ವನಾಥ ಶಿಲ್ಪ ಮತ್ತು ಅದರ ಪಾಣಿಪೀಠವು ಲಭ್ಯವಾಯಿತು. ಕಾಯೋತ್ಸರ್ಗ ಭಂಗಿಯಲ್ಲಿ ಸಿಂಹಪೀಠದಲ್ಲಿ ನಿಂತಿದ್ದಾನೆ. ದಿಗಂಬರನಾಗಿರುವ ಪಾರ್ಶ್ವನಾಥನು, ನಿರಾಭರಣನಾಗಿದ್ದು ಗುಂಗುರು ಕೂದಲನ್ನು ಹೊಂದಿರುವನು. ತಲೆಯ ಹಿಂಭಾಗದಲ್ಲಿ ಐದು ಹೆಡೆಯ ಸರ್ಪವು ಸುರುಳಿಯಾಕಾರದಲ್ಲಿ ಸುತ್ತಿಕೊಂಡು, ಈತನ ತಲೆಯ ಮೇಲೆ ಹೆಡೆಯನ್ನು ಅರಳಿಸಿ ಬಿಸಿಲು, ಮಳೆಗಳಿಂದ ರಕ್ಷಣೆ ನೀಡುತ್ತದೆ. ಸಿಂಹಪೀಠದ ಎಡ ಮತ್ತು ಬಲಭಾಗದಲ್ಲಿ ಸಿಂಹಗಳಿವೆ. ಶಿಲ್ಪದ ಹಿಂಭಾಗದಲ್ಲಿ ಪ್ರಭಾವಳಿ ಮತ್ತು ಮಕರತೋರಣದ ಅಲಂಕರಣವಿದೆ.

ಶಿಲ್ಪ	:	ಆದಿನಾಥ ತೀರ್ಥಂಕರ
ಗ್ರಾಮ	:	ಗುರುಪುರ
ಸ್ಥಳ	:	ಶಿವಪ್ಪನಾಯಕ ವಸ್ತುಸಂಗ್ರಾಲಯ, ಶಿವಮೊಗ್ಗ(ಸ್ವಾದೀನ ಸಂ.೧೪೭೭)
ವಸ್ತು	:	ಬಳಪದ ಕಲ್ಲು
ಕಾಲ	:	ಕ್ರಿ.ಶ. ೧೨ನೇ ಶತಮಾನ
ರಾಜವಂಶ	:	ಹೊಯ್ಸಳ
ಪ್ರಕಟಣೆ	:	ಕೆ.ಜಿ.ಭಟ್‌ಸೂರಿ ಎಂಟಿಕ್ವೆಟಿಸ್ ಇನ್ ಗವರ್ನ್‌ಮೆಂಟ್ ಮ್ಯೂಸಿಯಂ, ಶಿವಮೊಗ್ಗ– ಎ ಸ್ಟಡಿ, ೧೯೯೫, ಪು.೪೧

